ಭಾನುವಾರ, ಅಕ್ಟೋಬರ್ 30, 2022 | ₹ 6.00

www.prajavani.net

/prajavani.net @prajavani /+prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ನಮ್ಮ ಭಾಷೆಯ ನಾಳೆಗಳು ಹೇಗಿದ್ದಾವು? ರಾಜ್ಯೋತ್ಸವದ ಹೊತ್ತಿನಲ್ಲಿ ಕನ್ನಡದ ಧ್ಯಾನ

INVEST KARNATAKA

75 ಸ್ವಾತಂತ್ರ್ಯದ ಅಮೃತಮಹೋತ್ಸವ

ಬಿಲ್ಡ್ ಫಾರ್ ದಿ ವರ್ಲ್ಡ್

ಇನ್ವೆಸ್ಟ್ ಕರ್ನಾಟಕ 2022	ಜಾಗತಿಕ ಹೂಡಿಕೆದಾರರ ಸಮಾವೇಶ	ಬೆಂಗಳೂರು ಪ್ಯಾಲೇಸ್, ಬೆಂಗಳೂರು ನವೆಂಬರ್ 2-4



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕವು ತನ್ನ ಜಾಗತಿಕ ವೇದಿಕೆಗೆ ದಾರ್ಶನಿಕರು, ನಾಯಕರು ಮತ್ತು ನಾವಿನ್ಯಕಾರರುಗಳನ್ನು ಸ್ವಾಗತಿಸುತ್ತದೆ

ಡಾ. ಮುರುಗೇಶ್ ಆರ್. ನಿರಾಣಿ
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕರ್ನಾಟಕ ಹೂಡಿಕೆದಾರರ ನೆಚ್ಚಿನ ತಾಣ ನಾನಾ ವಲಯಗಳಲ್ಲಿ ಮುಂಚೂಣಿ ಸ್ಥಾನ

ನಾವೇ ಮೊದಲು

- ಆವಿಷ್ಕಾರ ಸೂಚ್ಯಂಕ, ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ
- ಏರೋಸ್ಪೇಸ್ ಮತ್ತು ಡಿಫೆನ್ಸ್ ಉತ್ಪಾದನೆ
- ಎಲೆಕ್ಟ್ರಾನಿಕ್ ವಿನ್ಯಾಸ

- ಕರ್ನಾಟಕಕ್ಕೆ ಅತಿ ಹೆಚ್ಚು ವಿದೇಶಿ ನೇರ ಬಂಡವಾಳ – $22 ಬಿಲಿಯನ್ ದೇಶದಲ್ಲೇ ಅತಿ ಹೆಚ್ಚು
- ದೇಶದ ಒಟ್ಟು ವಿದೇಶಿ ನೇರ ಹೂಡಿಕೆಯಲ್ಲಿ ಕರ್ನಾಟಕದ ಪಾಲು 38%
- ಕಂಪ್ಯೂಟರ್ ಸಾಫ್ಟ್‌ವೇರ್, ಹಾರ್ಡ್‌ವೇರ್ ವಲಯದ ದೇಶದ ಒಟ್ಟಾರೆ ಬಂಡವಾಳ ಹೂಡಿಕೆಯಲ್ಲಿ ರಾಜ್ಯದ ಪಾಲು 53%

ಸುಲಲಿತ ವ್ಯವಹಾರ

ಡಿ.ಪಿ.ಐ.ಐ.ಟಿ.ಯ 'ಈಸ್ ಆಫ್ ಡೂಯಿಂಗ್ ಬಿಸಿನೆಸ್'– ಎಸ್.ಬಿ.ಆರ್.ಎ.ಪಿ. 2020 ಶ್ರೇಯಾಂಕ ಪಟ್ಟಿಯಲ್ಲಿ ಕರ್ನಾಟಕಕ್ಕೆ ಅಗ್ರಸ್ಥಾನ

- 17ನೇ ಸ್ಥಾನದಿಂದ **"ಟಾಪ್ ಅಚೀವರ್"** ಸ್ಥಾನಕ್ಕೆ ಏರಿದೆ ಕರ್ನಾಟಕ
- ಉದ್ಯಮ ಸ್ನೇಹಿ ಕ್ರಮದಿಂದಾಗಿ **'ಕರ್ನಾಟಕ ಉದ್ಯೋಗ ಮಿತ್ರ'** ದೇಶದ ಅಗ್ರಮಾನ್ಯ ಹೂಡಿಕೆ ಪ್ರಚಾರ ಏಜೆನ್ಸಿಯಾಗಿ ಹೊರಹೊಮ್ಮಿದೆ.

ಕೃಷಿ, ಉದ್ದಿಮೆಯಲ್ಲಿ ಮುಂಚೂಣಿ

- 10 ಕೃಷಿ-ಹವಾಮಾನ ವಲಯಗಳು, ಮಣ್ಣಿನ ಪ್ರಕಾರಗಳು, ವಿವಿಧ ಸಸ್ಯವರ್ಗ, ಎತ್ತರ ಮತ್ತು ಮಳೆಯಾಶ್ರಿತ ಪ್ರದೇಶಗಳಿಂದಾಗಿ ವೈವಿಧ್ಯಮಯ ಬೆಳೆಗಳಿಗೆ ರಾಜ್ಯ ನೆಲೆಯಾಗಿದೆ
- ವಿಸ್ತೃತ ಕರಾವಳಿ ಪ್ರದೇಶ ಮೀನುಗಾರಿಕೆಗೆ ಪೂರಕವಾಗಿದೆ. ಕೋಳಿ ಸಾಕಾಣಿಕೆ ಹಾಗೂ ಹೈನುಗಾರಿಕೆಗೆ ಅತ್ಯುತ್ತಮ ವಾತಾವರಣ ಹೊಂದಿದೆ.
- ಸಮಗ್ರ ಕೃಷಿಗೆ ಒತ್ತು ನೀಡುವ ಪ್ರಗತಿಪರ ಸಶಕ್ತ ಕೃಷಿ ಸಮುದಾಯ ನಮ್ಮಲ್ಲಿದೆ
- ರಾಜ್ಯಾದ್ಯಂತ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ಮೂಲಸೌಕರ್ಯವಿದೆ
- ರಾಜ್ಯ ಸರ್ಕಾರದ ಪೂರಕ ಉಪಕ್ರಮಗಳಿಂದ ಸ್ಥಳೀಯ ಮಾರುಕಟ್ಟೆ ವ್ಯವಸ್ಥೆ ಸದೃಢವಾಗಿದೆ
- ಆಯಕಟ್ಟಿನ ಸ್ಥಳಗಳಲ್ಲಿ ಫುಡ್ ಪಾರ್ಕ್‌ಗಳ ಸ್ಥಾಪನೆ ಮೂಲಕ ಆಹಾರ ಸಂಸ್ಕರಣಾ ಕಂಪನಿಗಳಿಗೆ ಸೂಕ್ತ ವೇದಿಕೆ ಕಲ್ಪಿಸಲಾಗಿದೆ
- ಉದ್ಯಮ-ಸ್ನೇಹಿ ಸರ್ಕಾರದ ಉಪಕ್ರಮಗಳು- ಕೃಷಿ ವ್ಯವಹಾರದ ಅಭಿವೃದ್ಧಿಗೆ ಪೂರಕವಾಗಿವೆ
- ಉದ್ಯಮಕ್ಕೆ ಪೂರಕವಾದ ಪರಿಸರ ವ್ಯವಸ್ಥೆಯು ಬಂಡವಾಳ ಹೂಡಿಕೆಗೆ ರಾಜ್ಯವನ್ನು ಪ್ರಶಸ್ತ ಸ್ಥಳವನ್ನಾಗಿಸಿದೆ

ಕೈಗಾರಿಕಾ ನೀತಿ 2020 – 2025

- ರಾಜ್ಯ ಸರ್ಕಾರದ ಸುಧಾರಣಾ ಕ್ರಮಗಳಿಂದಾಗಿ ಕರ್ನಾಟಕವು ದೇಶದ ಅತ್ಯಂತ ಆಕರ್ಷಕ ಹೂಡಿಕೆ ತಾಣಗಳಲ್ಲಿ ಒಂದಾಗಿ ಹೊರಹೊಮ್ಮಿದೆ
- ವಲಯಗಳಾದ್ಯಂತ ವಹಿವಾಟು ಆಧಾರಿತ ಪ್ರೋತ್ಸಾಹ (ಪಿಎಲ್‌ಐ) ಯೋಜನೆ
- ನಿರ್ದಿಷ್ಟ ವಲಯದ ಉತ್ತೇಜನೆಗಾಗಿ ಕ್ಲಸ್ಟರ್ ಆಧಾರಿತ ಉದ್ಯಮಕ್ಕೆ ಪ್ರೋತ್ಸಾಹ
- **ಆದ್ಯತಾ ವಲಯಗಳು**: ಕೃಷಿ-ತಂತ್ರಜ್ಞಾನ, ಆಟೋಮೊಬೈಲ್ ಮತ್ತು ಆಟೋ ಘಟಕಗಳು, ಔಷಧೀಯ ಮತ್ತು ವೈದ್ಯಕೀಯ ಸಾಧನಗಳು, ಎಂಜಿನಿಯರಿಂಗ್ ಮತ್ತು ಯಂತ್ರೋಪಕರಣಗಳು, ಜ್ಞಾನ-ಆಧಾರಿತ ಕೈಗಾರಿಕೆಗಳು, ಲಾಜಿಸ್ಟಿಕ್ಸ್, ನವೀಕರಿಸಬಹುದಾದ ಇಂಧನ, ಏರೋಸ್ಪೇಸ್ ಮತ್ತು ಡಿಫೆನ್ಸ್, ಎಲೆಕ್ಟ್ರಿಕ್ ವಾಹನಗಳು
- ರಾಜ್ಯದಲ್ಲಿ ಕೈಗಾರಿಕೆಗಳ ಸಮಗ್ರ ಅಭಿವೃದ್ಧಿಗಾಗಿ **'ಬಿಯಾಂಡ್ ಬೆಂಗಳೂರು'** ಯೋಜನೆ
- ಉತ್ಪನ್ನ ನಿರ್ದಿಷ್ಟ ಕೈಗಾರಿಕಾ ಕ್ಲಸ್ಟರ್ ಅಭಿವೃದ್ಧಿ ಚಟುವಟಿಕೆಗಳಿಗೆ 651 ಲಕ್ಷ ರೂ. ಬಿಡುಗಡೆ ಮಾಡಿ, ಬಳಸಲಾಗಿದೆ.
- **ವಿಶೇಷ ಪ್ರೋತ್ಸಾಹ ಮತ್ತು ರಿಯಾಯಿತಿಗಳು**: ಪ್ರತಿ ಕ್ಲಸ್ಟರ್‌ನ ಉತ್ಪನ್ನ ವಲಯಗಳಿಗೆ ನಿರ್ದಿಷ್ಟ ಪ್ರೋತ್ಸಾಹ
- **ಒಂದು ಜಿಲ್ಲೆ ಒಂದು ಉತ್ಪನ್ನ**: ಭಾರತ ಸರ್ಕಾರದ **'ಆತ್ಮ ನಿರ್ಭರ್'** ಯೋಜನೆಯಡಿಯಲ್ಲಿ ರಾಜ್ಯದ 2 ಮತ್ತು 3 ಹಂತದ ನಗರಗಳಲ್ಲಿ ಕೈಗಾರಿಕೆಗಳಿಗೆ ಒತ್ತು

ಪಾಲುದಾರ ರಾಷ್ಟ್ರಗಳು ಫ್ರಾನ್ಸ್ | ನೆದರ್‌ಲೆಂಡ್ಸ್ | ಜರ್ಮನಿ | ಜಪಾನ್ | ದಕ್ಷಿಣ ಕೊರಿಯ | ಆಸ್ಟ್ರೇಲಿಯಾ

ಈಗಲೇ ನೋಂದಾಯಿಸಿಕೊಳ್ಳಿ: investkarnataka.co.in/gim2022

ವೆಬ್‌ಸೈಟ್: investkarnataka.co.in   ಇ-ಮೇಲ್: gim2022@timesnetwork.in   ದೂರವಾಣಿ: 6366581603

ನಮ್ಮ ಸಂವಿಧಾನದಲ್ಲಿ ಪ್ರತಿಪಾದಿಸಲ್ಪಟ್ಟಂತೆ "ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಯ ಎಲ್ಲಾ ಕ್ಷೇತ್ರಗಳಲ್ಲಿ ಉತ್ಕೃಷ್ಟತೆಯ ಕಡೆಗೆ ಶ್ರಮಿಸಬೇಕು, ಇದರಿಂದ ರಾಷ್ಟ್ರವು ನಿರಂತರವಾಗಿ ಉನ್ನತ ಮಟ್ಟದ ಪ್ರಯತ್ನ ಮತ್ತು ಸಾಧನೆಗೆ ಏರುತ್ತದೆ" ಎಂಬುದು ಭಾರತದ ಪ್ರತಿಯೊಬ್ಬ ನಾಗರಿಕನ ಮೂಲಭೂತ ಕರ್ತವ್ಯ.

ಗುಂಜನ್ ಕೃಷ್ಣ, ಐಎಎಸ್
ಆಯುಕ್ತರು, ಕೈಗಾರಿಕಾಭಿವೃದ್ಧಿ ಮತ್ತು ನಿರ್ದೇಶಕರು,
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಡಾ. ಇ.ವಿ. ರಮಣರೆಡ್ಡಿ, ಐಎಎಸ್
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪುನೀತ್ ರಾಜ್‌ಕುಮಾರ್ ಅಗಲಿ ಒಂದು ವರ್ಷ • ಸಮಾಧಿ ಸ್ಥಳಕ್ಕೆ ಹರಿದು ಬಂದ ಜನಸಾಗರ

‘ಅಮರ’ ಅಪ್ಪುವಿನ ಅಭಿಮಾನದ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುನೀತ್ ಅವರ ಹತ್ತಾರು ಭಾವ ಭಂಗಿಗಳ ಬೃಹತ್ ಕಟೌಟ್‌ಗಳು. ಅವುಗಳಲ್ಲಿ ರಾರಾಜಿಸಿದ ಅಭಿಮಾನದ ಹಾರಗಳು. ಅಪ್ಪು ಸಮಾಧಿಗೆ ತುಳಸಿ ಹಾರ ಮತ್ತು ಬಿಳಿ ಹೂಗಳ ಸಿಂಗಾರ. ಭಾವಚಿತ್ರದ ಸುತ್ತ ಅಪ್ಪಟ ‘ಗಂಧದಗುಡಿ’ ಥೀಮ್‌ನ ಅಲಂಕಾರ. ಕಂಗೊಳಿಸುತ್ತಿದ್ದ ಅಪ್ಪು ಅವರ ನಗುಮೊಗದ ಭಾವಚಿತ್ರ. ಗೌರವನಮನ ಸಲ್ಲಿಸಲು ಬರುತ್ತಿದ್ದ ಸಾವಿರಾರು ಅಭಿಮಾನಿಗಳ ಸಾಲು...

ಇದು ನಗರದ ಕಂಠೀರವ ಸ್ಟುಡಿಯೋ ಆವರಣದಲ್ಲಿರುವ ಅಪ್ಪು ಸಮಾಧಿ ಬಳಿ ಕಂಡ ದೃಶ್ಯ. ನಟ ಪುನೀತ್ ರಾಜ್‌ಕುಮಾರ್ ಅವರು ಅಗಲಿ ಅ. 29ಕ್ಕೆ ಒಂದು ವರ್ಷ ತುಂಬಿದೆ. ಕಳೆದ ವರ್ಷ ಇದೇ ದಿನ ಹೃದಯಾಘಾತದಿಂದ ಅವರು ನಿಧನರಾಗಿದ್ದರು.

ಅಂದಿನಿಂದ ಇಂದಿನವರೆಗೂ ‘ಅಪ್ಪು’ ಅವರ ಅಭಿನಯದ ಕೊನೆಯ ಚಿತ್ರಗಳ ಬಿಡುಗಡೆ (ಜೇಮ್ಸ್, ಲಕ್ಕಿಮ್ಯಾನ್, ಗಂಧದ ಗುಡಿ), ಅವರ ಹೆಸರಿನಲ್ಲಿ ಸಮಾಜಸೇವಾ ಕಾರ್ಯಗಳ ಮೂಲಕ ಚಿತ್ರರಂಗ ಮತ್ತು ಅವರ ಅಭಿಮಾನಿಗಳು ಪುನೀತ್ ಅವರನ್ನು ಅಮರರನ್ನಾಗಿಸಿದ್ದರು.

ಇಂದು ಅದೇ ಅಭಿಮಾನ ಮತ್ತೆ ಉಕ್ಕಿ ಹರಿಯಿತು. ಪುನೀತ್ ಅವರ ಹೆಸರಿನಲ್ಲಿ ಅನ್ನದಾನ, ರಕ್ತದಾನ, ನೇತ್ರದಾನ ನಡೆದವು. ಸಂಗೀತ ತಂಡವೊಂದು ಪುನೀತ್ ಚಿತ್ರಗಳ ಗೀತಗಾಯನ ನಡೆಸಿಕೊಟ್ಟಿತು.

ಪುನೀತ್ ಪತ್ನಿ ಅಶ್ವಿನಿ, ಕಿರಿಯ ಪುತ್ರಿ ವಂದಿತಾ, ಸಹೋದರರಾದ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಸೇರಿ ಕುಟುಂಬದ ಸದಸ್ಯರು, ಚಿತ್ರರಂಗದ ಗಣ್ಯರು ಸಮಾಧಿಗೆ ಗೌರವ ಸಲ್ಲಿಸಿದರು.

ಪುನೀತ್ ರಾಜ್‌ಕುಮಾರ್ ಅವರ ಮೊದಲನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಶನಿವಾರ ಬೆಂಗಳೂರಿನ ಕಂಠೀರವ ಸ್ಟುಡಿಯೊ ಆವರಣದಲ್ಲಿರುವ ಅವರ ಸಮಾಧಿಗೆ ಸಹೋದರ ಶಿವರಾಜ್‌ಕುಮಾರ್, ಅವರ ಪತ್ನಿ ಗೀತಾ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಪುನೀತ್ ಪತ್ನಿ ಅಶ್ವಿನಿ, ಕಿರಿಯ ಪುತ್ರಿ ವಂದಿತಾ ಮತ್ತು ಕುಟುಂಬದವರು ಪೂಜೆ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

ನಂದಿನಿ ಹಾಲಿನ ಪ್ಯಾಕೆಟ್ ಮೇಲೆ ‘ಗಂಧದ ಗುಡಿ’: ಪುನೀತ್‌ಗೆ ಕೆಎಂಎಫ್ ಗೌರವ



ಬೆಂಗಳೂರು: ನಂದಿನಿ ಹಾಲಿನ ಪ್ಯಾಕೆಟ್ ಮೇಲೆ ‘ಗಂಧದಗುಡಿ’ ಹೆಸರು ಮುದ್ರಿಸುವ ಮೂಲಕ ನಟ ಪುನೀತ್ ರಾಜ್ ಕುಮಾರ್ ಅವರಿಗೆ ಕರ್ನಾಟಕ ಹಾಲು ಮಹಾಮಂಡಳಿ (ಕೆಎಂಎಫ್) ವಿಶೇಷ ಗೌರವ ಸಲ್ಲಿಸಿದೆ.

ಈ ಹಿಂದೆ ಪುನೀತ್ ರಾಜ್ ಕುಮಾರ್ ಅವರು ಕೆಎಂಎಫ್ ರಾಯಭಾರಿಯಾಗಿದ್ದರು. ಮುಂದಿನ 15 ದಿನಗಳ ಕಾಲ ಹಾಲಿನ ಪ್ಯಾಕೆಟ್‌ಗಳ ಮೇಲೆ ‘ಗಂಧದಗುಡಿ- ಜರ್ನಿ ಆಫ್ ಎ ಟ್ರೂ ಹೀರೊ’ ಸಿನಿಮಾ ಶೀರ್ಷಿಕೆಯನ್ನು ಮುದ್ರಿಸಿ ಪುನೀತ್ ಅವರಿಗೆ ಗೌರವ ಸಲ್ಲಿಸುತ್ತಿರುವುದಾಗಿ ಕೆಎಂಎಫ್ ತಿಳಿಸಿದೆ.

ಶುಕ್ರವಾರದಿಂದಲೇ ಕೆಲವು ಹಾಲಿನ ಪ್ಯಾಕೆಟ್‌ಗಳ ಮೇಲೆ ಗಂಧದ ಗುಡಿ ಎಂದು ಮುದ್ರಿಸುವುದನ್ನು ಆರಂಭಿಸಲಾಗಿದೆ. ಶನಿವಾರದಿಂದ ಎಲ್ಲ ಪ್ಯಾಕೆಟ್‌ಗಳ ಮೇಲೆ ಮುದ್ರಿಸಲಾಗುವುದು. ಎಲ್ಲ ಹಾಲು ಒಕ್ಕೂಟಗಳು ಸಹ ಈ ಕಾರ್ಯಕ್ಕೆ ಒಪ್ಪಿಗೆ ಸೂಚಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಪುನೀತ್‌ಗೆ ‘ಕರ್ನಾಟಕ ರತ್ನ’: ರಜನಿಕಾಂತ್, ಜ್ಯೂ. ಎನ್‌ಟಿಆರ್‌ಗೆ ಆಹ್ವಾನ’

ಬೆಂಗಳೂರು: ‘ಪುನೀತ್ ರಾಜ್‌ಕುಮಾರ್‌ಗೆ ಮರಣೋತ್ತರವಾಗಿ ನ. 1ರಂದು ‘ಕರ್ನಾಟಕ ರತ್ನ’ ಪ್ರಶಸ್ತಿ ಪ್ರದಾನ ಮಾಡಲಾಗುವುದು. ವಿಧಾನಸೌಧ ಮುಂಭಾಗದ ಮೆಟ್ಟಿಲ ಮೇಲೆ ಸಂಜೆ 4 ಗಂಟೆಗೆ ನಡೆಯಲಿರುವ ಈ ಕಾರ್ಯಕ್ರಮಕ್ಕೆ ಬರುವಂತೆ ರಜನಿಕಾಂತ್, ಜ್ಯೂ. ಎನ್‌ಟಿಆರ್ ಅವರಿಗೆ ಆಹ್ವಾನ ನೀಡಲಾಗಿದೆ’ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಈ ಪ್ರಶಸ್ತಿಯು ಬೆಳ್ಳಿಯ ಸ್ಮರಣಿಕೆ, ಜೊತೆಗೆ, 50 ಗ್ರಾಂ ಚಿನ್ನದ ಪದಕ ಇರಲಿದೆ’ ಎಂದರು.

‘ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಸಚಿವ ವಿ. ಸುನಿಲ್ ಕುಮಾರ್ ಸೇರಿದಂತೆ ಸಚಿವರು, ಶಾಸಕರು ಭಾಗವಹಿಸಲಿದ್ದಾರೆ. ಗಾಯಕ ವಿಜಯಪ್ರಕಾಶ್ ತಂಡದಿಂದ ಸಂಗೀತ ರಸಮಂಜರಿ ಇರಲಿದೆ. 5 ಸಾವಿರ ಜನರಿಗೆ ಪಾಸ್ ನೀಡಲಾಗುವುದು’ ಎಂದರು.

‘ಕಂಠೀರವ ಕ್ರೀಡಾಂಗಣದಲ್ಲಿ ಈ ಕಾರ್ಯಕ್ರಮ ಆಯೋಜಿಸುವ ಬಗ್ಗೆ ಚರ್ಚೆಯಾಗಿತ್ತು. ಆದರೆ, ಪುನೀತ್ ಸಹೋದರ ಮತ್ತು ಕುಟುಂಬದ ಆಶಯದಂತೆ ವಿಧಾನಸೌಧದ ಮುಂಭಾಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಈ ಹಿಂದೆ ಕುವೆಂಪು, ಡಾ. ರಾಜ್‌ಕುಮಾರ್, ಎಸ್. ನಿಜಲಿಂಗಪ್ಪ, ಪ್ರೊ. ಸಿ.ಎನ್.ಆರ್. ರಾವ್, ಪಂ. ಭೀಮಸೇನ ಜೋಶಿ, ಶಿವಕುಮಾರ ಸ್ವಾಮೀಜಿ, ದೇ. ಜವರೇಗೌಡ, ಡಿ. ವೀರೇಂದ್ರ ಹೆಗ್ಗಡೆ ಹೀಗೆ 8 ಸಾಧಕರಿಗೆ ವಿಧಾನ ಸೌಧದಲ್ಲಿಯೇ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಮಾಡಲಾಗಿದೆ’ ಎಂದರು.

‘ಪುನೀತ್ ರಾಜ್‌ಕುಮಾರ್ ನಮ್ಮನ್ನು ಅಗಲಿ ಒಂದು ವರ್ಷ ಆಗಿದೆ. ಬಡವರಿಗೆ ಸಹಾಯ ಮಾಡುವುದು, ಸಮಾಜಸೇವೆ ಯಲ್ಲಿ ಮುಂಚೂಣಿಯಲ್ಲಿದ್ದರು. ಒಬ್ಬ ಮನುಷ್ಯ ಸತ್ತರೆ ಒಂದು ವಾರ, ತಿಂಗಳು ನೆನಪಿನಲ್ಲಿರುತ್ತಾರೆ. ಆದರೆ, ಪುನೀತ್ ಸಮಾಧಿಯ ಬಳಿ ಪ್ರತಿ ನಿತ್ಯ ಜನ ಬರುತ್ತಿದ್ದಾರೆ. ಆ ರೀತಿ, ಅವರು ಜನರ ಮನಸ್ಸಿನಲ್ಲಿ ನೆಲೆಸಿದ್ದಾರೆ’ ಎಂದರು.

ಸುದ್ದಿ 2 ನಿಮಿಷ

ಕನ್ನಡ ಸಾಹಿತ್ಯ ಸಮ್ಮೇಳನ ಲಾಂಛನ ಬಿಡುಗಡೆ

ಹಾವೇರಿ: 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನವನ್ನು ಶನಿವಾರ ಇಲ್ಲಿ ಬಿಡುಗಡೆ ಮಾಡಲಾಯಿತು. ಸಮ್ಮೇಳನ 2023ರ ಜನವರಿ 6ರಿಂದ ಮೂರು ದಿನ ನಡೆಯಲಿದೆ.

ರಾಣೆಬೆನ್ನೂರಿನ ಕೃಷ್ಣಮೃಗ, ಏಲಕ್ಕಿ ಹಾರ, ಬ್ಯಾಡಗಿ ಮೆಣಸಿನಕಾಯಿ, ಬಂಕಾಪುರದ ನವಿಲುಧಾಮ, ಭುವನೇಶ್ವರಿ ದೇವಿ, ಮದಗ ಮಾಸೂರು ಕೆರೆ ಸೇರಿ ಈ ಭಾಗದ ಪ್ರಾಮುಖ್ಯತೆ ಬಿಂಬಿಸುವಂತೆ ಲಾಂಛನ ರೂಪಿಸಲಾಗಿದೆ.

ಗಳಗನಾಥೇಶ್ವರ ದೇವಾಲಯ, ಹಾವೇರಿಯ ಪುರಸಿದ್ಧೇಶ್ವರ ದೇವಾಲಯ, ಹಾನಗಲ್ ಕುಮಾರ ಶಿವಯೋಗಿ, ವಿ.ಕೃ. ಗೋಕಾಕ್, ಅಂಬಿಗರ ಚೌಡಯ್ಯ, ಸರ್ವಜ್ಞ, ಕನಕದಾಸರು, ಶಿಶುನಾಳ ಷರೀಫ, ಪಂಚಾಕ್ಷರಿ ಗವಾಯಿ, ಶರಣೆ ಹೆಳವನಕಟ್ಟೆ ಗಿರಿಯಮ್ಮ, ಸ್ವಾತಂತ್ರ್ಯ ಹೋರಾಟಗಾರ ಹುತಾತ್ಮ ಮೈಲಾರ ಮಹದೇವಪ್ಪ, ಕಾದಂಬರಿ ಪಿತಾಮಹ ಗಳಗನಾಥ, ಜಾನಪದ ವಿವಿ ಧ್ಯೇಯ ವಾಕ್ಯ, ಕಸಾಪ ಕೇಂದ್ರ ಕಚೇರಿ ಚಿತ್ರಗಳು ಲಾಂಛನದಲ್ಲಿವೆ.



ಇದೇ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ ಹೆಬ್ಬಾರ್ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನಿಲ್ ಕುಮಾರ್ ನೇತೃತ್ವದಲ್ಲಿ ಸಮ್ಮೇಳನದ ಸಿದ್ಧತೆ ಕುರಿತು ಪೂರ್ವಭಾವಿ ಸಭೆ ನಡೆಯಿತು.

ಪುಸ್ತಕ ಖರೀದಿ: ಶೇ 50 ರಿಯಾಯಿತಿ

ಬೆಂಗಳೂರು: ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ನ.1ರಿಂದ ನ.30ರವರೆಗೆ ಪುಸ್ತಕಗಳ ಖರೀದಿಯ ಮೇಲೆ ಶೇ 50ರಷ್ಟು ರಿಯಾಯಿತಿ ಘೋಷಿಸಿದೆ.

ಪ್ರಾಧಿಕಾರವು ಆನ್‌ಲೈನ್ ಮಾರಾಟ ವ್ಯವಸ್ಥೆಯನ್ನೂ ರೂಪಿಸಿದ್ದು, kuvempubhashabharathi.org ಮೂಲಕ ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ಖರೀದಿಸಬಹುದಾಗಿದೆ. ಸಂಪರ್ಕಕ್ಕೆ: 080 23183311 ಅಥವಾ 23183312.

ಮೂವರಿಗೆ ‘ಅರಿವೇ ಗುರು’ ಪ್ರಶಸ್ತಿ



ಡಾ.ಸಿ.ಆರ್. ಚಂದ್ರಶೇಖರ್



ನಿರುಪಾಧೀಶ ಸ್ವಾಮೀಜಿ



ಡಾ. ಗೌತಮ ದೇಸಿರಾಜು

ಧಾರವಾಡ: ‘ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಕರ್ನಾಟಕ ವಿಶ್ವವಿದ್ಯಾಲಯವು ಇದೇ ಮೊದಲ ಬಾರಿಗೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಮೂವರಿಗೆ ‘ಅರಿವೇ ಗುರು’ ಪ್ರಶಸ್ತಿ ನೀಡಿ ಗೌರವಿಸಲಿದೆ.

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಮರೆಗುದ್ದಿ ಗ್ರಾಮದ ನಿರುಪಾಧೀಶ ಸ್ವಾಮೀಜಿ, ವಿಜ್ಞಾನಿ ಡಾ. ಗೌತಮ ದೇಸಿರಾಜು (ವಿಜ್ಞಾನ), ಮನೋವೈದ್ಯ ಡಾ.ಸಿ. ಆರ್. ಚಂದ್ರಶೇಖರ್ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಕುಲಪತಿ ಪ್ರೊ. ಕೆ.ಬಿ. ಗುಡಸಿ ಶನಿವಾರ ತಿಳಿಸಿದರು.

‘ಪ್ರಶಸ್ತಿ ₹25 ಸಾವಿರ ನಗದು,, ಪ್ರಶಸ್ತಿ ಫಲಕ ಹಾಗೂ ಸ್ಮರಣಿಕೆ ಒಳಗೊಂಡಿದೆ. ವಿವಿ ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ನ. 1ರಂದು ಬೆಳಿಗ್ಗೆ 10ಕ್ಕೆ ನಡೆಯುವ ಸಮಾರಂಭದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ. ಚಂದ್ರಶೇಖರ ಕಂಬಾರ ಪ್ರಶಸ್ತಿ ಪ್ರದಾನ ಮಾಡುವರು ಎಂದರು.

ಪತ್ರಕರ್ತರಿಗೆ ಹಣ: ಸಿ.ಎಂ ರಾಜೀನಾಮೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಕರ್ನಾಟಕದ ಪತ್ರಕರ್ತರಿಗೆ ದೀಪಾವಳಿ ಹಬ್ಬಕ್ಕೆ ಸ್ವೀಟ್ಸ್ ಜೊತೆಗೆ ಹಣ ನೀಡಿರುವ ಪ್ರಕರಣದ ನೈತಿಕಹೊಣೆ ಹೊತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರಾಜೀನಾಮೆ ನೀಡಬೇಕು. ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ಅವರನ್ನು ಬಂಧಿಸಬೇಕು’ ಎಂದು ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಆಗ್ರಹಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು, ‘ಬಿಜೆಪಿ ಸರ್ಕಾರ ನಿರಂತರ ಭ್ರಷ್ಟಾಚಾರದಲ್ಲಿ ತೊಡಗಿದೆ. ಅದನ್ನು ಮುಚ್ಚಿಡಲು ಮುಖ್ಯಮಂತ್ರಿ ಅವರು ಲಂಚದ ಆಮಿಷ ಒಡ್ಡಿದ್ದಾರೆ. ಈ ಹಣ ಎಲ್ಲಿಂದ ಬಂತು’ ಎಂದು ಪ್ರಶ್ನಿಸಿದರು.

‘ಕೆಲ ಪತ್ರಕರ್ತರು ಹಣ ತಿರಸ್ಕರಿಸಿದ್ದಾರೆ. ಪತ್ರಿಕಾ ಸಮೂಹವೊಂದು ಬೊಮ್ಮಾಯಿ ಅವರಿಗೆ ಅವರಿಗೆ ಪತ್ರ ಬರೆದು ಅಸಮಾಧಾನ ವ್ಯಕ್ತಪಡಿಸಿದೆ. ಮುಖ್ಯಮಂತ್ರಿ ಅವರ ಭ್ರಷ್ಟಾಚಾರವನ್ನು ಪತ್ರಕರ್ತರು ಬಯಲಿಗೆ ತಂದಿದ್ದಾರೆ. ಅಧಿಕಾರದಲ್ಲಿ ಮುಂದುವರಿಯಲು ಮುಖ್ಯಮಂತ್ರಿ ಅವರಿಗೆ ನೈತಿಕತೆ ಇಲ್ಲ’ ಎಂದು ಹೇಳಿದರು.

‘ಇನ್‌ಸ್ಪೆಕ್ಟರ್ ನಂದೀಶ್ ಹೃದಯಾಘಾತಕ್ಕೆ ₹70 ಲಕ್ಷ ಲಂಚದ ಒತ್ತಡವೇ ಕಾರಣ ಎಂದು ಸಚಿವ ಎಂ.ಟಿ.ಬಿ ನಾಗರಾಜ್ ಹೇಳಿದ್ದಾರೆ. ಭ್ರಷ್ಟಾಚಾರದ ಬಗ್ಗೆ ಇದಕ್ಕಿಂತ ದೊಡ್ಡ ಸಾಕ್ಷಿ ಬೇಕೇ’ ಎಂದು ಪ್ರಶ್ನಿಸಿದರು.

‘ಕಾಮಗಾರಿಗಳಲ್ಲಿ ಕಮಿಷನ್ ಬಗ್ಗೆ ಗುತ್ತಿಗೆದಾರರ ಸಂಘ ಪ್ರಧಾನಿ ಅವರಿಗೆ ವರ್ಷದ ಹಿಂದೆಯೇ ಪತ್ರ ಬರೆದಿದೆ. ಮಠಕ್ಕೆ ನೀಡುವ ಅನುದಾನಕ್ಕೆ ಕಮಿಷನ್ ನೀಡಬೇಕು ಎಂದು ದಿಂಗಾಲೇಶ್ವರ ಸ್ವಾಮೀಜಿ ಆರೋಪಿಸಿದ್ದರು. ಖಾಸಗಿ ಶಾಲಾ ಆಡಳಿತ ಮಂಡಳಿ ಒಕ್ಕೂಟವೂ ಈ ಬಗ್ಗೆ ಧ್ವನಿ ಎತ್ತಿದೆ. ಭ್ರಷ್ಟಾಚಾರ ಪ್ರಕರಣಗಳ ತನಿಖೆಗೆ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಆಯೋಗ ಮಾಡಬೇಕು ಎಂದು ಒತ್ತಾಯಿಸಿದ್ದೆವು. ಸರ್ಕಾರ ಇದಕ್ಕೆ ಹಿಂದೇಟು ಹಾಕುತ್ತಿದೆ‘ ಎಂದು ಅವರು ಹೇಳಿದರು.

‘ಭಾರತ್ ಜೋಡೋ ಯಾತ್ರೆ’ ಹಾಗೂ ‘ಮೇಕೆದಾಟು ಪಾದಯಾತ್ರೆ’ ವೇಳೆ ಕಾಂಗ್ರೆಸ್ ಸಹ ಪತ್ರಕರ್ತರಿಗೆ ಲಂಚ ನೀಡಲು ಮುಂದಾಗಿತ್ತು ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸುರ್ಜೆವಾಲ, ‘ಕಾಂಗ್ರೆಸ್ ಯಾವುದೇ ಪತ್ರಕರ್ತರಿಗೆ ಆಮಿಷ ಒಡ್ಡಿಲ್ಲ. ಇಂತಹ ಚಟುವಟಿಕೆಗಳಿಗೆ ಪಕ್ಷ ಯಾವತ್ತೂ ಬೆಂಬಲ ನೀಡುವುದಿಲ್ಲ’ ಎಂದರು.

ಮೂರ್ಖರಾಗಿಸಲು ಯತ್ನ: ‘ಪರಿಶಿಷ್ಟರ ಮೀಸಲಾತಿ ಹೆಚ್ಚಳಕ್ಕೆ ಸುಗ್ರೀವಾಜ್ಞೆ ಹೊರಡಿಸುವ ಮೂಲಕ ಕರ್ನಾಟಕದ ಜನರನ್ನು ಮೂರ್ಖರನ್ನಾಗಿಸಲು ಬಿಜೆಪಿ ಹೊರಟಿದೆ’ ಎಂದು ಸುರ್ಜೆವಾಲ ಆರೋಪಿಸಿದರು.

‘ಕೇಂದ್ರ, ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದೆ. ಸರ್ಕಾರಿ ಆದೇಶದ ಮೂಲಕವೇ ಪರಿಶಿಷ್ಟರಿಗೆ ಮೀಸಲಾತಿ ನೀಡಲು ಅವಕಾಶ ಇತ್ತು. ಸಂವಿಧಾನಕ್ಕೆ ತಿದ್ದುಪಡಿ ಮಾಡಲು ಕೇಂದ್ರಕ್ಕೆ ಒತ್ತಡ ತರಬೇಕಿತ್ತು. ಈ ವಿಷಯದಲ್ಲಿ ಸಂವಿಧಾನ ತಿದ್ದುಪಡಿ ಪರ ಕಾಂಗ್ರೆಸ್ ಮತ ಚಲಾಯಿಸಲಿದೆ. ಪಂಚಮಸಾಲಿ ಸಮುದಾಯದ ಮೀಸಲಾತಿ ವಿಚಾರದಲ್ಲಿ ಸರ್ಕಾರ ಮೊದಲು ನಿರ್ಧಾರ ಪ್ರಕಟಿಸಲಿ. ಈ ವಿಷಯದಲ್ಲಿ ಮೀನಮೇಷ ಎಣಿಸುವುದು ಸರಿಯಲ್ಲ’ ಎಂದರು.

ದೂರು ನೀಡಿದ್ದರೆ ತನಿಖೆ: ಆರಗ

ಪತ್ರಕರ್ತರಿಗೆ ದೀಪಾವಳಿ ಹಬ್ಬದ ಉಡುಗೊರೆಯ ಜೊತೆ ಹಣ ನೀಡಿದ ಆರೋಪದ ಬಗ್ಗೆ ಲೋಕಾಯುಕ್ತಕ್ಕೆ ದೂರು ನೀಡಿದ್ದರೆ, ತನಿಖೆ ನಡೆಸಲಿದೆ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಕಾಂಗ್ರೆಸ್ ಅವಧಿಯಲ್ಲಿ ಐಫೋನ್ ಗಿಫ್ಟ್: ಹಿಂದಿನ ಕಾಂಗ್ರೆಸ್ ಸರ್ಕಾರದಲ್ಲಿ ಡಿಕೆಶಿ ಅವರು ಐಫೋನ್ ಗಿಫ್ಟ್ ನೀಡಿದ್ದು, ಪಕ್ಷದ ರಾಜ್ಯ ಉಸ್ತುವಾರಿಯ ಗಮನಕ್ಕೆ ಬಂದಿಲ್ಲವೇ ಎಂದು ಬಿಜೆಪಿ ರಾಜ್ಯ ಘಟಕ ಪ್ರಶ್ನಿಸಿ, ಟ್ವೀಟ್ ಮಾಡಿದೆ.

‘ಕಾರ್ಯಕರ್ತರು ಮಾತನಾಡಿದ್ದನ್ನು ಹೇಳಿದ್ದೇನೆ’

ರಾಯಚೂರು: ‘ನಂದೀಶ್ ಅವರ ಸಾವಿನ ಬಳಿಕ ನೋಡಲು ಹೋಗಿದ್ದೆ. ಆಗ ಮಾರ್ಗದಲ್ಲಿ ಕಾರ್ಯಕರ್ತರು ಮಾತನಾಡಿದ್ದನ್ನು ಕೇಳಿಸಿಕೊಂಡು ₹ 70 ಲಕ್ಷ, ₹ 80 ಲಕ್ಷ ಕೊಟ್ಟು ಬಂದರೆ ಹೃದಯಾಘಾತ ಆಗದೇ ಇನ್ನೇನಾಗುತ್ತದೆ ಎಂದು ಹೇಳಿದ್ದೇನೆ‘ ಎಂದು ಪೌರಾಡಳಿತ ಸಚಿವ ಎಂ.ಟಿ.ಬಿ.ನಾಗರಾಜ ಹೇಳಿದರು.

‘ಸಣ್ಣ ವಿಷಯಕ್ಕೆ ಆಯುಕ್ತರು ಅಮಾನತು ಮಾಡಿದ್ದು ತಪ್ಪು. ಮೃತರ ಪತ್ನಿಗೆ ಸರ್ಕಾರಿ ಉದ್ಯೋಗ ನೀಡಲು ಮುಖ್ಯಮಂತ್ರಿಗೆ ಕೋರಲಾಗಿದೆ’ ಎಂದರು.

ಬೆಂಗಳೂರಿನಲ್ಲೇ ಸುರ್ಜೆವಾಲ ವಾಸ

ಮುಂಬರುವ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಚಟುವಟಿಕೆಗಳಿಗೆ ಇನ್ನಷ್ಟು ಚುರುಕು ಮುಟ್ಟಿಸಲು ನವೆಂಬರ್ ತಿಂಗಳಿನಿಂದ ಬೆಂಗಳೂರಿನಲ್ಲಿ ನೆಲೆಸಲು ರಣದೀಪ್ ಸಿಂಗ್ ಸುರ್ಜೆವಾಲ ತೀರ್ಮಾನಿಸಿದ್ದಾರೆ.

ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೋ ಯಾತ್ರೆಯಲ್ಲಿ 40 ದಿನಗಳ ಕಾಲ ಪಾಲ್ಗೊಂಡಿದ್ದ ಸುರ್ಜೆವಾಲ, ಒಂದು ವಾರ ರಾಷ್ಟ್ರ ರಾಜಧಾನಿಯಲ್ಲಿ ಇರಲಿದ್ದಾರೆ. ಬಳಿಕ ಬೆಂಗಳೂರಿಗೆ ತೆರಳಲಿದ್ದಾರೆ. ಬೆಂಗಳೂರಿನಲ್ಲಿ ಕಬ್ಬನ್ ಉದ್ಯಾನದ ಸಮೀಪ ಎರಡು ಬೆಡ್ ರೂಂಗಳ ಮನೆಯೊಂದನ್ನು ಬಾಡಿಗೆಗೆ ಪಡೆದಿದ್ದಾರೆ. ತಿಂಗಳಿನ ಬಹುತೇಕ ದಿನ ಅಲ್ಲಿ ಇರಲಿದ್ದಾರೆ.

ಹೋರಿ ಓಡಿಸುವ ಸ್ಪರ್ಧೆ: ಇಬ್ಬರ ಸಾವು

ಶಿವಮೊಗ್ಗ: ದೀಪಾವಳಿ ಹಬ್ಬದ ಪ್ರಯುಕ್ತ ಜಿಲ್ಲೆಯಲ್ಲಿ ಆಯೋಜಿಸಿದ್ದ ಹೋರಿ ಓಡಿಸುವ ಸ್ಪರ್ಧೆಯ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಹೋರಿ ಗುದ್ದಿ ಇಬ್ಬರು ಮೃತಪಟ್ಟಿದ್ದಾರೆ.

ಶಿಕಾರಿಪುರ ತಾಲ್ಲೂಕಿನ ಗಾಮಾದಲ್ಲಿ, ಪೇಂಟಿಂಗ್ ಕೆಲಸ ಮಾಡುವ ಪ್ರಶಾಂತ ಕುಮಾರ್ (36), ಸೊರಬ ತಾಲ್ಲೂಕು ಜಡೆ ಗ್ರಾಮದಲ್ಲಿ ಚಗಟೂರಿನ ಯುವಕ ಆದಿ (20) ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಮೊದಲ ಪ್ರಕರಣದಲ್ಲಿ ಪ್ರಶಾಂತ ಸ್ಪರ್ಧೆ ನೋಡಲು ಹೋಗಿದ್ದರು. ಎರಡನೇ ಪ್ರಕರಣದಲ್ಲಿ ಸ್ಪರ್ಧೆಯ ನಂತರ ಎಲ್ಲರೂ ಹೊರಡುವಾಗ ದಿಢೀರನೆ ಹೋರಿ ಓಡಿ ಹೋಗಿ ಆದಿಗೆ ಗುದ್ದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಎಸ್‌ಟಿ ಮೀಸಲಾತಿ ಪಟ್ಟಿಗೆ ‘ತಳವಾರ’, ‘ಪರಿವಾರ ನಾಯಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಪಂಗಡ (ಎಸ್.ಟಿ)ದ ಮೀಸಲಾತಿ ಪಟ್ಟಿಗೆ ‘ತಳವಾರ’ ಹಾಗೂ ‘ಪರಿವಾರ ನಾಯಕ’ ಜಾತಿಗಳನ್ನು ಸರ್ಕಾರ ಸೇರ್ಪಡೆ ಮಾಡಿ ಆದೇಶಿಸಿದೆ.

ಈ ಎರಡೂ ಜಾತಿಗಳು ಹಿಂದೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿದ್ದವು. ಅವುಗಳನ್ನು ಈ ಪಟ್ಟಿಯಿಂದ ಕೈಬಿಡಲಾಗಿದೆ ಎಂದೂ ಸರ್ಕಾರದ ಆದೇಶ ಹೇಳಿದೆ. ಸರ್ಕಾರವು ಈ ಎರಡು ಸಮುದಾಯಕ್ಕೆ ಪರಿಶಿಷ್ಟ ಪಂಗಡದ ಪ್ರಮಾಣಪತ್ರ ವಿತರಿಸಲು ಎಲ್ಲ ಜಿಲ್ಲಾಧಿಕಾರಿ, ತಹಶೀಲ್ದಾರ್‌ಗೆ ಸರ್ಕಾರ ನಿರ್ದೇಶಿಸಿದೆ.

ನ.2ರ ಬಳಿಕ ರಾಜ್ಯದಲ್ಲಿ ಮತ್ತೆ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಅಲ್ಲಲ್ಲಿ ನ.2ರ ಬಳಿಕ ಮತ್ತೆ ಮಳೆ ಸುರಿಯುವ ಸಾಧ್ಯತೆ ಇದೆ’ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

‘ಯೆಲ್ಲೊ ಅಲರ್ಟ್’: ಶಿವಮೊಗ್ಗ, ತುಮಕೂರು, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಾಮರಾಜನಗರ, ಕೊಡಗು ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ನ.2ರಂದು ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಶನಿವಾರ ಮೋಡ ಕವಿದ ವಾತಾವರಣ ಇತ್ತು. ಅಲ್ಲಲ್ಲಿ ತುಂತುರು ಮಳೆ ಸುರಿದಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.74	5,253	5,963
ಹಾರಂಗಿ	2,859	2,858.11	876	1,000
ಕಬಿನಿ	2284.00	2,282.59	260	2,500
ಹೇಮಾವತಿ	2,922	2,921.25	1,591	2,867
ಲಿಂಗನಮಕ್ಕಿ	1,819	1,813	217	6,997
ಸೂಪಾ (ಮೀ)	564	553.78	1,021	2,711
ಮಾಣಿ	594	589	49	760
ತುಂಗಭದ್ರಾ	1,633	1632.91	7600	8978
ಮಲಪ್ರಭಾ	2079.5	2,079.50	394	394
ಘಟಪ್ರಭಾ	2175	2,175	189	189
ಭದ್ರಾ	186	185	1,886	1,886
ಆಲಮಟ್ಟಿ (ಮೀ)	519.6	519.60	12,451	12,451
ನಾರಾಯಣಪುರ (ಮೀ)	492.25	492.19	13,000	13,000

* ನೆಲಮಟ್ಟದಿಂದ

ಪ್ರಜಾವಾಣಿ @75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ. ಪೂರ್ಣ ಪ್ರತಿಕ್ರಿಯೆಗಳನ್ನು prajavani.net ನಲ್ಲಿ ನೋಡಬಹುದು

‘ನಾಡು, ನುಡಿಯ ನರನಾಡಿ’

ಜೀವಪರ ವಿಷಯಗಳು, ಬರ, ಕೃಷಿ ಸಂಸ್ಕೃತಿ, ಕ್ರೀಡೆ, ಕಾಡು, ಪರಿಸರ ವಿಷಯಗಳೊಂದಿಗೆ ವಾಸ್ತವಿಕವಾಗಿ ಪ್ರಚಲಿತ ವಿದ್ಯಮಾನಗಳು ದಾಖಲಿಸುವುದು ‘ಪ್ರಜಾವಾಣಿ’ಯಲ್ಲಿ ಮಾತ್ರ. ಪೈಪೋಟಿಯ ಕಾಲದಲ್ಲಿ ಪತ್ರಿಕೋದ್ಯಮ ಅಸ್ತಿತ್ವ ಕಳೆದುಕೊಳ್ಳುತ್ತಿದ್ದರೂ ವ್ಯವಸ್ಥೆ ಜೊತೆ ರಾಜಿ ಆಗದೆ ‘ಪ್ರಜಾವಾಣಿ’ ತನ್ನ ನಿಲುವುಗಳಿಗೆ ಗಟ್ಟಿಯಾಗಿ ನಿಂತಿದೆ. ಅಮೃತ ಮಹೋತ್ಸವ ಸಂಭ್ರಮದಲ್ಲಿರುವ ಕನ್ನಡ ನಾಡು, ನುಡಿಯ ನರನಾಡಿ ಆಗಿರುವ ‘ಪ್ರಜಾವಾಣಿ’ ತನ್ನ ಜೀವಪರ, ಜನಪರ ಸಮಾಜಮುಖಿ ನಿಲುವುಗಳನ್ನು ಮುಂದುವರಿಸಿಕೊಂಡು ಹೋಗಲಿ. ಅದರ ಶತಮಾನೋತ್ಸವ ಸಂಭ್ರಮದಲ್ಲಿ ನಾವೆಲ್ಲ ಭಾಗಿಯಾಗುವಂತೆ ಆಗಲಿ ಎಂದು ಆಶಿಸುತ್ತೇನೆ.

ಡಾ.ಮಹಾಂತೇಶ ಬಿರಾದಾರ, ಚಿಂತಕ, ಹವ್ಯಾಸಿ ಸೈಕ್ಲಿಸ್ಟ್, ವಿಜಯಪುರ

‘ಆರು ದಶಕಗಳಿಂದ ಆಪ್ತಸಂಗಾತಿ’

ಏಳೂವರೆ ದಶಕದ ಹಿಂದೆ ಉರ್ದು ಭಾಷೆಯ ಪ್ರಭಾವ ಹೆಚ್ಚಿದ್ದ ಕೊಪ್ಪಳದಲ್ಲಿ ‘ಪ್ರಜಾವಾಣಿ’ ಕನ್ನಡದ ಆಪ್ತ ಸಂಗಾತಿಯಂತೆ ಬಂತು. ನನಗೀಗ 81 ವರ್ಷ. ಆರು ದಶಕಗಳಿಂದ ಪ್ರಜಾವಾಣಿ ಓದುಗ. ಇದು, ಈಗಲೂ ನನ್ನ ಅಚ್ಚುಮೆಚ್ಚಿನ ಪತ್ರಿಕೆ. ‘ಪ್ರಜಾವಾಣಿ’ ವಿಶಿಷ್ಟ ಮತ್ತು ಜನಸಾಮಾನ್ಯರನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ನಿತ್ಯ ರೂಪುಗೊಳ್ಳುತ್ತಿದೆ. ತನ್ನ ಛಾತಿಯನ್ನು ಈಗಲೂ ಉಳಿಸಿಕೊಂಡಿರುವುದು ವಿಶೇಷ. ಅನೇಕ ಸಾಹಿತಿಗಳು, ಕಲಾವಿದರು, ಬರಹಗಾರರು ಮತ್ತು ಕಥೆಗಾರರನ್ನು ರೂಪಿಸಿದ್ದು ಇದೇ ಪತ್ರಿಕೆ. ನಮಗೆಲ್ಲ ಸಾಹಿತ್ಯದ ಪರಿಚಯ ಮಾಡಿಕೊಟ್ಟ ಹೆಗ್ಗಳಿಕೆ ಪ್ರಜಾವಾಣಿಗೆ ಸಲ್ಲಬೇಕು. ಭವಿಷ್ಯದಲ್ಲೂ ಇದೇ ದಿಟ್ಟ ಹೆಜ್ಜೆಗಳು ಮುಂದುವರಿಯಲಿ.

ಎಚ್.ಎಸ್.ಪಾಟೀಲ, ಸಾಹಿತಿ, ಕೊಪ್ಪಳ

‘ಶೈಕ್ಷಣಿಕ ಅಭಿವೃದ್ಧಿ, ಜ್ಞಾನವಿಕಾಸಕ್ಕೆ ನೆರವು’

ನನಗೀಗ 83 ವರ್ಷ. 1967ರಲ್ಲಿ ಪ್ರೌಢಶಾಲೆ ಶಿಕ್ಷಕನಾಗಿ ಸೇವೆಗೆ ಸೇರಿದ್ದು 35 ವರ್ಷಗಳ ಸೇವೆಯಲ್ಲಿ ಪ್ರಜಾವಾಣಿ ಹೆಚ್ಚು ಪರಿಣಾಮಕಾರಿಯಾಗಿ ಪ್ರಭಾವ ಬೀರಿದೆ. ನನ್ನ ಶೈಕ್ಷಣಿಕ ಅಭಿವೃದ್ಧಿ, ಸಾಮಾನ್ಯ ಜ್ಞಾನದ ಬೆಳವಣಿಗೆಗೆ ಸಹಕಾರಿಯಾದೆ. ಶಾಲೆಯಲ್ಲಿ ಪ್ರಾರ್ಥನೆಗೂ ಮೊದಲು ಆಯಾ ದಿನದ ಪತ್ರಿಕೆಯ ಮುಖ್ಯಾಂಶಗಳನ್ನು ಓದಿಸುವ ಪರಿಪಾಠ ಬೆಳೆಸಿದ್ದೆ. ಪ್ರಜಾವಾಣಿಯು ಈಗ 75ನೇ ವರ್ಷಕ್ಕೆ ಕಾಲಿಟ್ಟಿದೆ. ಮುಂದೆಯೂ ಪತ್ರಿಕೆಯು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಸಹಕಾರಿ ಆಗಿರಲಿ ಎಂದು ಆಶಿಸುತ್ತೇನೆ.

ಎಸ್.ಎನ್.ಮೂರ್ತಿ, ನಿವೃತ್ತ ಶಿಕ್ಷಣಾಧಿಕಾರಿ, ವಸಂತಪುರ, ಬೆಂಗಳೂರು.

‘ಪ್ರಜಾವಾಣಿ ಎಂದರೆ ನನಗಿಷ್ಟ’

ಪ್ರಜಾವಾಣಿ ಓದು ನನಗೆ ಪ್ರೌಢಶಾಲಾ ಹಂತದಲ್ಲಿ ಶುರುವಾಗಿದ್ದು, ಇವತ್ತಿನವರೆಗೂ ‘ಪ್ರಜಾವಾಣಿ’ ನನ್ನ ಮೊದಲ ಆಯ್ಕೆಯಾಗಿದೆ. ನನ್ನ ಅರಿವನ್ನು ವಿಸ್ತರಿಸುವ ಅಕ್ಷರಮಿತ್ರನಂತಾಗಿದೆ. ಪ್ರಜಾವಾಣಿ ಓದುವುದು, ಇದರಲ್ಲಿ ಲೇಖನಗಳು ಪ್ರಕಟವಾಗುವದು ಎಂದರೆ ಎಂದಿಗೂ ಹೆಮ್ಮೆಯ ವಿಷಯ. ಆಡಳಿತ ಪಕ್ಷದ ಮುಲಾಜಿಗೆ ಒಳಗಾಗದೇ, ಸರ್ಕಾರವನ್ನು ಎಚ್ಚರಿಸುತ್ತ, ಜನಪರವಾಗಿ ವಾದಿಸುತ್ತ, ವಸ್ತುನಿಷ್ಠ ವರದಿಗಳಿಂದ ಪತ್ರಿಕಾಧರ್ಮವನ್ನು ಅನುಸರಿಸುತ್ತಿರುವ ‘ಪ್ರಜಾವಾಣಿ’ ಬಗ್ಗೆ ಮೆಚ್ಚುಗೆ, ಪ್ರೀತಿ, ಅಭಿಮಾನ. ನಾನು ವಕೀಲ ವೃತ್ತಿಯಿಂದ ಔಷಧರಹಿತ ಚಿಕಿತ್ಸಕನಾಗಿ ಬದಲಾದಾಗ ಬಹಳಷ್ಟು ಲೇಖನ ಪ್ರಕಟಿಸಿ, ಪ್ರೋತ್ಸಾಹಿಸಿದೆ. ಅವುಗಳು ‘ನಾನೂಂದ್ರೆ ನಂಗಿಷ್ಟ’ ಹೆಸರಿನಲ್ಲಿ ಪುಸ್ತಕರೂಪದಲ್ಲಿಯೂ ಬಂದಿವೆ. ಹಾಗಾಗಿ ಎಂದೆಂದಿಗೂ ಪ್ರಜಾವಾಣಿ ಎಂದರೆ ನಂಗಿಷ್ಟ.

ಡಾ.ಡಿ.ಎಂ.ಹೆಗಡೆ, ಔಷಧರಹಿತ ಚಿಕಿತ್ಸಕರು, ಆಕ್ಯುಪಂಚರ್ ವೈದ್ಯರು, ಬೆಂಗಳೂರು.

‘ಸಮಕಾಲೀನ ಸಮಾಜದ ಮುಖವಾಣಿ’

‘ಪ್ರಜಾವಾಣಿ’ ಮತ್ತು ನನ್ನ ನಂಟು ನಾಲ್ಕೈದು ದಶಕಗಳ ಹಿಂದಿನದು. ‘ಪ್ರಜಾವಾಣಿ’ ನನ್ನ ದಿನಚರಿಯ ಪ್ರಮುಖ ಭಾಗ. ಎಂಭತ್ತರ ದಶಕದಲ್ಲಿ ನನ್ನಂಥ ಗ್ರಾಮೀಣ ಲೇಖಕರನ್ನು ಸಾಹಿತಿಗಳನ್ನಾಗಿಸಿದ ದೈನಿಕ ಇದು. ಅದರಲ್ಲಿದ್ದ ವೈಎನ್ಕೆ, ಜಿ.ಎನ್.ರಂಗನಾಥರಾವ್, ‘ಮಯೂರ’ ಮಾಸಿಕವನ್ನು ಮನೆ ಮಾತಾಗಿಸಿದ ಎಂ.ಬಿ.ಸಿಂಗ್, ಜಿ.ಎಸ್. ಸದಾಶಿವ ಇವರೆಲ್ಲ ನನ್ನ ಪಾಲಿನ ಪ್ರಾತಃಸ್ಮರಣೀಯರು. ಬೆಂಗಳೂರಲ್ಲಿ ವಿಧಾನಸೌಧ ಹೇಗೋ ಹಾಗೆ ನನ್ನಂಥ ಬರಹಗಾರರಿಗೆ ‘ಪ್ರಜಾವಾಣಿ’. ಈ ದೈನಿಕಕ್ಕಿರುವ ಸಾಮಾಜಿಕ ಬದ್ಧತೆ ಉಳಿದ ದಿನಪತ್ರಿಕೆಗಳಿಗಿಲ್ಲ.

ಮೊನ್ನೆ ಈ ಪತ್ರಿಕೆ ತನ್ನ ‘ಗ್ರೇಟ್ ನೆಸ್’ ಅನ್ನು ಸಾಬೀತು ಪಡಿಸಿತು. ಉಳಿದ ಬಹುಪಾಲು ದೈನಿಕಗಳ ಪ್ರಥಮ ಪುಟದಲ್ಲಿ ಕಾಂಗ್ರೆಸ್ ರಾಷ್ಟ್ರೀಯ ಯುವ ನೇತಾರ ರಾಹುಲ್ ಗಾಂಧಿ ಬಗ್ಗೆ ಅವಹೇಳನಕಾರಿ ಸುದ್ದಿಯನ್ನು ಜಾಹೀರಾತು ರೂಪದಲ್ಲಿ ಪ್ರಕಟಿಸಿದವು. ಆದರೆ, ‘ಪ್ರಜಾವಾಣಿ’ಯು ಹಣದಾಸೆಗೆ ಅವನ್ನೆಲ್ಲ ಪ್ರಕಟಿಸದೆ ತನ್ನತನ ಉಳಿಸಿಕೊಂಡಿತು. ‘ಪ್ರಜಾವಾಣಿ’ ಸಮಕಾಲೀನ ಸಮಾಜದ ಮುಖವಾಣಿ. ಈ ಪತ್ರಿಕೆಗೂ ಈ ಪತ್ರಿಕೆಯ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿರುವ ಎಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳು.

ಕುಂ.ವೀರಭದ್ರಪ್ಪ, ಸಾಹಿತಿ, ಕೊಟ್ಟೂರು, ವಿಜಯನಗರ ಜಿಲ್ಲೆ

‘ಪ್ರಜಾವಾಣಿ’ಯ ಅಭಿಮಾನಿಯಾದೆ

ನಾನು 1970ನೇ ಇಸವಿಯಲ್ಲಿ, ಉಡುಪಿಯಲ್ಲಿ ಶಿವರಾಮ ಕಾರಂತ ಅವರ ನಿರ್ದೇಶನದ ಯಕ್ಷಗಾನ ಕೇಂದ್ರದಲ್ಲಿ ತರಬೇತಿಗೆ ಸೇರಿದೆ. 2013ರಲ್ಲಿ ಕರ್ನಾಟಕ ಜಾನಪದ ಪರಿಷತ್ತಿನಿಂದ ‘ದೊಡ್ಡಮನೆ ಯಕ್ಷಗಾನ ಪ್ರಶಸ್ತಿ’ ಪ್ರದಾನವಾಯಿತು. ನನ್ನ ಬಗ್ಗೆ ವಿವರವಾದ ವರದಿ ಪ್ರಜಾವಾಣಿಯಲ್ಲಿ ಬಂದಿತು. ಅಂದಿನಿಂದ ನಾನು ಈ ಪತ್ರಿಕೆಯ ಅಭಿಮಾನಿಯಾದೆ. ಒಮ್ಮೆ ಯುವ ಕಲಾವಿದರೊಬ್ಬರು ಯಕ್ಷಗಾನದ ಶಾಸ್ತ್ರೀಯತೆಯನ್ನು ಮೀರಿದಾಗ ವೇದಿಕೆಗೆ ತೆರಳಿ ಬುದ್ಧಿ ಹೇಳಿದ್ದೆ. ಅದನ್ನು ‘ಪ್ರಜಾವಾಣಿ’ ವರದಿ ಮಾಡಿದಾಗ ಪ್ರಜಾವಾಣಿ ಪತ್ರಿಕೆಯ ಶಕ್ತಿಯ ಅರಿವಾಗಿ ಹೆಮ್ಮೆಯಾಯಿತು. ನಮ್ಮ ನಡುವಿನ ಕಲೆಯ ಬೆನ್ನ ಹಿಂದೆ ನಿಂತು ರಕ್ಷಿಸುವ ಕಾಯಕ ಮಾಡುತ್ತಿರುವ ‘ಪ್ರಜಾವಾಣಿ’ಗೆ ಅದರ 75ನೇ ವರ್ಷದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಅಭಿನಂದನೆಗಳು.

ಶ್ರೀಧರ ಷಡಕ್ಷರಿ, ಯಕ್ಷಗಾನ ಕಲಾವಿದರು, ಆನೆಗುಂದಿ, ಕುಮಟಾ.

ಮುರುಘಾ ಶರಣರ ಪ್ರಕರಣ ನಾಲ್ಕನೇ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಪರಮಶಿವಯ್ಯ

ಚಿತ್ರದುರ್ಗ: ಮುರುಘಾಮಠದಲ್ಲಿ ನಡೆದಿದ್ದ ಲೈಂಗಿಕ ದೌರ್ಜನ್ಯ ಪ್ರಕರಣದ ನಾಲ್ಕನೇ ಆರೋಪಿ, ಎಸ್‌ಜೆಎಂ ವಿದ್ಯಾಪೀಠದ ಮಾಜಿ ಕಾರ್ಯದರ್ಶಿ ಪರಮಶಿವಯ್ಯ ಕೊನೆಗೂ ಶನಿವಾರ ಪೊಲೀಸ್ ಬಲೆಗೆ ಬಿದ್ದಿದ್ದಾರೆ. ಇವರು ಎರಡು ತಿಂಗಳಿಂದ ತಲೆಮರೆಸಿಕೊಂಡಿದ್ದರು.

ಡಿವೈಎಸ್‌ಪಿ ಕಚೇರಿಯಲ್ಲಿ ವಿಚಾರಣೆ ಬಳಿಕ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು. ಚಿತ್ರದುರ್ಗದ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್‌ಗೆ ಆರೋಪಿಯನ್ನು ಹಾಜರುಪಡಿಸಿದ್ದು, ಕೋರ್ಟ್ ನ.3ರವರೆಗೂ ನ್ಯಾಯಾಂಗ ಬಂಧನ ವಿಧಿಸಿ ಆದೇಶಿಸಿತು.

ಅನಾರೋಗ್ಯ ಹಿನ್ನೆಲೆಯಲ್ಲಿ ಆರೋಪಿಗೆ ವೈದ್ಯಕೀಯ ಸೇವೆ ಹಾಗೂ ಸೂಕ್ತ ಆಹಾರ ಒದಗಿಸಲು ಆರೋಪಿ ಪರ ವಕೀಲರು ಕೋರಿದರು. ಅಗತ್ಯವಿದ್ದಲ್ಲಿ ಇವುಗಳನ್ನು ಒದಗಿಸಲು ಕೋರ್ಟ್ ಸೂಚಿಸಿತು.

ಶಿವಮೂರ್ತಿ ಮುರುಘಾ ಶರಣರು ಸೇರಿ ಐವರ ವಿರುದ್ಧ ಪೋಕ್ಸೊ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡ ದೌರ್ಜನ್ಯ ತಡೆ ಕಾಯ್ದೆಯಡಿ ಆಗಸ್ಟ್ 28ರಂದು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ದಲಿತ ಉದ್ದಿಮೆದಾರರಿಗೆ ಮೀಸಲಾತಿ ಪ್ರಕಾರ ಕೈಗಾರಿಕಾ ನಿವೇಶನ:ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ನಿವೇಶನ ಹಂಚಿಕೆಯಲ್ಲಿ ದಲಿತ ಉದ್ದಿಮೆದಾರರಿಗೆ ಮೀಸಲಾತಿ ನೀಡುವ ಕುರಿತು 2009ರಲ್ಲಿ ನಿಗದಿಪಡಿಸಲಾದ ಮಾನದಂಡದಂತೆ ನಿವೇಶನಗಳನ್ನು ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕರ್ನಾಟಕ ದಲಿತ ಉದ್ದಿಮೆದಾರರ ಸಂಘದ ಅಧ್ಯಕ್ಷರೂ ಆಗಿರುವ ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ, ಕಾರ್ಯಾಧ್ಯಕ್ಷ ಸಿ.ಜಿ. ಶ್ರೀನಿವಾಸನ್ ನೇತೃತ್ವದ ನಿಯೋಗದ ಜತೆ ಸಭೆ ನಡೆಸಿದ ಅವರು ಈ ವಿಷಯ ತಿಳಿಸಿದರು.

ನಿವೇಶನ ಹಂಚಿಕೆಗಾಗಿ ಕೈಗಾರಿಕಾ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿ ಹಾಗೂ ಕೆಐಎಡಿಬಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅವರು ಜೊತೆಯಾಗಿ ‘ಲ್ಯಾಂಡ್ ಆಡಿಟ್’ ನಡೆಸಿ ವರದಿ ಸಲ್ಲಿಸಲಿದ್ದಾರೆ. ಅದಾದ ಬಳಿಕ, ಮೀಸಲಾತಿ ಅನ್ವಯ ಹಂಚಿಕೆಯಾಗಬೇಕಾದ ನಿವೇಶನಗಳನ್ನು ಕಾಲಮಿತಿಯಲ್ಲಿ ನೀಡಲಾಗುವುದು ಎಂದು ಹೇಳಿದರು.

‘ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಕೈಗಾರಿಕಾ ನಿವೇಶನವನ್ನು ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿಯಲ್ಲಿ ಶೇ 60 ರಷ್ಟು ಹಾಗೂ ರಾಜ್ಯಮಟ್ಟದ ಸಮಿತಿಯಲ್ಲಿ ಶೇ. 40 ರಷ್ಟು ಹಂಚಿಕೆ ಮಾಡಲಾಗುತ್ತಿದೆ. ಆದರೆ ದಲಿತ ಉದ್ದಿಮೆದಾರರಲ್ಲಿ ಬಹುತೇಕ ಮಂದಿಯ ಯೋಜನಾ ವೆಚ್ಚ ₹15 ಕೋಟಿಗಿಂತ ಕಡಿಮೆ ಇರುವುದರಿಂದ ಜಿಲ್ಲಾ ಮಟ್ಟದಲ್ಲಿನ ಹಂಚಿಕೆಯ ಪ್ರಮಾಣವನ್ನು ಹೆಚ್ಚಿಸಬೇಕು’ ಎಂದು ಸಂಘ ಮನವಿ ಮಾಡಿತು.

ಇದಕ್ಕೆ ಸ್ಪಂದಿಸಿದ ಬೊಮ್ಮಾಯಿ, ಜಿಲ್ಲಾಮಟ್ಟದಲ್ಲಿ ಶೇಕಡ 70ರಷ್ಟು ಹಾಗೂ ರಾಜ್ಯಮಟ್ಟದಲ್ಲಿ ಶೇಕಡ 30ರಷ್ಟು ಹಂಚಿಕೆ ಮಾಡಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಉಪಸ್ಥಿತರಿದ್ದರು.

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಣಿಪಾಲ್ ಹಾಸ್ಪಿಟಲ್ಸ್
ಹೃದಯ ಸಂಬಂಧಿತ ಎಮರ್ಜೆನ್ಸಿ ಸೇವೆಗಾಗಿ ಸ್ಕ್ಯಾನ್ ಮಾಡಿ

‘ಠಾಣೆಯಲ್ಲಿ ವಿಡಿಯೊ ಚಿತ್ರೀಕರಣ ಅಪರಾಧವಲ್ಲ’ 6
ಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಗೆಲುವು
ಎಸ್ಸೆಸ್ಸೆಲ್ಸಿ: ತಾತ್ಕಾಲಿಕ ವೇಳಾಪಟ್ಟಿ ಪ್ರಕಟ 7
ಹಾಕಿ: ಭಾರತಕ್ಕೆ ಜೊಹರ್ ಕಪ್ 14

ಸೋಲ್‌ನಲ್ಲಿ ಕಾಲ್ತುಳಿತ: 145 ಮಂದಿ ಸಾವು

ಸೋಲ್(ಎಪಿ): ದಕ್ಷಿಣ ಕೊರಿಯಾದ ರಾಜಧಾನಿ ಸೋಲ್‌ನಲ್ಲಿ ಶನಿವಾರ ಸಂಜೆ ಹ್ಯಾಲೋವಿನ್ ಉತ್ಸವ ಆಚರಣೆಯ ವೇಳೆ ಕಾಲ್ತುಳಿತ ಉಂಟಾಗಿ 145 ಮಂದಿ ಮೃತಪಟ್ಟಿದ್ದು, 150ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೋಲ್‌ನಲ್ಲಿ ಪಾರ್ಟಿ ನಡೆಯುವ ಪ್ರಮುಖ ಸ್ಥಳವಾದ ಹ್ಯಾಮಿಲ್ಟನ್ ಹೋಟೆಲ್‌ನ ಸಮೀಪ ನೆರೆದಿದ್ದ ಭಾರಿ ಸಂಖ್ಯೆಯ ಜನರು ಪಕ್ಕದ ಕಿರಿದಾದ ರಸ್ತೆಯಲ್ಲಿ ಸಾಗುತ್ತಿದ್ದಾಗ ಅಲ್ಲಿ ನೂಕುನುಗ್ಗಲು ಸಂಭವಿಸಿ ಕಾಲ್ತುಳಿತ ಉಂಟಾಗಿದೆ ಎಂದು ಅಗ್ನಿಶಾಮಕ ದಳದ ಅಧಿಕಾರಿಗಳು ತಿಳಿಸಿದ್ದಾರೆ.

5B ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕಂಪನಿಗಳಿಂದ ನಿಯಮ ಉಲ್ಲಂಘನೆ • ಸೌಕರ್ಯ ಕಲ್ಪಿಸದೇ ಶುಲ್ಕ ವಸೂಲಿ

ಸುಲಿಗೆಗೆ ‘ಟೋಲ್’ ಹೆದ್ದಾರಿ

36 ರಾಜ್ಯದಲ್ಲಿರುವ ಟೋಲ್‌ಗೇಟ್‌ಗಳ ಒಟ್ಟು ಸಂಖ್ಯೆ

1,300 ಕಿ.ಮೀ ರಾಜ್ಯದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಗಳ ಒಟ್ಟು ಉದ್ದ

15 ಲಕ್ಷ ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸುವ ವಾಹನಗಳ ಸಂಖ್ಯೆ (ಸರಾಸರಿ ಒಂದು ದಿನಕ್ಕೆ)

₹1.46 ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದು ಕಿ.ಮೀ.ಗೆ ಪಾವತಿಸುತ್ತಿರುವ ಶುಲ್ಕ

(ಮಾಹಿತಿ: ಎನ್‌ಎಚ್‌ಎಐ ಟೋಲ್ ಮಾಹಿತಿ ವ್ಯವಸ್ಥೆ)

ಒಳನೋಟ

ಹೆದ್ದಾರಿಗಳ ‘ವಾಮಮಾರ್ಗ’

ಪ್ರತಿಕ್ರಿಯಿಸಿ: 9606038256
feedback@prajavani.co.in

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಪ್ರಮುಖ ನಗರ ಹಾಗೂ ರಾಜ್ಯಗಳ ಸಂಪರ್ಕ ಸೇತುವೆಯಾಗಿರುವ ರಾಷ್ಟ್ರೀಯ ಹೆದ್ದಾರಿಗಳು, ಇತ್ತೀಚಿನ ದಿನಗಳಲ್ಲಿ ‘ಟೋಲ್’ ಸುಲಿಗೆಯ ತಾಣಗಳಾಗುತ್ತಿವೆ. ಸರ್ಕಾರಗಳ ನಿಯಮ ಹಾಗೂ ಆದೇಶಗಳನ್ನು ಗಾಳಿಗೆ ತೂರುತ್ತಿರುವ ಕಂಪನಿಗಳು, ನಿಯಮಬಾಹಿರ ‘ಟೋಲ್’ ಮೂಲಕ ನೂರಾರು ಕೋಟಿ ರೂಪಾಯಿ ದೋಚುತ್ತಿರುವ ಆರೋಪಗಳು ಸಾರ್ವಜನಿಕರಿಂದ ವ್ಯಕ್ತವಾಗುತ್ತಿವೆ.

ಟೋಲ್ ಸುಲಿಗೆಯಿಂದ ಆಕ್ರೋಶಭರಿತ ಜನರು ರಸ್ತೆಗಿಳಿದು ಹೋರಾಟ ಮಾಡುತ್ತಿದ್ದು, ಇದನ್ನು ಹತ್ತಿಕ್ಕಲು ಕಂಪನಿಗಳು ಸರ್ಕಾರದ ಮಟ್ಟದಲ್ಲಿ ತೆರೆಮರೆಯಲ್ಲಿ ಕಸರತ್ತು ನಡೆಸುತ್ತಿವೆ. ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಿ (ಎನ್‌ಎಚ್‌ಎಐ), ಸರ್ಕಾರದ ಕೆಲ ಅಧಿಕಾರಿಗಳು ಮತ್ತು ಹಲವು ರಾಜಕಾರಣಿಗಳ ಕೃಪಾಕಟಾಕ್ಷದಿಂದ ಕಂಪನಿಗಳು ಟೋಲ್ ಸುಲಿಗೆ ಮುಂದುವರಿಸಿರುವ ವಿಷಯ ಗುಟ್ಟಾಗಿ ಉಳಿದಿಲ್ಲ.

ಹೆದ್ದಾರಿ ನಿರ್ಮಾಣ ಹಾಗೂ ನಿರ್ವಹಣೆಗೆ ಸಂಬಂಧಪಟ್ಟಂತೆ ಎನ್‌ಎಚ್‌ಎಐ ನಿಯಮಗಳನ್ನು ರೂಪಿಸಿದ್ದು, ಇದನ್ನು ಒಪ್ಪಿ ಟೋಲ್ ಸಂಗ್ರಹ ಕೆಲಸವನ್ನು ಗುತ್ತಿಗೆ ಪಡೆದಿರುವ ಹಲವು ಕಂಪನಿಗಳು, ನಿಯಮಬಾಹಿರವಾಗಿ ‘ಟೋಲ್’ ಸುಲಿಗೆಗೆ ಇಳಿದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 4

ಮಂಗಳೂರು ಹೊರವಲಯದ ಸುರತ್ಕಲ್ ಎನ್‌ಐಟಿಕೆ ಬಳಿ ಇರುವ ಟೋಲ್‌ಗೇಟ್ ತೆರವಿಗೆ ಆಗ್ರಹಿಸಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿಯಲ್ಲಿ ಶನಿವಾರ ಜಿಲ್ಲಾ ಮಹಿಳಾ ಕಾಂಗ್ರೆಸ್ ಘಟಕದ ಅಧ್ಯಕ್ಷೆ ಶಾಲೆಟ್ ಪಿಂಟೊ ಮಾತನಾಡಿದರು

ಸುರತ್ಕಲ್ ಟೋಲ್ ಸುಲಿಗೆ: ಆರು ವರ್ಷಗಳ ಹೋರಾಟ

• ಪ್ರವೀಣಕುಮಾರ್ ಪಿ.ವಿ.

ಮಂಗಳೂರು: ಬಿ.ಸಿ. ರೋಡ್‌ನಿಂದ ಪಡೀಲ್‌ವರೆಗಿನ ಹೆದ್ದಾರಿ ಹಾಗೂ ಪಡೀಲ್‌ನಿಂದ ನಂತೂರುವರೆಗಿನ ಬೈಪಾಸ್ ರಸ್ತೆ ಹಾಗೂ ನಂತೂರಿನಿಂದ ಸುರತ್ಕಲ್‌ವರೆಗಿನ 37.2 ಕಿ.ಮೀ ಉದ್ದದ ಹೆದ್ದಾರಿಯನ್ನು ನವಮಂಗಳೂರು ಬಂದರು ಸಂಪರ್ಕ ಯೋಜನೆಯಡಿ ₹ 181.50 ಕೋಟಿ ವೆಚ್ಚದಲ್ಲಿ ಚತುಷ್ಪಥವನ್ನಾಗಿ ಅಭಿವೃದ್ಧಿಪಡಿಸಲಾಗಿತ್ತು.

ಇದರಲ್ಲಿ ಬ್ರಹ್ಮರಕೂಟ್ಲು ಟೋಲ್‌ಗೇಟ್‌ನಲ್ಲಿ (ಎನ್‌ಎಚ್ 73) 2013ರ ಡಿಸೆಂಬರ್‌ನಿಂದ ಹಾಗೂ ಸುರತ್ಕಲ್ ಟೋಲ್‌ಗೇಟ್‌ನಲ್ಲಿ 2015ರ ಡಿಸೆಂಬರ್‌ನಿಂದ ಸುಂಕ ಸಂಗ್ರಹಿಸಲಾಗುತ್ತಿದೆ. ಎನ್‌ಎಚ್‌ಎಐ ಮೂಲಗಳ ಪ್ರಕಾರ ಸುರತ್ಕಲ್ ಟೋಲ್‌ಗೇಟ್ ಒಂದರಲ್ಲೇ ನಿತ್ಯ ₹ 12 ಲಕ್ಷ ಹಾಗೂ ಬ್ರಹ್ಮರ ಕೂಟ್ಲು ಟೋಲ್‌ಗೇಟ್‌ನಿಂದ ನಿತ್ಯ ₹ 5 ಲಕ್ಷ ಸಂಗ್ರಹವಾಗುತ್ತದೆ. ರಾಷ್ಟ್ರೀಯ ಹೆದ್ದಾರಿಯಲ್ಲಿ 60 ಕಿ.ಮೀ. ವ್ಯಾಪ್ತಿಯಲ್ಲಿ ಒಂದಕ್ಕಿಂತ ಹೆಚ್ಚು ಟೋಲ್ ಕಾರ್ಯನಿರ್ವಹಿಸುವಂತಿಲ್ಲ. ಇದ್ದರೂ ಅವುಗಳನ್ನು ಮೂರು ತಿಂಗಳ ಒಳಗೆ ರದ್ದುಪಡಿಸುತ್ತೇವೆ ಎಂದು ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಸಂಸತ್ತಿನಲ್ಲಿ 2022ರ ಮೇ ತಿಂಗಳಿನಲ್ಲಿ ಭರವಸೆ ನೀಡಿದ್ದರು.ಆದರೆ, ಉಡುಪಿ ಜಿಲ್ಲೆಯ ಹೆಜಮಾಡಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ತಲಪಾಡಿವರೆಗೆ ಕೇವಲ 42.8 ಕಿ.ಮೀ ದೂರದಲ್ಲಿ ಮೂರು ಟೋಲ್ ಗೇಟ್‌ಗಳಿವೆ (ಹೆಜಮಾಡಿ, ಸುರತ್ಕಲ್ ಹಾಗೂ ತಲಪಾಡಿ). ಒಂದು ಕಾರು 43.8 ಕಿ.ಮೀ ಹಾದು ಹೋಗುವಷ್ಟರಲ್ಲಿ ₹ 180 ಟೋಲ್ ಕಟ್ಟಬೇಕಾಗುತ್ತದೆ. ಸುರತ್ಕಲ್ ಟೋಲ್‌ಗೇಟ್‌ನಿಂದ ಹೆಜಮಾಡಿ ಟೋಲ್‌ಗೇಟ್‌ಗೆ ಕೇವಲ 11 ಕಿ.ಮೀ ದೂರವಿದೆ. ಸುರತ್ಕಲ್ ಟೋಲ್‌ಗೇಟ್‌ನಿಂದ ತಲಪಾಡಿ ಟೋಲ್‌ಗೇಟ್‌ಗೆ ಕೇವಲ 31 ಕಿ.ಮೀ ದೂರ ಇದೆ.

ಈ ಟೋಲ್ ಗೇಟ್ ರದ್ದುಪಡಿಸುವಂತೆ ಒತ್ತಾಯಿಸಿ 2016ರಿಂದ ಹೋರಾಟ ನಡೆಯುತ್ತಿದೆ. ಸ್ಥಳೀಯ ಮುಖಂಡರು ಪಕ್ಷಾತೀತವಾಗಿ ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿಯನ್ನು ರಚಿಸಿಕೊಂಡು ಸರ್ಕಾರದ ಮೇಲೆ ಒತ್ತಡ ಹೇರುತ್ತಿದ್ದಾರೆ. ಅ.18ರಂದು ಭಾರಿ ಸಂಖ್ಯೆಯಲ್ಲಿದ್ದ ಪ್ರತಿಭಟನಕಾರರು ಸುರತ್ಕಲ್ ಟೋಲ್‌ಗೇಟ್‌ಗೆ ಮುತ್ತಿಗೆಹಾಕಿ ಕೆಲ ಕಾಲ ಟೋಲ್ ಸಂಗ್ರಹವನ್ನು ತಡೆದರು. ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿ ನೇತೃತ್ವದಲ್ಲಿ ಅ.28ರಿಂದ ಟೋಲ್‌ಗೇಟ್ ಬಳಿ ಅನಿರ್ದಿಷ್ಟಾವಧಿವರೆಗೆ ಅಹೋರಾತ್ರಿ ಧರಣಿ ನಡೆಯುತ್ತಿದೆ.

ಏಕರೂಪ ನಾಗರಿಕ ಸಂಹಿತೆ ಜಾರಿಗೆ ಸಮಿತಿ ರಚನೆ

ಚುನಾವಣೆಗೆ ಮುನ್ನ ಗುಜರಾತ್ ಸರ್ಕಾರದ ತೀರ್ಮಾನ

ಅಹಮದಾಬಾದ್ (ಪಿಟಿಐ): ವಿಧಾನಸಭಾ ಚುನಾವಣೆಯ ದಿನಾಂಕ ಘೋಷಣೆ ಹತ್ತಿರವಾಗುತ್ತಿರುವ ಬೆನ್ನಲ್ಲೇ ಏಕರೂಪ ನಾಗರಿಕ ಸಂಹಿತೆ(ಯುಸಿಸಿ) ಜಾರಿಗೊಳಿಸುವ ಸಂಬಂಧ ಸಮಿತಿ ರಚಿಸಲು ಗುಜರಾತ್ ಸರ್ಕಾರ ನಿರ್ಧರಿಸಿದೆ.

ಶನಿವಾರ ಇಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಸಮಿತಿ ರಚಿಸುವ ಮಹತ್ವದ ತೀರ್ಮಾನವನ್ನು ಸರ್ಕಾರ ಕೈಗೊಂಡಿದ್ದು, ಚುನಾವಣಾ ನೀತಿ ಸಂಹಿತೆ ಜಾರಿಯಾಗುವುದಕ್ಕೂ ಮೊದಲೇ ಸಮಿತಿ ರಚನೆಯ ಆದೇಶ ಹೊರಬೀಳಲಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಅಹಮದಾಬಾದ್‌ಗೆ ಭೇಟಿ ನೀಡಿ ವಿವಿಧ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ. ಆ ಬಳಿಕ ಯಾವುದೇ ಸಂದರ್ಭದಲ್ಲಿ ಚುನಾವಣೆಯ ವೇಳಾಪಟ್ಟಿ ಪ್ರಕಟವಾಗುವ ಸಾಧ್ಯತೆ ಇದೆ.

ರಾಜ್ಯಕ್ಕೆ ಅಧಿಕಾರವಿಲ್ಲ: ಕಾಂಗ್ರೆಸ್

ಏಕರೂಪ ನಾಗರಿಕ ಸಂಹಿತೆ ಜಾರಿಗಾಗಿ ಸಮಿತಿ ರೂಪಿಸುವ ಗುಜರಾತ್ ಸರ್ಕಾರದ ನಿರ್ಧಾರದಿಂದ ಜನರು ದಾರಿ ತಪ್ಪುವುದಿಲ್ಲ. ಇದು ಕೇವಲ ‘ಗಿಮಿಕ್’ ಅಷ್ಟೇ. ಇಂತಹ ಕಾನೂನು ರೂಪಿಸಲು ರಾಜ್ಯದ ಶಾಸಕಾಂಗಕ್ಕೆ ಯಾವುದೇ ಅಧಿಕಾರವಿಲ್ಲ ಎಂದು ಕಾಂಗ್ರೆಸ್ ಮುಖಂಡ ಅರ್ಜುನ್ ಮೊಧ್ವಾಡಿಯಾ ಹೇಳಿದ್ದಾರೆ. ಹಣದುಬ್ಬರ, ನಿರುದ್ಯೋಗ ಸಮಸ್ಯೆ ಮತ್ತು ಸರ್ಕಾರದ ವೈಫಲ್ಯಗಳನ್ನು ಮರೆಮಾಚಿ, ಜನರನ್ನು ದಾರಿ ತಪ್ಪಿಸಲು ಬಿಜೆಪಿಯು ಈ ನಿರ್ಧಾರ ಕೈಗೊಂಡಿದೆ ಎಂದೂ ಆರೋಪಿಸಿದ್ದಾರೆ.

‘ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಸಮಿತಿಯಲ್ಲಿ ಮೂರರಿಂದ ನಾಲ್ಕು ಸದಸ್ಯರು ಇರಲಿದ್ದಾರೆ. ಸಮಿತಿಗೆ ಸದಸ್ಯರನ್ನು ನೇಮಕ ಮಾಡುವ ಅಧಿಕಾರವನ್ನು ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರಿಗೆ ಸಂಪುಟ ಸಭೆ ನೀಡಿದೆ’ ಎಂದು ಗುಜರಾತ್‌ನ ಗೃಹ ಸಚಿವ ಹರ್ಷ ಸಂಘವಿ ಮತ್ತು ಕೇಂದ್ರ ಸಚಿವ ಪುರುಷೋತ್ತಮ ರೂಪಾಲಾ ಸುದ್ದಿಗಾರರಿಗೆ ತಿಳಿಸಿದರು.

ಸಂವಿಧಾನದ 4ನೇ ಭಾಗದ 44ನೇ ವಿಧಿಯ ನಿಬಂಧನೆಗಳ ಅನ್ವಯ ಈ ತೀರ್ಮಾನ ಕೈಗೊಳ್ಳಲಾಗಿದೆ. ಎಲ್ಲಾ ನಾಗರಿಕರಿಗೆ ಅನ್ವಹಿಸುವಂತೆ ಏಕರೂಪ ಕಾನೂನನ್ನು ಜಾರಿಗೊಳಿಸಲು ರಾಜ್ಯ ಸರ್ಕಾರಕ್ಕೆ ಇದರಲ್ಲಿ ಅವಕಾಶವಿದ್ದು, ಇದೊಂದು ಐತಿಹಾಸಿಕ ನಿರ್ಧಾರ ಎಂಬುದಾಗಿ ಸಂಘವಿ ತಿಳಿಸಿದರು.

7ನೇ ಪುಟ ನೋಡಿ

ಅಸ್ತಿತ್ವದಲ್ಲಿಯೇ ಇಲ್ಲದ ವಿ.ವಿ ಪದವಿ ಪ್ರಮಾಣಪತ್ರ

ಮುಂಬಡ್ತಿಗೆ ನಕಲಿ ಪದವಿ: ಹುದ್ದೆಯಿಂದಲೇ ನಾಲ್ವರ ವಜಾ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಅಸ್ತಿತ್ವದಲ್ಲಿಯೇ ಇಲ್ಲದ ವಿಶ್ವವಿದ್ಯಾಲಯದ ಹೆಸರಿನಲ್ಲಿ ನಕಲಿ ಪದವಿ ಪ್ರಮಾಣಪತ್ರ ಸಲ್ಲಿಸಿ ಮುಂಬಡ್ತಿ ಪಡೆದು ಸಿಕ್ಕಿಬಿದ್ದ ನಾಲ್ವರು ಅಧಿಕಾರಿಗಳನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಹುದ್ದೆಯಿಂದಲೇ ವಜಾ ಮಾಡಿದೆ.

ಬೀದರ್ ಜಿಲ್ಲೆ ಆರೋಗ್ಯ ಸಿಕ್ಕಿಂನ ಇಲಾಖೆಯ ಸಹಾಯಕ ಸಾಂಖ್ಯಿಕ ಅಧಿಕಾರಿ ರಾಜಕುಮಾರ, ಸಾಂಖ್ಯಿಕ ನಿರೀಕ್ಷಕರಾದ ಬೀದರ್ ಜಿಲ್ಲೆ ಔರಾದ್ ತಾಲ್ಲೂಕು ಕಚೇರಿಯ ಅಬ್ದುಲ್ ರಬ್, ಭಾಲ್ಕಿ ತಾಲ್ಲೂಕು ಕಚೇರಿಯ ಬಾಲಾಜಿ ಬಿರಾದಾರ ಮತ್ತು ಮೈಸೂರು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಕಚೇರಿಯ ಜೆ. ಪುಟ್ಟರಾಜು ವಜಾಗೊಂಡವರು.

ಅಸ್ತಿತ್ವದಲ್ಲಿಯೇ ಇಲ್ಲದ ‘ಈಸ್ಟರ್ನ್ ಇನ್‌ಸ್ಟಿಟ್ಯೂಟ್ ಫಾರ್ ಇಂಟಗ್ರೇಟೆಡ್ ಲರ್ನಿಂಗ್ ಇನ್ ಮ್ಯಾನೇಜ್‌ಮೆಂಟ್ (ಇಐಐಎಲ್‌ಎಂ) ಯುನಿವರ್ಸಿಟಿ’ ಹೆಸರಿನಲ್ಲಿ ಪದವಿ ಪ್ರಮಾಣಪತ್ರ ಸಲ್ಲಿಸಿ ರಾಜಕುಮಾರ ಅವರು ಸಹಾಯಕ ಸಾಂಖ್ಯಿಕ ಅಧಿಕಾರಿ ಹುದ್ದೆಯಿಂದ ಸಹಾಯಕ ನಿರ್ದೇಶಕ ಹುದ್ದೆಗೆ, ಅಬ್ದುಲ್ ರಬ್ ಮತ್ತು ಬಾಲಾಜಿ ಬಿರಾದಾರ ಅವರು ಸಾಂಖ್ಯಿಕ ನಿರೀಕ್ಷಕ ಹುದ್ದೆಯಿಂದ ಸಹಾಯಕ ಸಾಂಖ್ಯಿಕ ಅಧಿಕಾರಿ ಹುದ್ದೆಗೆ ಬಡ್ತಿ ಪಡೆದಿದ್ದರು.

7ನೇ ಪುಟ ನೋಡಿ

ನ.1ಕ್ಕೆ ಬೃಹತ್ ಆರೋಗ್ಯ ಶಿಬಿರ

ಬೆಂಗಳೂರು: ಕನ್ನಡ ರಾಜ್ಯೋತ್ಸವ ಹಾಗೂ ಪುನೀತ್ ರಾಜ್‌ಕುಮಾರ್ ಅವರ ಪುಣ್ಯಸ್ಮರಣೆ ಪ್ರಯುಕ್ತ ನಿತ್ಯ ನಿರಂತರ ಸೇವಾ ಟ್ರಸ್ಟ್ ಮಂಗಳವಾರ (ನ.1) ಬೆಳಿಗ್ಗೆ 9ರಿಂದ ಮಧ್ಯಾಹ್ನ 2.30ರವರೆಗೆ ಬೃಹತ್ ಆರೋಗ್ಯ ಶಿಬಿರ ಹಮ್ಮಿಕೊಂಡಿದೆ.

ಬಸವನಗುಡಿಯ ವಿದ್ಯಾಪೀಠದ ಸಮೀಪವಿರುವ (ಶಂಕರ್‌ನಾಗ್ ವೃತ್ತ) ಕೆಂಪೇಗೌಡ ಆಟದ ಮೈದಾನದಲ್ಲಿ ಈ ಆರೋಗ್ಯ ಶಿಬಿರ ನಡೆಯಲಿದೆ. ಸಂಸದ ತೇಜಸ್ವಿಸೂರ್ಯ ಹಾಗೂ ಶಾಸಕ ರವಿಸುಬ್ರಹ್ಮಣ್ಯ ಅವರ ಸಹಕಾರ, ನಾರಾಯಣ ಹೃದಯಾಲಯ ಹಾಗೂ ವಿಠಲ್ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಈ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಶಿಬಿರದಲ್ಲಿ ತಜ್ಞವೈದ್ಯರ ಸಲಹೆ, ಹೃದಯ ಸಂಬಂಧಿ ಪರೀಕ್ಷೆ, ಕಣ್ಣಿನ ಪರೀಕ್ಷೆ, ಮೂಳೆ ತಜ್ಞರಿಂದ ಪರೀಕ್ಷೆ, ರಕ್ತದೊತ್ತಡ ಪರೀಕ್ಷೆ, ಮಧುಮೇಹ ಪರೀಕ್ಷೆ, ಪಲ್ಮನರಿ ಫಂಕ್ಷನ್ ಪರೀಕ್ಷೆ, ಮೆಮೋಗ್ರಾಮ್ ಪರೀಕ್ಷೆ ಹಾಗೂ ಮೂಳೆ ಸಾಂದ್ರತೆ ಪರೀಕ್ಷೆಯ ಸೌಲಭ್ಯ ಇರಲಿದೆ. ಅವಶ್ಯವಿದ್ದಲ್ಲಿ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ, ಕನ್ನಡಕ ವಿತರಣೆ, ಔಷಧ ಹಾಗೂ ಔಷಧ ಕಿಟ್ ವಿತರಣೆ ಮತ್ತು ಅಂಗವಿಕಲರಿಗೆ ನೆರವು ನೀಡಲು ಕ್ರಮ ವಹಿಸಲಾಗುವುದು ಎಂದು ಟ್ರಸ್ಟ್ ಗೌರವಾಧ್ಯಕ್ಷ ಪ್ರವೀಣ್ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9945279577 ಅಥವಾ 9980550099

ಮೌಖಿಕ ಪರೀಕ್ಷೆಗೆ ಉಚಿತ ತರಬೇತಿ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್ ವತಿಯಿಂದ ಐಬಿಪಿಎಸ್ ಮುಖ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ನ.8ರಂದು ಉಚಿತ ಮೌಖಿಕ ಪರೀಕ್ಷೆಯ ತರಬೇತಿ ಆಯೋಜಿಸಲಾಗಿದೆ.

ಆಸಕ್ತರು ನ.5ರ ಒಳಗೆ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ. ವಿವರಗಳಿಗೆ ನಂ.15, ಎರಡನೇ ಹಂತ, ಹಳೇ ವಿಮಾನ ನಿಲ್ದಾಣ ರಸ್ತೆ, ಗಾಲ್ಫ್ ಅವೆನ್ಯೂ ರಸ್ತೆ, ಕೋಡಿಹಳ್ಳಿ, ಬೆಂಗಳೂರು-08 ಅಥವಾ ಇ-ಮೇಲ್ ವಿಳಾಸ: ksfbangalore@gmail.com ವೆಬ್ ವಿಳಾಸ: www.ksfkarnatak.com ದೂರವಾಣಿ: 080-25202299, 7625000990 ಸಂಪರ್ಕಿಸಬಹುದು.

ಕೆಂಪರಾಜ್ ನೇಮಕ

ಬೆಂಗಳೂರು: ಬೌರಿಂಗ್ ಹಾಗೂ ಲೇಡಿ ಕರ್ಜನ್ ಆಸ್ಪತ್ರೆಯ ಪ್ರಭಾರ ವೈದ್ಯಕೀಯ ಅಧೀಕ್ಷಕರಾಗಿ ಡಾ.ಟಿ. ಕೆಂಪರಾಜ್ ನೇಮಕಗೊಂಡಿದ್ದಾರೆ.

ಇವರು ಆಸ್ಪತ್ರೆಯ ಜನರಲ್ ಸರ್ಜರಿ ವಿಭಾಗದ ಪ್ರಾಧ್ಯಾಪಕರಾಗಿದ್ದರು. ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾಗಿ ಈ ಮೊದಲು ಡಾ.ಜಿ. ಎನ್. ವಿಜಯಲಕ್ಷ್ಮೀ ಕಾರ್ಯನಿರ್ವಹಿಸುತ್ತಿದ್ದರು. ಅವರನ್ನು ಈ ಸ್ಥಾನದಿಂದ ಬಿಡುಗಡೆಗೊಳಿಸಿ, ಸಂಸ್ಥೆಯ ಫೋರೆನ್ಸಿಕ್ ಮೆಡಿಸಿನ್ ವಿಭಾಗದ ಪ್ರಾಧ್ಯಾಪಕ ಡಾ.ಕೆ.ವಿ.ಸತೀಶ್ ಅವರನ್ನು ನಿಯೋಜಿಸಲಾಗಿತ್ತು. ಅ.28ರಂದು ಡಾ.ಕೆ.ವಿ.ಸತೀಶ್ ಅವರನ್ನೂ ಈ ಸ್ಥಾನದಿಂದ ಬಿಡುಗಡೆ ಮಾಡಲಾಗಿದೆ.

ಕಂಠೀರವ ಸ್ಟುಡಿಯೊ ಮುಂದೆ ಅಭಿಮಾನಿಗಳು ಪುನೀತ್ ಪುತ್ಥಳಿಯನ್ನೊಳಗೊಂಡ ಪಟದ ಕುಣಿತ ಪ್ರದರ್ಶಿಸಿದರು

ಕಂಠೀರವ ಸ್ಟುಡಿಯೊ ಆವರಣದಲ್ಲಿ ರಾರಾಜಿಸಿದ ಪುನೀತ್ ಕಟೌಟ್‌ಗಳು

ರಾಜ್‌ಕುಮಾರ್ ಸಮಾಧಿ ಪ್ರದೇಶದಲ್ಲಿ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಕಣ್ಣೀರು, ನೆನಕೆ ಜೋರು

ಅಪ್ಪು ಅಭಿಮಾನದಲ್ಲಿ 'ಪುನೀತ'ರಾದ ಜನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಭಿಮಾನಿಗಳೇ ನಮ್ಮನೆ ದೇವ್ರು' ಎಂಬ ಅಪ್ಪು ಅವರ 'ದೊಡ್ಮನೆ ಹುಡುಗ' ಚಿತ್ರದ ಹಾಡನ್ನು ಪದೇ ಪದೇ ನೆನಪಿಸುವಂತೆ ಮಾಡಿತು ಶನಿವಾರ ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಸಮಾಧಿ ಪ್ರದೇಶದ ದೃಶ್ಯ.

ಒಂದೆಡೆ ಗಾಢ ಮೌನ, ತುಂಬಿದ ಕಣ್ಣಾಲಿಗಳು. ಮತ್ತೊಂದೆಡೆ ಅವರ ಹಾಡುಗಳ ಝಲಕ್. ಅದಕ್ಕೆ ಕನ್ನಡ ಧ್ವಜ, ಪುನೀತ್ ಭಾವಚಿತ್ರ ಹಿಡಿದು ಹೆಜ್ಜೆ ಹಾಕಿದ ಅಭಿಮಾನಿಗಳು. ತರಕಾರಿ ಕೆತ್ತನೆಗಳಲ್ಲಿ, ಬೆಣ್ಣೆ ಪ್ರತಿಮೆಯಲ್ಲಿ, ಅಕ್ರಿಲಿಕ್ ಕೃತಿಗಳಲ್ಲಿ ಎಲ್ಲೆಲ್ಲೂ ರಾರಾಜಿಸಿದ್ದು ಅಪ್ಪು.

ಹೀಗೆ ಪುನೀತ್ ನಿಧನರಾದ ದಿನ ಅದೆಷ್ಟು ಭಾವತೀವ್ರತೆಯಿತ್ತೋ ಅದೇ ಭಾವ ಇಂದೂ ಮನೆ ಮಾಡಿತ್ತು. ಅಪ್ಪು ಹೆಸರಿನ ಸ್ಮರಣಿಕೆಗಳು, ಭಾವಚಿತ್ರ, ಟೀಷರ್ಟ್‌ಗಳು ಭರ್ಜರಿಯಾಗಿ ಮಾರಾಟವಾದವು. ಶುಚಿರುಚಿಯಾದ ಭೋಜನ ಅಭಿಮಾನಿಗಳ ಹೊಟ್ಟೆ ತಣಿಸಿತು. ಅಷ್ಟೊಂದು ಜನಜಾತ್ರೆಯೇ ಸೇರಿದ್ದರೂ ಎಲ್ಲ ಕಡೆಯೂ ಬಹುತೇಕರು ಸ್ವಯಂಪ್ರೇರಿತರಾಗಿ ಶಿಸ್ತುಬದ್ಧತೆ ತೋರಿದರು.

ರೂಪಾಲಿ ಎಂಬ ಕಲಾವಿದೆ ಪುನೀತ್ ಭಾವಚಿತ್ರದ ಕಲಾಕೃತಿಯನ್ನು ಅಶ್ವಿನಿ ಅವರಿಗೆ ನೀಡಿದರು. ನಟ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಪುನೀತ್ ಅವರನ್ನು ಸ್ಮರಿಸಿ ಮಾತನಾಡಿದರು.

ಚಿತ್ರರಂಗದ ಪ್ರಮುಖ ಗಣ್ಯರು, ನಿರ್ಮಾಣ ಸಂಸ್ಥೆಗಳ ಮುಖ್ಯಸ್ಥರು, ರಾಜಕಾರಣಿಗಳು ಪುನೀತ್ ಅವರನ್ನು ಸಾಮಾಜಿಕ ಜಾಲತಾಣಗಳಲ್ಲಿ ಸ್ಮರಿಸಿದ್ದಾರೆ.

ಪಠ್ಯದಲ್ಲಿ ಪುನೀತ್?

ನಟ ಪುನೀತ್ ಅವರ ಜೀವನ ಸಾಧನೆಯನ್ನು ಶಾಲಾ ಪಠ್ಯದಲ್ಲಿ ಸೇರಿಸುವ ಬಗ್ಗೆ ಕಂದಾಯ ಸಚಿವ ಆರ್. ಅಶೋಕ ಪ್ರತಿಕ್ರಿಯಿಸಿದ್ದು, 'ಈ ಬಗ್ಗೆ ಮುಖ್ಯಮಂತ್ರಿ ಮತ್ತು ಶಿಕ್ಷಣ ಸಚಿವರು ತೀರ್ಮಾನ ತೆಗೆದುಕೊಳ್ಳಲಿದ್ದಾರೆ. ಕೆಲವರ ಜೀವನ ಸಾಧನೆ ಸೇರಿಸಬೇಕು ಅಂದುಕೊಂಡಾಗ ಹಲವು ವಿಘ್ನ ಬರುತ್ತವೆ. ಆದರೆ, ಪುನೀತ್ ಅಂಥವರಿಗೆ ಆ ರೀತಿ ಯಾವುದೇ ಅಡ್ಡಿ ಬರಲಾರದು. ಮುಂದಿನ ವರ್ಷ ಪರಿಶೀಲನೆ ಮಾಡಿ ಸರ್ಕಾರ ತೀರ್ಮಾನಿಸಲಿದೆ' ಎಂದರು.

ಶನಿವಾರ ನಗರದ ಕಂಠೀರವ ಸ್ಟುಡಿಯೊ ಆವರಣದಲ್ಲಿ ಇರುವ ಪುನೀತ್ ರಾಜ್‌ಕುಮಾರ್ ಸಮಾಧಿಯಲ್ಲಿ ಕಲ್ಲಂಗಡಿ ಹಣ್ಣಿನಲ್ಲಿ ಪುನೀತ್ ರಾಜ್‌ಕುಮಾರ್ ಚಿತ್ರ ಬಿಡಿಸಿರುವ ದೃಶ್ಯ —ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಅಶ್ವಿನಿ ಪತ್ರ

ಅಭಿಮಾನಿಗಳಿಗೆ ಕೃತಜ್ಞತೆ ಸಲ್ಲಿಸಿ ಪುನೀತ್ ಪತ್ನಿ ಅಶ್ವಿನಿ ಅವರು ಟ್ವಿಟರ್‌ನಲ್ಲಿ ಪತ್ರವೊಂದನ್ನು ಹಂಚಿಕೊಂಡಿದ್ದಾರೆ. ಅದು ಹೀಗಿದೆ:

'ನೆನಪಿನ ಸಾಗರದಲ್ಲಿ...ಅಪ್ಪು ಅವರು ನಮ್ಮ ನೆನಪುಗಳಲ್ಲಿ ಮಾತ್ರವಲ್ಲದೆ, ನಮ್ಮ ಆಲೋಚನೆಗಳು ಹಾಗೂ ನಾವು ಮಾಡುವ ಸತ್ಕಾರ್ಯಗಳಲ್ಲಿಯೂ ನಮ್ಮ ನಡುವೆ ಸದಾ ಜೀವಂತವಾಗಿದ್ದಾರೆ.

ಅವರ ಕನಸು ಮತ್ತು ಮೌಲ್ಯಗಳನ್ನು ಜೀವಂತವಾಗಿಡಲು ನೂರಾರು ಕುಟುಂಬಗಳ ಸದಸ್ಯರು, ಅವರ ಸಾವಿರಾರು ಸ್ನೇಹಿತರು ಹಾಗೂ ಕೋಟ್ಯಂತರ ಅಭಿಮಾನಿಗಳಿಂದ ನಾನು ಪಡೆದ ಬೆಂಬಲದ ಶಕ್ತಿಯೇ ನನಗೆ ದಾರಿ ಮಾಡಿಕೊಟ್ಟಿದೆ. ಅಪ್ಪು ಅವರ ಮೇಲೆ ನಿಮ್ಮೆಲ್ಲರಿಗೆ ಇರುವ ಪ್ರೀತಿ ಮತ್ತು ಗೌರವದಿಂದ, ಸದಾ ಕಾಲ ಅವರನ್ನು ಜೀವಂತವಾಗಿರಿಸಿದ್ದಕ್ಕಾಗಿ ಎಲ್ಲರಿಗೂ ನನ್ನ ನಮನಗಳು'.

ಪುನೀತ್ ಭಾವಚಿತ್ರ ಹಿಡಿದ ಪುಟಾಣಿ

ವಿದ್ಯಾರ್ಥಿನಿಲಯ ಕಾಮಗಾರಿ ಶೀಘ್ರ ಆರಂಭಿಸಿ– ಸಿಎಂ

ಬೆಂಗಳೂರು: ಬಜೆಟ್‌ನಲ್ಲಿ ಘೋಷಿಸಿರುವ ಐದು ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿನಿಲಯಗಳು, 100 ಅಂಬೇಡ್ಕರ್ ವಿದ್ಯಾರ್ಥಿ ನಿಲಯಗಳು ಹಾಗೂ 12 ವಸತಿಶಾಲೆಗಳ ನಿರ್ಮಾಣಕ್ಕೆ ಮುಂದಿನ ಸಚಿವ ಸಂಪುಟ ಸಭೆಯ ನಂತರ ಚಾಲನೆ ನೀಡಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ಶನಿವಾರ ಅವರು ಲೋಕೋಪಯೋಗಿ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಎಸ್‌ಸಿಪಿ, ಟಿಎಸ್‌ಪಿ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿದರು.

'₹ 400 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ಸಮಾಜ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳಿಂದ ಅನುದಾನ ಒಟ್ಟುಗೂಡಿಸಿ ವೆಚ್ಚ ಮಾಡಬೇಕು. ಎಸ್‌ಸಿಪಿ, ಟಿಎಸ್‌ಪಿ ಯೋಜನೆಯಡಿ ಲೋಕೋಪಯೋಗಿ ಇಲಾಖೆ ಮೂಲಕ 100 ಅಂಬೇಡ್ಕರ್ ವಸತಿಶಾಲೆಗಳು ಹಾಗೂ 12 ಕ್ರೈಸ್ ವಸತಿ ಶಾಲೆಗಳ ನಿರ್ಮಾಣಕ್ಕೆ ಮೊದಲ ಹಂತದಲ್ಲಿ ಲಭ್ಯವಿರುವ ₹ 243 ಕೋಟಿ ಬಳಸಿ ಕಾಮಗಾರಿ ಆರಂಭಿಸಬೇಕು' ಎಂದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಯಲ್ಲಿಯೂ ಈ ಯೋಜನೆಯಡಿ ಬಿಡುಗಡೆ ಮಾಡಿರುವ ಅನುದಾನವನ್ನು ನಿಗದಿತ ವೇಳಾಪಟ್ಟಿಯಂತೆ ವೆಚ್ಚ ಮಾಡುವಂತೆ ಮುಖ್ಯಮಂತ್ರಿ ಸೂಚಿಸಿದರು.

'ಕೋಟಿ ಕಂಠ ಗಾಯನದಲ್ಲಿ ಕಡೆಗಣನೆ'

ಬೆಂಗಳೂರು: 'ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಮ್ಮಿಕೊಂಡಿದ್ದ ಕೋಟಿ ಕಂಠ ಗಾಯನ ಕಾರ್ಯಕ್ರಮದಲ್ಲಿ ಸುಗಮ ಸಂಗೀತ ಕ್ಷೇತ್ರವನ್ನು ಕಡೆಗಣಿಸಲಾಗಿದೆ' ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ಆರೋಪಿಸಿದ್ದಾರೆ.

'ಕೋಟಿ ಕಂಠ ಗಾಯನಕ್ಕೆ ಸಂಬಂಧಿಸಿದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಲು ಇಲಾಖೆಯಿಂದ ಅಥವಾ ಸಚಿವರಿಂದ ನಮಗೆ ಸೂಚನೆಗಳು ಬಂದಿರಲಿಲ್ಲ. ಕಳೆದ ಏಳು-ಎಂಟು ದಶಕಗಳಿಂದ ಕನ್ನಡ ಕಾವ್ಯವನ್ನು ನಾಡಿನ ಉದ್ದಗಲಕ್ಕೂ ಕೊಂಡೊಯ್ದು, ಸುಗಮ ಸಂಗೀತದ ಮೂಲಕ ಪ್ರಸ್ತುತಪಡಿಸಲಾಗಿದೆ. ಇಷ್ಟಾಗಿಯೂ ನಮ್ಮನ್ನು ಕಡೆಗಣಿಸಿರುವುದು ಅತ್ಯಂತ ದುಃಖದ ವಿಷಯ. ಇದನ್ನು ಮುಖ್ಯಮಂತ್ರಿ ಅವರು ಗಂಭೀರವಾಗಿ ಪರಿಗಣಿಸಬೇಕು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಆಯುಕ್ತರ ಕಚೇರಿ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–01

ಸಂಖ್ಯೆ: ಡಿವೈಇಎಸ್/ಎಸ್‌ವೈಸಿ/24/2018–19 ದಿನಾಂಕ: 29.10.2022

ಬಹಿರಂಗ ಹರಾಜು ಪ್ರಕಟಣೆ

ಕರ್ನಾಟಕ ಸರ್ಕಾರದ ಪರವಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿರುವ ಅನುಪಯುಕ್ತ ವಾಹನವನ್ನು ಈ ಮೂಲಕ "ಎಲ್ಲಿದೆಯೋ ಅಲ್ಲಿ – ಹಿಡಿದೆಯೋ ಹಾಗೆ" (As is where is basis) ಬಹಿರಂಗವಾಗಿ ಹರಾಜು ಮಾಡಿ ವಿಲೇವಾರಿ ಮಾಡಲು ಹರಾಜು ಪ್ರಕಟಣೆ ನೀಡಲಾಗಿದೆ. ಇಚ್ಛೆಯುಳ್ಳವರು ಬಹಿರಂಗ ಹರಾಜಿಗೆ ಸಂಬಂಧಿಸಿದಂತೆ ನೀಡಿರುವ ಷರತ್ತುಗಳನ್ನು ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದು. ಬಹಿರಂಗ ಹರಾಜನ್ನು ಬಿಡ್‌ದಾರರ ಸಮ್ಮುಖದಲ್ಲಿ ಮಾಡಲಾಗುವುದು. ಈ ಹರಾಜಿನಲ್ಲಿ ಭಾಗವಹಿಸಿ ಅತಿ ಹೆಚ್ಚು ದರ ಬಿಡ್ ಮಾಡುವ ಬಿಡ್ ದಾರರಿಗೆ ವಾಹನವನ್ನು ವಿಲೇವಾರಿ ಮಾಡಲಾಗುವುದು.

ಈ ಪ್ರಕ್ರಿಯೆಯಲ್ಲಿ ಭಾಗವಹಿಸುವವರು ಅರ್ಜಿ ಶುಲ್ಕ ರೂ. 500.00 ಹಾಗೂ ಇಎಂಡಿ ಮೊತ್ತ ರೂ. 10,000.00 ಗಳನ್ನು ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಡಿಡಿ ಪಡೆದು ದಿನಾಂಕ: 05.11.2022 ರ ಒಳಗಾಗಿ ಅರ್ಜಿಯೊಂದಿಗೆ ಸಲ್ಲಿಸಬೇಕಾಗಿರುತ್ತದೆ.

ಕ್ರ ಸಂ.	ಸ್ಥಳ ಮತ್ತು ದಿನಾಂಕ	ವಾಹನದ ವಿವರ	ಟೆಂಡರ್ ಅರ್ಜಿ ಶುಲ್ಕ	ಇಎಂಡಿ ಮೊತ್ತ	ಬಹಿರಂಗ ಹರಾಜು ದಿನಾಂಕ
01	ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–01	ಕೆಎ–01–ಜಿ–4779 (ಟಾಟಾ ಸಫಾರಿ) ಖರೀದಿಸಿದ ವರ್ಷ – 22.03.2007	ಪ್ರತಿ ಅರ್ಜಿಗೆ ರೂ. 500.00	ರೂ. 10,000.00	ದಿ: 08.11.2022 ಮಧ್ಯಾಹ್ನ 12.00 ಗಂಟೆಗೆ

ಸಹಿ/– ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು

DIPR/CP/2849/GREENFMC/2022-23

ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ, ಕೋಲಾರ–563101
e-mail : eepwdkolar07@gmail.com website: www.kpwd.gov.in
e-portal: http://eproc.karnataka.gov.in
ದೂರವಾಣಿ: 08152–222022, ಫ್ಯಾಕ್ಸ್: 08152–227443

ಇ–ಟೆಂಡರ್ ಪ್ರಕಟಣೆ ಕೆಡಬ್ಲ್ಯೂ–4
ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ: 16/ 2022–23 ದಿನಾಂಕ: 20.10.2022
ಉಲ್ಲೇಖ: 1. ಟೆಂಡರ್ ಅಧಿಸೂಚನೆ ಸಂಖ್ಯೆ: 12/2022–23 ದಿನಾಂಕ: 01.08.2022
2. ಟೆಂಡರ್ ತಿದ್ದುಪಡಿ ಪ್ರಕಟಣೆ ಸಂಖ್ಯೆ: 12–1/2022–23 ದಿನಾಂಕ: 02.09.2022
3. ಟೆಂಡರ್ ಮುಂದೂಡಿಕಾ ಪ್ರಕಟಣೆ ಸಂಖ್ಯೆ: 12–2/2022–23 ದಿನಾಂಕ: 23.09.2022

ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕು ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 5054 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆಗಳು ಅಡಿಯಲ್ಲಿ 2 ಕಾಮಗಾರಿಗಳಿಗೆ ಮರು ಟೆಂಡರ್ ಕರೆಯಲಾಗಿದ್ದು, ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ ಮೊತ್ತ: **ಕನಿಷ್ಠ ರೂ.242.05 ಲಕ್ಷಗಳು. ಗರಿಷ್ಠ ರೂ.243.73 ಲಕ್ಷಗಳು.** ಇ.ಎಂ.ಡಿ ಮೊತ್ತ **ಕನಿಷ್ಠ ರೂ.3.63 ಲಕ್ಷಗಳು ಗರಿಷ್ಠ ರೂ.3.66 ಲಕ್ಷಗಳು.** ಕಾಲಾವಧಿ: 11 ತಿಂಗಳು ನಿರ್ವಹಿಸಲು ನೊಂದಾಯಿತ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೆಡಬ್ಲ್ಯೂ–4ರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (viz.,http://eproc. karnataka.gov.in) ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: **07.11.2022 ರಂದು ಸಂಜೆ 16.00 ಗಂಟೆ ಒಳಗೆ** ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: **08.11.2022 ರಂದು ಸಂಜೆ 16.30 ಗಂಟೆಯ ನಂತರ** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (viz.,http://eproc.karnataka.gov.in) ನಲ್ಲಿ ಸಂಪರ್ಕಿಸಬಹುದಾಗಿದೆ ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ ಬದಲಾಗಿ ಇ–ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಲೋ.ಇ ಕೋಲಾರ ವಿಭಾಗ ಕೋಲಾರ
ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ 351/ಎಂಸಿಎ/2022–23

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನೈಋತ್ಯ ರೈಲ್ವೆ
ಇ–ಟೆಂಡರ್ ಸೂಚನೆ ಸಂ.: 11/2022, ದಿನಾಂಕ: 21.10.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಸಾಮಗ್ರಿಗಳ ಪೂರೈಕೆಗಾಗಿ ಇ–ಟೆಂಡರ್‌ಗಳನ್ನು ಐಆರ್‌ಇಪಿಎಸ್ ಮೂಲಕ ಮಾತ್ರ ಆಹ್ವಾನಿಸಿದ್ದಾರೆ:
ಸಂಕ್ಷಿಪ್ತವಾದ ವಿವರಣೆ: (1) ರಾಮನಗರ, ಚನ್ನಪಟ್ಟಣ ಮತ್ತು ಹೊಸೂರು ನಿಲ್ದಾಣಗಳಲ್ಲಿ ಎಲಿವೇಟರುಗಳ ಅವಶ್ಯಕತೆಯಿದೆ (ಪರಿಮಾಣ: 06 ಸಂ.) (ಟೆಂಡರು ಸಂ. L8226011). (2) ಕೆಎಸ್‌ಆರ್ (ಬೆಂಗಳೂರು) ನಿಲ್ದಾಣಕ್ಕೆ ಎಸ್ಕಲೇಟರುಗಳ ಅವಶ್ಯಕತೆಯಿದೆ. (ಪರಿಮಾಣ: 02 ಸಂ.) (ಟೆಂಡರು ಸಂ. L8226012).
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21.11.2022, 14:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು ಬೆಂಗಳೂರು
PUB/452/AAD/PRB/SWR/2022-23
S.W.Railways SWRRLY SWRRLY

ನೈಋತ್ಯ ರೈಲ್ವೆ
ಇ–ಟೆಂಡರ್ ಸೂಚನೆ ಸಂ.: CAO/CN/BNC/98/2022
ದಿನಾಂಕ: 21.10.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ
1	ಸೈಡ್ ಪಾಥ್‌ವೇ ನಿರ್ಮಾಣ	ರೂ. 5,32,80,471/-

1) ಗೋಕಾಕ ರೋಡ್– ಘಟಪ್ರಭಾ ನಿಲ್ದಾಣದ ನಡುವೆ ಯುಪಿ ಲೈನಿನ ಮೇಲೆ (ಘಟಪ್ರಭಾ ನದಿಯ ಮೇಲೆ) ಓಪನ್ ವೆಬ್ ಗಿರ್ಡರ್ ಬ್ರಿಡ್ಜ್ ನಂ. 125, ಸ್ಪಾನ್ 13X45.70 ಮೀ. ನಿರ್ಮಾಣ. 2) ಕುಡಚಿ – ಉಗಾರ ಖುರ್ದ ನಿಲ್ದಾಣದ ನಡುವೆ ಯುಪಿ ಲೈನಿನ ಮೇಲೆ (ಕೃಷ್ಣಾ ನದಿಯ ಮೇಲೆ) ಓಪನ್ ವೆಬ್ ಗಿರ್ಡರ್ ಬ್ರಿಡ್ಜ್ ನಂ. 184, ಸ್ಪಾನ್ 14X45.70 ಮೀ. ನಿರ್ಮಾಣ. 3) ಗೋಕಾಕ ರೋಡ್ – ಘಟಪ್ರಭಾ ನಿಲ್ದಾಣದ ನಡುವೆ ಯುಪಿ ಲೈನಿನ ಮೇಲೆ (ಘಟಪ್ರಭಾ ನದಿಯ ಮೇಲೆ) ಪಿಎಸ್‌ಸಿ ಗಿರ್ಡರ್ ಬ್ರಿಡ್ಜ್ ನಂ. 125, ಡಿಎನ್ ಲೈನಿನ ಮೇಲೆ ಸ್ಪಾನ್ 45X12.2 ಮೀ. ನಿರ್ಮಾಣ. (ಟೆಂಡರು ಉಲ್ಲೇಖ ಸಂ. LD-MRJ-BRIDGE-125-184-R)

ಕೆಳಗಿನ ಟೆಂಡರುಗಳು 07.11.2022 ಮತ್ತು 29.10.2022 ರಂದು ಮುಕ್ತಾಯವಾಗಲಿರುವುದರಿಂದ ಅವುಗಳನ್ನು ರದ್ದುಪಡಿಸಿ ಮತ್ತೊಮ್ಮೆ ಆಹ್ವಾನಿಸಲಾಗಿದೆ.

2	ಹುಬ್ಬಳ್ಳಿ – ಲೋಂಡಾ	ರೂ. 72,12,19,166/-

ವಿಭಾಗ: ಧಾರವಾಡ – ಕರ್ನಾಟಕ ಯೂನಿವರ್ಸಿಟಿ ರೋಡ್ ವಿಭಾಗದಲ್ಲಿ ಕಟ್ & ಕವರ್ ಮಾದರಿಯಲ್ಲಿ ತಾತ್ಕಾಲಿಕ ಗಿರ್ಡರ್ ಹಾಗೂ ಅಪ್ರೋಚ್‌ಗಳೊಂದಿಗೆ ಕಿ.ಮೀ. 491/400–500ರಲ್ಲಿರುವ ಎಲ್‌ಸಿ ನಂ. 299ರ ಬದಲಿಗೆ 1X9.25X5.50 ಮೀ. ಆರ್‌ಸಿಸಿ ಸೆಗ್‌ಮೆಂಟಲ್ ಬಾಕ್ಸ್ ನ ಆರ್‌ಯುಬಿಯನ್ನು ನಿರ್ಮಾಣ ಮಾಡುವುದು ಹಾಗೂ ಧಾರವಾಡ – ಹಳಿಯಾಳ ವಿಭಾಗದಲ್ಲಿ ಬಾಕ್ಸ್ ಪುಶಿಂಗ್ ಟೆಕ್ನಿಕ್ ಮಾದರಿಯಲ್ಲಿ ಅಪ್ರೋಚ್‌ಗಳೊಂದಿಗೆ ಕಿ.ಮೀ. 492/500–600ರಲ್ಲಿರುವ ಎಲ್‌ಸಿ ನಂ. 300ರ ಬದಲಿಗೆ 2X9.25X5.50 ಮೀ. ಆರ್‌ಸಿಸಿ ಬಾಕ್ಸ್ ನ ಆರ್‌ಯುಬಿಯನ್ನು ನಿರ್ಮಾಣ ಮಾಡುವುದು. (ಟೆಂಡರು ಉಲ್ಲೇಖ ಸಂ. UBL-LD-RUB-LC-299-300-R)

3	ಹುಬ್ಬಳ್ಳಿ – ಬಳ್ಳಾರಿ ವಿಭಾಗ:	ರೂ. 32,72,01,453/-

ಹೊಸಪೇಟೆ ಮತ್ತು ಕಾರಿಗನೂರು ನಿಲ್ದಾಣಗಳ ನಡುವೆ ಎಲ್‌ಸಿ ಸಂ. 85ಕ್ಕೆ ಬದಲಾಗಿ ಕಿ.ಮೀ. 145/400–500 ರಲ್ಲಿ ಪ್ರಸ್ತಾಪಿಸಿದಂತೆ 1x60 ಮೀ. ಕ್ಲಿಯರ್ ಸ್ಪಾನ್ ಬೋಸ್ಟ್ರಿಂಗ್ ಸ್ಟೀಲ್ ಗಿರ್ಡರ್ (ರೈಲ್ವೇ ಸ್ಪಾನ್) ನಂತೆ ರೋಡ್ ಓವರ್ ಬ್ರಿಡ್ಜ್ (ಆರ್‌ಓಬಿ) ಅನ್ನು ನಿರ್ಮಿಸುವುದು. ಹಾಗೆಯೇ ಆರ್‌ಓಬಿಯ ಎರಡೂ ಬದಿಗಳಲ್ಲಿ 8x24.0ಮೀ ಪಿಎಸ್‌ಸಿ ಗಿರ್ಡರ್ & ಜಿಯೋಗ್ರಿಡ್‌ನೊಂದಿಗೆ ಸಿಸಿ ಬ್ಲಾಕ್‌ಗಳು ಅಪ್ರೋಚ್‌ಗಳಂತೆ ಹಾಗೂ ಸರ್ವೀಸ್ ರಸ್ತೆಗಳಂತೆ ಇರಬೇಕು. (ಟೆಂಡರ್ ಉಲ್ಲೇಖ ಸಂ. UBL-BAY-LC-85-R)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: ಕ್ರಸಂ. 1 & 2ಕ್ಕೆ : 10.11.2022 ಮತ್ತು ಕ್ರಸಂ. 3ಕ್ಕೆ : 11.11.2022, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ನಿರ್ಮಾಣ ಬೆಂಗಳೂರು ದಂಡು
PUB/454/AAD/PRB/SWR/2022-23
S.W.Railways SWRRLY SWRRLY

ನೈಋತ್ಯ ರೈಲ್ವೆ
ಇ–ಹರಾಜು ಪ್ರಕ್ರಿಯೆ: ಪಾರ್ಸೆಲ್ ಜಾಗದ ಗುತ್ತಿಗೆ, ಪಾರ್ಕಿಂಗ್ & ಹೊರ ವಲಯದ ಜಾಹೀರಾತು / ಪ್ರಕಟಣೆಗಳು
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ದಿನಾಂಕಗಳಂದು ಇ. ಹರಾಜು ಪ್ರಕ್ರಿಯೆಗಾಗಿ ಬಿಡ್ಡರ್‌ಗಳನ್ನು ಆಹ್ವಾನಿಸಿದ್ದಾರೆ.
1) ಪಾರ್ಸೆಲ್ ಎಸ್‌ಎಲ್‌ಆರ್ & ವಿಪಿಹೆಚ್ ಗುತ್ತಿಗೆ: 02.11.2022, 07.11.2022, 14.11.2022, 21.11.2022 & 28.11.2022
2) ಪಾರ್ಕಿಂಗ್, ಪೇ & ಯೂಜ್ ಗುತ್ತಿಗೆಗಳು: 09.11.2022, 16.11.2022, 14.11.2022 & 23.11.2022.
3) ಜಾಹೀರಾತು ಮತ್ತು ಎಟಿಎಂ ಗುತ್ತಿಗೆಗಳು: 03.11.2022, 04.11.2022, 08.11.2022, 10.11.2022, 15.11,2022, 17.11.2022, 18.11.2022, 22.11.2022, 24.11.2022, 25.11.2022 & 29.11.2022.
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು / ಬೆಂಗಳೂರು
PUB/453/AAD/PRB/SWR/2022-23
S.W.Railways SWRRLY SWRRLY

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU-151/1692/2022–23 ದಿನಾಂಕ:29.10.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ **ವಾಣಿಜ್ಯ ಉಪಯೋಗಕ್ಕಾಗಿ** ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಕೃಷ್ಣಪ್ರಸಾದ್ ಮಿಕ್ಕಿಲಿನೇನಿ ರವರು ನಂ.63, 5ನೇ ಅಡ್ಡರಸ್ತೆ, ಸೆಂಟ್ರಲ್ ಎಕ್ಸೈಜ್ ಲೇಔಟ್ ಬೆಂಗಳೂರು–560 094	ಯಲಹಂಕ	ಜಾಲ	ಬೆಟ್ಟಹಲಸೂರು	207/4	0–35 ಗುಂಟೆ	ವ್ಯವಸಾಯ	ವಾಣಿಜ್ಯ
				ನೆಲ್ಲುಕುಂಟೆ	44/2	02ಎ–20 ಗುಂಟೆ		
					ಒಟ್ಟು	3ಎ–15 ಗುಂಟೆ		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವಾಣಿಜ್ಯ ವಲಯಕ್ಕಾಗಿ ಭೂ ಉಪಯೋಗ ಬದಲಾವಣೆ ಮಾಡುವುದರಿಂದ ವಾಣಿಜ್ಯ ಕಟ್ಟಡಗಳು, ಹೋಟೆಲ್ ಹಾಗೂ ಆಸ್ಪತ್ರೆ ನಡೆಸಲು ಅನುಕೂಲವಾಗುತ್ತದೆ. ನೂರಾರು ಜನರಿಗೆ ಉದ್ಯೋಗ ದೊರಕುತ್ತದೆ. ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಅನೇಕ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಸದರಿ ಭೂಮಿಯನ್ನು ನಗರ ಪ್ರದೇಶಕ್ಕೆ ಹೊಂದಿಕೊಂಡಿರುವುದರಿಂದ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು "**ವ್ಯವಸಾಯ**" ದಿಂದ "**ವಾಣಿಜ್ಯ**" ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/131/2022-23 ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

#DHCup

DH DECCAN HERALD | NANDI INFRASTRUCTURE CORRIDOR ENTERPRISE LIMITED — NANDI IS NICE — Bangalore - Mysore INFRASTRUCTURE CORRIDOR

NICE DH CUP
ಬೆಂಗಳೂರಿನ ಪ್ರಪ್ರಥಮ ಇಂಟರ್ ಕಾರ್ಪೊರೇಟ್ ರೋಲಿಂಗ್ ಟ್ರೋಫಿ

NICE DH Cup 2022

#DHCup

ನವೆಂಬರ್ 2022ರಲ್ಲಿ ಆರಂಭ

ನೀವು ಕುತೂಹಲದಿಂದ ನಿರೀಕ್ಷಿಸುವ ಪಂದ್ಯಾವಳಿ ಇಲ್ಲಿದೆ. ಅದಕ್ಕಾಗಿ ಬಿಡುವು ಮಾಡಿಕೊಳ್ಳುವ ಸಂದರ್ಭ ಇದು, ಡೆಕ್ಕನ್ ಹೆರಾಲ್ಡ್ ಪ್ರಸ್ತುತಪಡಿಸುತ್ತಿದೆ ನೈಸ್ ಡಿಎಚ್ ಕಪ್, ತಲಾ ಐವರು ಆಟಗಾರರ ತಂಡದ ಅಂತರ ಕಾರ್ಪೊರೇಟ್ ವಾರ್ಷಿಕ ಫುಟ್‌ಬಾಲ್ ಪಂದ್ಯಾವಳಿ

- ನಿಮ್ಮ ತಂಡದ ಉತ್ಸಾಹ ಇಮ್ಮಡಿಸಿ
- ಉತ್ತಮ ಆರೋಗ್ಯವನ್ನು ಹೊಂದುವ ಮಹತ್ವವನ್ನು ಅರಿಯಿರಿ

ನೋಂದಣಿಗಾಗಿ ಕರೆ ಮಾಡಿ: ಮನು - 94480 01072 ಅಥವಾ
ಪ್ರೇರಣಾ -79789 44636 | ಭೇಟಿ ನೀಡಿ
www.deccanherald.com/dhcup2022 | ಕೋಡ್ ಅನ್ನು ಸ್ಕ್ಯಾನ್ ಮಾಡಿ

Associate Sponsors
BODYCOAT A brand by AKB motors | Häagen-Dazs AKB foods | apah | BUFFALO WILD WINGS | plaeto | POPEYES | RARE RABBIT | theskinstore.in | JGI THE SPORTS SCHOOL | Yoga Bar

ಮಹದೇವಪುರ ಬಿಬಿಎಂಪಿ ವಲಯಕ್ಕೆ ಆಯುಕ್ತರ ಭೇಟಿ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಪರಿಶೀಲನೆ ನಡೆಸಿದರು

ಕೆ.ಆರ್.ಪುರ: ಮಹದೇವಪುರ ಬಿಬಿಎಂಪಿ ವಲಯಕ್ಕೆ ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಶನಿವಾರ ಬೆಳಿಗ್ಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ವೈಟ್‌ಫೀಲ್ಡ್ ಮುಖ್ಯರಸ್ತೆಯ ಗರುಡಾಚಾರ್ ಪಾಳ್ಯ, ಹೂಡಿ, ರಾಜಪಾಳ್ಯ, ತಿಗಳರಪಾಳ್ಯ ಸೇರಿ ಹಲವು ಕಡೆ ಕಾಲ್ನಡಿಗೆ ಮೂಲಕ ಅಧಿಕಾರಿಗಳೊಂದಿಗೆ ಪರಿಶೀಲನೆ ಮಾಡಿದರು.

ಪರಿಶೀಲನೆ ವೇಳೆ ಅವೈಜ್ಞಾನಿಕವಾಗಿ ಕಂಡುಬಂದ ವಿದ್ಯುತ್ ಕೇಬಲ್ ಕೂಡಲೇ ತೆರವು ಮಾಡುವಂತೆ ಬೆಸ್ಕಾಂ, ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳಿಗೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ವಿಡಿಯೊ ಕಾಲ್ ಮೂಲಕ ಸಮಸ್ಯೆಗಳನ್ನು ತೋರಿಸಿ ತರಾಟೆಗೆ ತೆಗೆದುಕೊಂಡರು.

ಕೇಬಲ್‌ಗಳನ್ನು ಭೂಮಿ ಮಟ್ಟಕ್ಕೆ ಸರಿ ಮಾಡದಿದ್ದರೆ ಫುಟ್‌ಪಾತ್ ಮೇಲಿರುವ ಕೇಬಲ್ ಕಟ್ ಮಾಡಿ ಸೀಜ್ ಮಾಡುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಒಳಚರಂಡಿಗಾಗಿ ಅಗೆದಿರುವ ರಸ್ತೆಗಳನ್ನು ಕಾಮಗಾರಿ ಮಾಡುತ್ತಿರುವ ಏಜೆನ್ಸಿಗಳಿಂದಲೇ ಸರಿಮಾಡಿಸುವಂತೆ ಜಲಮಂಡಲಿ ಹಾಗೂ ಬಿಬಿಎಂಪಿ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಪ್ರತಿ ಹೋಟೆಲ್, ಬೇಕರಿ, ತರಕಾರಿ ಹಾಗೂ ಇತರೆ ಮಳಿಗೆಗಳ ಮುಂದೆ ಕಡ್ಡಾಯವಾಗಿ ಎರಡು ಕಸದ ಬುಟ್ಟಿ ಇಟ್ಟು ಸುತ್ತಮುತ್ತಲೂ ಸ್ವಚ್ಛವಾಗಿರುವಂತೆ ನೋಡಿಕೊಳ್ಳಲು ಹೇಳಿದರು.

ಪ್ರಾದೇಶಿಕ ಆಯುಕ್ತ ತ್ರಿಲೋಕ್ ಚಂದ್ರ, ಮಹದೇವಪುರ ವಲಯ ಜಂಟಿ ಆಯುಕ್ತ ವೆಂಕಟಾಚಲಪತಿ, ಮುಖ್ಯ ಎಂಜಿನಿಯರ್ ಬಸವರಾಜ್ ಕಾಬಾಡೆ, ಇ.ಇ ಮುನಿರೆಡ್ಡಿ, ಇಇ ಶಿವಶಂಕರ್‌ರೆಡ್ಡಿ, ಜಲಮಂಡಳಿ ಇ.ಇ ಅನ್ವರ್ ಮಿರ್ಜಾ ಹಾಜರಿದ್ದರು.

30ಗಳಲ್ಲಿ ಕ್ಷೇತ್ರ ಅಂತಿಮ: ಸಿದ್ದರಾಮಯ್ಯ

ಶಿವಮೊಗ್ಗ: 'ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಯಾವ ಕ್ಷೇತ್ರದಿಂದ ಸ್ಪರ್ಧೆ ಮಾಡಬೇಕು ಎಂಬುದನ್ನು ತಿಂಗಳಲ್ಲಿ ಅಂತಿಮಗೊಳಿಸುತ್ತೇನೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಾದಾಮಿ, ವರುಣಾ, ಚಾಮರಾಜನಗರ, ಕೋಲಾರ ಸೇರಿದಂತೆ ಆರೇಳು ಕ್ಷೇತ್ರಗಳಿಂದ ಸ್ಪರ್ಧಿಸಬೇಕು ಎಂದು ನನ್ನ ಮೇಲೆ ಒತ್ತಡ ಇದೆ' ಎಂದರು.

ನಗರದಲ್ಲಿ ಇಂದು

ಅಮೃತ ಮಹೋತ್ಸವದ ಮುನ್ನುಡಿ ಕಾರ್ಯಕ್ರಮ: ಮ್ಯಾಂಡೊಲಿನ್: ವಿ.ಸ್ಕಂದ ಶಾಸ್ತ್ರಿ, ಪಿಟೀಲು: ನರಸಿಂಹ ಬಾಬು, ಮೃದಂಗ: ಶ್ರೀಶಾ ಆರ್. ಶಂಕರ್, ಗಾಯನ: ಶ್ರೀಮಾತಾ ರಮಾನಂದ, ಪಿಟೀಲು: ಜನಾರ್ದನ ಶ್ರೀನಾಥ್, ಮೃದಂಗ: ಅದಮ್ಯ ರಮಾನಂದ, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಶೇಷಾದ್ರಿಪುರ ಕಾಲೇಜು, ಬೆಳಿಗ್ಗೆ 10

ವಿಶಿಷ್ಟ ರೀತಿಯ ಚಿತ್ರ ಪ್ರದರ್ಶನ ಮತ್ತು ಕನ್ನಡ ಸಾಹಿತಿಗಳ ಪರಿಚಯ: ಉದ್ಘಾಟನೆ: ಟಿ.ಎಸ್. ನಾಗಾಭರಣ, ಅತಿಥಿಗಳು: ಬಿ.ಆರ್. ಲಕ್ಷ್ಮಣರಾವ್, ವಿಜಯಲಕ್ಷ್ಮಿ ಬಾಳೇಕುಂದ್ರಿ, ಆಯೋಜನೆ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಸ್ಥಳ: ಬಸವನಗುಡಿ, ಬೆಳಿಗ್ಗೆ 10

ಶಾ. ಬಾಲುರಾವ್ ಅನುವಾದ ಪ್ರಶಸ್ತಿ ಪ್ರದಾನ: ಸಿ. ವೀರಣ್ಣ, ಅತಿಥಿಗಳು: ಟಿ. ಆರ್. ಅನಂತರಾಮು, ಪ್ರಶಸ್ತಿ ಪುರಸ್ಕೃತರು: ಇಸ್ಮಾಯಿಲ್ ತಳಕಲ್, ಆಯೋಜನೆ: ಬಿ.ಎಂ.ಶ್ರೀ ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಬೆಳಿಗ್ಗೆ 10.30

ಮೈಸೂರು ಸಂಸ್ಥಾನದ ರಾಜಕಾರ್ಯಧುರಂಧರ ಪ್ರಧಾನ ವೆಂಕಾಮಾತ್ಯ ಪುಸ್ತಕ ಬಿಡುಗಡೆ: ಬಾಬು ಕೃಷ್ಣಮೂರ್ತಿ, ಪುಸ್ತಕದ ಬಗ್ಗೆ: ಪಿ.ವಿ. ನಾರಾಯಣ, ಲ.ನ. ಸ್ವಾಮಿ, ಆಯೋಜನೆ: ದಿ ಮಿಥಿಕ್ ಸೊಸೈಟಿಯ ಶತಮಾನೋತ್ಸವ ಸಭಾಂಗಣ, ಬೆಳಿಗ್ಗೆ 11

ಮಣ್ಣಿನ ಹಣತೆ ಸಂಪುಟ–3 ಕೃತಿ ಬಿಡುಗಡೆ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಪ್ರಸನ್ನನಾಥ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ಅತಿಥಿಗಳು: ಎಚ್. ಡಿ. ಕುಮಾರಸ್ವಾಮಿ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಸಿ.ಎನ್. ಬಾಲಕೃಷ್ಣ, ಆಯೋಜನೆ: ಒಕ್ಕಲಿಗರ ವಾಯ್ಸ್, ಸ್ಥಳ: ಕುವೆಂಪು ಕಲಾಕ್ಷೇತ್ರ, ಮಧ್ಯಾಹ್ನ 2

ದೀಪಾವಳಿ ಸಂಭ್ರಮ: ಅತಿಥಿಗಳು: ಬಿ.ವೈ ವಿಜಯೇಂದ್ರ, ಎನ್. ವಿನಯ್ ಹೆಗ್ಡೆ, ಪ್ರಶಸ್ತಿ ಪುರಸ್ಕೃತರು: ಅಪ್ಪಣ ಹೆಗ್ಡೆ, ಅಧ್ಯಕ್ಷತೆ: ಎಂ. ಮುರಳೀಧರ ಹೆಗ್ಡೆ, ಆಯೋಜನೆ: ಬಂಟರ ಸಂಘ, ಸ್ಥಳ: ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾ ಭವನ, ಮಧ್ಯಾಹ್ನ 2.30

9ನೇ ವರ್ಷದ ವಾರ್ಷಿಕೋತ್ಸವ: ಉದ್ಘಾಟನೆ: ವಾಸುದೇವ್, ಸಿರಿಗನ್ನಡ ಕೃತಿ ಬಿಡುಗಡೆ: ಎಸ್.ಎಸ್. ಪಡಶೆಟ್ಟಿ, ಆಯೋಜನೆ: ಸಿರಿಗನ್ನಡ ಮಿತ್ರ ತಂಡ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಕುವೆಂಪು ಸಭಾಂಗಣ, ಸಂಜೆ 4

ದೇವಿ ಮಾಹಾತ್ಮೆ ಯಕ್ಷಗಾನ ಪ್ರದರ್ಶನ ಮತ್ತು ಸೃಷ್ಟಿ ಕಲಾಭೂಷಣ ಪ್ರಶಸ್ತಿ ಪ್ರದಾನ ಸಮಾರಂಭ: ಅತಿಥಿಗಳು: ಜಿತೇಂದ್ರ ಕುಂದೇಶ್ವರ, ರಾಧಾಕೃಷ್ಣ ಉರಾಳ, ಅಧ್ಯಕ್ಷತೆ: ಬಿ.ಎಸ್. ಸತ್ಯನಾರಾಯಣ, ಪ್ರಶಸ್ತಿ ಪುರಸ್ಕೃತರು: ರಂಜಿತಾ ಎಲ್ಲೂರು, ಆಯೋಜನೆ: ಸೃಷ್ಟಿ ಕಲಾ ವಿದ್ಯಾಲಯ, ಸ್ಥಳ: ಪತ್ತಿ ಸಭಾಂಗಣ, ಎನ್. ಆರ್. ಕಾಲೊನಿ, ಮಧ್ಯಾಹ್ನ 2.30

ರಂಜಿತಾ ಎಲ್ಲೂರು

ಸುಲಿಗೆಗೆ ‘ಟೋಲ್’ ಹೆದ್ದಾರಿ

ಒಂದನೇ ಪುಟದಿಂದ..

ಪ್ರತಿ 60 ಕಿ.ಮೀ.ಗೆ ಒಂದರಂತೆ ಟೋಲ್‌ಗೇಟ್ ಇರಬೇಕು’ ಎಂದು ಸಂಸತ್ ಅಧಿವೇಶನದಲ್ಲಿ ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಹೇಳಿಕೆ ನೀಡಿದ್ದರು. ಸ್ಥಳ ಪರಿಶೀಲನೆ ನಡೆಸಿದಾಗ, ಈ ನಿಯಮ ಸಚಿವರ ಭಾಷಣಕ್ಕಷ್ಟೇ ಸೀಮಿತವಾದಂತಿದೆ. ಸಚಿವರಿಗೂ ತಪ್ಪು ಮಾಹಿತಿ ಇರುವುದು ಎದ್ದು ಕಾಣುತ್ತದೆ.

‘ರಾಜಧಾನಿ ಬೆಂಗಳೂರಿನಿಂದ ತುಮಕೂರು, ಹಾಸನ, ಬಳ್ಳಾರಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್‌ಗೇಟ್‌ಗಳನ್ನು ನಿರ್ಮಿಸಲಾಗಿದೆ. ಇಲ್ಲಿ ನಿತ್ಯವೂ ವಸೂಲಿ ನಡೆಯುತ್ತಿದ್ದು, ವಾಹನಗಳ ಮಾಲೀ ಕರು ಹಾಗೂ ಚಾಲಕರು ಬೇಸತ್ತು ಹೋಗಿದ್ದಾರೆ. ಇದು ಗೊತ್ತಿದ್ದರೂ ಸರ್ಕಾರ ಸುಮ್ಮನಿದೆ’ ಎಂದು ನೆಲಮಂಗಲದ ಹೋಲ್‌ಸೇಲ್ ಬಟ್ಟೆ ವ್ಯಾಪಾರಿ ಎಂ. ರವಿಕಿರಣ್ ದೂರಿದರು.

‘ಅಕ್ರಮ ಟೋಲ್ ವಸೂಲಿ ಪ್ರಶ್ನಿಸುವವರ ವಿರುದ್ಧವೇ ಟೋಲ್ ಸಿಬ್ಬಂದಿ ಹರಿಹಾಯುತ್ತಿದ್ದಾರೆ. ಗೂಂಡಾಗಳ ರೀತಿಯಲ್ಲಿ ಹಲ್ಲೆ ನಡೆಸುತ್ತಿದ್ದಾರೆ. ಠಾಣೆ ಹಾಗೂ ನ್ಯಾಯಾಲಯಗಳಲ್ಲಿ ಪ್ರಕರಣ ದಾಖಲಿಸಿದರೂ ಟೋಲ್ ಗೇಟ್ ಸಿಬ್ಬಂದಿ ವರ್ತನೆ ಬದಲಾಗುತ್ತಿಲ್ಲ’ ಎಂದೂ ಆರೋಪಿಸಿದರು.

ರಸ್ತೆ ಬಳಸದಿದ್ದರೂ ಶುಲ್ಕ ವಸೂಲಿ: ತುಮಕೂರು ರಸ್ತೆಯ ಪೀಣ್ಯ ಮೇಲ್ಸೇತುವೆಯಲ್ಲಿ (ಟೋಲ್ ರಸ್ತೆ) ಭಾರಿ ವಾಹನಗಳ ಸಂಚಾರ ಬಂದ್ ಆಗಿ ನಾಲ್ಕು ತಿಂಗಳಾಗಿದೆ. ಸರ್ವೀಸ್ ರಸ್ತೆಯಲ್ಲೇ ಭಾರಿ ವಾಹನಗಳು ಸಂಚರಿಸುತ್ತಿದ್ದು, ಅಂಥ ವಾಹನಗಳಿಂದಲೂ ಅಕ್ರಮವಾಗಿ ಟೋಲ್ ವಸೂಲಿ ಮಾಡಲಾಗುತ್ತಿದೆ.

‘ಗೊರಗುಂಟೆಪಾಳ್ಯ ವೃತ್ತದಿಂದ ಕೆನ್ನ ಮೆಟಲ್ ವಿಡಿಯಾ ಜಂಕ್ಷನ್‌ವರೆಗೆ ಮೇಲ್ಸೇತುವೆ ಬಂದ್ ಮಾಡಲಾಗಿದೆ. ಅಷ್ಟಾದರೂ ಪಾರ್ಲೆ ಬಳಿಯ ಟೋಲ್ ಗೇಟ್‌ನಲ್ಲಿ ಫಾಸ್ಟ್ಯಾಗ್ ವ್ಯವಸ್ಥೆ ಮೂಲಕ ಹಣ ಕಡಿತ ಮಾಡಿಕೊಳ್ಳಲಾಗುತ್ತಿದೆ. ಈ ಸಂಬಂಧ ಹಲವು ಬಾರಿ ಗಲಾಟೆಯೂ ನಡೆದಿದ್ದು, ಚಾಲಕರ ಮೇಲೆಯೇ ಹಲ್ಲೆಗಳು ನಡೆದಿವೆ’ ಎಂದು ಲಾರಿ ಮಾಲೀಕ ನವೀನ್‌ಕುಮಾರ್ ಹೇಳಿದರು.

ಮೂಲ ಸೌಕರ್ಯವೇ ಮರೀಚಿಕೆ: ಟೋಲ್ ಪಾವತಿಸದೇ ಸಂಚರಿಸುವ ಸ್ಥಳೀಯರ ಅನುಕೂಲಕ್ಕಾಗಿ ಸರ್ವೀಸ್ ರಸ್ತೆ ನಿರ್ಮಾಣ ಹಾಗೂ ನಿರ್ವಹಣೆ ಜವಾಬ್ದಾರಿ ಕಂಪನಿಗಳ ಮೇಲಿದೆ. ಆದರೆ, ಬಹುತೇಕ ಕಡೆ ಸರ್ವೀಸ್ ರಸ್ತೆಗಳಿಲ್ಲ. ಇದ್ದರೂ ನಿರ್ವಹಣೆ ಮರೀಚಿಕೆಯಾಗಿದೆ. ಶೌಚಾಲಯ, ಕುಡಿಯುವ ನೀರು, ತುರ್ತು ಸೇವೆಗಳ ವ್ಯವಸ್ಥೆಯೇ ಹದಗೆಟ್ಟಿದೆ. ಸರ್ವೀಸ್ ರಸ್ತೆಗಳ ಬಸ್ ತಂಗುದಾಣಗಳು ನಿರ್ವಹಣೆ ಕೊರತೆಯಿಂದ ಸೊರಗಿವೆ. ಟೋಲ್ ವಸೂಲಿ ಮಾಡುವ ಕಂಪನಿ ಪ್ರತಿನಿಧಿಗಳು, ಹೆದ್ದಾರಿಗಳಲ್ಲಿ ಅಪ ಘಾತ ಸಂಭವಿಸಿದರೂ ಸಹಾಯಕ್ಕೆ ಧಾವಿಸುವು ದಿಲ್ಲ. ಆಂಬುಲೆನ್ಸ್ ಸಹ ಕಳುಹಿಸುವುದಿಲ್ಲ ವೆಂದು ಜನರು ಆರೋಪಿಸುತ್ತಿದ್ದಾರೆ.

‘ಸರ್ವೀಸ್ ರಸ್ತೆಗಳು ಹಾಳಾಗಿದ್ದು, ಎಲ್ಲೆಂದರಲ್ಲಿ ಗುಂಡಿಗಳು ಬಿದ್ದಿವೆ. ನಿತ್ಯವೂ ಅಪಘಾತಗಳು ಸಂಭವಿಸುತ್ತಿದ್ದು, ಜನರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಮಾದನಾಯಕನಹಳ್ಳಿ ಹಾಗೂ ಇತರೆಡೆ ಸಂಭವಿಸಿದ್ದ ಅಪಘಾತಕ್ಕೆ ಸರ್ವೀಸ್ ರಸ್ತೆಯೇ ಕಾರಣ’ ಎಂದು ಚಿಕ್ಕಬಿದರಕಲ್ಲು ನಿವಾಸಿ ರೆಹಮಾನ್ ಆಕ್ರೋಶ ವ್ಯಕ್ತಪಡಿಸಿದರು.

ಗುತ್ತಿಗೆ ಸಹ ಬದಲು: ‘ನೆಲಮಂಗಲ ಟೋಲ್‌ಗೇಟ್‌ಗಳನ್ನು ನವಯುಗ ಕಂಪನಿ ಗುತ್ತಿಗೆ ತೆಗೆದುಕೊಂಡಿತ್ತು. ಇದೀಗ ಗುತ್ತಿಗೆಯನ್ನು ರಿದ್ದಿ ಸಿದ್ದಿ ಅಸೋಸಿಯೇಟ್ಸ್ ಕಂಪನಿಗೆ ನೀಡಲಾಗಿದ್ದು, ಫಲಕ ಬದಲಾಯಿಸದೇ ಅಕ್ರಮ ಸುಲಿಗೆ ಮುಂದುವರಿದಿದೆ’ ಎಂದು ಸ್ಥಳೀಯರು ಆರೋಪಿಸಿದರು.

ತಪ್ಪು ಮುಚ್ಚಿಕೊಳ್ಳಲು ಉಚಿತ ಸಂಚಾರ: ‘ರಾಜಕಾರಣಿಗಳು ಹಾಗೂ ಅವರ ಬೆಂಬಲಿಗರು, ಸರ್ಕಾರದ ಅಧಿಕಾರಿಗಳು, ಪೊಲೀಸರು ಹಾಗೂ ಕೆಲವು ಸಂಘಟನೆಗಳ ಕಾರ್ಯಕರ್ತರಿಗೆ ಬಹುತೇಕ ಟೋಲ್‌ಗೇಟ್‌ಗಳಲ್ಲಿ ಉಚಿತ ಸಂಚಾರ ಕಲ್ಪಿಸಲಾಗುತ್ತವೆ. ತಮ್ಮ ತಪ್ಪನ್ನು ಮುಚ್ಚಿಕೊಳ್ಳಲು ಕಂಪನಿಗಳು ಈ ದಾರಿ ಹಿಡಿದಿವೆ. ಹೀಗಾಗಿಯೇ, ಕಂಪನಿಗಳ ಅಕ್ರಮವನ್ನು ಪ್ರಶ್ನಿಸಿದರೂ ನ್ಯಾಯ ಸಿಗುತ್ತಿಲ್ಲ’ ಎಂಬುದು ಜನರ ಆರೋಪ.

ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗುವ ಹಾಸನ, ವಿಜಯಪುರ, ಕೊಪ್ಪಳ, ದಕ್ಷಿಣ ಕನ್ನಡ, ಚಾಮರಾಜನಗರ, ಮಂಡ್ಯ, ಮೈಸೂರು, ಬೀದರ್, ಚಿಕ್ಕಮಗಳೂರು ಹಾಗೂ ಇತರೆ ಜಿಲ್ಲೆಗಳಲ್ಲೂ ಟೋಲ್ ಸುಲಿಗೆ ಅವ್ಯಾಹತವಾಗಿದೆ. ಇದರ ವಿರುದ್ಧ ಸ್ಥಳೀಯರು ಹಲವು ವರ್ಷಗಳಿಂದ ಹೋರಾಟ ನಡೆಸುತ್ತಿದ್ದಾರೆ.

ಬೆಂಗಳೂರು–ತುಮಕೂರು ರಸ್ತೆಯ ಟೋಲ್‌ಗೇಟ್ ಸಮೀಪದಲ್ಲಿ ಹಾಳಾಗಿರುವ ಸರ್ವೀಸ್ ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವುದು

ಮಂಗಳೂರಿನ ಜನ ಇಂಧನಕ್ಕಿಂತಲೂ ಹೆಚ್ಚು ಹಣವನ್ನು ಟೋಲ್‌ಗೆ ಕಟ್ಟುವಂತಾಗಿದೆ. ಸುರತ್ಕಲ್ ಟೋಲ್ ರದ್ದುಪಡಿಸುವುದಾಗಿ ಸರ್ಕಾರ 2018ರಿಂದಲೂ ಭರವಸೆ ನೀಡುತ್ತಿದ್ದು, ಇದುವರೆಗೂ ಕಾರ್ಯರೂಪಕ್ಕೆ ಬಂದಿಲ್ಲ.

ಮುನೀರ್ ಕಾಟಿಪಳ್ಳ, ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿ ಸಂಚಾಲಕ

ದೇಶದಲ್ಲಿ 187 ಅನಧಿಕೃತ ಟೋಲ್ ಗೇಟ್‌ಗಳಿದ್ದು, ಶೀಘ್ರವೇ ಸ್ಥಳಾಂತರಿಸಲಾಗುವುದು ಎಂದು ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಸಂಸತ್ ಅಧಿವೇಶನದಲ್ಲಿ ಹೇಳಿದ್ದರು. ಆದರೆ, ಒಂದೂ ಟೋಲ್‌ಗೇಟ್ ತೆರವುಗೊಳಿಸಿಲ್ಲ

ಶ್ರೀಶೈಲ ಸಜ್ಜನ, ಉತ್ತರ ಕರ್ನಾಟಕ ಪ್ರಯಾಣಿಕರ ಕ್ಷೇಮಾಭಿವೃದ್ಧಿ ಮಂಡಳಿ ಸಂಸ್ಥಾಪಕ ಅಧ್ಯಕ್ಷ

ಪ್ರಾಧಿಕಾರದ ನಿರ್ಲಕ್ಷ್ಯಕ್ಕೆ 9 ಜನರ ಸಾವು

ಹೊನ್ನಾವರ– ಬಾಣಾವರ ಹೆದ್ದಾರಿ –69ರಲ್ಲಿ ಈಚೆಗೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ 9 ಮಂದಿ ಮೃತಪಟ್ಟಿದ್ದು, ಹೆದ್ದಾರಿ ಪ್ರಾಧಿಕಾರದ ನಿರ್ಲಕ್ಷ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಅರೆಬರೆ ಕಾಮಗಾರಿಯ ಜೊತೆಗೆ ಸರಿಯಾಗಿ ಫಲಕಗಳನ್ನು ಅಳವಡಿಸದೇ ಇರುವುದೇ ಅಪಘಾತಕ್ಕೆ ಕಾರಣ ಎನ್ನುವುದು ಸ್ಥಳೀಯರ ಆರೋಪ.

ಮಳೆಗಾಲದಲ್ಲಿ ಸಂಚಾರ ಬಂದ್

ಕರಾವಳಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿಗಳು ಮಳೆಗಾಲದಲ್ಲಿ ಬಂದ್ ಆಗುವುದು ಸಾಮಾನ್ಯವಾಗಿದೆ. ಸಂಪಾಜೆ, ಶಿರಾಡಿ, ಚಾರ್ಮಾಡಿ ಘಾಟಿಯ ಮೂಲಕ ಕರಾವಳಿ ಸಂಪರ್ಕಿಸುವ ಹೆದ್ದಾರಿಗಳು ಮಳೆಗಾಲದಲ್ಲಿ ಒಂದಿಲ್ಲೊಂದು ಕಾರಣದಿಂದ ಬಂದ್ ಆಗುತ್ತವೆ. ರಸ್ತೆ ಹದಗೆಟ್ಟರೂ ಟೋಲ್ ವಸೂಲಿ ಮಾತ್ರ ನಿಲ್ಲುವುದಿಲ್ಲವೆಂದು ಸ್ಥಳೀಯರು ದೂರುತ್ತಾರೆ.

‘ಟೋಲ್’ ಸುಲಿಗೆ ಆರೋಪವಿರುವ ಗೇಟ್‌ಗಳು

ವಿಜಯಪುರ: ಸೊಲ್ಲಾಪುರ – ಚಿತ್ರದುರ್ಗ ರಾಹೆ–52

ಹಾಸನ: ಬೆಂಗಳೂರು– ಮಂಗಳೂರು ಹೆದ್ದಾರಿ– 75 (ನೆಲಮಂಗಲ, ದೇವಿಹಳ್ಳಿ ಹಾಗೂ ಬೆಳ್ಳೂರು ಕ್ರಾಸ್, ಶಾಂತಿಗ್ರಾಮ ಟೋಲ್‌ಗೇಟ್), ಬಿಳಿಕೆರೆ– ಬೇಲೂರು (ಎನ್‌ಎಚ್ 373), ಮಂಗಳೂರು–ತುಮಕೂರು (ಎನ್‌ಎಚ್ 73), ಹೊನ್ನಾವರ– ಬಾಣಾವರ (ಎನ್‌ಎನ್ 69), ಬೆಂಗಳೂರು–ಮಂಗಳೂರು (ಎನ್‌ಎಚ್ 75: ಶಾಂತಿಗ್ರಾಮ ಟೋಲ್): ಹಾಸನ–ಗೋಣಿಕೊಪ್ಪ (ರಾಜ್ಯ ಹೆದ್ದಾರಿ)

ಬೆಂಗಳೂರು– ಮಂಗಳೂರು ಎನ್‌ಎಚ್ 75 (ನೆಲ್ಲಿಗೆರೆ, ಕಾರಾಬೈಲ್ ಟೋಲ್) ಬೆಂಗಳೂರು– ಚಾಮರಾಜನಗರ–ದಿಂಡಿಗಲ್ ಎನ್‌ಎಚ್ 209.

ಚಾಮರಾಜನಗರ ಜಿಲ್ಲೆ: ಬೆಂಗಳೂರು–ಕೊಯಮತ್ತೂರು (ಎನ್‌ಎಚ್ 948), ಕೊಳ್ಳೆಗಾಲ–ಕೊಯಿಕ್ಕೋಡ್ (ಎನ್‌ಎಚ್ 766), ಮೈಸೂರು–ಊಟಿ (ಎನ್‌ಎಚ್ 65)

ಮೈಸೂರು ಜಿಲ್ಲೆ: ಮೈಸೂರು–ಊಟಿ ಎನ್‌ಎಚ್ 65 (ನಂಜನಗೂಡು ಟೋಲ್)

ಕೊಪ್ಪಳ: ಹೊಸಪೇಟೆ– ವಿಜಯಪುರ ರಾಷ್ಟ್ರೀಯ ಹೆದ್ದಾರಿ–50 (ಶಹಾಪುರ ಹಾಗೂ ಕೆ. ಬೊದೂರು ಟೋಲ್ ಗೇಟ್),ರಾಷ್ಟ್ರೀಯ ಹೆದ್ದಾರಿ 67ರ ಭಾಗವಾದ ಹುಬ್ಬಳ್ಳಿ–ಹೊಸಪೇಟೆ ಎನ್‌ಎಚ್ 67 (ಹಿಟ್ನಾಳ ಹಾಗೂ ಶಹಾಪುರ–ಕೆರೆಹಳ್ಳಿ ಟೋಲ್ ಗೇಟ್)

ಬೀದರ್: ಹೈದರಾಬಾದ್– ಸೊಲ್ಲಾಪುರ ಎನ್‌ಎಚ್ 65 (ಚಿಟಗುಪ್ಪ ಮಂಗಲಗಿ ಟೋಲ್‌ಗೇಟ್)

ಚಿಕ್ಕಮಗಳೂರು: ಅಜ್ಜಂಪುರ ತಾಲ್ಲೂಕಿನ ಚಿಕ್ಕನಾವಂಗಲ ಗೇಟ್ ಮತ್ತು ಹಿರೇಕಾನವಂಗಲ ಸಮೀಪದ ಟೋಲ್ ಗೇಟ್

ದಕ್ಷಿಣ ಕನ್ನಡ: ಹಾಸನ ಜಿಲ್ಲೆಯ ಬಾಣಾವರದಿಂದ ಮಂಗಳೂರು ಎನ್‌ಎಚ್ 75 (ಬಿ.ಸಿ.ರೋಡ್ ಸಮೀಪ ಬ್ರಹ್ಮರಕೂಟ್ಲು ಟೋಲ್‌ಗೇಟ್), ದಕ್ಷಿಣ ಕನ್ನಡ ಜಿಲ್ಲೆಯ ತಲಪಾಡಿಯಿಂದ ಉಡುಪಿ ಜಿಲ್ಲೆಯ ಹೆಜಮಾಡಿವರೆಗೆ ಎನ್‌ಎಚ್ 66 (ಹೆಜಮಾಡಿ, ಸುರತ್ಕಲ್ ಹಾಗೂ ತಲಪಾಡಿ ಟೋಲ್‌ಗೇಟ್)

ಉಡುಪಿ: ಬೈಂದೂರಿನಿಂದ ಮುಲ್ಕಿ ಗಡಿಯವರೆಗೆ ಎನ್‌ಎಚ್ 66 ಹಾಗೂ ಎನ್‌ಎಚ್ 169ಎ (ಬ್ರಹ್ಮಾವರ ತಾಲ್ಲೂಕಿನ ಸಾಸ್ತಾನ, ಕಾಪು ತಾಲ್ಲೂಕಿನ ಹೆಜಮಾಡಿ, ಬೈಂದೂರು ತಾಲ್ಲೂಕಿನ ಶಿರೂರು ಟೋಲ್‌ಗೇಟ್‌ಗಳು)

ರಾಜ್ಯವಾರು ರಾಷ್ಟ್ರೀಯ ಹೆದ್ದಾರಿ ಟೋಲ್‌ಗೇಟ್ ಅಂಕಿ–ಅಂಶ

ರಾಜ್ಯಗಳು	ಟೋಲ್ ಗೇಟ್‌ಗಳು	ರಸ್ತೆ ಉದ್ದ (ಕಿ.ಮೀ.ಗಳಲ್ಲಿ)	ವಾಹನಗಳ ದಟ್ಟಣೆ (ದಿನಕ್ಕೆ ಲಕ್ಷಗಳಲ್ಲಿ)	ಪ್ರತಿ ಕಿ.ಮೀ ಪಾವತಿಸುತ್ತಿರುವ ಶುಲ್ಕ (₹ಗಳಲ್ಲಿ)
ಆಂಧ್ರಪ್ರದೇಶ	45	2,325	10.08	1.19
ಅಸ್ಸಾಂ	6	231	1.12	1.55
ಬಿಹಾರ	20	1,187	3.67	1.15
ಛತ್ತೀಸಗಡ	12	462	1.74	1.37
ದೆಹಲಿ	3	84	1	1.85
ಗುಜರಾತ್	35	2,023	153.62	1.27
ಹರಿಯಾಣ	17	856	4.18	1.52
ಜಮ್ಮು–ಕಾಶ್ಮೀರ	5	237	1	1.75
ಕೇರಳ	7	198	2.26	1.18
ಮಧ್ಯಪ್ರದೇಶ	44	2,390	62.69	1.14
ಮಹಾರಾಷ್ಟ್ರ	46	1,831	12.25	1.52
ಒಡಿಶಾ	11	570	2.49	1.66
ಪಂಜಾಬ್	18	751	13.29	1.50
ರಾಜಸ್ಥಾನ	71	4,023	14.64	1.08
ತಮಿಳುನಾಡು	47	2,332	16.52	1.24
ತೆಲಂಗಾಣ	13	511	2.31	1.60
ಉತ್ತರ ಪ್ರದೇಶ	57	2,843	16.47	1.46
ಪಶ್ಚಿಮ ಬಂಗಾಳ	16	613	22.03	1.54

ನ. 2ರಿಂದ ಜಾಗತಿಕ ಹೂಡಿಕೆದಾರರ ಸಮಾವೇಶ

ಎರಡು, ಮೂರನೇ ಹಂತದ ನಗರಗಳಿಗೆ ಆದ್ಯತೆ: ನಿರಾಣಿ

ಸಂವಾದ



ಬೆಂಗಳೂರು: ‘ಈ ಬಾರಿಯ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಬೆಂಗಳೂರು ಬದಲು ಇತರ ನಗರಗಳಿಗೆ ಆದ್ಯತೆ ನೀಡಲಾಗುತ್ತಿದ್ದು, ಅಲ್ಲಿ ಹೂಡಿಕೆ ಮಾಡಲು ಮುಂದೆ ಬರುವ ಉದ್ಯಮಗಳಿಗೆ ಹಲವು ವಿನಾಯಿತಿಗಳನ್ನು ಘೋಷಿಸಲಾಗಿದೆ’ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಹೇಳಿದರು.

ಬೆಂಗಳೂರಿನಲ್ಲಿ ನ.2ರಿಂದ 4ರವರೆಗೆ ಮೂರು ದಿನಗಳ ಕಾಲ ನಡೆಯಲಿರುವ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ(ಜಿಮ್) ಕುರಿತು ಶನಿವಾರ ನಡೆದ ‘ಪ್ರಜಾವಾಣಿ’ ಸಂವಾದದಲ್ಲಿ ಅಭಿಪ್ರಾಯ ಹಂಚಿಕೊಂಡ ಅವರು, 2–3 ನೇ ಹಂತದ ನಗರಗಳಲ್ಲಿ ಕಂಪನಿಗಳು ರೂಪಿಸುವ ಯೋಜನೆಗಳಿಗೆ ಶೇ 20ರಷ್ಟು ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ. ಅಂದರೆ, ₹25 ಕೋಟಿಯವರೆಗೆ ಪ್ರೋತ್ಸಾಹಧನ ದೊರೆಯಲಿದೆ. ಜತೆಗೆ, ವಹಿವಾಟಿನ ಮೇಲೆ ಶೇ 3ರಷ್ಟು ರಿಯಾಯಿತಿ ನೀಡಲಾಗುತ್ತಿದೆ ಎಂದರು.

‘ಸೆಮಿಕಂಡಕ್ಟರ್ ಉದ್ಯಮವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಟವರ್ ಎನ್ನುವ ಕಂಪನಿ ಮುಂದಾಗಿತ್ತು. ನಾವು ಮನವರಿಕೆ ಮಾಡಿದ ಬಳಿಕ ಮೈಸೂರಿನಲ್ಲಿ ಸ್ಥಾಪಿಸುತ್ತಿದೆ. ಸುಮಾರು ₹22,500 ಕೋಟಿ ಹೂಡಿಕೆಯಾಗಲಿದ್ದು, ಸಾವಿರಾರು ಮಂದಿಗೆ ಉದ್ಯೋಗ ದೊರೆಯಲಿದೆ. ಇದೇ ರೀತಿ ಬೆಳಗಾವಿಯಲ್ಲಿ ₹2,500 ಕೋಟಿ ಮೊತ್ತದ ಗಾಜಿನ ಕಾರ್ಖಾನೆ ಮತ್ತು ಕಲಬುರಗಿಯಲ್ಲಿ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪಿಸಲಾಗುತ್ತಿದೆ. ತುಮಕೂರು ಬಳಿ ಮುಂಬೈ–ಚೆನ್ನೈ ಕಾರಿಡಾರ್ ಮಾಡಲಾಗುತ್ತಿದೆ’ ಎಂದು ವಿವರಿಸಿದರು.

‘ಸಮಾವೇಶದಲ್ಲಿ ₹5 ಲಕ್ಷ ಕೋಟಿಗೂ ಹೆಚ್ಚಿನ ಮೊತ್ತದ ಹೂಡಿಕೆಯನ್ನು ನಿರೀಕ್ಷಿಸುತ್ತಿದ್ದೇವೆ. ಈ ಹೂಡಿಕೆಯಿಂದ ಈ ಬಾರಿ 5 ಲಕ್ಷ ಜನರಿಗೆ ಉದ್ಯೋಗ ದೊರೆಯುವ ಸಾಧ್ಯತೆ ಇದೆ’ ಎಂದರು.

‘ರೋಗಗ್ರಸ್ತ ಕೈಗಾರಿಕೆಗಳಿಗೆ ಪುನಶ್ಚೇತನ ನೀಡುವ ಬಗ್ಗೆ ಹೊಸ ನೀತಿಗಳನ್ನು ರೂಪಿಸಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕೈಗಾರಿಕೆ ವಲಯದಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ವಿದೇಶಿ ಬಂಡವಾಳ ಹೂಡಿಕೆಯಲ್ಲಿ ಕರ್ನಾಟಕ ಮೊದಲನೇ ಸ್ಥಾನದಲ್ಲಿದೆ. ಹೀಗಾಗಿ, ತೆಲಂಗಾಣ ಸೇರಿದಂತೆ ಇತರ ರಾಜ್ಯಗಳು ನಮ್ಮ ಹತ್ತಿರವೂ ಇಲ್ಲ. ಯಾವುದೇ ರಾಜ್ಯ ನಮ್ಮ ಸ್ಪರ್ಧಿ ಅಲ್ಲ’ ಎಂದು ಸಮರ್ಥಿಸಿಕೊಂಡರು.

ವ್ಯವಸ್ಥೆಯಲ್ಲಿನ ಭ್ರಷ್ಟಾಚಾರದ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, ‘ಉದ್ಯಮಿಗಳಿಗೆ ಅಂತಹ ಯಾವುದೇ ಸಮಸ್ಯೆ ಎದುರಿಸಿದರೆ ನೇರವಾಗಿ ಹಿರಿಯ ಅಧಿಕಾರಿಗಳಿಗೆ ಅಥವಾ ನನ್ನ ಗಮನಕ್ಕೆ ತರಬೇಕು. ಮೊದಲು ಕೊಡುವುದನ್ನು ನಿಲ್ಲಿಸಬೇಕು. ತಂತ್ರಜ್ಞಾನ ಮೂಲಕವೂ ಭ್ರಷ್ಟಾಚಾರಕ್ಕೆ ಸಾಕಷ್ಟು ಕಡಿವಾಣ ಹಾಕಲಿದೆ’ ಎಂದರು.

‘ಪಂಚಾಯಿತಿ ಮಟ್ಟದ ತೆರಿಗೆ ವ್ಯವಸ್ಥೆ ಸುಧಾರಿಸಬೇಕು’

‘ಯೋಜನೆಗಳು ಕಾಲಮಿತಿಯಲ್ಲಿ ಪೂರ್ಣಗೊಳ್ಳಬೇಕು. ಜತೆಗೆ ಪಂಚಾಯಿತಿ ವ್ಯವಸ್ಥೆಯಲ್ಲಿ ತೆರಿಗೆ ಸಮಸ್ಯೆಗಳನ್ನು ಬಗೆಹರಿಸಬೇಕು. ಕೈಗಾರಿಕೆಯ ಕಟ್ಟಡದ ಜಾಗಕ್ಕೆ ಮಾತ್ರ ತೆರಿಗೆ ವಿಧಿಸಬೇಕು’ ಎಂದು ಎಫ್‌ಕೆಸಿಸಿಐ ಅಧ್ಯಕ್ಷ ಬಿ.ವಿ. ಗೋಪಾಲರೆಡ್ಡಿ ಸಂವಾದದಲ್ಲಿ ಹೇಳಿದರು.

‘ಮೊದಲು ಆಶ್ವಾಸನೆಗಳು ಮಾತ್ರ ದೊರೆಯುತ್ತಿದ್ದವು. ಸರ್ಕಾರ ಕೈಗೊಂಡ ಹಲವು ಮಹತ್ವದ ಕ್ರಮಗಳಿಂದ ಉದ್ದಿಮೆದಾರರು ಈಗ ಬೆಂಗಳೂರಿನ ಆಚೆಯೂ ಇತರ ನಗರಗಳಲ್ಲಿ ಉದ್ಯಮಗಳನ್ನು ಸ್ಥಾಪಿಸಲು ಆಸಕ್ತಿ ವಹಿಸುತ್ತಿದ್ದಾರೆ. ಸುಲಲಿತ ವ್ಯಾಪಾರಕ್ಕೆ ಉತ್ತಮ ವಾತಾವರಣ ಸೃಷ್ಟಿಸಲಾಗುತ್ತಿದೆ. ಬಂದರುಗಳ ಅಭಿವೃದ್ಧಿಗೆ ಸರ್ಕಾರ ಹೆಚ್ಚು ಗಮನಹರಿಸಬೇಕಾಗಿದೆ. ಜತೆಗೆ ಕಂಟೇನರ್‌ಗಳ ಸಮಸ್ಯೆಯೂ ಇದೆ. ಕಂಟೇನರ್ ಕಾರಿಡಾರ್ ಮಾಡಿದರೆ ಅನುಕೂಲವಾಗುತ್ತದೆ. ತ್ಯಾಜ್ಯ ನಿರ್ವಹಣೆ ಸಮಸ್ಯೆಯನ್ನು ಬಗೆಹರಿಸಬೇಕು’ ಎಂದು ಒತ್ತಾಯಿಸಿದರು.

ಪೂರ್ಣ ಸಂವಾದ ವೀಕ್ಷಿಸಲು https://fb.watch/gt2ZXEg_s5/

‘ಎದೆಗೆ ಬಿದ್ದ ಅಕ್ಷರ’ ಬೋಧನೆಗೆ ಅವಕಾಶ

7 ಲೇಖಕರ ಪಠ್ಯ ಮರು ಸೇರ್ಪಡೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಠ್ಯ ಪುಸ್ತಕ ವಿವಾದದ ಬಳಿಕ ಮೂಲ ಲೇಖಕರು ಒಪ್ಪಿಗೆ ಸೂಚಿಸದಿರುವ ಕಾರಣಕ್ಕೆ 6, 9 ಹಾಗೂ 10ನೇ ತರಗತಿಯ ಪಾಠ ಹಾಗೂ ಪದ್ಯದ ಬೋಧನೆ ಕೈಬಿಟ್ಟಿದ್ದ ಸರ್ಕಾರವು ಈಗ ಅದೇ ಪಠ್ಯಗಳನ್ನು ಪರಿಗಣಿಸುವಂತೆ ಸೂಚಿಸಿ, ಶುಕ್ರವಾರ ಮರು ಆದೇಶ ಹೊರಡಿಸಿದೆ.

ಸಾಹಿತಿ ದೇವನೂರ ಮಹಾದೇವ ಅವರ ‘ಎದೆಗೆ ಬಿದ್ದ ಅಕ್ಷರ’, ಡಾ.ಜಿ. ರಾಮಕೃಷ್ಣರ ‘ಭಗತ್ ಸಿಂಗ್’, ರೂಪಾ ಹಾಸನ ಅವರ ‘ಅಮ್ಮನಾಗುವುದೆಂದರೆ’, ಈರಪ್ಪ ಎಂ. ಕಂಬಳಿ ಅವರ ‘ಹೀಗೊಂದು ಟಾಪ್ ಪ್ರಯಾಣ’, ಸತೀಶ ಕುಲಕರ್ಣಿ ಅವರ ‘ಕಟ್ಟತೇವ ನಾವು’, ಸುಕನ್ಯಾ ಮಾರುತಿ ಅವರ ‘ಏಣಿ’ ಹಾಗೂ ದೊಡ್ಡಹುಲ್ಲೂರು ರುಕ್ಕೋಜಿರಾವ್ ಅವರ ‘ಡಾ. ರಾಜ್‌ಕುಮಾರ್’ ಎಂಬ ಪಾಠ ಹಾಗೂ ಪದ್ಯಗಳನ್ನು ವಿವಿಧ ತರಗತಿಗಳ ಪಠ್ಯದಲ್ಲಿ ಅಳವಡಿಸಲಾಗಿತ್ತು.

ಪಠ್ಯ ಪುಸ್ತಕ ಪರಿಷ್ಕರಣೆ ವಿವಾದದ ಬೆನ್ನಲ್ಲೇ ಈ ಲೇಖಕರು, ಪ್ರಸಕ್ತ ಶೈಕ್ಷಣಿಕ ಸಾಲಿಗೆ ಬೋಧನೆಗೆ ಪರಿಗಣಿಸದಂತೆ ಶಿಕ್ಷಣ ಇಲಾಖೆಗೆ ಮನವಿ ಸಲ್ಲಿಸಿದ್ದರು. ಸೆ.23ರಂದು ಪಠ್ಯ ಕೈಬಿಡುವಂತೆ ಸರ್ಕಾರಿ ಶಾಲೆ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಿಗೆ ಸರ್ಕಾರವು ಸೂಚಿಸಿ ಆದೇಶಿಸಿತ್ತು.

‘ಕೈಬಿಟ್ಟಿರುವ ಏಳು ಬರಹಗಾರರ ಪಠ್ಯವನ್ನು ಮುಂದುವರಿಸುವಂತೆ ಸಾರ್ವಜನಿಕರು, ಪೋಷಕರು ಹಾಗೂ ಗಣ್ಯರು ಕೋರಿದ್ದಾರೆ. ವಿದ್ಯಾರ್ಥಿಗಳು ಆಗಲೇ ಈ ಪಠ್ಯಗಳನ್ನು ವ್ಯಾಸಂಗ ಮಾಡಿದ್ದಾರೆ. ಶೈಕ್ಷಣಿಕ ವರ್ಷದ ಮಧ್ಯಭಾಗದಲ್ಲಿ ಈ ವಿಷಯಗಳ ಬೋಧನೆ ಕೈಬಿಡುವುದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸರಿಯಾದ ಕ್ರಮವಲ್ಲ. ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಈ ಪಠ್ಯ ಮುಂದುವರಿಸಲು ಕೋರಿದ್ದರು’ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

2022–23ನೇ ಶೈಕ್ಷಣಿಕ ಸಾಲಿಗೆ ಮಾತ್ರ ಈ ಏಳು ಪಾಠಗಳನ್ನು ಬೋಧನೆ, ಕಲಿಕೆ ಹಾಗೂ ಮೌಲ್ಯಮಾಪನಕ್ಕೆ ಪರಿಗಣಿಸುವಂತೆ ಅ.28ರ ಆದೇಶದಲ್ಲಿ ತಿಳಿಸಲಾಗಿದೆ.

ಯುಕೆಪಿ 3: ಭೂ ಪರಿಹಾರ ಹೆಚ್ಚಿಸಲು ನಿರ್ಧಾರ– ಅಶೋಕ

ಬೆಂಗಳೂರು: ‘ಕೃಷ್ಣಾ ಮೇಲ್ದಂಡೆ ಯೋಜನೆಯ (ಯುಕೆಪಿ) 3ನೇ ಹಂತಕ್ಕೆ ಈವರೆಗೆ ಸ್ವಾಧೀನಪಡಿಸಿಕೊಂಡ 50 ಸಾವಿರ ಎಕರೆ ಭೂಮಿಗೆ ಪರಿಹಾರ ನೀಡಬೇಕಿದೆ. ರೈತರ ಆಗ್ರಹದಂತೆ, ವಿಶೇಷ ಪ್ರಕರಣವೆಂದು ಭಾವಿಸಿ ಹೆಚ್ಚಿಸಲು ಪರಿಹಾರ ಹೆಚ್ಚಿಸಲು ನಿರ್ಧರಿಸಲಾಗಿದೆ’ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸಂಪುಟ ಉಪ ಸಮಿತಿ ಸಭೆಯ ಬಳಿಕ ಮಾತನಾಡಿದ ಅವರು, ‘ಆಲಮಟ್ಟಿ ಅಣೆಕಟ್ಟೆ ಎತ್ತರ ಹೆಚ್ಚಿಸುವುದರಿಂದ ಮುಳುಗಡೆ ಆಗಲಿರುವ ಭೂಮಿಗೆ ಸದ್ಯ ಎಕರೆಗೆ ₹ 1.5 ಲಕ್ಷ ಪರಿಹಾರವಿದೆ. ಮೂರು ಪಟ್ಟು ಅಂದರೆ, ₹ 8 ಲಕ್ಷದಷ್ಟು ಆಗಬಹುದು. ಆದರೆ, ರೈತರು ಇನ್ನೂ ಹೆಚ್ಚಿನ ಪರಿಹಾರಕ್ಕೆ ಬೇಡಿಕೆ ಇಟ್ಟಿದ್ದಾರೆ’ ಎಂದರು.

‘ಮಾನವೀಯತೆಯ ದೃಷ್ಟಿಯಿಂದ ಪರಿಹಾರ ಮೊತ್ತ ಹೆಚ್ಚಿಸಲು ತೀರ್ಮಾನಿಸಿದ್ದು, ಇನ್ನೊಂದು ಸಭೆ ಮಾಡಿ, ಪರಿಹಾರ ಎಷ್ಟು ಕೊಡಬೇಕೆಂದು ನಿರ್ಧರಿಸಲಾಗುವುದು. ಎಂದರು

ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 30-10-1997

● **ಉಗ್ರರಿಗೆ ಸಹಾಯ: ಪ್ರಧಾನಿ ಎಚ್ಚರಿಕೆ**

ನವದೆಹಲಿ, ಅಕ್ಟೋಬರ್ 29 (ಯುಎನ್‌ಐ)– ಕೈಗಾರಿಕೆಗಳು ತಮ್ಮ ವೈಯಕ್ತಿಕ ಲಾಭ ಅಥವಾ ವಾಣಿಜ್ಯ ಉದ್ದೇಶಗಳಿಗೆ ರಾಷ್ಟ್ರೀಯ ಹಿತಾಸಕ್ತಿಯನ್ನು ಬಲಿಕೊಡುವುದನ್ನು ಸರ್ಕಾರ ಸಹಿಸುವುದಿಲ್ಲ ಎಂದು ಪ್ರಧಾನಿ ಐ.ಕೆ. ಗುಜ್ರಾಲ್ ಅವರು ಉಗ್ರಗಾಮಿಗಳಿಗೆ ಸಹಾಯಹಸ್ತ ನೀಡುವವರಿಗೆ ಪರೋಕ್ಷ ಎಚ್ಚರಿಕೆ ನೀಡಿದರು.

ಈಶಾನ್ಯ ರಾಜ್ಯಗಳಲ್ಲಿ ಉಗ್ರಗಾಮಿ ಚಟುವಟಿಕೆಗಳ ನಿಯಂತ್ರಣದ ಹೆಸರಿನಲ್ಲಿ ಯಾವ ಉದ್ಯಮಿಗಳನ್ನೂ ತಪ್ಪಿತಸ್ಥರೆಂದು ಗುರುತಿಸುವಂತಿಲ್ಲ ಎಂದರು.

50 ವರ್ಷಗಳ ಹಿಂದೆ — ಸೋಮವಾರ, 30-10-1972

● **ಕೇಂದ್ರ ಸರ್ಕಾರದ ಆದೇಶವೇ ಅಂತಿಮ: ಎಸ್.ಎಂ. ಕೃಷ್ಣ**

ಬೆಂಗಳೂರು, ಅಕ್ಟೋಬರ್ 29– ಪ್ರಸ್ತುತ ರಾಜ್ಯ ವಿಧಾನ ಮಂಡಲದ ಮುಂದಿರುವ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕದಲ್ಲಿ ಪ್ಲಾಂಟೇಷನ್‌ಗಳಿಗೆ ಭೂಮಿತಿಯಿಂದ ವಿನಾಯಿತಿ ನೀಡಲಾಗಿದೆಯಾದರೂ, ಆ ಬಗ್ಗೆ ಕೇಂದ್ರದ ಮಾರ್ಗದರ್ಶನದಂತೆ ರಾಜ್ಯ ಸರ್ಕಾರ ನಡೆಯಲಿದೆ ಎಂದು ಕೈಗಾರಿಕಾ ಸಚಿವ ಎಸ್.ಎಂ. ಕೃಷ್ಣ ತಿಳಿಸಿದರು.

ಮೈಸೂರು ರಾಜ್ಯದ ಪ್ಲಾಂಟರುಗಳ ಸಂಘದ 14ನೆಯ ವಾರ್ಷಿಕ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ದಿನ ಭವಿಷ್ಯ — ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಅಕ್ಟೋಬರ್ 30, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಷಷ್ಠಿ ಗಂ. 27-28 ನಕ್ಷತ್ರ: ಮೂಲಾ ಗಂ. 07-26, ಪೂರ್ವಾಷಾಢ ಗಂ. 29-48 ಯೋಗ: ಸುಕರ್ಮ ಗಂ. 19-15, ತುಲಾ ಮಾಸದ 12 ನೇ ದಿನ.
ರಾಹುಕಾಲ : ಸಾಯಂಕಾಲ 04-30 – 06:00
ಸೂರ್ಯೋದಯ : 06-28 ಸೂರ್ಯಾಸ್ತ : 06-01 ಮುಸ್ಲಿಂ ದಿನಾಂಕ : 03 ರಬಿಯುಸ್ಸಾನಿ
ದಿನ ವಿಶೇಷ : ಪ್ರತಿಹರ ಷಷ್ಠಿ ಅಥವಾ ಸೂರ್ಯ ಷಷ್ಠಿ (ಛತ್-ಬಿಹಾರ್)
ಅದೃಷ್ಟ ಸಂಖ್ಯೆ : 2, 9

ಮೇಷ: ಈ ದಿನ ಯಾರಲ್ಲಿಯೂ ಯಾವ ವಿಚಾರವನ್ನೂ ಮುಚ್ಚಿಡಬೇಡಿ. ನಂಬಿಕಸ್ಥ ಜನರಿಂದಲೇ ಮೋಸ ಹೋಗುವ ಸಂಭವವಿದೆ. ನಿಮ್ಮ ಸರ್ವತೋಮುಖ ಅಭಿವೃದ್ಧಿಗೆ ನಿಮ್ಮ ಸಂಗಾತಿಯ ಸಂಪೂರ್ಣ ಬೆಂಬಲ ಸಿಗಲಿದೆ.

ವೃಷಭ: ಪರರ ಟೀಕೆಗೆ ಗುರಿಯಾಗುವಿರಿ. ಅದರಿಂದಾಗಿ ಮಾನಸಿಕ ಹಿಂಸೆ ಉಂಟಾಗುತ್ತದೆ. ಸಾಂಸಾರಿಕ ಒತ್ತಡದಿಂದ ವೃತ್ತಿಪರವಾದ ಜವಾಬ್ದಾರಿ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ಕೆಲಸವು ವಿಳಂಬವಾಗಿ ನೆರವೇರುವುದು.

ಮಿಥುನ: ಹಣಕಾಸಿನ ವ್ಯವಹಾರ ನಡೆಸುವವರು ತಮ್ಮ ನೂತನ ಯೋಜನೆಗಳನ್ನು ವಿಸ್ತರಿಸಬಹುದು. ದಾಂಪತ್ಯದಲ್ಲಿ ಉತ್ತಮ ಅನ್ಯೋನ್ಯತೆಯು ವೃದ್ಧಿಯಾಗಲಿದೆ. ಕುಟುಂಬದಲ್ಲಿ ಸಂತಸದ ವಾತಾವರಣವಿರುತ್ತದೆ.

ಕರ್ಕಾಟಕ: ಅನುಭವ ಹೊಂದಿದ ಕೆಲಸಗಾರರ ಅಸಹಕಾರದಿಂದ ನಷ್ಟವನ್ನು ನೋಡಬೇಕಾಗಬಹುದು. ಗಿಡಗಳ ನರ್ಸರಿ ಮಾಡುವವರಿಗೆ ಕೀಟ ಬಾಧೆ ಬಹಳ ಪ್ರಮಾಣದಲ್ಲಿ ಉಂಟಾಗುವುದು. ಸ್ವ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಿರಿ.

ಸಿಂಹ: ತೀರ್ಥಯಾತ್ರೆ ಕೈಗೊಳ್ಳುವ ಬಗ್ಗೆ ಮನೆಯವರೊಡನೆ ಸಮಾಲೋಚನೆ ನಡೆಸಿ. ವಾಹನಗಳ ಅಥವಾ ಯಂತ್ರೋಪಕರಣಗಳ ಬಿಡಿ ಭಾಗಗಳ ಮಾರಾಟದಿಂದ ಲಾಭವಿರುವುದು. ಆತ್ಮೀಯರ ಸಮಾಗಮವಾಗಲಿದೆ.

ಕನ್ಯಾ: ಎಲ್ಲಾ ದಾರಿಗಳೂ ಸುಗಮ ಎನಿಸಿ ಎಲ್ಲ ಕಷ್ಟಗಳೂ ನಿವಾರಣೆಯಾಗಲಿವೆ. ಆಲಸ್ಯದಿಂದ ಯಾವುದೇ ಕೆಲಸಗಳನ್ನು ಮುಂದುಹಾಕದೆ ಪೂರ್ಣಗೊಳಿಸಲು ಪ್ರಯತ್ನಿಸಿ. ಮನರಂಜನೆಗಾಗಿ ಕೆಲ ಸಮಯವನ್ನು ಕಳೆಯುವಂತಾಗಲಿದೆ.

ತುಲಾ: ನೀವು ಇನ್ನೊಬ್ಬರ ಅಧೀನದಿಂದ ಹೊರಬಂದು ಸ್ವತಂತ್ರ ಮನೋಭಾವದಿಂದ ಜೀವನ ನಡೆಸುವಂತಾಗಲಿದೆ. ಹೂಡಿಕೆ ಬಗ್ಗೆ ಮುಂದಾಲೋಚನೆ, ಎಚ್ಚರಿಕೆಯಿಂದ ತೀರ್ಮಾನವನ್ನು ಕೈಗೊಳ್ಳುವುದು ಉತ್ತಮ.

ವೃಶ್ಚಿಕ: ಲೋಹಗಳ ಕೈಗಾರಿಕೆ ಉದ್ಯಮದವರಿಗೆ ಹೆಚ್ಚಿನ ಶ್ರಮದಿಂದ ಹೆಚ್ಚಿನ ಅಭಿವೃದ್ಧಿ ಮತ್ತು ಲಾಭ. ನಿರುದ್ಯೋಗಿಗಳಿಗೆ ಸುಲಭವಾಗಿ ಉದ್ಯೋಗ ದೊರೆಯಲಿದೆ. ಹೆಚ್ಚಿನ ಅಧ್ಯಯನಕ್ಕಾಗಿ ಮಗನಿಗೆ ವಿದೇಶ ಪ್ರಯಾಣದ ಯೋಗ.

ಧನು: ಆಧ್ಯಾತ್ಮಿಕ ಚಿಂತನೆಗಳಿಂದ ಮಾನಸಿಕ ನೆಮ್ಮದಿ. ಕ್ಯಾಟರಿಂಗ್ ನಡೆಸುವವರಿಗೆ ಬಿಡುವಿಲ್ಲದ ವಾತಾವರಣ ಎದುರಾಗುವುದು. ಬಂದ ಸಮಸ್ಯೆಗಳು ಆಂಜನೇಯನ ಅನುಗ್ರಹದಿಂದ ಸರಾಗವಾಗಿ ದೂರಾಗಲಿವೆ.

ಮಕರ: ಬಹಳ ದಿನಗಳಿಂದ ನಿರೀಕ್ಷಿಸುತ್ತಿದ್ದ ಹಣ ಇಂದು ನಿಮ್ಮ ಕೈ ಸೇರಲಿದೆ. ಮನೆಯಲ್ಲಿ ನಿಮಗೆ ಅಗತ್ಯವಾದ ಹೊಂದಾಣಿಕೆಯನ್ನು ಮಾಡಿಕೊಳ್ಳುವುದು ಅನಿವಾರ್ಯ. ಆಹಾರ ಸೇವಿಸಲು ಸಂಕೋಚ ಮಾಡಿಕೊಳ್ಳಬೇಡಿ.

ಕುಂಭ: ನಿಮ್ಮ ಮನದಲ್ಲಿರುವ ಆಲೋಚನೆಗಳನ್ನು ಕಾರ್ಯರೂಪಕ್ಕಿಳಿಸಲು ಸೂಕ್ತ ದಿನ. ನಿಮ್ಮ ಒತ್ತಡದ ನಡುವೆಯೂ ಇತರರಿಗೆ ಸಹಾಯ ಮಾಡುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಿ. ಹಣದ ವಿಚಾರದಲ್ಲಿ ಮಿತವ್ಯಯಿಗಳಾಗಿರಿ.

ಮೀನ: ವಿಮರ್ಶಕರಿಗೆ ವೃತ್ತಿಯಲ್ಲಿ ಏಳಿಗೆ. ಹೊಸ ಆಲೋಚನೆಗಳನ್ನು ಕಾರ್ಯರೂಪಕ್ಕೆ ತರುವುದರಿಂದ ಕಾರ್ಯದಲ್ಲಿ ಜಯ. ಸಾಹಸ ಕೃತ್ಯಗಳನ್ನು ಕೈಗೊಳ್ಳುವ ನಿಮ್ಮ ಮನೋಭಿಲಾಷೆ ಇಂದು ನಿಮ್ಮನ್ನು ಕಾಡಲಿದೆ.

ಪದಬಂಧ 5123 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ರಾಜ ಕಾಲಾಳು ಇತ್ಯಾದಿ ಕಾಯಿಗಳಿಂದ ಆಡುವ ಆಟ (4)
3.ಶ್ರೇಷ್ಠವಾದ ಕಾವ್ಯ (4)
5.ಒಳ್ಳೆಯ ಅದೃಷ್ಟ ಹೊಂದಿರುವಿಕೆ (3)
6.ನೇಸರನ ಇನ್ನೊಂದು ಹೆಸರು (3)
8.ನೆಲವನ್ನು ಸಗಣಿಯಿಂದ ಸಾರಿಸುವುದು (3)
10.ಬಳಿ ಬಂದಾಗ ನೀಡಿದ ಉಣ್ಣೆಯ ಉತ್ತರೀಯ (3)
11.ವ್ಯತ್ಯಾಸ ಈ ತರ ಬಂದಿದೆ (3)
13.ಈತ ಬಲು ಸೋಮಾರಿ (3)
15.ಜೈನ ತೀರ್ಥಂಕರರಲ್ಲಿ ಕೊನೆಯವನು (4)
16.ತರತರದ ಕಾಯಿಪಲ್ಲೆ (4)

ಮೇಲಿಂದ ಕೆಳಕ್ಕೆ

1.ನಾಲ್ಕು ಕಾಲುಗಳನ್ನುಳ್ಳದ್ದು (4)
2.ಕತ್ತಿಯನ್ನಿಡುವ ಕೋಶ (3)
3.ಆನೆ ಎಂಬರ್ಥ ಬರುವ ಋಷಿ (3)
4.ಬೇಸಾಯವನ್ನು ಹೀಗೂ ಹೇಳುವರು (4)
7.ಈತ ಮುಸಲ್ಮಾನ ದೊರೆ (3)
9.ಮಹಡಿಯನ್ನು ಹಂತಹಂತವಾಗಿ ಏರಿರುವ ಧರ್ಮಾಧಿಕಾರಿ (3)
10.ಗರ್ಜಿಸುವ ಪ್ರಾಣಿ (4)
12.ದಾರಿಯಲ್ಲಿ ಪಡೆದುಕೊಂಡಿರುವ ಪರವಾನಗಿ (4)
13.ಕರೆಯುವಿಕೆಗೊಂದು ಪರ್ಯಾಯ ಪದ (3)
14.ಸಿಟ್ಟಿಗೇಳುವಾಗಲೇ ಸ್ಫೋಟ! (3)



5122ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಾಸ್ತವ್ಯ 4.ಭಾಜಕ 6.ವಿಧಾನಸಭೆ 8.ಸಲಗ 9.ಹೊಸಬದುಕು 12.ಕನಸು 13.ವನಪಾಲಕ 15.ಮೆದುಳು 16.ಜನಕ

ಮೇಲಿಂದ ಕೆಳಕ್ಕೆ: 1.ವಾಸ್ತವಿಕ 2.ವ್ಯಸನ 3.ಗಲಭೆ 5.ಕರಗ 7.ಸಮಾಸ 8.ಸರಕು 9.ಹೊಲಸು 10.ದುರ್ದಾನ 11.ಅಕಳಂಕ 12.ಕಡಿಮೆ 13.ವಸಡು 14.ಪಾರಜ

ಸುಡೊಕು 5509

	5		1			4		7
6				5				
	4	2	8				6	
4			5		9	2		1
	2			4			5	
3		5	2		8			6
5	7					8		9
		1	4		5			
	8			7			3	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5508 ಸುಡೊಕು

5	7	6	8	3	1	9	4	2
9	8	2	4	5	6	7	3	1
3	4	1	2	7	9	8	5	6
4	1	7	5	6	8	3	2	9
6	5	9	3	2	7	1	8	4
8	2	3	9	1	4	5	6	7
1	6	5	7	8	2	4	9	3
7	9	8	6	4	3	2	1	5
2	3	4	1	9	5	6	7	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರವಾಹಕ್ಕೆ ಹೆದರಿ ಮನೆಯನ್ನೇ ಎತ್ತರಿಸಿದರು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಳೆ ಬಂದರೆ ಉಂಟಾಗುತ್ತಿರುವ ಪ್ರವಾಹ ಪರಿಸ್ಥಿತಿಯಿಂದ ಭಯಗೊಂಡಿರುವ ಬೆಂಗಳೂರಿನ ನಿವಾಸಿಗಳು, ಮನೆ ಎತ್ತರಿಸುವ (ಹೌಸ್ ಲಿಫ್ಟಿಂಗ್) ತಂತ್ರಜ್ಞಾನದ ಕಂಪನಿಗಳನ್ನು ಸಂಪರ್ಕಿಸುತ್ತಿದ್ದಾರೆ. ಮೂರು ತಿಂಗಳಲ್ಲಿ 400ಕ್ಕೂ ಹೆಚ್ಚು ಮಂದಿ ಈ ಕಂಪನಿಗಳನ್ನು ಸಂಪರ್ಕಿಸಿದ್ದು, ಕೆ.ಆರ್.ಪುರದಲ್ಲಿ ಮನೆಯೊಂದನ್ನು 3 ಅಡಿ ಎತ್ತರಿಸಲಾಗಿದೆ.

ಮಳೆಗಾಲದಲ್ಲಿ ಮನೆಗಳಿಗೆ ನೀರು ನುಗ್ಗುವುದು ಸಾಮಾನ್ಯವಾಗಿದ್ದು, ಈ ವರ್ಷದ ಮಳೆ ನಗರದ ನಿವಾಸಿಗಳನ್ನು ಬೆಚ್ಚಿ ಬೀಳಿಸಿದೆ. ವೆಚ್ಚ ದುಬಾರಿ ಎನಿಸಿದರೂ ಬೇರೆ ಮಾರ್ಗವಿಲ್ಲದೆ ಮನೆಗಳನ್ನು ಎತ್ತರಿಸಿಕೊಳ್ಳಲು ಜನ ಮುಂದಾಗುತ್ತಿದ್ದಾರೆ. 'ಒಂದೇ ವರ್ಷದಲ್ಲಿ 10ಕ್ಕೂ ಹೆಚ್ಚು ಬಾರಿ ಮನೆ ಜಲಾವೃತಗೊಂಡಿದೆ. ಆ ಸಂದರ್ಭದ ಸಂಕಷ್ಟಕ್ಕೆ ಹೋಲಿಸಿದರೆ ಮನೆ ಎತ್ತರಿಸಿಕೊಳ್ಳಲು ತಗಲುವ ವೆಚ್ಚ ದುಬಾರಿ ಎನಿಸುವುದಿಲ್ಲ' ಎನ್ನುತ್ತಾರೆ ಕೋಡಿಚಿಕ್ಕನಹಳ್ಳಿ ನಿವಾಸಿ ಸೌಮ್ಯಾ.

'ಕಳೆದ ಮೂರು ತಿಂಗಳಲ್ಲೇ ಬೆಂಗಳೂರಿನಿಂದ 400ಕ್ಕೂ ಹೆಚ್ಚು ಮಂದಿ ನಮ್ಮನ್ನು ಸಂಪರ್ಕಿಸಿ ವಿಚಾರಣೆ ನಡೆಸಿದ್ದಾರೆ' ಎಂದು ಕೇರಳದ ಶ್ರೀರಾಮ್ ಬಿಲ್ಡಿಂಗ್ ಲಿಫ್ಟಿಂಗ್ ವರ್ಕ್ಸ್‌ನ ವಿಕಾಸ್ ರಾಣಾ ಹೇಳುತ್ತಾರೆ.

ಮನೆಗಳು ಜಲಾವೃತಗೊಳ್ಳುವುದು ಹೆಚ್ಚಾದಂತೆ ಸುರಕ್ಷಿತ ಮಾಡಿಕೊಳ್ಳಲು ಹೌಸ್ ಲಿಫ್ಟಿಂಗ್ ಕಂಪನಿಗಳ ವೆಬ್‌ಸೈಟ್ ಜಾಲಾಡುತ್ತಿದ್ದಾರೆ. ಕಳೆದ ವರ್ಷಗಳಿಗೆ ಹೋಲಿಸಿದರೆ 2022ರಲ್ಲಿ ಈ ಸೇವೆ ಹುಡುಕುವ ಜನರ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಿದೆ. 'ಕಳೆದ ವರ್ಷ ಈ ಬಗ್ಗೆ ವಿಚಾರಿಸಿ ಸುಮ್ಮನಾಗಿದ್ದವರು ಈಗ ಭಾರಿ ತೊಂದರೆ ಅನುಭವಿಸಿದ ಬಳಿಕ ಮತ್ತೆ ಸಂಪರ್ಕಿಸುತ್ತಿದ್ದಾರೆ. ಬನ್ನೇರುಘಟ್ಟ ರಸ್ತೆ, ಕೋಡಿಚಿಕ್ಕನಹಳ್ಳಿ, ಜೆ.ಪಿ. ನಗರ, ಕೆ.ಆರ್. ಪುರ, ಕೋಣನಕುಂಟೆ ಭಾಗಗಳಿಂದಲೇ ಹೆಚ್ಚು ಕರೆಗಳು ಬರುತ್ತಿವೆ' ಎಂದು ಬೆಂಗಳೂರಿನಲ್ಲಿರುವ ಟಿಡಿಬಿಡಿ ಎಂಜಿನಿಯರಿಂಗ್ ವರ್ಕ್ಸ್‌ನ ಸುಶೀಲ್ ಸಿಸೋಡಿಯಾ ವಿವರಿಸಿದರು. 2019ರಿಂದ ಈಚೆಗೆ ಕನಿಷ್ಠ 150 ಮನೆಗಳನ್ನು ಎತ್ತರಿಸಲಾಗಿದೆ ಎಂದು ಸಾಯಿ ಹೌಸ್ ಲಿಫ್ಟಿಂಗ್ ಸರ್ವಿಸಸ್‌ನ ನವೀನ್ ಸಿಂಗ್ ಹೇಳಿದರು.

ಕೆ.ಆರ್‌.ಪುರದಲ್ಲಿ ಮನೆಯನ್ನು ಮೂರು ಅಡಿ ಎತ್ತರಿಸಿ ಹೊಸದಾಗಿ ಅಡಿಪಾಯ ಹಾಕಿರುವುದು

'ತಜ್ಞರ ಸಲಹೆ ಪಡೆಯುವುದು ಸೂಕ್ತ'

ಮನೆ ಎತ್ತರಿಸುವುದು ಸರಕ್ಷಿತವೇ ಎಂಬುದರ ಬಗ್ಗೆ ಮೊದಲು ಸ್ಟ್ರಕ್ಚರಲ್ ಎಂಜಿನಿಯರ್‌ಗಳ ಅಭಿಪ್ರಾಯ ಪಡೆಯುವುದು ಸೂಕ್ತ ಎನ್ನುತ್ತಾರೆ ಸಿವಿಲ್ ಎಂಜಿನಿಯರ್‌ಗಳು. 'ಪ್ರವಾಹ ತಡೆಗಟ್ಟಲು ಮನೆ ಎತ್ತರಿಸುವುದು ಉತ್ತಮ ಪರಿಹಾರ. ಆದರೆ, ಇದು ಅಪಾಯಕಾರಿ ವ್ಯವಹಾರ. ಪ್ರತಿಯೊಂದು ಕಟ್ಟಡವೂ ವಿಭಿನ್ನವಾಗಿರುತ್ತವೆ. ಕಟ್ಟಡ ಬಲವಾಗಿ ಉಳಿದಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕಾಗುತ್ತದೆ' ಎಂದು ಅಸೋಷಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ ಸಂಸ್ಥೆಯ ಬೆಂಗಳೂರು ಕೇಂದ್ರದ ಅಧ್ಯಕ್ಷ ಶ್ರೀಕಾಂತ್ ಚನ್ನಾಳ್ ಹೇಳುತ್ತಾರೆ.

ಮನೆಗಳನ್ನು ಎತ್ತರಿಸುವುದು ಹೀಗೆ...

ಮನೆ ಎತ್ತರಿಸುವುದೆಂದರೆ ಜಾಕ್‌ಗಳ ಮೂಲಕ ಮನೆಗಳನ್ನು ಎತ್ತಿ ಅಡಿಪಾಯ ಎತ್ತರಿಸುವ ತಂತ್ರಜ್ಞಾನ. ಇದಕ್ಕೆ ತಗಲುವ ವೆಚ್ಚ ಕಟ್ಟಡದ ತೂಕ ಮತ್ತು ಎತ್ತರವನ್ನು ಅವಲಂಬಿಸುತ್ತದೆ.

ಮೊದಲಿಗೆ ನೆಲಹಾಸನ್ನು ತೆಗೆದು ಗೋಡೆಗಳಿಗೆ ಕಂದಕ ಕೊರೆದು ಜಾಕ್‌ಗಳನ್ನು ಇರಿಸಲಾಗುತ್ತದೆ. ನಂತರ ನಿಧಾನವಾಗಿ ಮೇಲಕ್ಕೆ ಏರಿಸಲಾಗುತ್ತದೆ. ಕಟ್ಟಡ ಒಂದೊಂದು ಅಡಿ ಮೇಲಕ್ಕೆ ಹೋದಂತೆ ಅಡಿಪಾಯ ಹಾಕಲಾಗುತ್ತದೆ. 1,200 ಚದರ ಅಡಿ ಮನೆಯನ್ನು ಮೂರು ಅಡಿಗಳಷ್ಟು ಎತ್ತರಿಸಲು ಕನಿಷ್ಠ 30ರಿಂದ 45 ದಿನಗಳು ಬೇಕಾಗುತ್ತದೆ. ಕನಿಷ್ಠ ₹5 ಲಕ್ಷ ವೆಚ್ಚವಾಗಲಿದೆ ಎಂದು ಕಂಪನಿಯೊಂದು ತನ್ನ ವೆಬ್‌ಸೈಟ್‌ನಲ್ಲಿ ಉಲ್ಲೇಖಿಸಿದೆ.

ಓಲಾ, ಉಬರ್ ಆಟೊ ಪ್ರಯಾಣ ದರ ನಿಗದಿಗೆ ಮೂಡದ ಒಮ್ಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆ್ಯಪ್ ಆಧಾರಿತ ಆಟೊ ಸೇವೆಗೆ ದರ ನಿಗದಿ ಸಂಬಂಧ ಹಗ್ಗಜಗ್ಗಾಟ ಮುಂದುವರಿದ್ದು, ಶನಿವಾರದ ಸಭೆಯಲ್ಲೂ ಒಮ್ಮತ ಮೂಡಲಿಲ್ಲ.

ಸಾರಿಗೆ ಇಲಾಖೆ ಕಾರ್ಯದರ್ಶಿ ಕಚೇರಿಯಲ್ಲಿ ಸಾರಿಗೆ ಅಧಿಕಾರಿಗಳು ಅಗ್ರಿಗೇಟರ್ ಕಂಪನಿಗಳಾದ ಓಲಾ, ಉಬರ್, ರ್‍ಯಾಪಿಡೊ ಪ್ರತಿನಿಧಿಗಳ ಜತೆ ಶನಿವಾರ ಸಭೆ ನಡೆಸಿದರು. ಬೇಡಿಕೆಗೆ ತಕ್ಕಂತೆ ದರ ನಿಗದಿ ಮಾಡಿಕೊಳ್ಳಲು ಅವಕಾಶ ನೀಡಬೇಕು ಎಂದು ಪಟ್ಟು ಹಿಡಿದರು. ಇದಕ್ಕೆ ಸಾರಿಗೆ ಇಲಾಖೆ ಅಧಿಕಾರಿಗಳು ಒಪ್ಪಲಿಲ್ಲ.

'ವಾಹನ ದಟ್ಟಣೆ ಅವಧಿಯಲ್ಲಿ ಸಿಗ್ನಲ್‌ಗಳಲ್ಲೇ ಸಾಕಷ್ಟು ಸಮಯ ವ್ಯರ್ಥವಾಗುತ್ತದೆ. ಸಾಮಾನ್ಯ ಆಟೋರಿಕ್ಷಾಗಳಿಗೆ ವಿಧಿಸಿದಂತೆ ದರ ನಿಗದಪಡಿಸಿದರೆ ತೆರಿಗೆ, ಚಾಲಕರಿಗೆ ನೀಡುವ ಪ್ರೋತ್ಸಾಹಧನ ಸೇರಿ ಮತ್ತಿತರ ಸೇವೆ ಒದಗಿಸುವುದು ಕಷ್ಟ. ಆದ್ದರಿಂದ ಬೇಡಿಕೆ ತಕ್ಕಂತೆ ದರ ಪರಿಷ್ಕರಣೆ ಮಾಡಿಕೊಳ್ಳಲು ಅವಕಾಶ ನೀಡಬೇಕು ಎಂದು ಕಂಪನಿಗಳು ಬೇಡಿಕೆ ಇಟ್ಟಿವೆ' ಎಂದು ಇಲಾಖೆ ಮೂಲಗಳು ತಿಳಿಸಿವೆ.

'ರಿಕ್ಷಾ ಪ್ರಯಾಣ ದರ 2021ರಲ್ಲಿ ದರ ನಿಗದಿಯಾಗಿದ್ದು, ಈಗ ಸಾಕಷ್ಟು ವ್ಯತ್ಯಾಸ ಆಗಿದೆ. ಇದೇ ದರದಲ್ಲಿ ಆ್ಯಪ್ ಆಧಾರಿತ ಸೇವೆ ನೀಡುವುದು ಸಾಧ್ಯವೇ ಇಲ್ಲ ಎಂಬ ಪಟ್ಟನ್ನು ಅಗ್ರಿಗೇಟರ್ ಕಂಪನಿಗಳು ಸಡಿಲಗೊಳಿಸಲಿಲ್ಲ. ಆದ್ದರಿಂದ ಒಮ್ಮತಕ್ಕೆ ಬರಲು ಸಾಧ್ಯವಾಗಿಲ್ಲ' ಎಂದೂ ಹೇಳಿವೆ.

ಬೇಡಿಕೆ ಆಧರಿಸಿ ದರ ಪರಿಷ್ಕರಣೆ ಮಾಡಿಕೊಳ್ಳಲು ಅವಕಾಶ ನೀಡಿದರೆ ಪ್ರಯಾಣಿಕರಿಗೆ ಹೊರೆಯಾಗಲಿದೆ. ಅವಕಾಶ ನೀಡಿದರೆ ಮತ್ತೊಮ್ಮೆ ಆಕ್ಷೇಪ ವ್ಯಕ್ತವಾಗುವ ಸಾಧ್ಯತೆ ಇದೆ. ಆದ್ದರಿಂದ ಸಾಮಾನ್ಯ ದರದಲ್ಲೇ ಆಟೊ ಸೇವೆ ನೀಡಬೇಕು ಎಂದು ಸಾರಿಗೆ ಇಲಾಖೆ ಅಧಿಕಾರಿಗಳ ಅಭಿಪ್ರಾಯ.

'ಕಂಪನಿಗಳು ಸಲ್ಲಿಸಿರುವ ಪ್ರಸ್ತಾವನೆ, ಸಭೆಯಲ್ಲಿ ನಡೆದ ಚರ್ಚೆಗಳ ನಡಾವಳಿಯನ್ನು ಸಾರಿಗೆ ಇಲಾಖೆ ಕಾರ್ಯದರ್ಶಿಯವರು ಹೈಕೋರ್ಟ್‌ಗೆ ಸಲ್ಲಿಸಲಿದ್ದಾರೆ. ಎಷ್ಟು ದರ ಕೇಳಿದ್ದಾರೆ ಎಂಬುದನ್ನು ಈಗ ಹೇಳಲು ಆಗುವುದಿಲ್ಲ' ಎಂದು ಸಾರಿಗೆ ಆಯುಕ್ತ ಟಿಎಚ್‌ಎಂ ಕುಮಾರ್ ತಿಳಿಸಿದರು.

ಸಾರಿಗೆ ಇಲಾಖೆ ಮತ್ತು ಅಗ್ರಿಗೇಟರ್ ಕಂಪನಿಗಳು ಮಾತುಕತೆ ನಡೆಸಿ ದರ ನಿಗದಿ ಮಾಡಲು ಹದಿನೈದು ದಿನಗಳ ಕಾಲಾವಕಾಶವನ್ನು ಹೈಕೋರ್ಟ್ ನೀಡಿತ್ತು. ನ.7ಕ್ಕೆ ಮುಂದಿನ ವಿಚಾರಣೆ ನಿಗದಿಯಾಗಿದೆ.

ನಿಧನ ವಾರ್ತೆ

ಲಕ್ಷ್ಮೀದೇವಿ

ಮೈಸೂರು: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್. ವಿದ್ಯಾಶಂಕರ್ ಅವರ ತಾಯಿ ಲಕ್ಷ್ಮೀದೇವಿ (88) ಶನಿವಾರ ನಿಧನರಾದರು.

ಮೃತರಿಗೆ ಮೂವರು ಪುತ್ರಿಯರು ಹಾಗೂ ನಾಲ್ವರು ಪುತ್ರರಿದ್ದಾರೆ. ನಂತರ ಮಧ್ಯಾಹ್ನ 3ಕ್ಕೆ ಬೆಂಗಳೂರಿನ ಚಾಮರಾಜಪೇಟೆ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೋದಂಡರಾಮಯ್ಯ

ಬೆಂಗಳೂರು: 'ಮೈತ್ರಿ' ಸಂಸ್ಥೆಯ ಸಂಸ್ಥಾಪಕ, ರಾಜರಾಜೇಶ್ವರಿ ನಗರದ ನಿವಾಸಿ ಡಾ.ಎನ್. ಕೋದಂಡ ರಾಮಯ್ಯ (74) ಅವರು ಶುಕ್ರವಾರ ರಾತ್ರಿ ನಿಧನರಾದರು.

ಅವರಿಗೆ ಪತ್ನಿ, ಮಕ್ಕಳಾದ ಉಲ್ಲಾಸ್, ಸುಹಾಸ್ ಇದ್ದಾರೆ. ಶನಿವಾರ ಸಂಜೆ 4 ಗಂಟೆಗೆ ಅಂತ್ಯ ಕ್ರಿಯೆ ನಡೆಯಿತು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

RENTAL PROPERTIES

Accommodation Available

Commercial

COMMERCIAL BUILDING For Rent Behind of Metro Cash & Carry, Kanakapura Road. 1st, 2nd, 3rd FLOOR, Each Floor 13000 Sqft. Contact: 9449037775

Flats

NAGARABHAVI, VINAYAKA LAYOUT, 2BHK Apartment for Lease, Ground Floor, North Facing Main Door and covered Car Parking. Call: 9900596508

Industrial And Factory

AVAILABLE FOR Rent 2800 Sqft Industrial Shed with 50 HP Power & Borewell in Kamakshipalya Industrial Area. Contact: 9902924617/9880475217

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New-Technology and Readymade Precasting Compound Wall-work. Contact-9880916988

WE FIX LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

JOB OPPORTUNITIES

Teachers/ Professors

GODWIN PUBLIC School, Sahakar-Nagar, Bangalore North. Required Qualified, Experienced & Trained NURSERY TEACHERS with fluency in English. Contact: 9353164643/ 9591252252 Mail: godwinschool8@gmail.com

RAJAJINAGAR PARENTS' EDUCATION SOCIETY (R)
CA-2, 69th Cross, 5th Block, Rajajinagar, Bangalore-560 010, Ph: 080-2335 3594, 2350 2813.
Applications are invited for the post of
PRINCIPAL for RPA FIRST GRADE COLLEGE
* **Qualification:** Master's Degree in Commerce or Management (55%) with Ph.D., minimum of 15 years of experience as Principal or in a senior faculty position in any reputed educational institution with proven record in leadership and administrative work. Knowledge of Kannada is a must.
* **Responsibilities:** The candidate should be capable of handling both academic as well as administrative work related to University, NAAC, UGC & other related educational departments. The candidate should be capable of Upgrading the standard of the institution.
* **Skills:** Excellent communication skills, Interpersonal development skills, Research capabilities and Computer knowledge is a must.
* **Salary:** Commensurate with Qualification, Experience & Merit.

Applications are also invited for the posts of following Lecturers in RPA First Grade College (preferably with NET/SLET)
Computer Science - 1 Post (Full-Time) M.Sc (CS) / MCA / M Tech.
English - 1 Post (Full-Time) M.A. English
Kannada - 1 Post (Part-Time) M.A. Kannada
Indian Constitution - 1 Post (Part-Time) M.A. Pol. Sc.
Interested candidates may send their application with their latest and detailed profile to **rpesinfo1969@gmail.com** or post the resume to "The President, Rajajinagar Parents' Education Society, CA-2, 69th Cross, 5th Block, Rajajinagar, Bangalore-560010". ***Applications should reach within 10 days from the date of this advertisement.***
Sd/- Secretary
Rajajinagar Parents' Education Society

WANTED QUALIFIED & Experienced Physical Instructor for VVS PU College (Unaided). Apply in person to the Principal, VVS PU College, Saptharshidhama, I Block, Rajajinagar, 19th main road, Bangalore -560010 with complete Bio-data within one week from the date of the Advertisement. (Timings- 10 am to 03 pm)

SURYODAYA LAW COLLEGE Thirupalya, Electronicity, Bangalore- 560099 Wanted LECTURERS for 3years LLB AND 5years B.com. LLB LLM qualified with Experience immediately contact and send resume 9632081875, 7975796544, 8296261228. EMAIL: suryodaya.edu.trust@gmail.com

TEACHER'S WE'RE hiring Open positions 1. Science Teacher (B.Ed) 2. Math Teacher (B.Ed) 3. Computer science teacher (MCA) 4. Nursery teacher (D.Ed) 5. Physical Education (B.Ped) Walk-in interview (10 am to 2 pm) Sri Vidyaniketan School 203/1, 1 st main, 5th cross, K N Extension, Yeshwanthpur, Bangalore- 560022. Phone: 9945201342

WANTED ENGLISH MEDIUM TRAINED Lady Teachers for Primary/ High School to teach English, Social Science Maths Science NTT trained Computer Science, Lady Graduates Interested in teaching can also apply. Attractive Salary with PF and ESI Facilities. Contact in person (10.00 am- 3.00 pm on all working days) -Secretary, Deccan Educational Society® No. 95, 3rd Cross Srirampuram, Bengaluru- 560021 (Near Sampige Theater, Malleswaram).

CHRIST THE KING ENGLISH SCHOOL, Coxtown, Jeevanahalli, Bangalore-05 requires Fresh/ Experienced Female Ded/ TCH, B.Sc (Comp), BA Bed., Teachers for Primary and High School. Contact immediately 9886107212, 9980773758 email: ctkscoxtown@yahoo.com

RMS INSTITUTE of Management & Science Requires a Principal of 5 to 10 years experience & Faculties for the Department of Computer Science, Commerce. Email: rmsims2021@gmail.com CALL: 9606798188, 9606416534

URGENTLY REQUIRED experienced FEMALE TEACHERS for Kannada, Maths and Science for WISDOM INTERNATIONAL SCHOOL, Richmond Town. A teacher with multiple subject handling credential is preferred. Walk-in interview immediately. Contact: 7676709640, 9900723904.

REQUIRED EXPERIENCED H.M., Maths, Science, English Teachers Immediately. NAYANA VIDYANIKETANA SCHOOL, Near Kengeri. Contact: 9632202212, 9686302211.

Wanted

WANTED FACULTY BA, B.Sc., BE, Diploma, Computer Science, Contact: 9448226652. email: info16bfet@gmail.com

WANTED MSW candidate to work in NGO as Project Head & Special Educator in Autism, MR, HI. More details contact: 9036037737

Multiple Vacancy

OPPORTUNITY OF Bright Career & Substantial Income for Retired officials, Bankers, Teachers, Professionals, Homemakers. 8095301555

UPKAR DEVELOPERS
UPKAR Since 1974
www.upkardevelopers.com
A Leading Property Developer looking for candidates who aggressive, dedicated & independent.
★ **Associate VP / Marketing Head** with Min 10 to 15 yrs Exp In Real Estate - Good Salary
★ **Sales Manager** with 2-4 Years of Experience Both Male & Female - Salary + Incentives
★ **HR Manager** with 4+ years of Experience
Contact Immediately:
9606076424/ 080-26980900

Accounts & Finance

SENIOR ACCOUNTANT needed immediately with min 5 years of experience for CHITRAKOOTA CBSE School, Bangalore (Kengeri). with High Salary. Call: 7829646333

ACCOUONTS & ADMINISTRATION Required Female Graduate with experience & drafting knowledge with good English. Address- Sunkadakatte, Bangalore- 560091. Call: 8884275786/ 9620000615

WANTED ACCOUNTANTS with experience in Accounts GST and income tax. Please send your CV's to jobcabrsco@gmail.com or whatsapp to 7259105338.

Architects

ARCHITECTURE ENGINEER civil required with license approval plans 3d interior exterior designer with experience 8660850688

Engg/ Production Technical

REQUIRE: ENGINEERS with Electrical, Mechanical Or equivalent with minimum experience for a Special pumps manufacturing unit. Openings are in Quality, Marketing, Projects, etc. Email- flowoilpumps@hotmail.com

LIFT/ ELEVATOR COMPANY Required Service Persons/ Engineer Any ITI Passed,also MARKETING EXECUTIVES Required at Jayanagar Call/WhatsApp Resume: 9916135320.

POG RECRUITING Engineers BE / Diploma EEE 2020 , 2021 & 2022 batch. Testing and Commissioning of power system equipment. Accommodation & Training Provided. Starting Salary 20k. Ph : 9900072784 , Email : cv@pog.co.in Web : www.pog.co.in

General

WANTED MANAGER, PROPERTY SALES ADVISORS, TELE-CALLERS, RECRUITERS From J.P.Nagar, Jayanagar, BTM. Ladies Pick/ Drop. Call: 9900001954

Security & Detectives

WANTED Security Guard, Security Officer, and Supervisor for Yelahanka, Sarjapur areas contact: 080-25443259/ 9972214845

PUBLIC NOTICE

SOUTH INDIAN Bank
Experience Next Generation Banking
ಪ್ರಾದೇಶಿಕ ಕಛೇರಿ: ಎಸ್‌ಐಬಿ ಆರ್ಕೆಡ್, #61, ವ್ಹೀಲರ್ ರಸ್ತೆ, ಕಾಕ್ಸ್ ಟೌನ್, ಬೆಂಗಳೂರು-560005
ಸರ್ಫೇಸಿ ಕಾಯಿದೆಯಡಿಯಲ್ಲಿ ವಸತಿ ಆಸ್ತಿಯ ಹರಾಜು ಮಾರಾಟ
ಜಾಗದ ವಿಸ್ತೀರ್ಣ 7352 ಚದರ ಅಡಿಗಳು. ಜೊತೆಗೆ ಅಂದಾಜು 4468 ಚದರ ಅಡಿ ವಿಸ್ತೀರ್ಣದ ವಸತಿ ಕಟ್ಟಡ. ವಿಳಾಸ : ಬೈರತಿ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು.
ಮೀಸಲು ಮೊತ್ತ ರೂ. 4,36,50,000.00
ಹರಾಜಿನ ದಿನಾಂಕ : 04.11.2022
ವೆಬ್‌ಸೈಟ್: www.southindianbank.com
ಸಂಪರ್ಕಿಸಿ
9900931599

MATRIMONIAL

Brides Wanted

Muslim

SUNNI MUSLIM Boy 28 Years From a Very Good Family of Bangalore Educated and Working in Australia father businessman seeks a educated and working girl (Only Parents Can Contact)080-69103008

Grooms Wanted

Muslim

PARENTS OF Sunni Muslim Girl 24 years / 5.7 / BA.LLB working in Company seeks Alliance from Settled and well educated grooms.M:9343716449

Matrimonial Bureaus

ASWATH MATRIMONIAL Services, High class First/ Second Marriages All ages, India/Abroad. Aswath G.V- 9739855599

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

EDUCATION CORNER ಕ್ಲಾಸಿಫೈಡ್ಸ್

SGR GROUP OF INSTITUTIONS ESTD:1985
Campus 01: 111/1, Munnekolala, 1, SGR Dental College Rd, Marathahalli, Bengaluru, Karnataka 560037
Campus 02:56/2, Bhoganahalli & Panathur,0.5 kms from 150FT Ring road, Panathur , Bangaluru,560087
Email: riniv99@gmail.com / sgrheadoffice.domlur@gmail.com / sgradmission2021@gmail.com
Websit: www.sgrinstitutions.edu.in . Contact No: 9845899404 . Admission Hotline: 9606889404
ADMISSION OPEN for 2022-23
LIMITED SEATS ONLY
Dr. Syamala Reddy College & School of Nursing
(Recognised by INC/ KNC & Affiliated to RGUHS)
M.Sc (Nursing), B.Sc (Nursing) PC.B.Sc (Nursing) , DGNM (Nursing)
*Training in our own and Corporate Hospitals
*Assured Placements in UK, Europe Healthcare *Separate Hostel for Boys & Girls, Transportation also available.
SGR Educational Institutions at Campus-02: 30 Acres Educational Infrastructure at SGR Knowledge city at mid of IT Corridor (Opposite to Oracle) and 2 KM from Marathalli Ring Road Junction. Placements with Immediate neighbours Sakra Hospital,IT Majors (Cessna Business Park, Oracle, Accenture, Cisco, JP Morgan Chase,etc.) & Eco-friendly campus, Playgrounds, hostels, Gymnastics, indoor games & Transportation by Institution Vehicles.

USHODHAYA MATRIMONIAL (Estd: 1998)
FOR HIGH CLASS FIRST/ SECOND MARRIAGES All Age Groups INDIA/ ABROAD, Contact:
9611919477 9886884291

OTHERS

Kennel & Pets

GOOD GERMAN Shepherd puppies for sale contact 9902291232, 9845968475. By appointment only

AUTOMOTIVE

Four Wheelers Selling

Maruti

BURNT ERTIGA VXI/2014 KA-53 MB-8949 Lying at Kolar is FOR SALE without RC, Last Date: 04-11-2022- 9844048926, 8147158272

BUSINESS

Business to Business

Shares

EARN REGULAR daily income through online trading in a disciplined way. We give ONE TO ONE, personal training from basics to advanced level in FOREX, EQUITY and F&O segments.Call 8105303232

Business Offers

Finance

OM NAMAH Shivay Loan Avail @ 3.5% per Annum Personal, Business, Projects takeover all types loan. Call & whatsApp ::7678360713.

Business For Sale

NGO REGISTERED 80G CSR1 available for takeover 9845154982

EDUCATIONAL

Diploma Courses

DIPLOMA IN Art Therapy certified Course for Self Exploration, helping to process thoughts, emotions, pain and find clarity. Asha The Hope 7411762828.

Language Classes

SPOKEN ENGLISH Concersation Method.Total English Grammar. UPSC, KPSC, CSAT, LELTS Coaching. Overseas Career Counseling. Contact: 9113883321

PERSONAL

Change of Name

I, LALITHA KRISHNAMURTHY aged about 78 years. W/o. Eluppai Janakiraman Krishnamoorthy, Indian inhabitant, residing at: Flat No. 6071, Sobha Iris, Devarabisanahalli, Outer Ring Road, Bengaluru 560103, have changed my name from LALITHA KRISHNAMOORTHY to LALITHA KRISHNAMURTHY vide affidavit dated 28-10-2022 sworn before Advocate and Notary P. Nanjunda Bangalore

JC671200X SUB/HONY/LT Sushil Kumar Yadav 2ATC son's name Records RAHUL YADAV to RAHUL KUMAR YADAV, Notary BM Chandrashekar.

DH DECCAN HERALD
To Place your ad in Deccan Herald & Prajavani Classifieds
For details contact :
9845114560 : 9731810277
9901641752 : 9886213331
080 - 45557163 / 164

LAW ADMISSION
LL.B Open for 3 Years Course
PANCHAMI College of LAW
Chikka Kodigehalli, Magadi Road, Bangalore-560112.
(M) 9663853127
9740380588 / 9343799528

I, SHANTHI D. KAMATH W/o. G. Dayananda Kamath D/o.Venu Vittal Shenoy. K residing at No. 150, 5th cross, 7th main, Nobo Nagar, Sector-2, Bannerghatta Road, Bengaluru- 560076 have changed my name from SHOBHA. K to SHANTHI D. KAMATH. My date of birth is wrongly mentioned as 24.01.1959 in my SSLC Marks Card instead of 26.07.1959 (Correct DOB) vide affidavit dated 17/10/2022 before notary Devika Kumari. A., Bangalore.

I, K.R LAKSHMI W/o S. Nagappa, aged 58 years, R/a. No. 20, Kathalipalya, 17th B Main, 6th Block, Koramangala Layout, Bengaluru- 560095 have changed my name From KEMPAPURA RAMAHAYA LAKSHMAMMA to K.R LAKSHMI, Vide Affidavit dated 28.10.2022 sworn to before notary GANGARAJU B.N., Advocate, Bengaluru.

JC671200X SUB/HONY/LT Sushil Kumar Yadav 2ATC daughter's name Records SANGEETA KUMARI YADAV to SANGEETA KUMARI, Notary BM Chandrashekar.

I, SNEHA SATISH, aged 31 years, D/o T. Gajendra R/a. Flat No.S-2, 2nd Floor Ganapaty Residency, Bank Colony, Uttarahalli, Bangalore -560061 have changed my name From SNEHA SATISH to SNEHA GAJENDRA, Affidavit dated 28.10.2022 sworn before notary MAHESHA Advocate, Bangalore.

I, JAZCOB JAISON, S/o. G Lawrence residing at No. 21, Elisha Nilayam, JyothiNagar, 5th cross, Horamavu Agara, Bangalore- 560043 have changed my name to JACOB JAISON vide affidavit dated 29/10/2022 before notary Uday Kumar. K., Bengaluru

I, AZAM Pasha S/o Syed Ahmed, aged about 35 years, residing at #472, Water Supply House, Tippunagar, Beside Ex MLA House, Kolar 563101. Have changed my name to Syed Azam Pasha vide affidavit dated 29.10.2022 before Notary M. Ramalinge Gowda Kolar. Henceforth I shall be called as Syed Azam Pasha only.

ASTRO YATRA

ಶ್ರೀ ಸಾಯಿದುರ್ಗಾ ಜ್ಯೋತಿಷ್ಯ ಪೀಠಂ (ನುಡಿದಂತೆ ನಡೆಯುವುದು)
ಪಂಡಿತ್ ಆಶೋಕನಾಥ್ ಭಟ್
ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಸತಿ-ಪತಿ ಕಲಹ, ದಾಂಪತ್ಯ ಸಮಸ್ಯೆ, ಬಿಸಿನೆಸ್, ಮದುವೆ, ಪ್ರೇಮ ವಿವಾಹ, ಕೌಟುಂಬಿಕ ಕಲಹ, ಧನಪ್ರಾಪ್ತಿ ಯೋಗ, ಕೋರ್ಟ್ ಕೇಸ್, ಹಣಕಾಸು, ರಾಜಕೀಯ ಇನ್ನೂ ಯಾವುದೇ ಸಮಸ್ಯೆಗಳಿಗೆ ಅತೀ ಶೀಘ್ರ ಶಾಶ್ವತ ಪರಿಹಾರಕ್ಕಾಗಿ ಇಂದೇ ಸಂಪರ್ಕಿಸಿ:
ಮನೆ ನಂ:40/ಎ, ಸುಬ್ರಹ್ಮಣ್ಯ ದೇವಸ್ಥಾನದ ಹಿಂಭಾಗ, ಕೃಷ್ಣ ಕಲ್ಯಾಣ ಮಂಟಪ ಹತ್ತಿರ, ಬಸವೇಶ್ವರನಗರ ಬೆಂಗಳೂರು-560079 9945555282

DH DECCAN HERALD ಪ್ರಜಾವಾಣಿ

BOOK YOUR CLASSIFIEDS ADVERTISEMENT

DECCAN HERALD & PRAJAVANI CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	80	125	95	150

CD Per Sqcm	Single Col	Double Col	Multi Col
	535	500	515

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

conditions apply*

For More Details Contact:
Ph: 080- 45557160 | 163 | 164 |
9845114560 | 9731810277 | 9901641752 | 9886213331
dhclassifieds@deccanherald.co.in www.dhclassifieds.com

ಚರ್ಚೆಗೆ ಗ್ರಾಸವಾದ ದಿಢೀರ್ ಆದೇಶ ● ಎಫ್‌ಡಿಎ, ಎಸ್‌ಡಿಎಗಳು ಒಂದೇ ಸ್ಥಳದಲ್ಲಿ ಠಿಕಾಣಿ!

ಸಿಬ್ಬಂದಿ ವಿಚಾರಣೆ ನಡೆಸದೇ ನಿಶಾ ವರ್ಗ

● ಆದಿತ್ಯ ಕೆ.ಎ.

ಬೆಂಗಳೂರು: ನಗರ ಪೊಲೀಸ್ ಆಯುಕ್ತರ ಕಚೇರಿಯ ಆಡಳಿತ ವಿಭಾಗದಲ್ಲಿ ಡಿಸಿಪಿ ಆಗಿದ್ದ ನಿಶಾ ಜೇಮ್ಸ್ ಅವರ ವಿರುದ್ಧ ಬಹಿರಂಗಗೊಂಡಿದ್ದ ದೂರಿನ ಪತ್ರದ ವಿಚಾರದಲ್ಲಿ ಇಲಾಖೆ ಸಿಬ್ಬಂದಿ ವಿಚಾರಣೆಯನ್ನೇ ನಡೆಸದೆ ನಿಶಾ ಅವರ ವರ್ಗಾವಣೆ ಮಾಡಿರುವುದು ಪೊಲೀಸ್ ಇಲಾಖೆಯಲ್ಲಿ ಚರ್ಚೆಗೆ ಗ್ರಾಸವಾಗಿದೆ.

'ಐಪಿಎಸ್ ಅಧಿಕಾರಿ ನಿಶಾ ಮಾನಸಿಕ ಕಿರುಕುಳ ನೀಡುತ್ತಿದ್ದಾರೆ' ಎಂದು ಆಪಾದಿಸಿ, ಕಚೇರಿಯ ಶೀಘ್ರಲಿಪಿಗಾರರು, ಎಫ್‌ಡಿಎ, ಎಸ್‌ಡಿಎ ಹಾಗೂ ಶಾಖಾಧೀಕ್ಷಕರ ಹೆಸರಿನಲ್ಲಿ 13 ಪುಟಗಳ ಪತ್ರ ಬರೆಯಲಾಗಿತ್ತು. ಅವರ ವಿರುದ್ಧ ವೈಯಕ್ತಿಕ ಆರೋಪ ಮಾಡಲಾಗಿತ್ತು.

ಸೆ.3ರಂದೇ ಪೊಲೀಸ್ ಪ್ರಧಾನ ಕಚೇರಿಯ ಆಡಳಿತ ವಿಭಾಗದ ಎಡಿಜಿಪಿ ಡಾ.ಎಂ.ಎ.ಸಲೀಂಗೆ ಪತ್ರ ಬರೆದಿದ್ದರು.

ನಿಶಾ ಜೇಮ್ಸ್

ಅದು ಅಕ್ಟೋಬರ್ 17ರಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಕಚೇರಿಯಲ್ಲಿ ಕರ್ತವ್ಯನಿರತ ಸಿಬ್ಬಂದಿ ಹೆಸರಿನಲ್ಲಿಯೇ ಪತ್ರ ಬರೆದಿದ್ದರೂ ಯಾವೊಬ್ಬ ಸಿಬ್ಬಂದಿಯ ವಿಚಾರಣೆ ನಡೆಸದೆ ಮರುದಿನವೇ ವರ್ಗಾವಣೆ ಮಾಡಿರುವುದು ಅನುಮಾನಕ್ಕೆ ಕಾರಣವಾಗಿದೆ ಎಂದು ಮೂಲಗಳು ಹೇಳಿವೆ.

ಮರುಕ್ಷಣವೇ ಕಚೇರಿಯಿಂದ ಹೊರ ನಡೆದ ನಿಶಾ, ವರ್ಗಾವಣೆ ಮಾಡಿದ ಆಂತರಿಕ ಭದ್ರತಾ ವಿಭಾಗದಲ್ಲಿ (ಐಎಸ್‌ಡಿ) ಅಧಿಕಾರ ವಹಿಸಿಕೊಂಡಿದ್ದರು.

ಈ ಪತ್ರವು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದ್ದಂತೆಯೇ ನಿಶಾ ಪರವಾಗಿ ಹಲವು ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಅಭಿಯಾನ ಆರಂಭಿಸಿದ್ದರು. 'ನಿಶಾ ತಪ್ಪು ಮಾಡಿಲ್ಲ. ಆಯುಕ್ತರ ಕಚೇರಿಯಲ್ಲಿ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿದ್ದರು. ಒಂದೇ ಠಾಣೆಯಲ್ಲಿ 10ರಿಂದ 12 ವರ್ಷಗಳ ಠಿಕಾಣಿ ಹೂಡಿದ್ದವರನ್ನು ಎತ್ತಂಗಡಿ ಮಾಡಿದ್ದರು. ಪ್ರಭಾವಿ ಮಂತ್ರಿಗಳ ಶಿಫಾರಸಿಗೂ ಕಿಮ್ಮತ್ತು ನೀಡದೇ ವರ್ಗಾವಣೆ ಮಾಡಿದ್ದಕ್ಕೆ ಸೇಡು ತೀರಿಸಿಕೊಳ್ಳಲು ಪತ್ರ ಬರೆಯಲಾಗಿತ್ತು' ಎಂದು ಸಿಬ್ಬಂದಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಪತ್ರದಲ್ಲಿ 40ಕ್ಕೂ ಹೆಚ್ಚು ಸಿಬ್ಬಂದಿಯ ಹೆಸರು, ಸಹಿ ಇತ್ತು. ಈ ಪತ್ರದಿಂದ ಮುಜುಗರಕ್ಕೆ ಒಳಗಾದ ನಿಶಾ, ಪತ್ರದಲ್ಲಿ ಹೆಸರಿದ್ದ ಕೆಲವು ಸಿಬ್ಬಂದಿಯನ್ನು ಕರೆಸಿ, ವಿಚಾರಿಸಿದ್ದರು. ಅದಕ್ಕೆ 'ನಮ್ಮ ಹೆಸರಿನಲ್ಲಿ ಬೇರೆಯವರು ಸುಳ್ಳು ಪತ್ರ ಬರೆದಿದ್ದಾರೆ' ಎಂದು ಸ್ಪಷ್ಟನೆ ನೀಡಿದ್ದರು. ಆದರೂ ಹಿರಿಯ ಅಧಿಕಾರಿಗಳು ವಿಚಾರಣೆ ನಡೆಸದೇ ದಿಢೀರ್ ವರ್ಗಾವಣೆ ಮಾಡಿರುವುದು ಅನುಮಾನ ಮೂಡಿಸಿದೆ.

'ಕೇಂದ್ರ ಸರ್ಕಾರದಿಂದ ಸ್ಮಾರ್ಟ್‌ಸಿಟಿ ಯೋಜನೆ ಅಡಿ ಇಲಾಖೆಗೆ ಸಾಕಷ್ಟು ಹಣ ಹರಿದುಬರುತ್ತಿದೆ. ಅಧಿಕೃತವಾಗಿ ಬಿಲ್ ನೀಡದಿದ್ದರೆ ನಿಶಾ ಅನುಮೋದನೆ ನೀಡುತ್ತಿರಲಿಲ್ಲ. ದಿಢೀರ್ ವರ್ಗಾವಣೆಯ ಹಿಂದೆ ಇದೂ ಕೆಲಸ ಮಾಡಿದೆ' ಎಂದು ಹೆಸರು ಹೇಳಲು ಬಯಸದ ಸಿಬ್ಬಂದಿ ತಿಳಿಸಿದರು.

ನೆರವಾಗುವುದಕ್ಕೆ ಕಾನ್‌ಸ್ಟೆಬಲ್‌ಗಳ ಹಿಂದೇಟು

'ಪೊಲೀಸ್ ಆಯುಕ್ತರ ಕಚೇರಿ, ಡಿ.ಜಿ ಕಚೇರಿ, ವಿವಿಧ ಡಿಸಿಪಿ ಕಚೇರಿಗಳಲ್ಲಿ ಅನುಕಂಪದ ಆಧಾರದಲ್ಲಿ ಸರ್ಕಾರಿ ಕೆಲಸ ಪಡೆದವರೂ ಎಫ್‌ಡಿಎ, ಎಸ್‌ಡಿಎಗಳಾಗಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಇವರ ವರ್ಗಾವಣೆ ಆಗಿಲ್ಲ' ಎನ್ನಲಾಗಿದೆ.

'ಒತ್ತಡದ ಕಾರಣಕ್ಕೆ ಕೆಲಸಕ್ಕೆ ನೆರವಾಗಲು ಆಯುಕ್ತರ ಕಚೇರಿಯ ಎಫ್‌ಡಿಎಗಳಿಗೆ ಒಬ್ಬೊಬ್ಬ ಕಾನ್‌ಸ್ಟೆಬಲ್‌ಗಳನ್ನು ನೇಮಿಸಲಾಗಿದೆ. ಪತ್ರ ಬಹಿರಂಗವಾದ ಮೇಲೆ ಶಾಖಾಧೀಕ್ಷಕರು, ಎಫ್‌ಡಿಎ ಹಾಗೂ ಎಸ್‌ಡಿಎ ಜೊತೆಗೆ ಕೆಲಸ ಮಾಡಲು ಕಾನ್‌ಸ್ಟೆಬಲ್‌ಗಳು ಹಿಂದೇಟು ಹಾಕುತ್ತಿದ್ದಾರೆ. ಅಸಮಾಧಾನ ಸ್ಫೋಟಗೊಂಡಿರುವ ಕಾರಣಕ್ಕೆ ಹಿರಿಯ ಅಧಿಕಾರಿಗಳು ಶುಕ್ರವಾರ ಸಭೆ ಕರೆದಿದ್ದರು. ಈ ಸಭೆಯನ್ನು ಕಾರಣಾಂತರಗಳಿಂದ ಮುಂದೂಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಅನಾಮಧೇಯ ಪತ್ರಕ್ಕೆ ವಿಚಾರಣೆ ಇಲ್ಲ'

'ಪೊಲೀಸ್ ಇಲಾಖೆಯಲ್ಲಿ ಅನಾಮಧೇಯ ಪತ್ರ ಬರೆಯಲಾಗುತ್ತಿದೆ. ಇಲಾಖೆ ಈ ವಿಚಾರವನ್ನೂ ಗಂಭೀರವಾಗಿ ಪರಿಗಣಿಸುತ್ತಿಲ್ಲ. ವಿಚಾರಣೆಯನ್ನೂ ನಡೆಸುತ್ತಿಲ್ಲ. ಪತ್ರ ಬರೆದು ಪ್ರಾಮಾಣಿಕ ಅಧಿಕಾರಿಗಳ ಕೆಲಸದ ಹುಮ್ಮಸ್ಸು ಕುಗ್ಗಿಸಲಾಗುತ್ತಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

ಪ್ರಜಾವಾಣಿ ವಿಶೇಷ

ರಾಮೋಹಳ್ಳಿಯಲ್ಲಿ ನಡೆದ ಪುನೀತ್ ಅವರ ಪ್ರಥಮ ವರ್ಷದ ಸ್ಮರಣೆ ಕಾರ್ಯಕ್ರಮಕ್ಕೆ ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಪೂಜೆ ಸಲ್ಲಿಸಿದರು. ಯುವ ನಾಯಕ ಎಸ್‌.ಚೇತನ್‌ಗೌಡ, ರಾಮೋಹಳ್ಳಿ ರೈತ ಸೇವಾ ಸಹಕಾರ ಬ್ಯಾಂಕ್ ಅಧ್ಯಕ್ಷ ವಿ.ವೇಣುಗೋಪಾಲ್, ಪ್ರದೇಶ ಆರ್ಯ ಈಡಿಗರ ಸಂಘದ ಜಂಟಿ ಕಾರ್ಯದರ್ಶಿ ಆರ್‌.ಪಿ.ಪ್ರಕಾಶ್ ಇದ್ದಾರೆ

ಪುನೀತ್ ಸ್ಮರಣೆ: ಅನ್ನದಾನ, ರಕ್ತದಾನ

ರಾಜರಾಜೇಶ್ವರಿನಗರ: ಪುನೀತ್ ರಾಜ್‌ಕುಮಾರ್ ಅವರು ಬರೀ ಚಿತ್ರ ನಟರಾಗಿರದೆ, ಕನ್ನಡ ಸಂಸ್ಕೃತಿ, ಭಾಷೆ ಹಾಗೂ ಪರಂಪರೆ ಬೆಳೆಸುವ ಮೂಲಕ ಕೋಟ್ಯಂತರ ಜನರ ವಿಶ್ವಾಸ ಗಳಿಸಿದ್ದರು ಎಂದು ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ರಾಮೋಹಳ್ಳಿಯಲ್ಲಿ ಪುನೀತ್ ರಾಜ್‌ಕುಮಾರ್ ಅಭಿಮಾನಿಗಳ ಸಂಘ, ಸಂಜೀವಿನಿ ಆಸ್ಪತ್ರೆ ವತಿಯಿಂದ ಹಮ್ಮಿಕೊಂಡಿದ್ದ ಪುನೀತ್ ಪ್ರಥಮ ಸ್ಮರಣೆ ಅಂಗವಾಗಿ ಅನ್ನದಾನ, ಉಚಿತ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.

ಬಡವ-ಶ್ರೀಮಂತ, ಕಿರಿಯ-ಹಿರಿಯ ಎನ್ನದೇ ಪುಟ್ಟ ಮಕ್ಕಳನ್ನು ಸದಾ ನಗುವಿನೊಂದಿಗೆ ಪ್ರೀತಿಸಿ, ಗೌರವಿಸುತ್ತಿದ್ದ ಒಬ್ಬ ಮೇರು ವ್ಯಕ್ತಿತ್ವದ ನಾಯಕರಾಗಿದ್ದರು ಎಂದರು.

ಪ್ರದೇಶ ಆರ್ಯ ಈಡಿಗರ ಸಂಘದ ರಾಜ್ಯ ಘಟಕದ ಜಂಟಿ ಕಾರ್ಯದರ್ಶಿ ಆರ್.ಪಿ.ಪ್ರಕಾಶ್ ಮಾತನಾಡಿ, ಮಗುವಿನ ಮನಸ್ಸಿನ ವ್ಯಕ್ತಿತ್ವದ ಪುನೀತ್ ಅವರ ನೆನಪು, ಸೇವೆ ಅವರು ಕೊಟ್ಟು ಹೋಗಿರುವ ನಟನೆಯ ಬೆಳಕು, ಆದರ್ಶ, ತತ್ವ, ಶತಮಾನಗಳು ಕಳೆದರೂ ಮರೆಯಲಾಗದು ಎಂದು ಬಣ್ಣಿಸಿದರು.

ಎಸ್.ಚೇತನ್‌ಗೌಡ, ಸ್ಥಳೀಯ ರೈತ ಸೇವಾ ಸಹಕಾರ ಬ್ಯಾಂಕ್ ಅಧ್ಯಕ್ಷ ವಿ.ವೇಣುಗೋಪಾಲ್, ಗ್ರಾಮ ಪಂಚಾಯಿತಿ ಸದಸ್ಯರಾದ ಯಲ್ಲಪ್ಪ, ರವಿಕುಮಾರ್, ಪುನೀತ್ ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಜಯ್, ಸುರೇಶ್, ಅರುಣ್ ಇದ್ದರು.

ಸ್ಪೈಸ್‌ಜೆಟ್ ತಲ್ಲಣ ಪ್ರಕರಣ: ಪ್ರಯಾಣಿಕ ಸಾವು

ಮುಂಬೈ (ಪಿಟಿಐ): ಈ ವರ್ಷದ ಮೇ 1ರಂದು ಮುಂಬೈ– ದುರ್ಗಾಪುರ ನಡುವೆ ಸಂಚರಿಸುತ್ತಿದ್ದ ಸ್ಪೈಸ್ ಜೆಟ್ ವಿಮಾನ ಇಳಿಯುವ ವೇಳೆ ಗಾಳಿಯ ಒತ್ತಡಕ್ಕೆ ಸಿಲುಕಿ ಅಲುಗಾಡಿದ್ದ ಸಂದರ್ಭದಲ್ಲಿ ತೀವ್ರ ಗಾಯಗೊಂಡಿದ್ದ ಅಕ್ಬರ್ ಅನ್ಸಾರಿ (48) ಎಂಬುವವರು ಕಳೆದ ತಿಂಗಳು ಮೃತಪಟ್ಟಿದ್ದಾರೆ ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ.

ಅನ್ಸಾರಿ ಅವರು ಸೆಪ್ಟೆಂಬರ್ 26ರಂದು ಮೃತಪಟ್ಟಿದ್ದು ಅದಕ್ಕೂ ಮುನ್ನ ಒಂದು ತಿಂಗಳು ಅವರು ವೆಂಟಿಲೇಟರ್‌ನಲ್ಲಿದ್ದರು ಎಂದು ಅವರ ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ವಿಮಾನ ಇಳಿಯುವ ವೇಳೆ ತಲ್ಲಣದ ಸ್ಥಿತಿ ಉಂಟಾದ್ದರಿಂದ ಮೂವರು ಕ್ಯಾಬಿನ್ ಸಿಬ್ಬಂದಿ ಸೇರಿ 14 ಪ್ರಯಾಣಿಕರು ಗಾಯಗೊಂಡಿದ್ದರು. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಅಪಘಾತ–ಸಾಕು ನಾಯಿ ಸಾವು: ಆರೋಪ ರದ್ದು

ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರ ಏಕ ಸದಸ್ಯ ಪೀಠ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅತಿ ವೇಗದಲ್ಲಿ ಎಸ್‌ಯುವಿ ಕಾರು ಚಲಾಯಿಸಿ ಸಾಕು ನಾಯಿಯ ಸಾವಿಗೆ ಕಾರಣವಾಗಿದ್ದಾರೆ' ಎಂಬ ಆರೋಪದಡಿ ಕಾರು ಚಾಲಕರ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ಆರೋಪಿಯಾದ ಕುರುಬರಹಳ್ಳಿಯ ನಿವಾಸಿ ಜಿ.ಪ್ರತಾಪ್ ಕುಮಾರ್ ಎಂಬುವವರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಸಾರ್ವಜನಿಕ ರಸ್ತೆಯಲ್ಲಿ ಅತಿ ವೇಗದ ವಾಹನ ಚಾಲನೆ ಮಾಡಿದ ಸಂದರ್ಭದಲ್ಲಿ ಅಪಘಾತ ಸಂಭವಿಸಿ ಸಾಕು ನಾಯಿ ಮೃತಪಟ್ಟರೆ ಅಂತಹ ಪ್ರಕರಣವನ್ನು ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 279ರ ವ್ಯಾಪ್ತಿಯಲ್ಲಿ ಪರಿಗಣಿಸಲು ಆಗದು. ಮಾನವರ ಹೊರತಾದ ಜೀವಗಳಿಗೆ ಉಂಟಾದ ಗಾಯದ ಬಗ್ಗೆ ಈ ಕಲಂ ಎಲ್ಲೂ ವಿವರಿಸುವುದಿಲ್ಲ' ಎಂದು ಅಭಿಪ್ರಾಯಪಟ್ಟಿದೆ.

ಅಂತೆಯೇ, 'ಮೋಟಾರು ವಾಹನ ಕಾಯ್ದೆ–1988ರ ಕಲಂ 134 (ಎ) ಮತ್ತು (ಬಿ) ಅನುಸಾರ ವಾಹನ ಚಾಲಕ ಯಾವುದಾದರೂ ವ್ಯಕ್ತಿಗೆ ಗಾಯಗೊಳಿಸಿದ್ದರೆ ಮಾತ್ರವೇ ಅನ್ವಯ ಆಗುತ್ತದೆ. ಇದರ ವ್ಯಾಪ್ತಿಗೆ ನಾಯಿ ಅಥವಾ ಪ್ರಾಣಿಗಳು ಒಳಪಡುವುದಿಲ್ಲ' ಎಂದೂ ನ್ಯಾಯಪೀಠ ವಿವರಿಸಿದೆ.

ಪ್ರಕರಣವೇನು?: ಧೀರಜ್ ರಖೇಜಾ ಎಂಬುವವರ ತಾಯಿ 2018ರ ಫೆಬ್ರುವರಿ 24ರಂದು ತಮ್ಮ ಸಾಕು ನಾಯಿಯ ಜೊತೆ ಕುರುಬರಹಳ್ಳಿ ಪೈಪ್‌ಲೈನ್ ರಸ್ತೆಯ ವ್ಯಾಪ್ತಿಯಲ್ಲಿ ವಾಕಿಂಗ್ ಮಾಡುತ್ತಿದ್ದರು. ಈ ಸಮಯದಲ್ಲಿ ಪ್ರತಾಪ್ ಕುಮಾರ್ ಅವರು ಚಲಾಯಿಸುತ್ತಿದ್ದ ಎಸ್‌ಯುವಿ ಕಾರಿಗೆ ಸಿಕ್ಕು ಸಾಕು ನಾಯಿ ಮೃತಪಟ್ಟಿತ್ತು.

ಈ ಸಂಬಂಧ ದಾಖಲಾಗಿದ್ದ ದೂರಿನನ್ವಯ ವಿಜಯನಗರ ಸಂಚಾರ ಠಾಣೆ ಪೊಲೀಸರು ತನಿಖೆ ನಡೆಸಿ, ಆರೋಪಿ ವಿರುದ್ಧ ಮೋಟಾರು ವಾಹನ ಕಾಯ್ದೆಯ ಕಲಂ 134 (ಎ) ಮತ್ತು (ಬಿ), 187 ಹಾಗೂ ಐಪಿಸಿಯ ಕಲಂ 279, 428 ಮತ್ತು 429ರ ಅಡಿಯಲ್ಲಿ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ 2ಕ್ಕೆ (ಸಂಚಾರ ವಿಭಾಗ) ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ವೆಚ್ಚದ ಬದಲಿಗೆ ಪುಸ್ತಕ ನೀಡಿ: ಹೈಕೋರ್ಟ್

ಬೆಂಗಳೂರು: 'ಪ್ರಕರಣದಲ್ಲಿ ಕಕ್ಷಿದಾರರಿಗೆ ವಿಧಿಸಲಾಗುವ ವೆಚ್ಚದ ಹಣದ ಬದಲಿಗೆ ರಾಜ್ಯ ವಕೀಲರ ಪರಿಷತ್ ಮತ್ತು ವಕೀಲರ ಸಂಘಕ್ಕೆ ಪುಸ್ತಕಗಳನ್ನು ನೀಡಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

ಪ್ರಕರಣವೊಂದರ ಆದೇಶದಲ್ಲಿ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು, 'ಲರ್ನಿಂಗ್ ದ ಲಾ-ಗ್ಲಾನ್ ವಿಲ್ಲೆ ವಿಲಿಯಮ್ಸ್, ಲಾ ಇನ್ ಚೇಂಜಿಂಗ್ ಸೊಸೈಟಿ- ವೂಲ್ಫ್ ಗ್ಯಾಂಗ್ ಫ್ರೈಡ್‌ಮನ್, ಲಾ ಅಂಡ್ ಸೋಷಿಯಲ್ ಟ್ರಾನ್ಸ್‌ಫರ್ಮೇಶನ್–ಪಿ.ಈಶ್ವರ ಭಟ್, ಫ್ಯೂಚರ್ ಆಫ್ ಹ್ಯೂಮನ್ ರೈಟ್ಸ್–ಡಾ.ಉಪೇಂದ್ರ ಭಕ್ಷಿ ಮತ್ತು ದ ಕೀ ಟು ಇಂಡಿಯನ್ ಪ್ರಾಕ್ಟೀಸ್–ಸರ್ ಡಿ.ಎಫ್. ಮುಲ್ಲಾ ವಿರಚಿತ ಪುಸ್ತಕಗಳನ್ನು ನೀಡಿ' ಎಂದು ಸೂಚಿಸಿದೆ.

'ಡಿಫಾಲ್ಟ್ ರೂಪದಲ್ಲಿ ವಜಾಗೊಳ್ಳುವ ಅರ್ಜಿ, ಮೇಲ್ಮನವಿ ವಿಳಂಬ ಅಥವಾ ಅರ್ಜಿಯನ್ನು ಅನುಮತಿಸುವ ಸಮಯದಲ್ಲಿ ಸಾಮಾನ್ಯವಾಗಿ ಕೋರ್ಟ್ ವಿಧಿಸುವ ಡಿಫಾಲ್ಟ್ ವೆಚ್ಚದ ಬದಲಿಗೆ ಈ ಪುಸ್ತಕಗಳನ್ನು ರಾಜ್ಯ ವಕೀಲರ ಪರಿಷತ್ ಅಥವಾ ವಕೀಲರ ಸಂಘಕ್ಕೆ ನೀಡಬೇಕು' ಎಂದು ನ್ಯಾಯಪೀಠ ವಿವರಿಸಿದೆ. ಈ ಮೊದಲು ವೆಚ್ಚದ ಮೊತ್ತವನ್ನು ವಕೀಲರ ಕಲ್ಯಾಣ ನಿಧಿ ಅಥವಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಪಾವತಿಸುವಂತೆ ಆದೇಶಿಸಲಾಗುತ್ತಿತ್ತು.

ನಟಿ ವಿನಯಾ ಪ್ರಸಾದ್ ಮನೆಯಲ್ಲಿ ಕಳ್ಳತನ

ಬೆಂಗಳೂರು: ಸಿನಿಮಾ ನಟಿ ವಿನಯಾ ಪ್ರಸಾದ್ ಅವರ ಮನೆಯಲ್ಲಿ ಕಳ್ಳತನ ನಡೆದಿದ್ದು, ಈ ಸಂಬಂಧ ನಂದಿನಿ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಂದಿನಿ ಲೇಔಟ್ 4ನೇ ಹಂತದ ರೈಲ್ವೆ ಮೆನ್ಸ್ ಕಾಲೊನಿಯಲ್ಲಿ ಪತಿ ಜೊತೆ ವಾಸವಿರುವ ವಿನಯಾ ಪ್ರಸಾದ್ ಅವರು ಕಳ್ಳತನ ಸಂಬಂಧ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ವಿನಯಾ ಪ್ರಸಾದ್ ದಂಪತಿ ಅ. 22ರಂದು ಉಡುಪಿಗೆ ಹೋಗಿದ್ದರು. ಅ. 26ರಂದು ಸಂಜೆ ಮನೆಗೆ ವಾಪಸು ಬಂದು ನೋಡಿದಾಗ, ಕಳ್ಳತನ ಗಮನಕ್ಕೆ ಬಂದಿದೆ. ಮನೆಯ ಬಾಗಿಲು ಮೀಟಿ ಒಳನುಗ್ಗಿದ್ದ ಕಳ್ಳರು, ಹಲವೆಡೆ ಹುಡುಕಾಡಿದ್ದಾರೆ. ಕೊಠಡಿಯ ಡ್ರಾಯರ್‌ನಲ್ಲಿದ್ದ ₹ 7 ಸಾವಿರ ನಗದು ಕದ್ದೊಯ್ದಿರುವುದಾಗಿ ದೂರಿನಲ್ಲಿ ತಿಳಿಸಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಸರ್ಕಾರಿ ಶಾಲೆ ದತ್ತು ಪಡೆದುಕೊಳ್ಳುವ ಕಾರ್ಯ ಚಳವಳಿಯಾಗಲಿ: ಪ್ರೊ. ಎಂ.ಆರ್‌.ದೊರೆಸ್ವಾಮಿ

ಬೆಂಗಳೂರು: 'ಸರ್ಕಾರಿ ಶಾಲೆಗಳನ್ನು ದತ್ತು ಪಡೆದುಕೊಳ್ಳುವ ಕಾರ್ಯ ಚಳವಳಿ ರೂಪದಲ್ಲಿ ನಡೆಯಬೇಕು' ಎಂದು ಕರ್ನಾಟಕ ಸರ್ಕಾರದ ಶಿಕ್ಷಣ ಸಲಹೆಗಾರ ಪ್ರೊ. ಎಂ.ಆರ್. ದೊರೆಸ್ವಾಮಿ ಹೇಳಿದರು.

'ಸರ್ಕಾರಿ ಶಾಲೆಗಳನ್ನು ದತ್ತು ಪಡೆದುಕೊಳ್ಳುವ ಕಾರ್ಯ ಉತ್ತಮವಾಗಿ ನಡೆಯುತ್ತಿದೆ. ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು. ಸಚಿವರು, ಶಾಸಕರು ತಮ್ಮ ಕ್ಷೇತ್ರದ ಶಾಲೆಗಳನ್ನು ದತ್ತು ಪಡೆದು ಅಭಿವೃದ್ಧಿಗೊಳಿಸಬೇಕು. ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನಲ್ಲಿರುವ (1,200) ಬಾಲಕಿಯರ ಶಾಲೆಯನ್ನು ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಮತ್ತು ಸೆಹೆಗಲ್ ಕಂಪನಿ ₹1 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲು ಮುಂದೆ ಬಂದಿವೆ' ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ 30–40 ಮಕ್ಕಳ ಗುಂಪಿಗೆ ಮಾರ್ಗದರ್ಶನ ನೀಡಲು ಶಿಕ್ಷಕರೊಬ್ಬರನ್ನು ನೇಮಕ ಮಾಡಬೇಕು. ಆ ಸಂಸ್ಥೆಯಲ್ಲಿ ಮಕ್ಕಳ ವಿದ್ಯಾಭ್ಯಾಸ ಮುಗಿಯುವವರೆಗೂ ಆ ಶಿಕ್ಷಕರೇ ಅವರ ಎಲ್ಲಾ ಬೆಳವಣಿಗೆಯ ಬಗ್ಗೆ ಮಾಹಿತಿ ಸಂಗ್ರಹಿಸಿಡಬೇಕು. ವಿದ್ಯಾರ್ಥಿಯ ಮುಂದಿನ ವಿದ್ಯಾಭ್ಯಾಸಕ್ಕೆ ಸೇರುವ ಶಿಕ್ಷಣ ಸಂಸ್ಥೆಗೆ ಈ ಮಾಹಿತಿಯನ್ನು ಹಸ್ತಾಂತರಿಸಬೇಕು' ಎಂದು ತಿಳಿಸಿದರು.

'ಉನ್ನತ ಶಿಕ್ಷಣದ ಪಠ್ಯಕ್ರಮದಲ್ಲಿ ಯೋಗ ಮತ್ತು ಧ್ಯಾನದ ವಿಷಯಗಳನ್ನು ಸೇರ್ಪಡೆ ಮಾಡಬೇಕು. ಇದಕ್ಕಾಗಿ ಬೆಂಗಳೂರಿನಲ್ಲಿರುವ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ ವಿಶ್ವವಿದ್ಯಾಲಯ (ಎಸ್–ವ್ಯಾಸ) ತರಬೇತಿ ನೀಡಲು ಮುಂದೆ ಬಂದಿದೆ' ಎಂದು ಸಲಹೆ ನೀಡಿದರು.

ಶಿಕ್ಷಣದಲ್ಲಿ ಆರೋಗ್ಯಕ್ಕೆ ಆದ್ಯತೆ ನೀಡಬೇಕು

ರಾಜ್ಯದಾದ್ಯಂತ ಡೀಮ್ಡ್ ವಿಶ್ವವಿದ್ಯಾಲಯಗಳು ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಗಳು ಸರ್ಕಾರಿ ಶಾಲೆಗಳಲ್ಲಿ ಆರೋಗ್ಯ ತಪಾಸಣೆ ಶಿಬಿರಗಳನ್ನು ಆಯೋಜಿಸಬೇಕು ಎಂದರು.

ದಕ್ಷಿಣ ಕೊರಿಯಾದ ರಾಜಧಾನಿ ಸೋಲ್‌ನಲ್ಲಿ ಶನಿವಾರ ಕಾಲ್ತುಳಿತ ನಡೆದ ಸ್ಥಳದಲ್ಲಿ ರಕ್ಷಣಾ ಕಾರ್ಯಕರ್ತರು ಮೃತದೇಹಗಳನ್ನು ಸಾಗಿಸಿದರು (ಎಡಚಿತ್ರ) ಗಾಯಗೊಂಡವರನ್ನು ಕೊಂಡೊಯ್ಯಲು ಧಾವಿಸಿದ ಆಂಬುಲೆನ್ಸ್‌ಗಳು –ಎಎಫ್‌ಪಿ ಚಿತ್ರಗಳು

ಸೋಲ್‌ನಲ್ಲಿ ಕಾಲ್ತುಳಿತ: 145 ಮಂದಿ ಸಾವು

ಒಂದನೇ ಪುಟದಿಂದ

'ನೂಕುನುಗ್ಗಲಿನಲ್ಲಿ ಹಲವರಿಗೆ ಹೃದಯಸ್ತಂಭನವಾಗಿದೆ. ಕೆಲವರು ಕಾಲ್ತುಳಿತದಿಂದ ಕೊನೆಯುಸಿರೆಳೆದರು. ಗಾಯಾಳುಗಳನ್ನು ಸಮೀಪದ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಸಾವಿನ ಸಂಖ್ಯೆ ಏರಿಕೆಯಾಗುವ ಸಾಧ್ಯತೆ ಇದೆ' ಎಂದೂ ಹೇಳಿದ್ದಾರೆ.

ಹ್ಯಾಲೋವಿನ್ ಉತ್ಸವದಲ್ಲಿ ಲಕ್ಷಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು ಎಂದು ಸ್ಥಳೀಯ ಮಾಧ್ಯಮಗಳು ಹೇಳಿವೆ. ಕೋವಿಡ್ ನಿರ್ಬಂಧದ ಕಾರಣ ಕಳೆದೆರಡು ವರ್ಷಗಳಿಂದ ಈ ಉತ್ಸವ ನಡೆದಿರಲಿಲ್ಲ.

ಲಕ್ಷ್ಮಿ ಪೂಜೆಗಿಟ್ಟಿದ್ದ ಆಭರಣ ಕಳವು: ಆರೋಪಿ ಬಂಧನ

ಬೆಂಗಳೂರು: ಅನ್ನಪೂರ್ಣೇಶ್ವರಿನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಚಿನ್ನಾಭರಣ ಕಳ್ಳತನ ಮಾಡಿದ್ದ ಆರೋಪಿ ಮೊಹಮ್ಮದ್ ತೌಹಿದ್ (20) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಬನ್ನೇರುಘಟ್ಟ ರಸ್ತೆಯ ಬಸವನಪುರದ ತೌಹಿದ್, ಅಪರಾಧ ಹಿನ್ನೆಲೆಯುಳ್ಳವ. 2021ರ ಆಗಸ್ಟ್ 20ರಂದು ರಾತ್ರಿ ನಡೆದಿದ್ದ ಕಳ್ಳತನ ಪ್ರಕರಣ ಸಂಬಂಧ ಈತನನ್ನು ಬಂಧಿಸಲಾಗಿದೆ. ₹ 5 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಶ್ರೀಗಂಧಕಾವಲು ಬಳಿಯ 'ಡಿ' ಗ್ರೂಪ್ ಬಡಾವಣೆಯಲ್ಲಿರುವ ಎಂಜಿನಿಯರೊಬ್ಬರ ಮನೆಯಲ್ಲಿ ವರ ಮಹಾಲಕ್ಷ್ಮಿ ಹಬ್ಬದ ನಿಮಿತ್ತ ಲಕ್ಷ್ಮಿ ಪೂಜೆ ಮಾಡಲಾಗಿತ್ತು. ಅಲಂಕಾರಕ್ಕಾಗಿ ಚಿನ್ನಾಭರಣ ಹಾಕಲಾಗಿತ್ತು. ಪೂಜೆ ಮುಗಿದ ಬಳಿಕ ಮನೆಯವರೆಲ್ಲ ಮಲಗಿದ್ದರು.'

ಅನ್ನಪೂರ್ಣೇಶ್ವರಿನಗರ ಠಾಣೆ ಪೊಲೀಸರು ಆರೋಪಿಯಿಂದ ಜಪ್ತಿ ಮಾಡಿರುವ ಚಿನ್ನಾಭರಣ

'ತಡರಾತ್ರಿ ಮನೆಗೆ ನುಗ್ಗಿದ್ದ ಆರೋಪಿ, ಪೂಜೆಗಿಟ್ಟಿದ್ದ ಚಿನ್ನಾಭರಣ ಕದ್ದುಕೊಂಡು ಪರಾರಿಯಾಗಿದ್ದ. ಕಳ್ಳತನ ಬಗ್ಗೆ ಎಂಜಿನಿಯರ್ ದೂರು ನೀಡಿದ್ದರು. ಆರೋಪಿಯ ಕೃತ್ಯದ ಬಗ್ಗೆ ಆರಂಭದಲ್ಲಿ ಯಾವುದೇ ಸುಳಿವು ಸಿಕ್ಕಿರಲಿಲ್ಲ. ಇತ್ತೀಚೆಗೆ ತೌಹಿದ್‌ನನ್ನು ಬೇರೆ ಠಾಣೆ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದರು. ಆತನನ್ನು ಬಾಡಿ ವಾರೆಂಟ್ ಮೇಲೆ ಕಸ್ಟಡಿಗೆ ಪಡೆದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡ' ಎಂದು ಪೊಲೀಸರು ತಿಳಿಸಿದರು.

'ಎಂಟಿಬಿ ಯಾವ ಅರ್ಥದಲ್ಲಿ ಹೇಳಿದ್ದಾರೋ ಗೊತ್ತಿಲ್ಲ'

ಬೆಂಗಳೂರು: 'ಕೆ.ಆರ್. ಪುರ ಇನ್‌ಸ್ಪೆಕ್ಟರ್ ನಂದೀಶ್ ₹ 70 ಲಕ್ಷ– ₹ 80 ಲಕ್ಷ ಕೊಟ್ಟು ಬಂದಿದ್ದರು ಎಂದು ಸಚಿವ ಎಂಟಿಬಿ ನಾಗರಾಜ್ ಯಾವ ಅರ್ಥದಲ್ಲಿ ಹೇಳಿದ್ದಾರೋ ಗೊತ್ತಿಲ್ಲ. ಈ ಬಗ್ಗೆ ಅವರಿಂದ ಮಾಹಿತಿ ಪಡೆಯುತ್ತೇನೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಕೆಲವು ಠಾಣೆಗಳ ವ್ಯಾಪ್ತಿಯಲ್ಲಿ ಇತ್ತೀಚೆಗೆ ತಡರಾತ್ರಿವರೆಗೂ ಕ್ಲಬ್, ಪಬ್‌ಗಳು ಕಾರ್ಯಾಚರಿಸುತ್ತಿವೆ. ಅದರ ವಿರುದ್ಧ ಕ್ರಮಕ್ಕೆ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೆ. ಕೆ.ಆರ್. ಪುರ ಠಾಣಾ ವ್ಯಾಪ್ತಿಯಲ್ಲಿ ನಡೆಯುತ್ತಿದ್ದ ರೇವ್ ಪಾರ್ಟಿ ಮೇಲೆ ಸಿಸಿಬಿ ಅಧಿಕಾರಿಗಳು ದಾಳಿ ಮಾಡಿದ್ದರು. ಹೀಗಾಗಿ, ನಂದೀಶ್ ಅವರನ್ನು ಪೊಲೀಸ್ ಕಮಿಷನರ್ ಅಮಾನತು ಮಾಡಿದ್ದರು. ಆದರೆ, ನಂದೀಶ್‌ಗೆ ಹೃದಯಾಘಾತ ಆಗಿದೆ. ಇದೊಂದು ದುರದೃಷ್ಟಕರ ಘಟನೆ. ಇದಕ್ಕೆ ಬೇರೆ ಅರ್ಥ ಕಲ್ಪಿಸುವುದು ಬೇಡ' ಎಂದರು.

ನಂದಿಬೆಟ್ಟದಿಂದ ನಗರಕ್ಕೆ ಬರುವಾಗ ಅವಘಡ: ಮೇಲ್ಸೇತುವೆಯಿಂದ ಬಿದ್ದು ಮೃತಪಟ್ಟ ವಿದ್ಯಾರ್ಥಿಗಳು

ಬೈಕ್ ಸೈಡ್ ಸ್ಟ್ಯಾಂಡ್‌ನಿಂದ ಅಪಘಾತ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಅಮೋಲ್ ಪ್ರಮೋದ್ ಆಮ್ಟೆ

ಅಮಿತ್ ಸಿಂಗ್

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಬೈಕ್ ಉರುಳಿಬಿದ್ದು ಅಪಘಾತ ಸಂಭವಿಸಿದ್ದು, ಬೈಕ್‌ನಲ್ಲಿ ಹೊರಟಿದ್ದ ಇಬ್ಬರು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಮೇಲ್ಸೇತುವೆಯಿಂದ ಬಿದ್ದು ಮೃತಪಟ್ಟಿದ್ದಾರೆ.

'ದೆಹಲಿಯ ಅಮಿತ್ ಸಿಂಗ್ (29) ಹಾಗೂ ಮಹಾರಾಷ್ಟ್ರದ ಅಮೋಲ್ ಪ್ರಮೋದ್ ಆಮ್ಟೆ (29) ಮೃತರು. ಘಟನೆಯಲ್ಲಿ ಬೈಕ್ ಸವಾರ ರಾಜಸ್ಥಾನ್‌ದ ಸೌರವ್ ದೇವ್ (27) ತೀವ್ರ ಗಾಯಗೊಂಡಿದ್ದು, ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಯಲಹಂಕ ಸಂಚಾರ ಠಾಣೆ ಪೊಲೀಸರ ಹೇಳಿದರು.

'ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಫ್ಯಾಶನ್ ಟೆಕ್ನಾಲಜಿ ಕಾಲೇಜೊಂದರಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿದ್ದ ಮೂವರೂ ಸ್ನೇಹಿತರು ಒಂದೇ ಬೈಕ್‌ನಲ್ಲಿ ಶನಿವಾರ ಬೆಳಿಗ್ಗೆ ನಂದಿಬೆಟ್ಟಕ್ಕೆ ಹೋಗಿದ್ದರು. ಅಲ್ಲಿಂದ ಮಧ್ಯಾಹ್ನ ವಾಪಸು ಬರುವಾಗ ಈ ಅವಘಡ ಸಂಭವಿಸಿದೆ' ಎಂದು ತಿಳಿಸಿದರು.

'ಅಮಿತ್ ಸಿಂಗ್ ಅವರ ಅಣ್ಣನ ಹೆಸರಿನಲ್ಲಿ ನೋಂದಣಿ ಆಗಿರುವ ಬೈಕ್‌ನಲ್ಲಿ ಮೂವರು ಸ್ನೇಹಿತರು ಹೊರಟಿದ್ದರು. ಸೌರವ್, ಬೈಕ್ ಚಲಾಯಿಸುತ್ತಿದ್ದರು. ಹಿಂಬದಿಯಲ್ಲಿ ಅಮಿತ್ ಸಿಂಗ್ ಹಾಗೂ ಅಮೋಲ್ ಪ್ರಮೋದ್ ಆಮ್ಟೆ ಕುಳಿತಿದ್ದರು' ಎಂದು ಹೇಳಿದರು.

ಸಿಮೆಂಟ್ ಬ್ಲಾಕ್‌ಗೆ ತಾಗಿದ್ದ ಸೈಡ್ ಸ್ಟ್ಯಾಂಡ್: 'ಬೈಕ್‌ನ ಸೈಡ್ ಸ್ಟ್ಯಾಂಡ್ ತೆರೆದುಕೊಂಡಿದ್ದ ಸ್ಥಿತಿಯಲ್ಲಿತ್ತು. ಅದನ್ನು ಸವಾರರು ಗಮನಿಸಿರಲಿಲ್ಲ. ಸೌರವ್, ಅತಿ ವೇಗವಾಗಿ ನಿರ್ಲಕ್ಷ್ಯದಿಂದ ಬೈಕ್ ಚಲಾಯಿಸಿದ್ದರು. ಯಲಹಂಕದ ರೈತರ ಸಂತೆ ಮೇಲ್ಸೇತುವೆಯಲ್ಲಿ ಸಿಮೆಂಟ್ ಬ್ಲಾಕ್‌ಗೆ ಸೈಡ್ ಸ್ಟ್ಯಾಂಡ್ ತಾಗಿದ್ದರಿಂದ, ಬೈಕ್ ಉರುಳಿಬಿದ್ದಿತ್ತು' ಎಂದು ಪೊಲೀಸರು ತಿಳಿಸಿದರು.

'ಅಪಘಾತದಿಂದಾಗಿ ಅಮಿತ್ ಸಿಂಗ್ ಹಾಗೂ ಅಮೋಲ್ ಪ್ರಮೋದ್ ಆಮ್ಟೆ ಮೇಲ್ಸೇತುವೆಯಿಂದ ಹಾರಿ ಕೆಳರಸ್ತೆಗೆ ಬಿದ್ದಿದ್ದರು. ತಲೆ ಹಾಗೂ ದೇಹದ ಹಲವು ಭಾಗಗಳಿಗೆ ತೀವ್ರ ಪೆಟ್ಟು ಬಿದ್ದಿದ್ದರಿಂದ ಅವರಿಬ್ಬರು ಮೃತಪಟ್ಟಿದ್ದಾರೆ' ಎಂದರು.

ಹೆಲ್ಮೆಟ್‌ನಿಂದ ತಲೆಗೆ ರಕ್ಷಣೆ: 'ಸವಾರ ಸೌರವ್, ಹೆಲ್ಮೆಟ್ ಧರಿಸಿದ್ದರು. ಅಪಘಾತದ ವೇಳೆ ಮೇಲ್ಸೇತುವೆ ರಸ್ತೆಯಲ್ಲಿ ಬೈಕ್ ಸಮೇತ ಬಿದ್ದಿದ್ದ ಅವರ ತಲೆಗೆ ಯಾವುದೇ ಪೆಟ್ಟು ಬಿದ್ದಿಲ್ಲ. ಕೈ ಹಾಗೂ ಕಾಲಿಗೆ ಮಾತ್ರ ಗಾಯವಾಗಿದೆ' ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಚಾಕುವಿನಿಂದ ಇರಿದು ಸುಲಿಗೆ: ಇಬ್ಬರ ಬಂಧನ

ಬೆಂಗಳೂರು: ಸ್ವಿಗ್ಗಿ ಕಂಪನಿಯ ಡೆಲಿವರಿ ಬಾಯ್ ಅಡ್ಡಗಟ್ಟಿ ಚಾಕುವಿನಿಂದ ಇರಿದು ಸುಲಿಗೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಅಶೋಕನಗರ ಪೊಲೀಸರು ಬಂಧಿಸಿದ್ದಾರೆ.

ಸಜ್ಜಾದ್ ಖಾನ್ ಹಾಗೂ ಸೈಫ್ ಮೌಲಾನ್ ಬಂಧಿತರು.

'ಅ. 10ರಂದು ರಾತ್ರಿ ಗ್ರಾಹಕರೊಬ್ಬರಿಗೆ ಆಹಾರ ಪೂರೈಸಲೆಂದು ಡೆಲಿವರಿ ಬಾಯ್ ಬೈಕ್‌ನಲ್ಲಿ ಹೊರಟಿದ್ದರು. ಅವರ ಬೈಕ್‌ಗೆ ತಮ್ಮ ಬೈಕ್ ಗುದ್ದಿಸಿ ಅಪಘಾತದ ನಾಟಕವಾಡಿದ್ದ ಆರೋಪಿಗಳು, ಚಾಕುವಿನಿಂದ ಇರಿದಿದ್ದರು. ನಂತರ, ಮೊಬೈಲ್ ಸುಲಿಗೆ ಮಾಡಿ ಪರಾರಿಯಾಗಿದ್ದರು. ಡೆಲಿವರಿ ಬಾಯ್ ನೀಡಿದ್ದ ದೂರು ಆಧರಿಸಿ ಇದೀಗ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

₹ 20 ಲಕ್ಷ ಮೌಲ್ಯದ ರಕ್ತಚಂದನ ಜಪ್ತಿ

ಬೆಂಗಳೂರು: ತಮಿಳುನಾಡಿನಿಂದ ರಕ್ತಚಂದನ ತುಂಡುಗಳನ್ನು ತಂದು ನಗರದಲ್ಲಿ ಮಾರಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಶ್ರೀರಾಮಪುರ ಪೊಲೀಸರು ಬಂಧಿಸಿದ್ದಾರೆ.

'ಬೊಮ್ಮನಹಳ್ಳಿ ನಿವಾಸಿ ಇಮ್ತಿಯಾಜ್ ಪಾಷಾ ಹಾಗೂ ತಮಿಳುನಾಡು ಕೃಷ್ಣಗಿರಿಯ ಸಯ್ಯದ್ ನೂರುದ್ದೀನ್ ಬಂಧಿತರು. ಇವರಿಬ್ಬರಿಂದ ಸುಮಾರು ₹ 20 ಲಕ್ಷ ಮೌಲ್ಯದ 399 ಕೆ.ಜಿ. ರಕ್ತಚಂದನ ತುಂಡುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಓಕಳಿಪುರ–ರಾಜಾಜಿನಗರ ಪ್ರಮುಖ ರಸ್ತೆಯಲ್ಲಿರುವ ರೇಷ್ಮೆ ಭವನದ ಎದುರು ಅ. 16ರಂದು ನಿಂತಿದ್ದ ಆರೋಪಿಗಳು, ಬ್ಯಾಗ್ ಹಿಡಿದುಕೊಂಡಿದ್ದರು. ಅವರಿಬ್ಬರ ಬಗ್ಗೆ ಅನುಮಾನಗೊಂಡಿದ್ದ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ರಕ್ತಚಂದನ ಮಾರಲು ಬಂದಿರುವುದಾಗಿ ತಪ್ಪೊಪ್ಪಿಕೊಂಡರು. ಬ್ಯಾಗ್‌ಗಳಲ್ಲಿ ರಕ್ತಚಂದನದ ಸಣ್ಣ ತುಂಡುಗಳಿದ್ದವು' ಎಂದು ತಿಳಿಸಿದರು.

'ಆರೋಪಿಗಳು, ಕೃಷ್ಣಗಿರಿಯ ಜಮೀನೊಂದರ ಶೆಡ್‌ನಲ್ಲಿ ರಕ್ತಚಂದನ ತುಂಡುಗಳನ್ನು ಸಂಗ್ರಹಿಸಿಟ್ಟಿದ್ದರು. ಅಲ್ಲಿಂದಲೇ ತುಂಡುಗಳನ್ನು ನಗರಕ್ಕೆ ತಂದು ಮಾರುತ್ತಿದ್ದರು. ಶೆಡ್‌ನಲ್ಲಿದ್ದ ತುಂಡುಗಳನ್ನೂ ಜಪ್ತಿ ಮಾಡಲಾಗಿದೆ. ಕೃತ್ಯದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ಶ್ರೀರಾಮಪುರ ಪೊಲೀಸರು ಆರೋಪಿಗಳಿಂದ ಜಪ್ತಿ ಮಾಡಿರುವ ರಕ್ತಚಂದನ ತುಂಡುಗಳು

ಚಿತ್ರಾವಳಿ

ವಿಶ್ವ ಪಾರ್ಶ್ವವಾಯು ದಿನದ ಪ್ರಯುಕ್ತ ಜೆ.ಸಿ. ರಸ್ತೆಯಲ್ಲಿರುವ ಟ್ರಸ್ಟ್‌ವೆಲ್ ಆಸ್ಪತ್ರೆ ನಗರದಲ್ಲಿ ಶನಿವಾರ ವಾಕಥಾನ್ ನಡೆಸಿತು

ನಾಗಸಂದ್ರದ ವಿಕಾಸನಗರ ಮತ್ತು ವಿನಾಯಕನಗರದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಶಾಸಕ ಆರ್‌. ಮಂಜುನಾಥ್ ಉದ್ಘಾಟಿಸಿದರು. ಮುನಿಸ್ವಾಮಪ್ಪ, ಗೋವಿಂದಪ್ಪ ಇದ್ದಾರೆ

ಪೊಲೀಸರ ಹತ್ಯೆಗೆ ಯತ್ನ: ಗೊಣ್ಣೆ ಬಂಧನಕ್ಕೆ ತಂಡ ರಚನೆ

ಬೆಂಗಳೂರು: ಹೊಸಕೆರೆಹಳ್ಳಿ ಬಸ್ ತಂಗುದಾಣ ಬಳಿ ಕರ್ತವ್ಯ ನಿರತ ಪೊಲೀಸರ ಮೇಲೆ ಹಲ್ಲೆ ಮಾಡಿ ಕೊಲೆಗೆ ಯತ್ನಿಸಲಾಗಿದ್ದು, ಕೃತ್ಯ ಎಸಗಿರುವ ರೌಡಿ ವಿಜಯ್ ಅಲಿಯಾಸ್ ಗೊಣ್ಣೆ ಬಂಧನಕ್ಕಾಗಿ ಪೊಲೀಸರ ವಿಶೇಷ ತಂಡ ರಚಿಸಲಾಗಿದೆ.

'ರೌಡಿಯಿಂದ ಹಲ್ಲೆಗೀಡಾಗಿರುವ ಕಾನ್‌ಸ್ಟೆಬಲ್‌ಗಳಾದ ನಾಗೇಂದ್ರ ತೇಲಿ, ಕಿರಣ್ ಮುಂದಿನಮನಿ ಹಾಗೂ ನೇತ್ರಾ ತೀವ್ರ ಗಾಯಗೊಂಡಿದ್ದಾರೆ. ಅವರಿಗೆ ಚಿಕಿತ್ಸೆ ಕೊಡಿಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಹಿಳಾ ಕಾನ್‌ಸ್ಟೆಬಲ್ ನೇತ್ರಾ ಹೊಸಕೆರೆಹಳ್ಳಿ ಬಸ್ ತಂಗುದಾಣದ ಬಳಿ ಶುಕ್ರವಾರ ಮಧ್ಯಾಹ್ನ ಕರ್ತವ್ಯದಲ್ಲಿದ್ದರು. ನೋಂದಣಿ ಫಲಕವಿಲ್ಲದ ದ್ವಿಚಕ್ರ ವಾಹನದಲ್ಲಿ ಹೊರಟಿದ್ದ ರೌಡಿ ಗೊಣ್ಣೆಯನ್ನು ಗುರುತಿಸಿ, ಹಿಡಿದುಕೊಳ್ಳಲು ಮುಂದಾಗಿದ್ದರು.'

'ಬಂಧನ ಭೀತಿಯಲ್ಲಿ ರೌಡಿ ಪರಾರಿಯಾಗಲು ಯತ್ನಿಸಿದ್ದ. ಗಸ್ತಿನಲ್ಲಿದ್ದ ನಾಗೇಂದ್ರ ತೇಲಿ ಹಾಗೂ ಕಿರಣ್ ಮುಂದಿನಮನಿ ರೌಡಿಯನ್ನು ಬೆನ್ನಟ್ಟಿ ಹಿಡಿದಿದ್ದರು. ಅದೇ ಸಮಯದಲ್ಲಿ ಕಾನ್‌ಸ್ಟೆಬಲ್‌ಗಳ ಕಣ್ಣಿಗೆ ಪೆಪ್ಪರ್ ಸ್ಪ್ರೇ ಸಿಂಪಡಿಸಿದ್ದ ರೌಡಿ ಗೊಣ್ಣೆ, ಹಲ್ಲೆ ಮಾಡಿದ್ದ. ನಂತರ, ಇಬ್ಬರೂ ಕಾನ್‌ಸ್ಟೆಬಲ್‌ಗಳಿಗೆ ಡ್ರ್ಯಾಗರ್‌ನಿಂದ ಇರಿದು ಕೊಲೆಗೆ ಯತ್ನಿಸಿ ಸ್ಥಳದಿಂದ ಪರಾರಿಯಾಗಿದ್ದಾನೆ' ಎಂದೂ ತಿಳಿಸಿವೆ.

ಬೀಗ ಮುರಿದು ಕಳ್ಳತನ: ಕಪ್ಪೆ ಬಂಧನ

ಬೆಂಗಳೂರು: ಮನೆಗಳ ಬೀಗ ಮುರಿದು ಕಳ್ಳತನ ಮಾಡುತ್ತಿದ್ದ ಆರೋಪಿ ಶಿವರಾಜ್ ಅಲಿಯಾಸ್ ಕಪ್ಪೆ (30) ಎಂಬಾತನನ್ನು ಮಾಗಡಿ ರಸ್ತೆ ಪೊಲೀಸರು ಬಂಧಿಸಿದ್ದಾರೆ.

'ತುಮಕೂರಿನ ಕುಣಿಗಲ್ ತಾಲ್ಲೂಕಿನ ಶಿವರಾಜ್ ಹಲವು ಬಾರಿ ಕಳ್ಳತನ ಎಸಗಿದ್ದ. ಈತನಿಂದ ₹ 5.75 ಲಕ್ಷ ಮೌಲ್ಯದ 120 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಾಗಡಿ ರಸ್ತೆ ಹಾಗೂ ಅನ್ನಪೂರ್ಣೇಶ್ವರಿನಗರ ಠಾಣೆ ವ್ಯಾಪ್ತಿಯ ಮನೆಗಳಲ್ಲಿ ಇತ್ತೀಚೆಗೆ ಕಳ್ಳತನ ನಡೆದಿತ್ತು. ಇದರ ತನಿಖೆ ಕೈಗೊಂಡಾಗ ಆರೋಪಿ ಸಿಕ್ಕಿಬಿದ್ದ' ಎಂದು ಪೊಲೀಸರು ತಿಳಿಸಿದರು.

ಮೈಸೂರು ಡರ್ಬಿ ರೇಸ್

ಸ್ಯಾಲೆಂಟೊ ಡರ್ಬಿ ಗೆಲ್ಲುವ ನಿರೀಕ್ಷೆ

ಬೆಟ್‌ವೇ ಮೈಸೂರು ಡರ್ಬಿ 2022 ಭಾನುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆ. ಸಂಜೆ 4.00ಕ್ಕೆ ಪ್ರಾರಂಭವಾಗಲಿರುವ ಡರ್ಬಿ ರೇಸ್‌ನಲ್ಲಿ ಒಂಬತ್ತು ಸ್ಪರ್ಧಿಗಳು ಭಾಗವಹಿಸುತ್ತಿದ್ದು, ಅರ್ಜುನ್ ಮಂಗ್ಲೋರ್ಕರ್ ತರಬೇತಿಯಲ್ಲಿ ಪಳಗಿರುವ ಸ್ಯಾಲೆಂಟೊ ಈ ರೇಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ರೀಗಲ್ ಫೋರ್ಸ್ 15, ಚೈನ್ ಆಫ್ ಥಾಟ್ಸ್ 4, ಬ್ಲೇಜಿಂಗ್ ಎಂಜಿನ್ 5
2ನೇ ರೇಸ್: ಮೆಮೊರಬಲ್ ಟೈಮ್ 7, ಡಾನ್ ರೈಸಿಂಗ್ 11, ರೈಟ್ಲಿ ನೋಬಲ್ 3
3ನೇ ರೇಸ್: ಸೆರ್ಡಾರ್ 7, ಮಿಸ್ಟಿಕ್ ಡಿವೈನ್ 1, ವೈಟ್ ರಿವರ್ 2
4ನೇ ರೇಸ್: ಗೋಲ್ಡನ್ ವಿಶನ್ 5, ಮಿಸ್ಟಿಕ್ ಐ 9, ಎಲೂಸಿವ್ ಗರ್ಲ್ 2
5ನೇ ರೇಸ್: ಎವಾಲ್ಡೊ 10, ಪೇಯೊ 1, ಕ್ಯಾರಕಸ್ 4
6ನೇ ರೇಸ್: ಗೋಲ್ಡನ್ ಓಕ್ಸ್ 1, ಗೋಲ್ಡನ್ ಗೆಸ್ಟ್ 3, ಕಾಂಟ್ರಿಬ್ಯೂಟರ್ 7
7ನೇ ರೇಸ್: ಸ್ಯಾಲೆಂಟೊ 6, ಒನ್ಸ್ ಯು ಗೋ ಬ್ಲ್ಯಾಕ್ 4, ಸುಕ್ರೆ 8
8ನೇ ರೇಸ್: ಕಿಂಗ್ಸ್ ಸ್ಪೀಚ್ 7, ವಾರ್ ಈಗಲ್ 2, ಬ್ರಹ್ಮಾಸ್ತ್ರಮ್ 6
9ನೇ ರೇಸ್: ಕ್ಲಿಂಮ್ಟ್ 6, ಸದರ್ನ್ ಫೋರ್ಸ್ 5, ಇನ್ಫಿನೇಟ್ ಗ್ರೇಸ್ 15

ಉತ್ತಮ ಬೆಟ್: ಸೆರ್ಡಾರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	4,5,6	7,8,9

ಬಾಂಬೆ ಹೈಕೋರ್ಟ್‌ನ ನಾಗ್ಪುರ ಪೀಠ ತೀರ್ಪು

‘ಠಾಣೆಯಲ್ಲಿ ಚಿತ್ರೀಕರಣ ಅಪರಾಧವಲ್ಲ’

ಮುಂಬೈ (ಪಿಟಿಐ): ಸರ್ಕಾರಿ ಗೋಪ್ಯ ಕಾಯ್ದೆಯಡಿ (ಒಎಸ್‌ಎ) ಪೊಲೀಸ್ ಠಾಣೆಯನ್ನು ನಿಷೇಧಿತ ಸ್ಥಳ ಎಂದು ಗುರುತಿಸಿಲ್ಲ. ಹೀಗಾಗಿ ಪೊಲೀಸ್ ಠಾಣೆಯೊಳಗೆ ವಿಡಿಯೊ ಚಿತ್ರೀಕರಣ ಮಾಡುವುದು ಅಪರಾಧ ಆಗುವುದಿಲ್ಲ ಎಂದು ಬಾಂಬೆ ಹೈಕೋರ್ಟ್‌ನ ನಾಗ್ಪುರ ಪೀಠ ತಿಳಿಸಿದೆ.

ವಾರ್ಧಾ ಪೊಲೀಸ್ ಠಾಣೆಯೊಳಗೆ ಮಾರ್ಚ್ 2018ರಂದು ವಿಡಿಯೊ ಚಿತ್ರೀಕರಣ ಮಾಡುವುದರ ಮೂಲಕ ರವೀಂದ್ರ ಉಪಾಧ್ಯಾಯ ಎಂಬುವರು ಒಎಸ್‌ಎ ಕಾಯ್ದೆ ಉಲ್ಲಂಘಿಸಿದ್ದಾರೆ ಎಂಬ ಆರೋಪದ ಪ್ರಕರಣವನ್ನು ನ್ಯಾಯಮೂರ್ತಿಗಳಾದ ಮನಿಷ್ ಪಿತಾಳೆ ಮತ್ತು ವಾಲ್ಮಿಕಿ ಮೆನೇಜಸ್ ಅವರ ವಿಭಾಗೀಯ ಪೀಠ ಇತ್ತೀಚೆಗೆ ರದ್ದುಗೊಳಿಸಿದೆ.

ಒಎಸ್‌ಎಯ ಸೆಕ್ಷನ್ 3 ಮತ್ತು 2 (8)ರಲ್ಲಿ ಬೇಹುಗಾರಿಕೆಗೆ ಸಂಬಂಧಿಸಿದ ನಿಷೇಧಿತ ಸ್ಥಳಗಳಲ್ಲಿ ಪೊಲೀಸ್ ಠಾಣೆಯನ್ನು ಉಲ್ಲೇಖಿಸಿಲ್ಲ ಎಂದಿರುವ ಹೈಕೋರ್ಟ್, ಅದನ್ನು ‘ನಿಷೇಧಿತ ಸ್ಥಳ’ ಎಂಬ ವ್ಯಾಖ್ಯಾನದಲ್ಲಿ ಸೇರಿಸಬಹುದು ಎಂದು ಆದೇಶದಲ್ಲಿ ಹೇಳಿದೆ.

ನೆರೆ ಹೊರೆಯವರೊಂದಿಗೆ ಜಗಳಕ್ಕೆ ಸಂಬಂಧಿಸಿ ಉಪಾಧ್ಯಾಯ ಅವರು ತನ್ನ ಪತ್ನಿಯೊಂದಿಗೆ ವಾರ್ಧಾ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಇದೇ ವೇಳೆ ಅವರ ವಿರುದ್ಧವೂ ಪ್ರತಿ ದೂರು ದಾಖಲಾಯಿತು. ಈ ಸಂದರ್ಭದಲ್ಲಿ ಠಾಣೆಯಲ್ಲಿ ನಡೆಯುತ್ತಿದ್ದ ಚರ್ಚೆಯನ್ನು ಉಪಾಧ್ಯಾಯ ವಿಡಿಯೊ ಚಿತ್ರೀಕರಣ ಮಾಡುತ್ತಿದ್ದರು. ಇದನ್ನು ಗಮನಿಸಿದ ಪೊಲೀಸರು ಅವರ ವಿರುದ್ಧ ಒಎಸ್‌ಎ ಕಾಯ್ದೆ ಉಲ್ಲಂಘನೆಯಡಿ ಎಫ್‌ಐಆರ್ ದಾಖಲಿಸಿ, ಆರೋಪಪಟ್ಟಿ ಸಲ್ಲಿಸಿದ್ದರು. ಅದನ್ನು ನ್ಯಾಯಾಲಯ ರದ್ದುಗೊಳಿಸಿದೆ.

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕು ಕ ಅಧಿಕಾರಿಗಳ ಕಾರ್ಯಾಲಯ, ಕಲಬುರಗಿ ತಾ.ಜಿ. ಕಲಬುರಗಿ
ಇ-ಮೇಲ್ : dhogulbarga@gmail.com ಫೋನ ಸಂಖ್ಯೆ : 08472-278619
ಸಂಖ್ಯೆ:ಅಭಿವೃಧಿ/ಡಿ.ಎಮ್.ಎಫ್/ಐ.ಎನ್.ಡಿ/03/2021-22 ದಿನಾಂಕ: 29.10.2022
“ಅಲ್ಪಾವಧಿ ಟೆಂಡರ್ ಪ್ರಕಟಣೆ -2”
2019-20ನೇ ಸಾಲಿನ ಡಿ.ಎಮ್.ಎಫ್ ಯೋಜನೆ ಅಡಿಯಲ್ಲಿ ಅಳಂದ ತಾಲೂಕಿಗೆ ವೈದ್ಯಕೀಯ ಉಪಕರಣಗಳು ಖರಿದಿಸಲು ಇ-ಪ್ರೋಕ್ಯುರಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ.
1) Work Code : HC/IND/006, 2) Taluka : Aland, 3) Particular : Providing Medical Equipments to Aland Taluka, 4) Amount in Lakhs: **83.93**
ಟೆಂಡರ್ ಮಾಹಿತಿ ಈ ಕೆಳಗಿನಂತಿದೆ. (ವೆಬ್‌ಸೈಟ್: **http:/eproc.karnataka.gov.in)**
1) ಟೆಂಡರ್ ಸಲ್ಲಿಸುವ ಪ್ರಾರಂಭ ದಿನಾಂಕ : **29.10.2022,** 2) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **14..11.2022 ಸಾಯಂಕಾಲ 04.00 ಗಂಟೆಗೆ,** 3) ಟೆಂಡರ್ ತಾಂತ್ರಿಕ ಬಿಡ್ಡು ತೆರೆಯುವ ದಿನಾಂಕ : **15.11.2022 ರಂದು ಸಂಜೆ 04.00 ಗಂಟೆಗೆ,** 4) ಟೆಂಡರ್ ಆರ್ಥಿಕ ಬಿಡ್ : ತಾಂತ್ರಿಕ ಬಿಡ್ಡಿನಲ್ಲಿ ಅರ್ಹರಿರುವ ಗುತ್ತಿಗೆದಾರರ ಆರ್ಥಿಕ ಬಿಡ್ಡುಗಳನ್ನು ಮಾತ್ರ 16.11.2022 ಪರಿಶೀಲಿಸುವುದು, 5) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ, ಕಲಬುರಗಿ. ದೂರವಾಣಿ ಸಂಖ್ಯೆ : 08472-278619
ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕೆಳಕಂಡ ಅಧಿಕಾರಿಯವರನ್ನು ಸಂಪರ್ಕಿಸಬಹುದು.
ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/780/ಎಂ.ಸಿ&ಎ/2022-23

ನಿರುದ್ಯೋಗಿ ವಿದ್ಯಾವಂತ ಯುವಕ ಮತ್ತು ಯುವತಿಯರಿಗೊಂದು ಸುವರ್ಣಾವಕಾಶ
ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಮೈಸೂರು, ಭಾರತ ಸರ್ಕಾರ - (CIPET-CSTS)
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು, ಕರ್ನಾಟಕ ಸರ್ಕಾರ
ಮೈಸೂರಿನಲ್ಲಿರುವ ಕೇಂದ್ರ ಸರ್ಕಾರದ ಸಿಪೆಟ್ ಸಂಸ್ಥೆಯಲ್ಲಿ ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು, ಇವರ ಪ್ರಾಯೋಜಿತ ಎಲ್ಲಾ ವರ್ಗಗಳ 18-30 ವರ್ಷ ವಯೋಮಿತಿಯ **10th / PUC / ITI / JOC / DIPLOMA / Any Degree (pass/fail)** ವಿದ್ಯಾರ್ಹತೆ ಹೊಂದಿದ ನಿರುದ್ಯೋಗಿ ಯುವಕ, ಯುವತಿಯರಿಗೆ ಮೈಸೂರಿನಲ್ಲಿ ವಿವಿಧ ವೃತ್ತಿಪರ ಯೋಜನೆಯಡಿ 06 ತಿಂಗಳ ಅವಧಿಯ ಪಾಲಿಮರ್ ವಸ್ತುಗಳ ತಯಾರಿಕಾ ತಂತ್ರಜ್ಞಾನದ, ವಾಹನಗಳ ಬಿಡಿ ಭಾಗಗಳು, ವಿದ್ಯುತ್ ಉಪಕರಣಗಳು, ಕಂಪ್ಯೂಟರ್ / ಮೊಬೈಲ್ ಬಿಡಿ ಭಾಗಗಳು, ಇತ್ಯಾದಿ ವಸ್ತುಗಳ ತಯಾರಿಕೆಗೆ **ಉಚಿತ ತರಬೇತಿ, ವಸತಿ, ಊಟ ಹಾಗೂ ಉದ್ಯೋಗಾವಕಾಶಕ್ಕೆ ನೆರವು ನೀಡಲಾಗುವುದು.**
ತರಬೇತಿ ಪಡೆಯಲು ಇಚ್ಛೆಯುಳ್ಳ ಅಭ್ಯರ್ಥಿಗಳು ತಮ್ಮ **SSLC** ಅಂಕಪಟ್ಟಿ, ಜಾತಿ, ಆದಾಯ ಪ್ರಮಾಣ ಪತ್ರ ಮತ್ತು ಆಧಾರ್ ಕಾರ್ಡ್ ನೊಂದಿಗೆ ನೇರವಾಗಿ ಬಂದು ಪ್ರವೇಶಾತಿ ಪಡೆಯಬಹುದು ಅಥವಾ ಅಂಚೆ ಮೂಲಕ ಈ ಕೆಳಗಿನ ವಿಳಾಸಕ್ಕೆ ಕಳುಹಿಸುವುದು. ವಿಳಾಸ: **CIPET,** 437/ಎ, ಹೆಬ್ಬಾಳು ಕೈಗಾರಿಕಾ ಪ್ರದೇಶ, ಮೈಸೂರು-570 016. ಹೆಚ್ಚಿನ ಮಾಹಿತಿಗಾಗಿ ಕೆಳಗಿನ ದೂರವಾಣಿ ಸಂಖ್ಯೆಗೆ ಕರೆ ಮಾಡಿ.
93807 56024, 97890 10015, 0821-2510619

ಕರ್ನಾಟಕ ಗೃಹ ಮಂಡಳಿ
ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು - 560009 ದೂರವಾಣಿ: 080-22273511-16
ಕರ್ನಾಟಕ ಗೃಹ ಮಂಡಲಿ ಸಮುದಾಯದ ನಿರ್ಮಾಣದತ್ತ
ಸಂಖ್ಯೆ: ಕಗೃಮಂ/ಕಾ.ಪಾ.ಅ/ಹಂಚಿಕೆ/ಪ.ಪ್ರ/2022-23 ದಿನಾಂಕ: 25-10-2022
ಕಾಲಾವಕಾಶ ವಿಸ್ತರಣೆ ಪ್ರಕಟಣೆ
ಕರ್ನಾಟಕ ಗೃಹ ಮಂಡಳಿ ವತಿಯಿಂದ ದಿನಾಂಕ: 22.09.2022 ರಂದು ವಿಜಯ ಕರ್ನಾಟಕ ಮತ್ತು ಪ್ರಜಾವಾಣಿ ದಿನಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆ ನೀಡಿ ವಿಜಯಪುರ ಜಿಲ್ಲೆ ಇಟ್ಟಂಗಿಹಾಳ 2ನೇ ಹಂತ, ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ಪಂಜನಹಳ್ಳಿ 3ನೇ ಹಂತ, ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕು ಚಿಕ್ಕಬಾದವಾಡಗಿ, ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಅನಂತನಹಳ್ಳಿ-ಮೆಳ್ಳೆಕಟ್ಟೆ, ಗದಗ ಜಿಲ್ಲೆ ಮುಂಡರಗಿ ಮತ್ತು ಬಳ್ಳಾರಿ ಜಿಲ್ಲೆ ಎನ್.ಜಿ.ಓ (ಮುಂಡ್ರಿಗಿ) & ಹಲಕುಂದಿ ಬಡಾವಣೆಗಳಲ್ಲಿ ಮನೆ/ನಿವೇಶನಗಳನ್ನು ಅಭಿವೃದ್ಧಿಪಡಿಸಿ ಹಂಚಿಕೆ ಮಾಡಿ, ನಂತರ ಉಳಿದಿರುವ ಮನೆ/ನಿವೇಶನಗಳನ್ನು ವಿಲೇವಾರಿ ಮಾಡಲು ಆನ್‌ಲೈನ್ ಮುಖಾಂತರ ಸಾರ್ವಜನಿಕರಿಂದ ಆರಂಭಿಕ ಠೇವಣಿಯೊಂದಿಗೆ ಅರ್ಜಿಗಳನ್ನು ಆಹ್ವಾನಿಸಿ, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 22.10.2022 ರಂದು ನಿಗಧಿಪಡಿಸಲಾಗಿತ್ತು. ಸಾರ್ವಜನಿಕರ ಹಿತದೃಷ್ಟಿಯಿಂದ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 05.11.2022 ರವರೆಗೆ ವಿಸ್ತರಿಸಲಾಗಿರುತ್ತದೆ. ಉಳಿದಂತೆ ತಾತ್ಕಾಲಿಕ ಹಾಗೂ ಅಂತಿಮ ಅರ್ಹ ಮತ್ತು ಅನರ್ಹ ಅರ್ಜಿದಾರರ ಪಟ್ಟಿಯ ಪ್ರಕಟಣೆ ದಿನಾಂಕವನ್ನು ಮುಂದೂಡಲಾಗಿದ್ದು, ಮುಂದಿನ ದಿನಗಳಲ್ಲಿ ಪ್ರತ್ಯೇಕವಾಗಿ ಪ್ರಕಟಣೆ ನೀಡಿ ತಿಳಿಸಲಾಗುವುದು. ಉಳಿದಂತೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
ಸಹಿ/-
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/2829/Zenkar/2022-23

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ
ನಂ. 16-ಡಿ, 4ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ, ಬೆಂಗಳೂರು-52. ದೂರವಾಣಿ: 080-22374832, 22374834, ಫ್ಯಾಕ್ಸ್: 080-22374833, ಇ-ಮೇಲ್: md.dbcdc@gmail.com, ವೆಬ್‌ಸೈಟ್: www.karnataka.gov.in/dbcdc
ಸಂಖ್ಯೆ: ದೇಹಿನಿ/ಸ/ಕ್ರಿಯೋ/ಸಿಆರ್-9/2022-23 ದಿನಾಂಕ: 28.10.2022
ಪ್ರಕಟಣೆ
2021-22ನೇ ಸಾಲಿನಲ್ಲಿ (ಕಳೆದ ವರ್ಷ) ಸಿ.ಇ.ಟಿ ಮೂಲಕ ಆಯ್ಕೆಯಾದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ 2ನೇ ವರ್ಷದ ವ್ಯಾಸಂಗಕ್ಕೆ ಮಾತ್ರ ಅರಿವು ಶೈಕ್ಷಣಿಕ ಸಾಲ ಯೋಜನೆಯಲ್ಲಿ ಅರ್ಜಿಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ.
ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಅರಿವು ಶೈಕ್ಷಣಿಕ ಸಾಲ ಯೋಜನೆಯಲ್ಲಿ 2021-22ನೇ ಸಾಲಿನಲ್ಲಿ (ಕಳೆದ ವರ್ಷ) ಸಿ.ಇ.ಟಿ. ಮೂಲಕ ಆಯ್ಕೆಯಾಗಿ ಈಗಾಗಲೇ ವ್ಯಾಸಂಗ ಮುಂದುವರೆಸಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ 2ನೇ ವರ್ಷದಿಂದ ಅರಿವು ಶೈಕ್ಷಣಿಕ ಸಾಲ ಮಂಜೂರು ಮಾಡಲು 2ನೇ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಮಾತ್ರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಸಲ್ಲಿಸಬಯಸುವ ವಿದ್ಯಾರ್ಥಿಗಳು ದಿನಾಂಕ: 29.10.2022 ರಿಂದ 12.12.2022 ರವರೆಗೆ ಸೇವಾಸಿಂಧು ಪೋರ್ಟಲ್ ಮುಖಾಂತರ ಆನ್‌ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ.
* ವಿದ್ಯಾರ್ಥಿಗಳು ಆಧಾರ್ ಜೋಡಣೆಯಾದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಹೊಂದಿರಬೇಕು. ಆಧಾರ್ ಕಾರ್ಡ್‌ನಲ್ಲಿರುವಂತೆಯೇ ವಿದ್ಯಾರ್ಥಿಗಳ ಹೆಸರು, (ಶ್ರೀ/ಶ್ರೀಮತಿ, ಕುಮಾರಿ ಮುಂತಾದ ಮಾಹಿತಿಗಳೆಲ್ಲವು) ಬ್ಯಾಂಕ್ ಖಾತೆಯ ಪುಸ್ತಕದಲ್ಲಿಯೂ ಇದ್ದು, ಇತರೆ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರದಲ್ಲಿಯೂ ಆಧಾರ್‌ಕಾರ್ಡ್‌ನಲ್ಲಿರುವಂತೆ ಹೆಸರು ಹೊಂದಾಣಿಕೆಯಾಗಬೇಕು.
* ಒಂದು ಬಾರಿ ನಿಗಮದ ಯಾವುದಾದರೂ ಯೋಜನೆಯಲ್ಲಿ ಪ್ರಯೋಜನ ಪಡೆದಿದ್ದಲ್ಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
* ಮೇಲ್ಕಂಡ ಯೋಜನೆಗಳಲ್ಲಿ ವಿದ್ಯಾರ್ಥಿಗಳು ಅರ್ಜಿಗಳನ್ನು ಸೇವಾಸಿಂಧು ಪೋರ್ಟಲ್ ಮುಖಾಂತರ ಗ್ರಾಮಒನ್, ಬೆಂಗಳೂರುಒನ್ ಮತ್ತು ಕರ್ನಾಟಕ ಒನ್ ಸೇವಾಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.
* ಹೆಚ್ಚಿನ ಮಾಹಿತಿಗಾಗಿ ನಿಗಮದ https://www.dbcdc.karnataka.gov.in ವೆಬ್‌ಸೈಟ್ ನಲ್ಲಿ ಸಂಪರ್ಕಿಸಿ ಅಥವಾ ಸಂಬಂಧಪಟ್ಟ ನಿಗಮದ ವೆಬ್‌ಸೈಟ್‌ನ್ನು ಅಥವಾ ನಿಗಮದ ದೂರವಾಣಿ/ಸಹಾಯವಾಣಿ ಸಂಖ್ಯೆ 080-22374832 ಮತ್ತು 7090400900 ಅಥವಾ 7090400100 ಸಂಪರ್ಕಿಸುವುದು.
ಸಹಿ/-
ವ್ಯವಸ್ಥಾಪಕ ನಿರ್ದೇಶಕರು
DIPR/CP/2852/Zenkar/2022-23

ವಿಶ್ವಸಂಸ್ಥೆಯ ಭಯೋತ್ಪಾದನಾ ನಿಗ್ರಹ ಸಮಿತಿಯ ವಿಶೇಷ ಸಭೆಯಲ್ಲಿ ಸಚಿವ ಜೈಶಂಕರ್ ಕಳವಳ

‘ಉಗ್ರರಿಂದ ತಂತ್ರಜ್ಞಾನ ದುರ್ಬಳಕೆ’

ಪ್ರಜಾವಾಣಿ ವಾರ್ತೆ

ನವದೆಹಲಿ: ಅತ್ಯಾಧುನಿಕ ತಂತ್ರಜ್ಞಾನಗಳು ಮತ್ತು ಮುಕ್ತ ಸಮಾಜದ ನಿಲುವುಗಳನ್ನು ಭಯೋತ್ಪಾದಕ ಸಂಘಟನೆಗಳು ದುರ್ಬಳಕೆ ಮಾಡಿಕೊಳ್ಳುತ್ತಿವೆ ಎಂಬ ಕಳವಳವನ್ನು ವಿದೇಶಾಂಗ ಸಚಿವ ಎಸ್. ಜೈಶಂಕರ್ ವ್ಯಕ್ತಪಡಿಸಿದ್ದಾರೆ.

ಭಯೋತ್ಪಾದಕ ಸಂಘಟನೆಗಳು, ಉಗ್ರಗಾಮಿ ಸಿದ್ಧಾಂತದ ಬಗ್ಗೆ ಸಹಾನುಭೂತಿ ಹೊಂದಿರುವ ವ್ಯಕ್ತಿಗಳು ಹಾಗೂ ಯಾರ ಬೆಂಬಲವೂ ಇಲ್ಲದ ಏಕಾಂಗಿ ದಾಳಿಕೋರರು (ಲೋನ್ ವೂಲ್ಫ್) ಇತ್ತೀಚಿನ ದಿನಗಳಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ಅತ್ಯಾಧುನಿಕ ತಂತ್ರಜ್ಞಾನಗಳ ಬಳಕೆಯ ಮೇಲೆ ಪ್ರಭುತ್ವ ಸಾಧಿಸಿರುವುದು ಕಳವಳಕಾರಿ ಎಂದು ಅವರು ಹೇಳಿದ್ದಾರೆ.

‘ತಂತ್ರಜ್ಞಾನ, ಹಣ ಹಾಗೂ ಇದಕ್ಕಿಂತ ಮುಖ್ಯವಾಗಿ ವಿವಿಧ ದೇಶಗಳ ಮುಕ್ತ ಸಿದ್ಧಾಂತಗಳನ್ನು ದುರ್ಬಳಕೆ ಮಾಡಿಕೊಳ್ಳುವ ಅವರು, ಸ್ವಾತಂತ್ರ್ಯ, ಸಹಿಷ್ಣುತೆ ಹಾಗೂ ಪ್ರಗತಿಯ ಮೇಲೆ ದಾಳಿ ಎಸಗುತ್ತಾರೆ’ ಎಂದು ಅವರು ಹೇಳಿದ್ದಾರೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಭಯೋತ್ಪಾದನಾ ನಿಗ್ರಹ ಸಮಿತಿಯ ಸರ್ವ ಸದಸ್ಯರ ವಿಶೇಷ ಸಭೆಯಲ್ಲಿ ಅವರು ಶನಿವಾರ ಮಾತನಾಡಿದರು.

ವಿಶ್ವಸಂಸ್ಥೆಯ ಭಯೋತ್ಪಾದನಾ ನಿಗ್ರಹ ನಿಧಿಗೆ ಭಾರತವು ಈ ವರ್ಷ ಸ್ವಯಂ ಪ್ರೇರಣೆಯಿಂದ 5 ಲಕ್ಷ ಡಾಲರ್ (₹4.1 ಕೋಟಿ) ನೀಡಲಿದೆ ಎಂದು ಜೈಶಂಕರ್ ಇದೇ ವೇಳೆ ಪ್ರಕಟಿಸಿದರು. ಭಯೋತ್ಪಾದನೆಯ ಸವಾಲುಗಳನ್ನು ಎದುರಿಸಲು ಸದಸ್ಯ ದೇಶಗಳಿಗೆ ಬಲ ತುಂಬುವುದು ಈ ನೆರವಿನ ಉದ್ದೇಶ.

> **ತಪ್ಪು ಮಾಹಿತಿ ಹರಡುವಿಕೆ, ಉಗ್ರರ ನೇಮಕಾತಿ, ಮೂಲಭೂತವಾದ ಹರಡುವಿಕೆ, ಸಂಪನ್ಮೂಲ ಕ್ರೋಡೀಕರಣಕ್ಕೆ ಹೊಸ ತಂತ್ರಜ್ಞಾನಗಳು ಬಳಕೆಯಾಗಿವೆ.**
> **ಆಂಟೊನಿಯೊ ಗುಟೆರಸ್**
> ವಿಶ್ವಸಂಸ್ಥೆ ಮಹಾಪ್ರಧಾನ ಕಾರ್ಯದರ್ಶಿ

ಭಯೋತ್ಪಾದನಾ ಸಂಘಟನೆಗಳು ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ಅಪಾಯ ಒಡ್ಡುವುದನ್ನು ತಡೆಯುವುದು ಎಲ್ಲ ಸರ್ಕಾರಗಳಿಗೂ ಸವಾಲಾಗಿದೆ ಎಂದು ಜೈಶಂಕರ್ ಹೇಳಿದರು.

ಉಗ್ರರು ಹಾಗೂ ಭಯೋತ್ಪಾದಕ ಸಂಘಟನೆಗಳಿಗೆ ಇಂಟರ್‌ನೆಟ್ ಹಾಗೂ ಸಾಮಾಜಿಕ ಜಾಲತಾಣಗಳು ಪ್ರಬಲ ‘ಟೂಲ್‌ಕಿಟ್’ ರೀತಿ ಬಳಕೆಯಾಗುತ್ತಿವೆ ಎಂದು ಜೈಶಂಕರ್ ಎಚ್ಚರಿಸಿದರು. ತಮ್ಮ ಕಾರ್ಯಸೂಚಿ ಪಸರಿಸಲು, ತೀವ್ರವಾದವನ್ನು ವಿಸ್ತರಿಸಲು ಮತ್ತು ಸಮಾಜಗಳನ್ನು ಅಸ್ಥಿರಗೊಳಿಸುವ ಸಂಚು ರೂಪಿಸಲು ಉಗ್ರರು ತಂತ್ರಜ್ಞಾನಗಳನ್ನು ಬಳಸಿಕೊಳ್ಳುತ್ತಿದ್ದಾರೆ ಎಂದರು.

ಶುಕ್ರವಾರ ಇದೇ ವೇದಿಕೆಯಲ್ಲಿ ಮಾತನಾಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ಎಲ್ಲ ಸ್ವರೂಪದ ನಕ್ಸಲ್‌ವಾದವನ್ನು ಸೋಲಿಸಬೇಕಿದೆ ಎಂದು ಕರೆ ನೀಡಿದ್ದರು. ಸಮಾವೇಶದ ಕೊನೆಯ ದಿನವಾದ ಶನಿವಾರ, ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಸದಸ್ಯ ದೇಶಗಳ ಆದ್ಯತೆಗಳನ್ನು ಪಟ್ಟಿ ಮಾಡಿರುವ ‘ದೆಹಲಿ ಘೋಷಣೆ’ಯನ್ನು ಅಂಗೀಕರಿಸಲಾಯಿತು.



ದೆಹಲಿಯಲ್ಲಿ ಶನಿವಾರ ನಡೆದ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಭಯೋತ್ಪಾದನಾ ನಿಗ್ರಹ ಸಮಿತಿಯ ಸರ್ವ ಸದಸ್ಯರ ವಿಶೇಷ ಸಭೆಯಲ್ಲಿ ವಿದೇಶಾಂಗ ಸಚಿವ ಎಸ್‌.ಜೈಶಂಕರ್ (ಎಡದಿಂದ ಐದನೆಯವರು) ಅವರು ವಿವಿಧ ದೇಶಗಳ ಪ್ರತಿನಿಧಿಗಳ ಜೊತೆ ಕಾಣಿಸಿಕೊಂಡರು–ಪಿಟಿಐ ಚಿತ್ರ

ತಂತ್ರಜ್ಞಾನ ದುರ್ಬಳಕೆ ಕುರಿತು ಹೇಳಿದ್ದೇನು?

- ಕಳೆದ ಎರಡು ದಶಕಗಳಲ್ಲಿ ವರ್ಚುವಲ್ ಪ್ರೈವೆಟ್ ನೆಟ್‌ವರ್ಕ್ (ವಿಪಿಎನ್), ಎನ್‌ಕ್ರಿಪ್ಟೆಡ್ ಮೆಸೇಜ್ ವ್ಯವಸ್ಥೆ, ಬ್ಲಾಕ್‌ಚೈನ್ ಮತ್ತು ಡಿಜಿಟಲ್ ಕರೆನ್ಸಿ ತಂತ್ರಜ್ಞಾನಗಳು ಅಗಾಧವಾಗಿ ಬೆಳೆದಿವೆ. ಇವು ಮಾನವನ ಭವಿಷ್ಯಕ್ಕೆ ದೊಡ್ಡ ಕೊಡುಗೆ ನೀಡುವ ಹಾದಿಯಲ್ಲಿ ಸಾಗುತ್ತಿವೆ. ಆದರೆ, ಇದೇ ನಾಣ್ಯದ ಮತ್ತೊಂದು ಮಗ್ಗುಲಲ್ಲಿ ಭಯೋತ್ಪಾದನಾ ಚಟುವಟಿಕೆಗಳು ಇದೇ ತಂತ್ರಜ್ಞಾನಗಳನ್ನು ಬಳಸಿಕೊಂಡು ನಡೆಯುತ್ತಿವೆ ಎಂಬುದರ ಅರಿವು ನಮಗಿರಬೇಕು
- ಇತ್ತೀಚಿನ ದಿನಗಳಲ್ಲಿ ಭಯೋತ್ಪಾದಕ ಸಂಘಟನೆಗಳು ಡ್ರೋನ್ ತಂತ್ರಜ್ಞಾನ ಹಾಗೂ ಕ್ವಾಡ್‌ಕಾಪ್ಟರ್‌ಗಳನ್ನು ಬಳಸಿಕೊಂಡು ಗಡಿಯಾಚೆಗೆ ಮಾದಕವಸ್ತುಗಳು ಹಾಗೂ ಶಸ್ತ್ರಾಸ್ತ್ರ ರವಾನಿಸಿ ವಿಧ್ವಂಸಕ ಕೃತ್ಯ ಎಸಗುತ್ತಿವೆ
- ಪರೋಕ್ಷವಾಗಿ ಪಾಕಿಸ್ತಾನವನ್ನು ಉಲ್ಲೇಖಿಸಿದ ಜೈಶಂಕರ್, ಭಾರತ ಮಾತ್ರವಲ್ಲದೇ ಇತರ ದೇಶಗಳಿಗೆ ಡ್ರೋನ್‌ಗಳು ಅಪಾಯಕಾರಿಯಾಗಿವೆ ಎಂದರು
- ಆಫ್ರಿಕಾದಲ್ಲಿ ಭದ್ರತಾಪಡೆಗಳು ಹಾಗೂ ವಿಶ್ವಸಂಸ್ಥೆ ಶಾಂತಿಸಮಿತಿ ಸದಸ್ಯರ ಓಡಾಟದ ಮೇಲೆ ಭಯೋತ್ಪಾದಕರು ಡ್ರೋನ್ ಮೂಲಕ ನಿಗಾ ವಹಿಸಿದ್ದರು
- ಯುಎಇ ಹಾಗೂ ಸೌದಿ ಅರೇಬಿಯಾದಲ್ಲಿ ನಾಗರಿಕರನ್ನು ಗುರಿಯಾಗಿಸಿ ಕೆಲವು ತಿಂಗಳು ಹಿಂದೆ ಭಯೋತ್ಪಾಕದರು ಗಡಿಯಾಚೆಯಿಂದ ಡ್ರೋನ್ ದಾಳಿ ನಡೆಸಿದ್ದರು

ಪ್ರಜಾಪ್ರಭುತ್ವವಾದಿ ಸರ್ಕಾರಗಳಿಗೆ ಎಚ್ಚರಿಕೆ: ಭಯೋತ್ಪಾದಕರು ಹಾಗೂ ಅವರ ಬೆಂಬಲಿಗರಿಂದ ಸ್ವಾತಂತ್ರ್ಯವು ದುರ್ಬಳಕೆ ಆಗುವ ಸಾಧ್ಯತೆಯ ಬಗ್ಗೆ ಮೋದಿ ನೇತೃತ್ವದ ಸರ್ಕಾರವು ಜಗತ್ತನ್ನು ಎಚ್ಚರಿಸುತ್ತಿದೆ. ಭಾರತದಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳು ಹಿನ್ನಡೆ ಕಾಣುತ್ತಿವೆ ಎಂಬ ಅರ್ಥದಲ್ಲಿ ಅಮೆರಿಕ ಹಾಗೂ ಪಾಶ್ಚಿಮಾತ್ಯ ದೇಶಗಳು ಅಭಿಪ್ರಾಯಪಟ್ಟಿವೆ ಎಂದು ಗ್ರಹಿಸಿರುವ ಭಾರತ, ಈ ತಿರುಗೇಟು ನೀಡಿದೆ.

ಇದೇ ತಿಂಗಳು ನ್ಯೂಜಿಲೆಂಡ್‌ಗೆ ಭೇಟಿ ನೀಡಿದ್ದ ಜೈಶಂಕರ್ ಅವರು, ಪ್ರಜಾಪ್ರಭುತ್ವವಾದಿ ದೇಶಗಳು ನಂಬಿರುವ ಸ್ವಾತಂತ್ರ್ಯದ ಸಿದ್ಧಾಂತವು ದುರ್ಬಳಕೆಗೆ ಒಳಗಾಗುವ ಅಪಾಯದ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದ್ದರು.

‘ಶಾಸಕರ ಖರೀದಿ ಮಾತಿನ ಆಡಿಯೊ’ ಬಿಡುಗಡೆ

ಬಿಜೆಪಿಯಿಂದ ಶಾಸಕರ ಖರೀದಿ ಯತ್ನ: ಸಿಸೋಡಿಯಾ ಆರೋಪ; ಶಾ ರಾಜೀನಾಮೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಹಾಗೂ ತೆಲಂಗಾಣದಲ್ಲಿ ಶಾಸಕರ ಖರೀದಿ ಯತ್ನ ಪ್ರಕರಣದಲ್ಲಿ ಶನಿವಾರ ಇನ್ನಷ್ಟು ಬೆಳವಣಿಗೆಗಳು ನಡೆದಿವೆ.

ದೆಹಲಿಯ ಆಮ್ ಆದ್ಮಿ ಪಕ್ಷದ (ಎಎಪಿ) ಶಾಸಕರನ್ನು ಖರೀದಿಸುವ ಪ್ರಕ್ರಿಯೆಯಲ್ಲಿ ಬಿಜೆಪಿ ಜೊತೆ ನಂಟು ಹೊಂದಿರುವ ವ್ಯಕ್ತಿಯೊಬ್ಬರು ತೊಡಗಿಸಿಕೊಂಡಿದ್ದಾರೆ ಎಂದು ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಶನಿವಾರ ಆರೋಪಿಸಿದ್ದಾರೆ. ತಮ್ಮ ಆರೋಪಕ್ಕೆ ಪುಷ್ಟಿ ನೀಡುವುದಕ್ಕಾಗಿ ಆಡಿಯೊವೊಂದನ್ನು ಅವರು ಬಿಡುಗಡೆ ಮಾಡಿದ್ದಾರೆ.

ಆಡಿಯೊದಲ್ಲಿ ವ್ಯಕ್ತಿಯೊಬ್ಬರ ಧ್ವನಿ ಕೇಳಿಬರುತ್ತಿದ್ದು, ಆ ವ್ಯಕ್ತಿಯು, ತೆಲಂಗಾಣದಲ್ಲೂ ಬಿಆರ್‌ಎಸ್ ಶಾಸಕರ ಖರೀದಿಯಲ್ಲಿ ಭಾಗಿಯಾದ ಆರೋಪದ ಮೇಲೆ ಬಂಧನಕ್ಕೆ ಒಳಗಾಗಿದ್ದಾರೆ ಎಂದು ಸಿಸೋಡಿಯಾ ಹೇಳಿದ್ದಾರೆ.

> **ದೆಹಲಿ, ಪಂಜಾಬ್‌ನಲ್ಲಿ ಶಾಸಕರ ಖರೀದಿಸುವ ಯತ್ನದಲ್ಲಿ ಬಿಜೆಪಿ ವಿಫಲವಾಗಿದೆ ಎಂಬುದು ಈ ಆಡಿಯೊದಿಂದ ದೃಢಪಟ್ಟಿದೆ. ಪ್ರಕರಣದ ಕುರಿತು ಇ.ಡಿಯಿಂದ ತನಿಖೆ ಆಗಬೇಕು**
> **ಮನೀಷ್ ಸಿಸೋಡಿಯಾ**
> ದೆಹಲಿ ಉಪಮುಖ್ಯಮಂತ್ರಿ

ಕೇಂದ್ರ ಗೃಹಸಚಿವ ಅಮಿತ್ ಶಾ ಅವರ ರಾಜೀನಾಮೆಗೆ ಆಗ್ರಹಿಸಿರುವ ಸಿಸೋಡಿಯಾ, ದೆಹಲಿಯಲ್ಲಿ ಎಎಪಿ ಸರ್ಕಾರವನ್ನು ಉರುಳಿಸುವ ಷಡ್ಯಂತ್ರದಲ್ಲಿ ಅವರ ಪಾತ್ರವಿದೆ ಎಂಬುದು ಸಾಬೀತಾದರೆ ಶಾ ಅವರನ್ನು ಪದಚ್ಯುತಿಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ.

ಬಿಆರ್‌ಎಸ್ ಶಾಸಕರನ್ನು ಬಿಜೆಪಿಗೆ ಪಕ್ಷಾಂತರ ಮಾಡುವಂತೆ ಮನವೊಲಿಕೆ ಮಾಡುತ್ತಿದ್ದರು ಎಂಬ ಆರೋಪದ ಮೇಲೆ ರಾಮಚಂದ್ರ ಭಾರತಿ ಅಲಿಯಾಸ್ ಸತೀಶ್ ಶರ್ಮಾ, ನಂದ ಕುಮಾರ್ ಮತ್ತು ಸಿಂಹಯಾಜಿ ಸ್ವಾಮಿ ಎಂಬುವರನ್ನು ತೆಲಂಗಾಣ ಪೊಲೀಸರು ಇತ್ತೀಚೆಗೆ ಬಂಧಿಸಿದ್ದರು. ಆರ್‌ಎಸ್‌ಎಸ್ ಹಿರಿಯ ನಾಯಕ ಹಾಗೂ ಇಬ್ಬರು ಕೇಂದ್ರ ಸಚಿವರ ಜೊತೆ ಕಾಣಿಸಿಕೊಂಡಿರುವ ವ್ಯಕ್ತಿಗಳ ಚಿತ್ರಗಳನ್ನು ಸಿಸೋಡಿಯಾ ಬಿಡುಗಡೆ ಮಾಡಿದರು. ಈ ಚಿತ್ರಗಳು, ಆರೋಪಿಗಳ ಜೊತೆ ಬಿಜೆಪಿ ಹೊಂದಿರುವ ನಂಟಿಗೆ ಸಾಕ್ಷಿ ಎಂದಿದ್ದಾರೆ.

ಆರೋಪಿಗಳನ್ನು ಪೊಲೀಸ್ ವಶಕ್ಕೆ ನೀಡಿದ ಹೈಕೋರ್ಟ್

ಬಿಆರ್‌ಎಸ್ ಶಾಸಕರನ್ನು ಸೆಳೆಯುತ್ತಿದ್ದಾರೆ ಎಂಬ ಆರೋಪದ ಮೇಲೆ ಬಂಧನಕ್ಕೆ ಒಳಗಾಗಿ ಮತ್ತೆ ಬಿಡುಗಡೆಯಾಗಿದ್ದ ಮೂವರು ‘ಮಧ್ಯವರ್ತಿಗಳನ್ನು’ ಪೊಲೀಸರು ವಶಕ್ಕೆ ಪಡೆಯಬಹುದು ಎಂದು ತೆಲಂಗಾಣ ಹೈಕೋರ್ಟ್ ಶನಿವಾರ ಹೇಳಿದೆ. ಕೋರ್ಟ್ ಆದೇಶದ ಅನ್ವಯ ಪೊಲೀಸರು ಮೂವರನ್ನು ವಶಕ್ಕೆ ಪಡೆದರು.

ಬಿಜೆಪಿಯಿಂದ ತಮಗೆ ₹100 ಕೋಟಿ ಆಮಿಷ ಒಡ್ಡಲಾಗಿದೆ ಎಂದು ಬಿಆರ್‌ಎಸ್ ಶಾಸಕ ರೋಹಿತ್ ರೆಡ್ಡಿ ಅವರು ಆರೋಪಿಸಿದ ಬಳಿಕ, ಆರೋಪಿಗಳನ್ನು ಪೊಲೀಸರು ಬಂಧಿಸಿದ್ದರು. ಬಂಧನಕ್ಕೆ ಸೂಕ್ತ ಸಾಕ್ಷ್ಯಾಧಾರಗಳ ಕೊರತೆಯಿದೆ ಎಂದು ಎಸಿಬಿ ವಿಶೇಷ ನ್ಯಾಯಾಲಯ ಅವರನ್ನು ಬಿಡುಗಡೆ ಮಾಡಿತ್ತು. ಇದನ್ನು ಪ್ರಶ್ನಿಸಿ ಪೊಲೀಸರು ಹೈಕೋರ್ಟ್ ಮೊರೆ ಹೋಗಿದ್ದರು.

ಆಡಿಯೊದಲ್ಲಿ ಏನಿದೆ?

ಶಾಸಕರ ಖರೀದಿಗೆ ಬಿಜೆಪಿಯಿಂದ ನೇಮಕಗೊಂಡಿರುವ ದಲ್ಲಾಳಿಯೊಬ್ಬರು ಈ ಆಡಿಯೊದಲ್ಲಿ ಮಾತನಾಡಿದ್ದಾರೆ ಎಂದು ಎಎಪಿ ಆರೋಪಿಸಿದೆ. ‘ದೆಹಲಿಯ 43 ಶಾಸಕರನ್ನು ಖರೀದಿಸುವ ಯತ್ನ ನಡೆಯುತ್ತಿದೆ. ಈ ಉದ್ದೇಶಕ್ಕಾಗಿ ಪ್ರತ್ಯೇಕ ಹಣವನ್ನು ತೆಗೆದಿರಿಸಲಾಗಿದೆ. ಈ ಕಾರಣವಾಗಿ ಅಮಿತ್ ಶಾ ಹಾಗೂ ಬಿ.ಎಲ್. ಸಂತೋಷ್ ಜೊತೆ ಮಾತನಾಡಿದ್ದೇನೆ’ ಎಂದು ಆಡಿಯೊದಲ್ಲಿರುವ ವ್ಯಕ್ತಿ ಹೇಳುತ್ತಾರೆ’ ಎಂದು ಮನೀಷ್ ಸಿಸೋಡಿಯಾ ಹೇಳಿದ್ದಾರೆ.

ಕರುವಿನ ಮೇಲೆ ಅತ್ಯಾಚಾರ: ಬಂಧನ

ಪುಣೆ(ಪಿಟಿಐ): ಮಹಾರಾಷ್ಟ್ರದ ಪುಣೆಯಲ್ಲಿ ಎಮ್ಮೆ ಕರುವಿನ ಮೇಲೆ ಅತ್ಯಾಚಾರ ಎಸಗಿದ ಆರೋಪದ 38 ವರ್ಷದ ವ್ಯಕ್ತಿಯನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

ನಗರದ ಡೆಕ್ಕನ್ ಪ್ರದೇಶದಲ್ಲಿ ಶುಕ್ರವಾರ ಈ ಪ್ರಕರಣ ನಡೆದಿರುವುದಾಗಿ ವರದಿಯಾಗಿದೆ. ನೇಪಾಳದಿಂದ ಬಂದು ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ವ್ಯಕ್ತಿ ಡೆಕ್ಕನ್ ಪ್ರದೇಶದಲ್ಲಿ ಮೇಯಲು ಬಂದಿದ್ದ ಎಮ್ಮೆ ಕರುವಿನ ಮೇಲೆ ಅತ್ಯಾಚಾರ ಎಸಗಿದ್ದಾನೆ. ಇದನ್ನು ಗಮನಿಸಿದ ಸ್ಥಳೀಯರು ವ್ಯಕ್ತಿಗೆ ಪ್ರಜ್ಞೆ ತಪ್ಪುವ ಹಾಗೆ ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದರು.

ಇದಾದ ಬಳಿಕ ಆ ವ್ಯಕ್ತಿಯ ವಿರುದ್ಧ ಸೆಕ್ಷನ್ 377 (ಅನೈಸರ್ಗಿಕ ಲೈಂಗಿಕ ಕ್ರಿಯೆ) ಹಾಗೂ ಪ್ರಾಣಿಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹಿಮಾಚಲ: 8ರಿಂದ ಖರ್ಗೆ ಪ್ರಚಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ನೂತನ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಹಿಮಾಚಲ ಪ್ರದೇಶ ಹಾಗೂ ಗುಜರಾತ್‌ನಲ್ಲಿ ನಾಲ್ಕು ದಿನಗಳ ಕಾಲ ಚುನಾವಣಾ ಪ್ರಚಾರ ನಡೆಸಲಿದ್ದಾರೆ.

ನವೆಂಬರ್ 8 ಹಾಗೂ 9ರಂದು ಹಿಮಾಚಲ ಪ್ರದೇಶದಲ್ಲಿ ಚುನಾವಣಾ ಪ್ರಚಾರ ಸಭೆಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಬಳಿಕ ಗುಜರಾತ್‌ನಲ್ಲಿ ಪ್ರಚಾರ ನಡೆಸಲಿದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಹಿಮಾಚಲ ಪ್ರದೇಶದಲ್ಲಿ ಪ್ರಚಾರದ ನೇತೃತ್ವ ವಹಿಸಿದ್ದು, ನವೆಂಬರ್ 1ರ ಬಳಿಕ ಹಲವು ರ‍್ಯಾಲಿಗಳಲ್ಲಿ ಭಾಗವಹಿಸಲಿದ್ದಾರೆ. ಭಾರತ್ ಜೋಡೋ ಯಾತ್ರೆ ನಡೆಸುತ್ತಿರುವ ರಾಹುಲ್ ಗಾಂಧಿ ಅವರು ಎರಡು ದಿನಗಳ ಕಾಲ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಗುಜರಾತ್: ನ.4ರಂದು ಎಎಪಿ ಸಿ.ಎಂ ಅಭ್ಯರ್ಥಿ ಘೋಷಣೆ

ಸೂರತ್ (ಪಿಟಿಐ): ಜನಾಭಿಪ್ರಾಯ ಆಧರಿಸಿ ಮುಂಬರುವ ಗುಜರಾತ್ ವಿಧಾನಸಭೆ ಚುನಾವಣೆಗೆ ಆಮ್ ಆದ್ಮಿ ಪಕ್ಷದ (ಎಎಪಿ) ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬುದನ್ನು ನ.4ರಂದು ಪ್ರಕಟಿಸಲಾಗುವುದು ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಶನಿವಾರ ತಿಳಿಸಿದರು.

ಆಮ್ ಆದ್ಮಿ ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ ಯಾರಾಗಬೇಕು ಎಂಬುದರ ಕುರಿತು ತಮ್ಮ ಅಭಿಪ್ರಾಯಗಳನ್ನು ನೀಡಲು ಮತದಾರರು ಎಸ್‌ಎಂಎಸ್, ವಾಟ್ಸ್‌ಆ್ಯಪ್, ವಾಯ್ಸ್ ಮೇಲ್, ಇ ಮೇಲ್ ಮೂಲಕ ಪಕ್ಷವನ್ನು ಸಂಪರ್ಕಿಸಬೇಕು. ಗುಜರಾತ್‌ನಲ್ಲಿ ಬದಲಾವಣೆಯ ಗಾಳಿ ಬೀಸಿದ್ದು, ರಾಜ್ಯದಲ್ಲಿ ಎಎಪಿ ಸರ್ಕಾರ ರಚಿಸಲಿದೆ ಎಂದು ಜನರು ನಂಬಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಪ್ರಜಾ ಮತ
ಜನತಂತ್ರದ ಹಬ್ಬ 2022

‘ಕಾರ್ಪೊರೇಟ್ ಸಂಸ್ಥೆಗಳಿಗೆ ಬಿಜೆಪಿ ಬೆದರಿಕೆ’

ಸೂರತ್ (ಪಿಟಿಐ): ‘ಇತರೆ ರಾಜಕೀಯ ಪಕ್ಷಗಳಿಗೆ ದೇಣಿಗೆಯನ್ನು ನೀಡುವ ಸಂಬಂಧ ಕಾರ್ಪೊರೇಟ್ ಸಂಸ್ಥೆಗಳಿಗೆ ಭೀತಿ ಇರುವುದರಿಂದ ಚುನಾವಣಾ ಬಾಂಡ್‌ಗಳ ಮೂಲಕ ಶೇ 95ರಷ್ಟು ದೇಣಿಗೆ ಬಿಜೆಪಿಗೇ ಹೋಗುತ್ತಿದೆ’ ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಹೇಳಿದ್ದಾರೆ.

ಕಾಂಗ್ರೆಸ್ ಅಥವಾ ಇತರೆ ಬಿಜೆಪಿಯೇತರ ಪಕ್ಷಗಳಿಗೆ ದೇಣಿಗೆಯನ್ನು ನೀಡಲು ಬಯಸುವ ಕಾರ್ಪೊರೇಟ್ ಸಂಸ್ಥೆಗಳಿಗೂ ಬಿಜೆಪಿ ‘ಬೆದರಿಕೆ’ಯನ್ನು ಒಡ್ಡುತ್ತಿದೆ ಎಂದೂ ಅವರು ಆರೋಪಿಸಿದರು.

ಗುಜರಾತ್ ವಿಧಾನಸಭಾ ಚುನಾವಣಾ ಪ್ರಚಾರಕ್ಕೆ ಆಗಮಿಸಿರುವ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಇವಿಎಂನಲ್ಲಿ ಶೈಕ್ಷಣಿಕ ಅರ್ಹತೆ ನಮೂದು: ‘ಸುಪ್ರೀಂ’ ವಿಚಾರಣೆ ನಾಳೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿದ್ಯುನ್ಮಾನ ಮತಯಂತ್ರ (ಇವಿಎಂ) ಮತ್ತು ಮತ ಪತ್ರಗಳಲ್ಲಿ (ಬ್ಯಾಲೆಟ್) ಪಕ್ಷದ ಚಿಹ್ನೆಗಳ ಬದಲು ಅಭ್ಯರ್ಥಿಗಳ ವಯಸ್ಸು, ಶೈಕ್ಷಣಿಕ ಅರ್ಹತೆ ಮತ್ತು ಭಾವಚಿತ್ರವನ್ನು ಅಳವಡಿಸುವ ಕುರಿತು ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೋಮವಾರ (ಅ.31) ಕೈಗೆತ್ತಿಕೊಳ್ಳಲಿದೆ.

ಇಂತಹ ಕ್ರಮವು ಚುನಾವಣೆಯಲ್ಲಿ ಮತದಾರರು ಬುದ್ಧಿವಂತ ಮತ್ತು ಪ್ರಾಮಾಣಿಕ ಅಭ್ಯರ್ಥಿಯ ಪರ ಮತಚಲಾಯಿಸಲು ಹಾಗೂ ಟಿಕೆಟ್ ಹಂಚುವಲ್ಲಿ ಪಕ್ಷದ ಮುಖ್ಯಸ್ಥರ ಸರ್ವಾಧಿಕಾರವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ ಎಂದೂ ಅರ್ಜಿಯಲ್ಲಿ ಹೇಳಲಾಗಿದೆ.

ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್‌ನಲ್ಲಿ ನಮೂದಿಸಿರುವ ಪ್ರಕಾರ, ಈ ಅರ್ಜಿಯು ಮುಖ್ಯ ನ್ಯಾಯಮೂರ್ತಿಗಳಾದ ಯು.ಯು. ಲಲಿತ್ ಮತ್ತು ನ್ಯಾಯಮೂರ್ತಿಗಳಾದ ಎಸ್. ಆರ್. ಭಟ್, ಬೇಲಾ ಎಂ. ತ್ರಿವೇದಿ ಅವರನ್ನೊಳಗೊಂಡ ನ್ಯಾಯಪೀಠದ ಮುಂದೆ ವಿಚಾರಣೆಗೆ ಬರುವ ಸಾಧ್ಯತೆ ಇದೆ.

ಇವಿಎಂನಲ್ಲಿ ಪಕ್ಷದ ಚಿಹ್ನೆ ಬಳಸುವುದು ಅಸಾಂವಿಧಾನಿಕ. ಇದು ಸಂವಿಧಾನದ ಉಲ್ಲಂಘನೆ ಎಂದು ಘೋಷಿಸಬೇಕು ಎಂದು ವಕೀಲರಾದ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸಲ್ಲಿಸಿರುವ ಅರ್ಜಿಯಲ್ಲಿ ಕೋರಲಾಗಿದೆ.

ಗರ್ಭಧಾರಣೆ ಪರೀಕ್ಷೆಗೆ ವಯೋಮಿತಿ ನಿಗದಿ: ಕೇಂದ್ರಕ್ಕೆ ‘ಸುಪ್ರೀಂ’ ನೋಟಿಸ್

ನವದೆಹಲಿ (ಪಿಟಿಐ): ಗರ್ಭಧಾರಣೆ ಪೂರ್ವ ಮತ್ತು ಪ್ರಸವಪೂರ್ವ ತಪಾಸಣೆಗೆ ಒಳಗಾಗಲು ಮಹಿಳೆಯರಿಗೆ ಗರಿಷ್ಠ 35 ವರ್ಷ ವಯೋಮಿತಿ ನಿಗದಿಪಡಿಸಿದ್ದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಕೇಂದ್ರಕ್ಕೆ ನೋಟಿಸ್ ಜಾರಿ ಮಾಡಿದೆ.

ನ್ಯಾಯಮೂರ್ತಿಗಳಾದ ಎಸ್.ಕೆ.ಕೌಲ್ ಮತ್ತು ಅಭಯ್ ಎಸ್.ಓಕಾ ಅವರಿದ್ದ ನ್ಯಾಯಪೀಠವು ಕೇಂದ್ರ ಸರ್ಕಾರ ಮತ್ತು ಸಂಬಂಧಿಸಿದ ಇತರರಿಗೆ ನೋಟಿಸ್ ಜಾರಿ ಮಾಡಲು ಆದೇಶಿಸಿತು.

ಗರ್ಭಧರಿಸುವ ಕುರಿತು ಮಹಿಳೆಯರ ಗರಿಷ್ಠ ವಯೋಮಿತಿಯನ್ನು ನಿಗದಿಪಡಿಸಿರುವ ಕ್ರಮವನ್ನು ಪ್ರಶ್ನಿಸಿ ವಕೀಲರೊಬ್ಬರು ಅರ್ಜಿ ಸಲ್ಲಿಸಿದ್ದರು.

‘ಗರ್ಭಧಾರಣೆ ಪೂರ್ವ ಮತ್ತು ಪ್ರಸವಪೂರ್ವ ತಪಾಸಣೆ (ಲಿಂಗ ಪತ್ತೆ ನಿಯಂತ್ರಣ) ಕಾಯ್ದೆ 1994ರ ಸೆಕ್ಷನ್ 4(3) (ಐ) ಅನ್ನು ಪ್ರಶ್ನಿಸಿ ಮತ್ತು ಸುಪ್ರೀಂ ಕೋರ್ಟ್‌ನ ಇತ್ತೀಚಿನ ತೀರ್ಪಿನ ಹಿನ್ನೆಲೆಯಲ್ಲಿ ಈ ಅರ್ಜಿ ಸಲ್ಲಿಕೆಯಾಗಿದೆ. ಇದಕ್ಕೆ ಸೀಮಿತವಾಗಿ ನೋಟಿಸ್ ಜಾರಿ ಮಾಡುವುದಾಗಿ’ ಎಂದು ನ್ಯಾಯಪೀಠ ತಿಳಿಸಿತು.

ಸಂಕ್ಷಿಪ್ತ ಸುದ್ದಿ

ಗುಜರಾತ್: ಗೂಳಿಗೆ ಮತ್ತೆ ಡಿಕ್ಕಿ ಹೊಡೆದ ವಂದೇ ಭಾರತ್ ರೈಲು

ಮುಂಬೈ: ಮುಂಬೈ- ಗಾಂಧಿನಗರ ಮಾರ್ಗದಲ್ಲಿ ಚಲಿಸುತ್ತಿದ್ದ ವಂದೇ ಭಾರತ್ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ರೈಲು ಶನಿವಾರ ಬೆಳಿಗ್ಗೆ ಗುಜರಾತ್‌ನ ಅತುಲ್ ರೈಲ್ವೆ ನಿಲ್ದಾಣದ ಬಳಿ ಗೂಳಿಗೆ ಡಿಕ್ಕಿ ಹೊಡೆದಿದ್ದು, ರೈಲಿನ ಮುಂಭಾಗಕ್ಕೆ ಹಾನಿಯಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸೆ. 30ರಿಂದ ವಂದೇ ಭಾರತ್ ರೈಲು ಸೇವೆ ಈ ಮಾರ್ಗದಲ್ಲಿ ಆರಂಭವಾದಾಗಿನಿಂದ ಈ ತಿಂಗಳಲ್ಲಿ ನಡೆದ ಮೂರನೇ ಪ್ರಕರಣ ಇದಾಗಿದೆ. ಬೆಳಿಗ್ಗೆ 8.20ರ ಸುಮಾರಿಗೆ ರೈಲು ಗೂಳಿಗೆ ಡಿಕ್ಕಿ ಹೊಡೆದಿದೆ. ಬಳಿಕ ರೈಲನ್ನು 15 ನಿಮಿಷಗಳ ಕಾಲ ನಿಲ್ಲಿಸಲಾಗಿತ್ತು. ಪ್ರಯಾಣಿಕರೆಲ್ಲರೂ ಸುರಕ್ಷಿತವಾಗಿದ್ದಾರೆ. ರೈಲಿನ ಚಾಲಕನ ಕೋಚ್‌ನ ಮುಂಭಾಗ ಮಾತ್ರ ಹಾನಿಗೀಡಾಗಿದೆ ಎಂದು ಪಶ್ಚಿಮ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಸುಮಿತ್ ಠಾಕೂರ್ ತಿಳಿಸಿದ್ದಾರೆ.

369 ಅಡಿ ಎತ್ತರದ ಶಿವ ಪ್ರತಿಮೆ ಅನಾವರಣ

ಜೈಪುರ (ಪಿಟಿಐ): ರಾಜಸ್ಥಾನದ ರಾಜಸಮಂದ್ ಜಿಲ್ಲೆ ನಾಥದ್ವಾರದಲ್ಲಿ ನಿರ್ಮಿಸಿರುವ 369 ಅಡಿ ಎತ್ತರದ ‘ವಿಶ್ವಾಸ್ ಸ್ವರೂಪಂ’ ಶಿವ ಪ್ರತಿಮೆಯನ್ನು ಶನಿವಾರ ಅನಾವರಣಗೊಳಿಸಲಾಯಿತು. ‘ವಿಶ್ವಾಸ್ ಸ್ವರೂಪಮ್’ ಪ್ರತಿಮೆಯನ್ನು ಮುಖ್ಯಮಂತ್ರಿ ಅಶೋಕ್ ಗೆಹಲೋತ್, ವಿಧಾನಸಭೆ ಸ್ಪೀಕರ್ ಸಿ.ಪಿ. ಜೋಶಿ, ಧಾರ್ಮಿಕ ಮುಖಂಡ ಮೊರಾರಿ ಬಾಪು ಸಮ್ಮುಖದಲ್ಲಿ ಲೋಕಾರ್ಪಣೆಗೊಳಿಸಲಾಯಿತು.

ಮುಂಬಡ್ತಿಗೆ ನಕಲಿ ಪದವಿ: ಹುದ್ದೆಯಿಂದಲೇ ನಾಲ್ವರ ವಜಾ

ಒಂದನೇ ಪುಟದಿಂದ

ಜೆ. ಪುಟ್ಟರಾಜು ಅವರು ತಮಿಳುನಾಡಿನ ಅಳಗಪ್ಪ ವಿಶ್ವವಿದ್ಯಾಲಯದ ಪದವಿಪ್ರಮಾಣ ಪತ್ರ ಸಲ್ಲಿಸಿದ್ದರು.

ಬಡ್ತಿ ನೀಡಿದ ಬಳಿಕ, ಈ ಅಧಿಕಾರಿಗಳು ಸಲ್ಲಿಸಿದ್ದ ಪದವಿ ಪ್ರಮಾಣಪತ್ರದ ನೈಜತೆಯನ್ನು ಪರಿಶೀಲಿಸಲು ಆಯಾ ವಿಶ್ವವಿದ್ಯಾಲಯಕ್ಕೆ ನಿರ್ದೇಶನಾಲಯವು ಪತ್ರ ಬರೆದಿತ್ತು. ಈಸ್ಟರ್ನ್ ಇನ್‌ಸ್ಟಿಟ್ಯೂಟ್ ಫಾರ್ ಇಂಟಗ್ರೇಟೆಡ್ ಲರ್ನಿಂಗ್ ಇನ್ ಮ್ಯಾನೇಜ್‌ಮೆಂಟ್ ಯುನಿವರ್ಸಿಟಿಗೆ ಯುಜಿಸಿ ಅಂಗೀಕಾರ ಇಲ್ಲ. ಅಲ್ಲದೆ, 2014-15ರಿಂದ ಈ ವಿಶ್ವವಿದ್ಯಾಲಯವು ಮುಚ್ಚಿದೆ' ಎಂದು ಸಿಕ್ಕಿಂ ಸರ್ಕಾರ ಮಾಹಿತಿ ನೀಡಿತ್ತು. ಜೆ. ಪುಟ್ಟರಾಜು ಅವರು ಸಲ್ಲಿಸಿದ್ದ ಪದವಿ ಪ್ರಮಾಣಪತ್ರ ನಕಲಿ ಎಂದು ಅಳಗಪ್ಪ ವಿಶ್ವವಿದ್ಯಾಲಯ ಮಾಹಿತಿ ನೀಡಿತ್ತು. ಪದವಿ ಪ್ರಮಾಣಪತ್ರ ನಕಲಿ ಎಂದು ಖಚಿತಗೊಳ್ಳುತ್ತಿದ್ದಂತೆ ಈ ನಾಲ್ವರು ಅಧಿಕಾರಿಗಳಿಗೆ ಹಿಂದಿನ ಹುದ್ದೆಗಳಿಗೆ ಹಿಂಬಡ್ತಿ ನೀಡಿದ್ದ ನಿರ್ದೇಶನಾಲಯ, ಇಲಾಖಾ ತನಿಖೆ ಕೈಗೊಂಡಿತ್ತು.

'ಇಐಐಎಲ್‌ಎಂ ಯುನಿವರ್ಸಿಟಿಯ ಪದವಿ ಪ್ರಮಾಣಪತ್ರ ನಕಲಿ ಆಗಿದ್ದರೆ ಅದರಲ್ಲಿ ನಮ್ಮ ಪಾತ್ರ ಇಲ್ಲ. ಅದಕ್ಕೆ ಬೀದರ್‌ನಲ್ಲಿ ಕಾರ್ಯಾಚರಿಸುತ್ತಿರುವ, ಈ ವಿಶ್ವವಿದ್ಯಾಲಯದ ಅಧ್ಯಯನ ಕೇಂದ್ರವಾದ ಬಾಲಾಜಿ ಇನ್‌ಸ್ಟಿಟ್ಯೂಟ್ ಆಫ್ ಪ್ರೊಫೆಷನಲ್ ಸ್ಟಡೀಸ್ ಆನ್ ಎಂಬಿಎ ಕಾಲೇಜು ಕಾರಣ. ಇಐಐಎಲ್‌ಎಂ ವಿಶ್ವವಿದ್ಯಾಲಯವನ್ನು 2014-15ರಲ್ಲಿ ಮುಚ್ಚಲಾಗಿದೆ. ಹೀಗಾಗಿ, ಬಡ್ತಿ ಪಡೆಯಲು ಉದ್ದೇಶಪೂರ್ವಕವಾಗಿ ನಕಲಿ ಪ್ರಮಾಣಪತ್ರ ಸೃಷ್ಟಿಸಿಲ್ಲ. ಅಲ್ಲದೆ, ವಿಶ್ವವಿದ್ಯಾಲಯ ಮುಚ್ಚಿದ್ದರಿಂದ ಪ್ರಮಾಣಪತ್ರಗಳ ನೈಜತೆ ಪರಿಶೀಲನೆ ಆಗಿಲ್ಲ' ಎಂದು ನಿರ್ದೇಶನಾಲಯ ನೀಡಿದ್ದ ನೋಟಿಸ್‌ಗೆ ರಾಜಕುಮಾರ, ಅಬ್ದುಲ್ ರಬ್ ಮತ್ತು ಬಾಲಾಜಿ ಬಿರಾದಾರ ಉತ್ತರ ನೀಡಿದ್ದರು. ಆದರೆ, ಜೆ. ಪುಟ್ಟರಾಜು ಅವರು, 'ನಕಲಿ ಪದವಿ ಪ್ರಮಾಣಪತ್ರ ವಿಚಾರದಲ್ಲಿ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದ್ದು, ಅದೇ ವೇಳೆ ಇಲಾಖಾ ವಿಚಾರಣೆಯೂ ನಡೆಯುತ್ತಿದೆ. ಏಕಕಾಲದಲ್ಲಿ ಎರಡು ವಿಚಾರಣೆ ನಡೆಸಲು ಕಾನೂನಿನಡಿ ಅವಕಾಶ ಇಲ್ಲ. ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುವುದರಿಂದ ಇಲಾಖಾ ತನಿಖೆ ಕೈಬಿಡಬೇಕು' ಎಂದು ಉತ್ತರಿಸಿದ್ದರು.

'ಈ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿ, ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ಆದರೆ, ಇಲಾಖಾ ವಿಚಾರಣೆಯಲ್ಲಿ ಆರೋಪ ಸಾಬೀತಾದರೆ ದಂಡ ವಿಧಿಸಲು ಅವಕಾಶ ಇದೆ. ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮಗಳ ಅನ್ವಯ ಆರೋಪ ಸಾಬೀತಾಗಿರುವುದರಿಂದ ಉದ್ಯೋಗಕ್ಕೆ ಅನರ್ಹರಾಗಿದ್ದಾರೆ' ಎಂದು ಪರಿಗಣಿಸಿ ನಿರ್ದೇಶನಾಲಯದ ನಿರ್ದೇಶಕ (ಶಿಸ್ತು ಪ್ರಾಧಿಕಾರಿ) ಎನ್. ಮಾಧುರಾಮ್ ಅವರು ಈ ನಾಲ್ವರನ್ನೂ ಕರ್ತವ್ಯದಿಂದ ವಜಾಗೊಳಿಸಿ ಆದೇಶಿಸಿದ್ದಾರೆ.

'ಕಠಿಣ ಶಿಕ್ಷೆ ಅನಿವಾರ್ಯ'

ನಕಲಿ ಪದವಿಪ್ರಮಾಣ ಪತ್ರದ ಸಲ್ಲಿಸಿದ್ದ ನಾಲ್ವರು ಅಧಿಕಾರಿಗಳ ಸಮಜಾಯಿಷಿಯನ್ನು ಒಪ್ಪದ ಇಲಾಖಾ ವಿಚಾರಣಾಧಿಕಾರಿ, 'ಸರ್ಕಾರಿ ನೌಕರನೊಬ್ಬ ನಕಲಿ ಪದವಿ ಪ್ರಮಾಣಪತ್ರ ನೀಡಿ ಉನ್ನತ ಹುದ್ದೆಗೆ ಬಡ್ತಿ ಹೊಂದುವುದು, ಸರ್ಕಾರಿ ನೌಕರನಿಗೆ ಸಲ್ಲದ ಗಂಭೀರ ಸ್ವರೂಪದ ವರ್ತನೆಯಾಗಿದೆ. ಇಂಥ ನೌಕರ ಅದೇ ನಕಲಿ ಪದವಿ ಪ್ರಮಾಣಪತ್ರದ ಆಧಾರದಲ್ಲಿ 'ಬಿ', 'ಎ' ವೃಂದ ಹುದ್ದೆಗೆ ಬಡ್ತಿ ಪಡೆದು, ಕಚೇರಿ ಮುಖ್ಯಸ್ಥನಾದರೆ ತನ್ನ ಕರ್ತವ್ಯ ಹಾಗೂ ಜವಾಬ್ದಾರಿಯನ್ನು ಹೇಗೆ ನಿರ್ವಹಿಸಬಲ್ಲ ಎಂದು ಊಹಿಸಲೂ ಅಸಾಧ್ಯ. ಆದ್ದರಿಂದ ಅವರಿಗೆ ಕಠಿಣ ಶಿಕ್ಷೆ ಅನಿವಾರ್ಯವಾಗಿದೆ' ಎಂದು ವರದಿ ನೀಡಿದ್ದಾರೆ.

ಕನ್ನಡಿಗರ ಸಹನೆ ಕೆಣಕಬೇಡಿ: ಸಿದ್ದರಾಮಯ್ಯ

ಬೆಂಗಳೂರು: ಕೇಂದ್ರ ಸಿಬ್ಬಂದಿ ಆಯ್ಕೆ ಆಯೋಗವು (ಎಸ್‌ಎಸ್‌ಸಿ) ಭದ್ರತಾ ಪಡೆಗಳ ಸಿಬ್ಬಂದಿ ಆಯ್ಕೆಗೆ ನಡೆಸಲಿರುವ ಪರೀಕ್ಷೆಗೆ ಕನ್ನಡವನ್ನು ಕೈಬಿಡುವ ಮೂಲಕ ನಾಡಿನ ಯುವ ಸಮೂಹದ ಸಹನೆಯನ್ನು ಕೆಣಕುತ್ತಿದೆ. ಮತ್ತೆ ಮತ್ತೆ ಸಹನೆಯನ್ನು ಕೆಣಕುವ ಪಿತೂರಿ ಪಾಂಡಿತ್ಯವನ್ನು ಕೇಂದ್ರ ತಕ್ಷಣ ನಿಲ್ಲಿಸಬೇಕು ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಕೋಟಿ ಕಂಠಗಳಲ್ಲಿ ಕನ್ನಡ ಗೀತೆ ಹಾಡಿಸಿದ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಪ್ರತಿಯೊಬ್ಬ ಕನ್ನಡಿಗನಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಕಲ್ಪಿಸಲಾಗುವುದು' ಎಂದು ಭಾಷಣ ಮಾಡಿದ್ದರು. ವಾಸ್ತವವೇ ಬೇರೆಯಾಗಿದೆ. ಕನ್ನಡಿಗರ ಪಾಲಿನ ಉದ್ಯೋಗವನ್ನು ಕಿತ್ತುಕೊಂಡು ಸಾಮಾಜಿಕವಾಗಿ ಅಭದ್ರತೆ ಸೃಷ್ಟಿಸಿ, ಆರ್ಥಿಕ ಸ್ವಾವಲಂಬನೆಯ ಬೇರುಗಳನ್ನು ಕತ್ತರಿಸುವ ಕೆಲಸವನ್ನು ಕೇಂದ್ರ-ರಾಜ್ಯಗಳ ಡಬ್ಬಲ್ ಎಂಜಿನ್ ಸರ್ಕಾರ ಮಾಡುತ್ತಿದೆ ಎಂದು ಕಿಡಿಕಾರಿದ್ದಾರೆ.

ಕೇಂದ್ರ ಸರ್ಕಾರ ತನ್ನ ಅಧಿಕಾರದ ದರ್ಪವನ್ನು ರಾಜ್ಯಗಳ ಪಾಲಿನ ಪರಮಾಧಿಕಾರವನ್ನು ಕಿತ್ತುಕೊಳ್ಳಲು ಬಳಸುತ್ತಿದೆ. ಒಂದು ಕಡೆ ಕೇಂದ್ರದ ಉದ್ಯೋಗಗಳು ಕನ್ನಡಿಗರು ಮತ್ತು ದಕ್ಷಿಣ ಭಾರತದ ರಾಜ್ಯಗಳ ಯುವ ಸಮೂಹದ ಕೈಗೆಟುಕದಂತೆ ಮಾಡುತ್ತಿದೆ. ಬ್ಯಾಂಕ್ ಹುದ್ದೆಗಳ ಪ್ರವೇಶ ಪರೀಕ್ಷೆಯಲ್ಲಿ ಕನ್ನಡದ ಕೊರಳು ಹಿಚುಕುತ್ತಿದ್ದ ಕೇಂದ್ರದ ನೀತಿ ವಿರುದ್ಧ ಕನ್ನಡ ನಾಡು ನಿರಂತರವಾಗಿ ಧ್ವನಿ ಎತ್ತಿ ತನ್ನ ಹಕ್ಕನ್ನು ಕಾಪಾಡಿಕೊಳ್ಳುತ್ತಿದೆ ಎನ್ನುವ ಹೊತ್ತಲ್ಲೇ ಇಂತಹ ಹತ್ತಾರು ದಾಳಿಗಳನ್ನು ನಾನಾ ರೀತಿಗಳಲ್ಲಿ ಕೇಂದ್ರ ಮುಂದುವರೆಸಿದೆ. ಕೇಂದ್ರ ಪಡೆಗಳಿಗೆ ಜನವರಿಯಲ್ಲಿ ನಡೆಯುತ್ತಿರುವ ಪರೀಕ್ಷೆಯನ್ನು ಕೇವಲ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ನಡೆಸುವ ತೀರ್ಮಾನವನ್ನು ಕೇಂದ್ರ ತಕ್ಷಣ ಹಿಂದಕ್ಕೆ ಪಡೆದುಕೊಳ್ಳಬೇಕು. ಕನ್ನಡದಲ್ಲೂ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಎಂ.ಡಿ.ಪಲ್ಲವಿ, ಗಾಯಕಿ
ರಾಗ ಭಾವ-ಪಲ್ಲವಿ
ಸೆಲೆಬ್ರಿಟಿ LIVE
ಬೆಳಿಗ್ಗೆ 11ರಿಂದ

ಪಾಡ್‌ಕಾಸ್ಟ್: **ಪ್ರಜಾವಾಣಿ ವಾರ್ತೆ:** ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8 **ಪ್ರಚಲಿತ:** ಬೆಳಿಗ್ಗೆ 9. **ಸಂಪಾದಕೀಯ:** ಬೆಳಿಗ್ಗೆ 9.30
ಪ್ರಜಾವಾಣಿ ಕನ್ನಡ ಧ್ವನಿ

ನಾಳೆ
ಸಂವಾದ
'ಕಾಂತಾರ', 'ಹೆಡ್‌ಬುಷ್': ವಿವಾದದ ಸುಳಿ
ಭಾಗವಹಿಸುವವರು

ಕೆ.ಫಣಿರಾಜ್
ಸಿನಿಮಾ ವಿಶ್ಲೇಷಕರು, ಉಡುಪಿ

ಸುರೇಶ ಬಿ.
ಚಲನಚಿತ್ರ ನಿರ್ದೇಶಕರು, ಬೆಂಗಳೂರು

ಪಲ್ಲವಿ ಇಡೂರು
ಲೇಖಕಿ, ಬೆಂಗಳೂರು

ಮಧ್ಯಾಹ್ನ 2ರಿಂದ 3ರವರೆಗೆ

'ಕಾನ್‌ಸ್ಟೆಬಲ್ ನೇಮಕಾತಿಗೆ ಪರೀಕ್ಷೆ: ಕನ್ನಡಿಗರ ಕತ್ತು ಸೀಳುವ ಸರ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸಿಬ್ಬಂದಿ ಆಯ್ಕೆ ಆಯೋಗವು (ಎಸ್‌ಎಸ್‌ಸಿ) ಕಾನ್‌ಸ್ಟೆಬಲ್‌ಗಳ ಆಯ್ಕೆಗೆ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಮಾತ್ರ ಪರೀಕ್ಷೆ ಬರೆಯುವ ಅವಕಾಶ ನೀಡುವ ಮೂಲಕ, ಕೇಂದ್ರದ ಬಿಜೆಪಿ ಸರ್ಕಾರ ಕನ್ನಡಿಗರ ಕತ್ತು ಸೀಳುವ, ಅನ್ನ ಕಸಿಯುವ ಕೆಲಸ ಮಾಡುತ್ತಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಟೀಕಿಸಿದ್ದಾರೆ.

'ಕೋಟಿ ಕಂಠ ಗಾಯನ' ಎಂದರೆ ಕೋಟಿಗೂ ಹೆಚ್ಚು ಕನ್ನಡ ಕಂಠಗಳಿಗೆ ಜೀವ ತುಂಬುವುದು, ಅನ್ನದ ದಾರಿ ತೋರಿಸುವುದು, ಬದುಕಿನ ಖಾತರಿ ಕೊಡುವುದಾಗಬೇಕಿತ್ತು. ಅದರ ಬದಲು, ನಾಲಿಗೆ ಮೇಲೆ ಕನ್ನಡ ಎಂದು ಹೇಳಿ, ಮನದಾಳದಲ್ಲಿ ಕನ್ನಡದ ಮೇಲೆ ವಿಷ ಕಕ್ಕುವುದಲ್ಲ. ಅದನ್ನು ಕನ್ನಡಿಗರು ಎಂದಿಗೂ ಸಹಿಸುವುದೂ ಅಲ್ಲ. ನಿನ್ನೆಯಷ್ಟೇ ಕೋಟಿ ಕಂಠ ಗಾಯನ ಕಾರ್ಯಕ್ರಮ ಮಾಡಿದ ರಾಜ್ಯ ಬಿಜೆಪಿ ಸರ್ಕಾರ ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಏನು ಹೇಳುತ್ತದೆ' ಎಂದು ಅವರು ಪ್ರಶ್ನಿಸಿದ್ದಾರೆ.

ಕನ್ನಡದ ಕತ್ತು ಹಿಸುಕುವುದನ್ನೇ ನಿತ್ಯ ಕಾಯಕ ಮಾಡಿಕೊಂಡಿರುವ ಕೇಂದ್ರದ ಬಿಜೆಪಿ ಸರ್ಕಾರ ಆಡಳಿತಕ್ಕೆ ದೇಶದ ಎಲ್ಲಾ ಪ್ರಾದೇಶಿಕ ಭಾಷೆಗಳನ್ನು ಮುಗಿಸಲೇಬೇಕು ಎನ್ನುವ ಹಪಾಹಪಿ ಉತ್ಕಟವಾಗಿದೆ ಎನ್ನುವುದಕ್ಕೆ ಈ ಪರೀಕ್ಷೆಯೇ ಸಾಕ್ಷಿ ಎಂದು ಅವರು ಹೇಳಿದ್ದಾರೆ.

ಕಾನ್‌ಸ್ಟೆಬಲ್ ಆಗಲು ಹಿಂದಿ-ಇಂಗ್ಲಿಷ್ ಬೇಕು ಎಂದಾದರೆ, ಕನ್ನಡವೂ ಸೇರಿ ಇತರೆ ಪ್ರಾದೇಶಿಕ ಭಾಷೆಗಳನ್ನು ಮಾತನಾಡುವ ಅಭ್ಯರ್ಥಿಗಳು ಏನು ಮಾಡಬೇಕು? ಹಿಂದಿಗೆ ಬೆಣ್ಣೆ, ಕನ್ನಡಕ್ಕೆ ಸುಣ್ಣ!! ಇದೆಂಥಾ ನ್ಯಾಯ? ಎಂದು ಅವರು ಕುಟುಕಿದ್ದಾರೆ.

ಎಸ್ಸೆಸ್ಸೆಲ್ಸಿ: ತಾತ್ಕಾಲಿಕ ವೇಳಾಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023ರ ಏಪ್ರಿಲ್‌ನಲ್ಲಿ ನಡೆಯುವ ಎಸ್ಸೆಸ್ಸೆಲ್ಸಿ ಮುಖ್ಯ ಪರೀಕ್ಷೆಯ ತಾತ್ಕಾಲಿಕ ವೇಳಾಪಟ್ಟಿಯನ್ನು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ಶನಿವಾರ ಪ್ರಕಟಿಸಿದೆ.

ಏಪ್ರಿಲ್ 1ರಿಂದ 15ರವರೆಗೆ ಪರೀಕ್ಷೆಗಳು ನಡೆಯಲಿವೆ. ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರು ಈ ವೇಳಾಪಟ್ಟಿಯ ಬಗ್ಗೆ ಆಕ್ಷೇಪಗಳನ್ನು ನವೆಂಬರ್ 28ರ ಒಳಗೆ ಸಲ್ಲಿಸಬೇಕು ಎಂದು ಮಂಡಳಿಯ ನಿರ್ದೇಶಕರು (ಪರೀಕ್ಷೆ) ತಿಳಿಸಿದ್ದಾರೆ.

ಆಕ್ಷೇಪಗಳನ್ನು dpikseeb@gmail.com ಅಥವಾ sadpi.csec.kseeb@gmail.com ಅಥವಾ ನಿರ್ದೇಶಕರು (ಪರೀಕ್ಷೆಗಳು), ಕರ್ನಾಟಕ ಪ್ರೌಢಶಿಕ್ಷಣ ಪರೀಕಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು-560003 ವಿಳಾಸಕ್ಕೆ ಅಂಚೆ ಮೂಲಕ ಸಲ್ಲಿಸಬಹುದಾಗಿದೆ ಎಂದು ತಿಳಿಸಿದೆ.

ವೇಳಾಪಟ್ಟಿ ವಿವರ: ಏ.1;ಪ್ರಥಮ ಭಾಷೆ, ಏ.4; ಗಣಿತ, ಸಮಾಜಶಾಸ್ತ್ರ, ಏ.6;ದ್ವಿತೀಯ ಭಾಷೆ, ಏ.8; ಅರ್ಥಶಾಸ್ತ್ರ, ಏ.10;ವಿಜ್ಞಾನ, ರಾಜ್ಯಶಾಸ್ತ್ರ, ಹಿಂದೂಸ್ತಾನಿ ಸಂಗೀತ, ಕರ್ನಾಟಕ ಸಂಗೀತ, ಏ.12;ತೃತೀಯ ಭಾಷೆ, ಏ.15;ಸಮಾಜ ವಿಜ್ಞಾನ

ಏಕರೂಪ ನಾಗರಿಕ ಸಂಹಿತೆ ಜಾರಿಗೆ ಸಮಿತಿ ರಚನೆ

ಒಂದನೇ ಪುಟದಿಂದ

ಪ್ರಸ್ತಾವಿತ ಯುಸಿಸಿಯು ಸಂವಿಧಾನದ ಅಡಿಯಲ್ಲಿ ಖಾತರಿಪಡಿಸಿರುವ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುವುದಿಲ್ಲ ಎಂದು ಸಚಿವ ರೂಪಾಲಾ ಸಮರ್ಥಿಸಿಕೊಂಡರು.

'ಹಿಂದೂ ವಿವಾಹ ಕಾಯಿದೆ ಮತ್ತು ಮುಸ್ಲಿಂ ವೈಯಕ್ತಿಕ ಕಾನೂನುಗಳು ಸಂವಿಧಾನದ ಭಾಗವಾಗಿರದ ಕಾರಣ ಅವು ಯುಸಿಸಿಯ ವ್ಯಾಪ್ತಿಗೆ ಒಳಪಡುತ್ತವೆ. ಜನರ ಮೂಲಭೂತ ಹಕ್ಕುಗಳನ್ನು ಅತಿಕ್ರಮಿಸುವುದು ನಮ್ಮ ಉದ್ದೇಶ ಅಲ್ಲ' ಎಂದೂ ಅವರು ವಿವರಿಸಿದರು.

ಯುಸಿಸಿ ಜಾರಿಗೊಳಿಸುವುದಾಗಿ ಹೇಳುವ ಮೂಲಕ ಹಿಂದೂಗಳನ್ನು ಧ್ರುವೀಕರಿಸಲು ಬಿಜೆಪಿಯು ಪ್ರಯತ್ನಿಸುತ್ತಿದೆ ಎಂಬ ವಿರೋಧ ಪಕ್ಷಗಳ ಆರೋಪಗಳ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಈ ನಿರ್ಧಾರಕ್ಕೂ ಮುಂಬರುವ ಚುನಾವಣೆಗೂ ಯಾವುದೇ ಸಂಬಂಧವಿಲ್ಲ' ಎಂದು ಸ್ಪಷ್ಟಪಡಿಸಿದರು.

ಯುಸಿಸಿಗೆ ಸಂಬಂಧಿಸಿದ ವಿಷಯಗಳನ್ನು ಸಮಿತಿಯು ಮೌಲ್ಯಮಾಪನ ಮಾಡಿ ವರದಿ ಸಲ್ಲಿಸಲಿದೆ. ಬಳಿಕ ಅದನ್ನು ಜಾರಿಗೊಳಿಸುವ ಬಗ್ಗೆ ಸರ್ಕಾರವು ಅಂತಿಮ ನಿರ್ಧಾರ ಕೈಗೊಳ್ಳಲಿದೆ ಎಂದೂ ಅವರು ಹೇಳಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯ BENGALURU CITY UNIVERSITY

ಆಗು ನೀ ಅನಿಕೇತನ
BE BOUNDLESS

ಸೆಂಟ್ರಲ್ ಕಾಲೇಜು ಆವರಣ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
Ph.No. 080- 22961016/22131385, E-mail- registrarbcu@gmail.com

ಸಂಖ್ಯೆ: ಬೆಂ.ನ.ವಿ/ಶೈಕ್ಷಣಿಕ/ಸ್ನಾ.ಕೋ.ಪ್ರವೇಶ//2022–23 ದಿನಾಂಕ: 29.10.2022

ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಅಧಿಸೂಚನೆ

2022–23ನೇ ಶೈಕ್ಷಣಿಕ ಸಾಲಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ, ಸೆಂಟ್ರಲ್ ಕಾಲೇಜು ಆವರಣದ ಸ್ನಾತಕೋತ್ತರ ವಿಭಾಗಗಳು ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಈ ಕೆಳಕಂಡ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. (Through the UUCMS Online portal by the User link https://uucms.karnataka.gov.in/Login/Index)

I. ವಿಶ್ವವಿದ್ಯಾನಿಲಯದ ವಿಭಾಗಗಳಲ್ಲಿ / ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಸ್ನಾತಕೋತ್ತರ ವಿಷಯಗಳು:

ಅ. ಕಲಾ ನಿಕಾಯ:

1. ಎಂ.ಎ: ಕನ್ನಡ, ಇಂಗ್ಲೀಷ್, ಫ್ರೆಂಚ್, ಜರ್ಮನ್, ಸ್ಪಾನಿಷ್, ಜಪಾನೀಸ್, ಇತಿಹಾಸ, ಅರ್ಥಶಾಸ್ತ್ರ, ಸಮಾಜ ಶಾಸ್ತ್ರ, ರಾಜ್ಯಶಾಸ್ತ್ರ ಸಮಾಜಕಾರ್ಯ ಸಮೂಹ, ಸಂವಹನ ಮತ್ತು ಪತ್ರಿಕೋದ್ಯಮ, ನಗರ ಅಧ್ಯಯನ ಮತ್ತು ಯೋಜನೆ.
2. ಎಂ.ವಿ.ಎಂ: 1. ಅನಿಮೇಷನ್ ಡಿಸೈನ್, 2. ಇಂಟಿರಿಯರ್ ಡಿಸೈನ್, 3. ಅಪ್ಲೈಡ್ ಆರ್ಟ್ಸ್, 4. ಆರ್ಟ್ಸ್ ಹಿಸ್ಟ್ರೀ, 5. ಪೈನ್‌ಟಿಂಗ್, 6. ಪ್ರಿಂಟ್ ಮೆಂಕಿಗ್, 7. ಸ್ಕಲ್ಪಚರ್.

ಆ. ವಿಜ್ಞಾನ ನಿಕಾಯ:

1. ಎಂ.ಎಸ್ಸಿ.: ಪ್ರಾಣಿವಿಜ್ಞಾನ, ಜೀವರಸಾಯನಶಾಸ್ತ್ರ, ಜೈವಿಕ ತಂತ್ರಜ್ಞಾನ, ರಸಾಯನಶಾಸ್ತ್ರ, ಗಣಿತ, ಸೂಕ್ಷ್ಮಜೀವ ಶಾಸ್ತ್ರ, ಭೌತಶಾಸ್ತ್ರ, ಸಸ್ಯವಿಜ್ಞಾನ, ಮನಃಶಾಸ್ತ್ರ ಸಮಾಲೋಚನೆ, ಉಡುಪು ತಂತ್ರಜ್ಞಾನ ಮತ್ತು ನಿರ್ವಹಣೆ, ಪರಿಸರ ವಿಜ್ಞಾನ, ಗಣಕ ವಿಜ್ಞಾನ. MASLP (Master of Audiology Languages Pathology)

ಇ. ವಾಣಿಜ್ಯ ನಿಕಾಯ:

1. ಎಂ.ಕಾಂ, (ಜೆನರಲ್)
2. ಎಂ.ಕಾಂ – ಫೈನಾನ್ಸ್ ಅಂಡ್ ಅಕೌಂಟಿಗ್
3. ಎಂ.ಕಾಂ – ಇಂಟರ್‌ನ್ಯಾಷನಲ್ ಬಿಸಿನೆಸ್
4. ಎಂ.ಕಾಂ – ಬಿಸಿನೆಸ್ ಅನಾಲಿಟಿಕ್ಸ್
5. ಎಂ.ಕಾಂ – ಫೈನಾನ್ಸಿಯಲ್ ಮಾರ್ಕೆಟ್ಸ್
6. ಎಂ.ಟಿ.ಟಿ.ಎಂ – ಮಾಸ್ಟರ್ ಆಫ್ ಟೂರಿಸಂ ಅಂಡ್ ಟ್ರ್ಯಾವೆಲ್ ಮ್ಯಾನೇಜ್‌ಮೆಂಟ್
7. ಎಂ.ಎಂ.ಎಸ್ – ಮಾಸ್ಟರ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್
8. ಪೋಸ್ಟ್ ಗ್ರಾಜುಯೇಟ್ ಡಿಪ್ಲೋಮಾ ಕೋರ್ಸ್:
   - ಪಿಜಿಡಿಬಿಎ – ಪೋಸ್ಟ್ ಗ್ರಾಜುಯೇಟ್ ಡಿಪ್ಲೋಮಾ ಇನ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್
   - ಪಿಜಿಡಿಹೆಚ್‌ಆರ್‌ಎಂ – ಪೋಸ್ಟ್ ಗ್ರಾಜುಯೇಟ್ ಡಿಪ್ಲೋಮಾ ಇನ್ ಹ್ಯುಮನ್ ರಿಸೋರ್ಸ್ ಮ್ಯಾನೇಜ್‌ಮೆಂಟ್
   - ಪಿಜಿಡಿಎಂಎಂ – ಪೋಸ್ಟ್ ಗ್ರಾಜುಯೇಟ್ ಡಿಪ್ಲೋಮಾ ಇನ್ ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್
   - ಪಿಜಿಡಿಎಫ್‌ಎಂ – ಪೋಸ್ಟ್ ಗ್ರಾಜುಯೇಟ್ ಡಿಪ್ಲೋಮಾ ಇನ್ ಫೈನಾನ್ಸಿಯಲ್ ಮ್ಯಾನೇಜ್‌ಮೆಂಟ್
   - ಪಿಜಿಡಿಬಿಎವೈ – ಪೋಸ್ಟ್ ಗ್ರಾಜುಯೇಟ್ ಡಿಪ್ಲೋಮಾ ಇನ್ ಬಿಸಿನೆಸ್ ಅನಾಲಿಟಿಕ್ಸ್*
   - ಪಿಜಿಡಿಎಫ್‌ಬಿಇ – ಪೋಸ್ಟ್ ಗ್ರಾಜುಯೇಟ್ ಡಿಪ್ಲೋಮಾ ಇನ್ ಫ್ಯಾಮಿಲಿ ಬಿಸಿನೆಸ್ ಅಂಡ್ ಎಂಟರ್ ಪ್ರೆನ್ಯುಯರ್‌ಷಿಪ್*

*{ಸ್ವಯಂ ಹಣಕಾಸು–ಸಂಜೆ ಉಪನ್ಯಾಸ ಸಮಯ 6.00 ರಿಂದ 8.30 ವರೆಗೆ}

ಈ. ಶಿಕ್ಷಣ ನಿಕಾಯ: ಎಂ.ಎಡ್(ಶಿಕ್ಷಣ)

II. ಅರ್ಜಿ ಸಲ್ಲಿಸಲು ಮಾರ್ಗಸೂಚಿಗಳು:

1. ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಲ್ಲಿ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ವಿಶ್ವವಿದ್ಯಾನಿಲಯದ ಪಾಲಿನ ಸ್ಥಾನಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.
2. ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಅರ್ಹ ಕೋರ್ಸ್‌ಗಳಿಗೆ ಅರ್ಜಿಯನ್ನು ಸಲ್ಲಿಸಬಹುದು.
3. ಪದವಿಯ ಅಂತಿಮ ಪರೀಕ್ಷೆಗಳ ಫಲಿತಾಂಶ ನಿರೀಕ್ಷಿಸುತ್ತಿರುವ ಅಭ್ಯರ್ಥಿಗಳೂ ಸಹ ಅರ್ಜಿಯನ್ನು ಸಲ್ಲಿಸಬಹುದು.
4. ಅರ್ಜಿ ಶುಲ್ಕ ರೂ.400/– ಪ್ರತಿ ಅರ್ಜಿಗೆ (ಪ.ಜಾ/ಪ.ಪಂ, ಪ್ರವರ್ಗ–1 ಮತ್ತು ತೃತೀಯಲಿಂಗ ಅಭ್ಯರ್ಥಿಗಳಿಗೆ ರೂ. 200/– ಕರ್ನಾಟಕ ಅಭ್ಯರ್ಥಿಗಳಿಗೆ ಮಾತ್ರ) ಅಭ್ಯರ್ಥಿಗಳು ಆನ್‌ಲೈನ್ ಮೂಲಕವೇ ಅರ್ಜಿ ಶುಲ್ಕವನ್ನು ಪಾವತಿಸಬೇಕು.
5. ಅರ್ಹತೆ, ಸೀಟ್ ಮಾಟ್ರಿಕ್ಸ್ ಮತ್ತು ಕೋರ್ಸುಗಳ ಶುಲ್ಕದ ಮಾಹಿತಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜಾಲತಾಣ: http://bcu.ac.in ನ್ನು ಸಂಪರ್ಕಿಸಲು ಕೋರಿದೆ.
6. ಅರ್ಜಿಯನ್ನು ಆನ್‌ಲೈನ್ ಮುಖಾಂತರವೇ ಸಲ್ಲಿಸಬೇಕು (ಜಾಲತಾಣ: UUCMS Portal) https://uucms.karnataka.gov.in/Login/Index.
7. ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಭರ್ತಿ ಮಾಡಿದ ಒಂದು ಮುದ್ರಿತ ಪ್ರತಿಯನ್ನು ಅಗತ್ಯವಿರುವ ಪೂರಕ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ನೋಂದಾಯಿತ ಅಂಚೆಯ ಮುಖಾಂತರ ನಿಗದಿಪಡಿಸಿರುವ ಕೊನೆಯ ದಿನಾಂಕದಲೊಗೆ "ಅಧ್ಯಕ್ಷರು, ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಸೆಂಟ್ರಲ್ ಕಾಲೇಜು ಆವರಣ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560 001" ಈ ವಿಳಾಸಕ್ಕೆ ಕಳುಹಿಸತಕ್ಕದ್ದು.
8. ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಸಲ್ಲಿಸಿದ ಅಥವಾ ಅಪೂರ್ಣವಾದ ಅರ್ಜಿಗಳನ್ನು ಯಾವುದೇ ಮಾಹಿತಿ ನೀಡದೇ ತಿರಸ್ಕರಿಸಲಾಗುವುದು.
9. ಆಸಕ್ತ ಅರ್ಹ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21.11.2022
10. UUCMS ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.
11. ಹೆಚ್ಚಿನ ಮಾಹಿತಿಗಾಗಿ ಕುಲಸಚಿವರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಇವರನ್ನು ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 080–22961016/22131385 ಮಿಂಚಂಚೆ: registrarbcu@gmail.com

ಸಹಿ/–
ಕುಲಸಚಿವರು

ವಾಸಾಸಂಇ/ಬೆಂ.ನಗರ/2844/ಆಕಾರ್/2022–23

ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007.
ದೂರವಾಣಿ ಸಂಖ್ಯೆ: 08192–208029, ಫ್ಯಾಕ್ಸ್: 08192–208008

ಸಂಖ್ಯೆ:ದಾವಿ:ಶೈಕ್ಷಣಿಕ/152/2022–23/2793 ದಿನಾಂಕ: 29.10.2022

ಪ್ರವೇಶ ಪ್ರಕಟಣೆ

ವಿಷಯ: ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಮತ್ತು ಡಿಪ್ಲೋಮಾ ಕೋರ್ಸುಗಳಿಗೆ 2022–23ನೇ ಶೈಕ್ಷಣಿಕ ಸಾಲಿಗೆ 'ಆಫ್‌ಲೈನ್'ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ: ವಿದ್ಯಾರ್ಥಿಯ ಮನವಿ ದಿನಾಂಕ:27.10.2022.

ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ ಶಿವಗಂಗೋತ್ರಿ, ದಾವಣಗೆರೆ, ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗ, ಘಟಕ ಕಾಲೇಜು, ಸ್ವಾಯತ್ತ ಕಾಲೇಜುಗಳು ಮತ್ತು ಸಂಲಗ್ನಗೊಂಡ ಕಾಲೇಜುಗಳಲ್ಲಿನ ವಿವಿಧ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಮತ್ತು ಡಿಪ್ಲೋಮಾ ಕೋರ್ಸುಗಳಿಗೆ **2022–23ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗಳಿಗೆ "ಆಫ್‌ಲೈನ್"** ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

i. ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ, ಶಿವಗಂಗೋತ್ರಿ, ದಾವಣಗೆರೆ – ಇಲ್ಲಿರುವ ಸ್ನಾತಕೋತ್ತರ ಕೋರ್ಸುಗಳ ವಿವರ:

ಕ್ರ.ಸಂ.	ನಿಕಾಯದ ಹೆಸರು	ವ್ಯಾಸಂಗ ವಿಷಯಗಳು
1	ಕಲಾ	ಎಂ.ಎ: ಕನ್ನಡ, ಇಂಗ್ಲೀಷ್, ಹಿಂದಿ ಮತ್ತು ಉರ್ದು ಎಂ.ಎ: ಅಪರಾಧಶಾಸ್ತ್ರ ಮತ್ತು ನ್ಯಾಯ ವಿಜ್ಞಾನ ವಿಭಾಗ, ಅರ್ಥಶಾಸ್ತ್ರ, ಇತಿಹಾಸ ಮತ್ತು ಪ್ರಾಕ್ತನಾಶಾಸ್ತ್ರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ರಾಜ್ಯಶಾಸ್ತ್ರ, ಸಮಾಜ ಕಾರ್ಯ (ಎಂ.ಎಸ್.ಡಬ್ಲ್ಯೂ), ಸಮಾಜಶಾಸ್ತ್ರ. ಎಂ.ವಿ.ಎ: ಮಾಸ್ಟರ್ ಆಫ್ ವಿಜುವಲ್ ಆರ್ಟ್ಸ್, ಎಂ.ವಿ.ಎ.(ಇನ್ ಅಪ್ಲೈಡ್ ಆರ್ಟ್ & ಪ್ಯೆಂಟಿಂಗ್)
2	ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ ಶಿಕ್ಷಣ	ಎಂ.ಕಾಂ.
		ಎಂ.ಬಿ.ಎ.(ಪ್ರವೇಶಾತಿಯು ಪಿ.ಜಿ.ಸಿ.ಇ.ಟಿ/ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆ ಮೂಲಕ)
3		ಎಂ.ಇಡಿ., ಎಂ.ಪಿ.ಇಡಿ., ಬಿ.ಪಿ.ಇಡಿ.
4	ವಿಜ್ಞಾನ ಮತ್ತು ತಂತ್ರಜ್ಞಾನ	ಎಂ.ಎಸ್ಸಿ: ಜೀವರಸಾಯನಶಾಸ್ತ್ರ, ಪ್ಯಾಷನ್ ಟೆಕ್ನಾಲಜಿ, ಜೈವಿಕ ತಂತ್ರಜ್ಞಾನ, ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ಗಣಕಯಂತ್ರ ವಿಜ್ಞಾನ, ಪರಿಸರ ವಿಜ್ಞಾನ, ಆಹಾರ ತಂತ್ರಜ್ಞಾನ, ಗಣಿತಶಾಸ್ತ್ರ, ಸೂಕ್ಷ್ಮಾಣುಜೀವಶಾಸ್ತ್ರ, ಭೌತಶಾಸ್ತ್ರ, ಯೋಗ ವಿಜ್ಞಾನ, ಪ್ರಾಣಿಶಾಸ್ತ್ರ.
5	ಎಂ.ವೋಕ್/ಪಿ.ಜಿ. ಡಿಪ್ಲೋಮಾ/ಬಿ.ವೋಕ್/ ಡಿಪ್ಲೋಮಾ ಸರ್ಟಿಫಿಕೆಟ್ ಕೋರ್ಸ್‌ಗ	1.ಎಂ.ವೋಕ್ ಇನ್ ಸೈಬರ್ ಸೆಕ್ಯೂರಿಟಿ (ಗಣಕ ವಿಜ್ಞಾನ ಅಧ್ಯಯನ ವಿಭಾಗ) 2. ಪಿ.ಜಿ. ಡಿಪ್ಲೋಮಾ ಇನ್ ಸೈಬರ್ ಸೆಕ್ಯೂರಿಟಿ (ಅಪರಾಧಶಾಸ್ತ್ರ ಮತ್ತು ನ್ಯಾಯ ವಿಜ್ಞಾನ ಅಧ್ಯಯನ ವಿಭಾಗ) 3. ಪಿ.ಜಿ. ಡಿಪ್ಲೋಮಾ ಇನ್ ಫೈನಾನ್ಸಿಯಲ್ ಸರ್ವಿಸ್ (ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ) 4. ಪಿ.ಜಿ. ಡಿಪ್ಲೋಮ ಇನ್ ಡೇಟಾ ಎನಾಲಿಸ್ (ಅರ್ಥಶಾಸ್ತ್ರ ಅಧ್ಯಯನ ವಿಭಾಗ) 5. ಪಿ.ಜಿ. ಡಿಪ್ಲೋಮಾ ಇನ್ ಕ್ಲಿನಿಕಲ್ ಡಯಟಿಕ್ಸ್ & ಅಪ್ಲೈಡ್ ನೂಟ್ರಿಷನ್ (ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ) 6. ಪಿ.ಜಿ. ಡಿಪ್ಲೋಮಾ ಇನ್ ಡಿಜಿಟಲ್ ಮೀಡಿಯಾ (ಪತ್ರಿಕೋದ್ಯಮ ಮತ್ತು ಸಮೂಹ ಮಾಧ್ಯಮ ಅಧ್ಯಯನ ವಿಭಾಗ) 7. ಪಿ.ಜಿ. ಡಿಪ್ಲೋಮಾ ಇನ್ ಫುಡ್ ಪ್ರೊಸೆಸಿಂಗ್, ಸೇಫ್ಟಿ ಅಂಡ್ ಕ್ವಾಲಿಟಿ ಮ್ಯಾನೇಜ್‌ಮೆಂಟ್ (ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗ) 8. ಬಿ.ವೋಕ್ ಇನ್ ರಿಟೇಲ್ ಮ್ಯಾನೇಜ್‌ಮೆಂಟ್ ಅಂಡ್ ಇನ್‌ಫಾಮೇಷನ್ ಟೆಕಾಲ್ನಜಿ (ಆಡಳಿತ ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗ) 9. ಡಿಪ್ಲೋಮಾ ಇನ್ ಡಿಜಿಟಲ್ ಆರ್ಟ್ (ದೃಶ್ಯಕಲಾ ಕಾಲೇಜು, ದಾವಣಗೆರೆ) 10. ಡಿಪ್ಲೋಮ ಇನ್ ಯೋಗ ವಿಜ್ಞಾನ (ಯೋಗ ವಿಜ್ಞಾನ ಅಧ್ಯಯನ ವಿಭಾಗ) 11. ಯೋಗ ವಿಜ್ಞಾನದ ಮೂರು ತಿಂಗಳ ಸರ್ಟಿಫಿಕೆಟ್ ಕೋರ್ಸ್ (ಯೋಗ ವಿಜ್ಞಾನ ಅಧ್ಯಯನ ವಿಭಾಗ)

ii. ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಜ್ಞಾನ ಗಂಗೋತ್ರಿ, ಚಿತ್ರದುರ್ಗ–ಇಲ್ಲಿರುವ ಸ್ನಾತಕೋತ್ತರ ವಿಷಯಗಳು:

ಕ್ರ.ಸಂ.	ನಿಕಾಯದ ಹೆಸರು	ವ್ಯಾಸಂಗ ವಿಷಯಗಳು
1	ಕಲಾ	ಎಂ.ಎ: ಕನ್ನಡ, ಇಂಗ್ಲೀಷ್, ಅರ್ಥಶಾಸ್ತ್ರ, ಸಮಾಜ ಕಾರ್ಯ (ಎಂ.ಎಸ್.ಡಬ್ಲ್ಯೂ)
2	ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ	ಎಂ.ಕಾಂ.
3	ವಿಜ್ಞಾನ ಮತ್ತು ತಂತ್ರಜ್ಞಾನ	ಎಂ.ಎಸ್ಸಿ: ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ಗಣಕಯಂತ್ರ ವಿಜ್ಞಾನ, ಗಣಿತಶಾಸ್ತ್ರ, ಭೌತಶಾಸ್ತ್ರ, ಪ್ರಾಣಿಶಾಸ್ತ್ರ.

iii. ಸ್ವಾಯತ್ತ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ನಡೆಸುತ್ತಿರುವ ಸ್ನಾತಕೋತ್ತರ ಕೋರ್ಸ್‌ಗಳ ವಿವರ:

ಕ್ರ.ಸಂ.	ಕಾಲೇಜಿನ ಹೆಸರು	ವ್ಯಾಸಂಗ ವಿಷಯಗಳು
	ದಾವಣಗೆರೆ ಜಿಲ್ಲೆ	
1	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.	ಎಂ.ಎ: ಕನ್ನಡ, ಇಂಗ್ಲೀಷ್. ಎಂ.ಕಾಂ. ಎಂ.ಬಿ.ಎ. (ಪಿ.ಜಿ.ಸಿಇಟಿ/ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆ ಮೂಲಕ ಪ್ರವೇಶ)
2	ಶ್ರೀ ಶ್ರೀ ಶಿವಲಿಂಗೇಶ್ವರಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಗಿರಿ.	ಎಂ.ಎ: ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ. ಎಂ.ಕಾಂ.
3	ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.	ಎಂ.ಕಾಂ.
4	ಎ.ಆರ್.ಜಿ. ಪ್ರಥಮ ದರ್ಜೆ ಕಾಲೇಜು, ದಾವಣಗೆರೆ	ಎಂ.ಕಾಂ.
5	ಎಸ್.ಬಿ.ಸಿ. ಮಹಿಳಾ ಪ್ರಥಮ ದರ್ಜೆ ಕಾಲೇಜು, ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರ, ದಾವಣಗೆರೆ.	ಎಂ.ಎ: ಇಂಗ್ಲೀಷ್; ಅರ್ಥಶಾಸ್ತ್ರ ಎಂ.ಕಾಂ.
6	ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್, ದಾವಣಗೆರೆ	ಎಂ.ಬಿ.ಎ. (ಪಿ.ಜಿ.ಸಿ.ಟಿ/ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆ ಮೂಲಕ ಪ್ರವೇಶ)
7	ಭದ್ರಾ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಇನ್‌ಫಾರ್ಮೇಷನ್ ಸ್ಟಡೀಸ್, ದಾವಣಗೆರೆ.	ಎಂ.ಕಾಂ.
8	ಎಸ್.ಜೆ.ವಿ.ಪಿ. ಕಾಲೇಜು, ಹರಿಹರ.	ಎಂ.ಎ. ಕನ್ನಡ. ಎಂ.ಕಾಂ.
9	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊನ್ನಾಳಿ.	ಎಂ.ಎ.: ಕನ್ನಡ, ಇತಿಹಾಸ ಮತ್ತು ಪ್ರಾಕಾನಶಾಸ್ತ್ರ ಎಂ.ಕಾಂ. ಎಂ.ಎಸ್ಸಿ. ಗಣಿತಶಾಸ್ತ್ರ.
	ಚಿತ್ರದುರ್ಗ ಜಿಲ್ಲೆ	
10	ಸರ್ಕಾರಿ ಕಲಾ ಕಾಲೇಜು, (ಸ್ವಾಯತ್ತ) ಚಿತ್ರದುರ್ಗ.	ಎಂ.ಎ: ಕನ್ನಡ, ಇಂಗ್ಲೀಷ್. ಇತಿಹಾಸ ಮತ್ತು ಪ್ರಾಕ್ತನಾಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ. ಎಂ.ಕಾಂ.
11	ಸರ್ಕಾರಿ ವಿಜ್ಞಾನ ಕಾಲೇಜು, ಚಿತ್ರದುರ್ಗ.	ಎಂ.ಎಸ್ಸಿ. ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಭೌತಶಾಸ್ತ್ರ;
12	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸದುರ್ಗ.	ಎಂ.ಎ: ಕನ್ನಡ; ಇತಿಹಾಸ ಮತ್ತು ಪ್ರಾಕ್ತನಾಶಾಸ್ತ್ರ.
13	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ.	ಎಂ.ಎ: ಕನ್ನಡ, ಸಮಾಜಶಾಸ್ತ್ರ ಎಂ.ಕಾಂ.
14	ಶ್ರೀಮತಿ ಯಶೋಧರಮ್ಮ ಬೋರಪ್ಪ ಮಹಿಳಾ ಪ್ರಥಮ ದರ್ಜೆ ಕಾಲೇಜು, ಚಿತ್ರದುರ್ಗ	ಎಂ.ಎ: ಇಂಗ್ಲೀಷ್

ಕ್ರ.ಸಂ.	ಶುಲ್ಕ ವಿವರಗಳು	ಸಾಮಾನ್ಯ / ಇತರೇ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ	ಪ.ಜಾ/ಪ.ಪಂ/ಪ್ರವರ್ಗ–1ರ ವಿದ್ಯಾರ್ಥಿಗಳಿಗೆ	ಪಾವತಿಸುವ ವಿಧಾನ
1	ಅರ್ಜಿಗಳ ಪರಿಶೀಲನೆ ಮತ್ತು ಪ್ರವೇಶ ಪರೀಕ್ಷಾ ಶುಲ್ಕ	ರೂ.1000/–	ರೂ.500/–	ಶುಲ್ಕ ಪಾವತಿಯನ್ನು ಚಲನ್ ಮೂಲಕ (ಆಫ್‌ಲೈನ್) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಶ್ವವಿದ್ಯಾನಿಲಯ ಖಾತೆ ಸಂಖ್ಯೆ:64050447113 (IFSC Code:SBIN0040869)ಗೆ ಸಂದಾಯವಾಗುವಂತೆ ಪಾವತಿಸಬಹುದು ಅಥವಾ ಹಣಕಾಸು ಅಧಿಕಾರಿಗಳು, ಶಿವಗಂಗೋತ್ರಿ– ಇವರ ಹೆಸರಿನಲ್ಲಿ ಡಿಡಿ ಮೂಲಕ ಪಾವತಿಸುವುದು.
2	ಹೆಚ್ಚುವರಿ ಕೋರ್ಸುಗಳಿಗೆ ಪ್ರವೇಶ ಪರೀಕ್ಷಾ ಶುಲ್ಕ	ರೂ.1000/–	ರೂ.500/–	

ಅರ್ಹ ಅಭ್ಯರ್ಥಿಗಳು ವಿಶ್ವವಿದ್ಯಾನಿಲಯದ ವೆಬ್‌ಸೈಟ್:www.davangereuniversity.ac.in ಮೂಲಕ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ, ಅಗತ್ಯ ದಾಖಲಾತಿಗಳೊಂದಿಗೆ **ದಿನಾಂಕ:31.10.2022 ರಿಂದ ದಿನಾಂಕ:18.11.2022ರೊಳಗಾಗಿ** ಸಂಬಂಧಪಟ್ಟ ಸ್ನಾತಕೋತ್ತರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇಲ್ಲಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು.

ಮುಖ್ಯ ಸೂಚನೆ: ಸ್ನಾತಕೋತ್ತರ ಪದವಿ, ಎಂ.ವೋಕ್, ಪಿ.ಜಿ. ಡಿಪ್ಲೋಮಾ, ಬಿ.ವೋಕ್, ಡಿಪ್ಲೋಮಾ ಮತ್ತು ಸರ್ಟಿಫಿಕೆಟ್ ಕೋರ್ಸುಗಳ ಪ್ರವೇಶಾತಿ ಬಯಸುವ ಅಭ್ಯರ್ಥಿಗಳು ಪ್ರವೇಶಾತಿಗೆ ಸಂಬಂಧಪಟ್ಟ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ (www.davangereuniversity.ac.in)ನಲ್ಲಿ ಪಡೆಯಬಹುದಾಗಿದೆ. ದೈನಂದಿನ ಅಥವಾ ಹೆಚ್ಚುವರಿ ಮಾಹಿತಿಗಾಗಿ ಅಭ್ಯರ್ಥಿಗಳು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನ್ನು ಆಗಾಗ್ಗೆ ನಿಯಮಿತವಾಗಿ ಸಂಪರ್ಕಿಸಬಹುದಾಗಿದೆ. ಈ ಸಂಬಂಧ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಯಾವುದೇ ಮಾಹಿತಿಯನ್ನು ರವಾನಿಸಲಾಗುವುದಿಲ್ಲ.

IV. ಅರ್ಜಿಗಳೊಂದಿಗೆ ಸಲ್ಲಿಸಬೇಕಾದ ದಾಖಲೆಗಳ ಪ್ರತಿಗಳ ವಿವರಗಳು:

1. ಎಸ್.ಎಸ್.ಎಲ್.ಸಿ/10ನೇ ತರಗತಿಯ ಅಂಕಪಟ್ಟಿ ಪ್ರತಿ. 2. ಪದವಿ ಅಂಕಪಟ್ಟಿಗಳು (ಎಲ್ಲಾ ವರ್ಷಗಳ ಮತ್ತು ಎಲ್ಲಾ ಸೆಮಿಸ್ಟರ್‌ಗಳ ಪ್ರತಿಗಳು) 3. ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ಪ್ರತಿಗಳು. 4. ಆಧಾರ್ ಕಾರ್ಡ್ ಪ್ರತಿ. 5. ಮೀಸಲಾತಿ/ವಿಕಲಾಂಗ/ಕ್ರೀಡಾ/ರಾ.ಸೆ.ಯೋ./ಎನ್.ಸಿ.ಸಿ./ರೇಂಜರ್ಸ್ ಮತ್ತು ರೋವರ್ಸ್/ಮಾಜಿ ಸೈನಿಕರ ಅವಲಂಬಿತರು, ಹೆಚ್.ಕೆ–371(ಜೆ)/ಕನ್ನಡ ಮಾಧ್ಯಮ/ಹುತಾತ್ಮ ರೈತರ ಮಕ್ಕಳು ಇತ್ಯಾದಿ, ಕುರಿತು ಸಂಬಂಧಪಟ್ಟ ಅಧಿಕೃತ ಅಧಿಕಾರಿಗಳಿಂದ ನೀಡಲ್ಪಟ್ಟ ದಾಖಲೆಗಳ ಪ್ರತಿ.

V. ಸ್ನಾತಕೋತ್ತರ/ಡಿಪ್ಲೋಮಾ ಪ್ರವೇಶಾತಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳಿಗೆ ಸಾಮಾನ್ಯ ಮಾರ್ಗಸೂಚಿಗಳು:

1. ಅರ್ಹ ಅಭ್ಯರ್ಥಿಗಳು ವಿವಿಧ ಸ್ನಾತಕೋತ್ತರ ಪದವಿ, ಎಂ.ವೋಕ್, ಪಿ.ಜಿ. ಡಿಪ್ಲೋಮಾ, ಬಿ.ವೋಕ್, ಡಿಪ್ಲೋಮಾ ಮತ್ತು ಸರ್ಟಿಫಿಕೆಟ್ ಕೋರ್ಸುಗಳ ಪ್ರವೇಶಾತಿಗೆ ಅರ್ಜಿಗಳನ್ನು ಕಂಡಿಕೆ (IV) ರಲ್ಲಿ ತಿಳಿಸಿರುವ ಅಧಿಕೃತ ದಾಖಲಾತಿಗಳ ಪ್ರತಿಗಳೊಂದಿಗೆ **ದಿನಾಂಕ:31.10.2022 ರಿಂದ 18.11.2022ರೊಳಗೆ** ಆಫ್‌ಲೈನ್ ಮೂಲಕ ವಿಶ್ವವಿದ್ಯಾನಿಲಯಕ್ಕೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. 2. ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಪದವಿಗಳಿಗೆ (ವಿವಿಧ ಸ್ನಾತಕೋತ್ತರ ಕೋರ್ಸುಗಳು/ ಸ್ನಾತಕೋತ್ತರ ಕೇಂದ್ರ/ಘಟಕ ಕಾಲೇಜು/ಸ್ವಾಯತ್ತ ಕಾಲೇಜು/ಸಂಲಗ್ನಗೊಂಡ ಕಾಲೇಜುಗಳು) ಪ್ರವೇಶಾತಿ ಬಯಸುವ ಅರ್ಹ ಅಭ್ಯರ್ಥಿಗಳು **'ವಿಷಯವಾರು ಪ್ರತ್ಯೇಕ'** ಅರ್ಜಿಯನ್ನು ಸಲ್ಲಿಸತಕ್ಕದ್ದು. ಪ್ರತಿ ಕೋರ್ಸಿಗೂ ಪ್ರತ್ಯೇಕ ಅರ್ಜಿ ಶುಲ್ಕ ಮತ್ತು ಪ್ರವೇಶ ಪರೀಕ್ಷಾ ಶುಲ್ಕಗಳನ್ನು ಪಾವತಿಸತಕ್ಕದ್ದು. 3.ಸ್ನಾತಕ ಪದವಿಯ ಅಂತಿಮ ವರ್ಷದ ಫಲಿತಾಂಶದ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳು ಸಹ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. 4.ಅಂಚೆ ಮೂಲಕ ಅರ್ಜಿಗಳನ್ನು ಕಳುಹಿಸಿದ ಅಭ್ಯರ್ಥಿಗಳು ತಮ್ಮ ಪ್ರವೇಶ ಪರೀಕ್ಷೆಯ ಪ್ರವೇಶ ಪತ್ರವನ್ನು ಸಂಬಂಧಪಟ್ಟ ವಿಭಾಗದ ಕಛೇರಿಯಲ್ಲಿ ವೈಯುಕ್ತಿಕವಾಗಿ ಪ್ರವೇಶ ಪರೀಕ್ಷೆಯ ಪೂರ್ವದಲ್ಲಿ ಪಡೆಯಬಹುದಾಗಿದೆ.

ಪ್ರವೇಶ ಪರೀಕ್ಷೆಯ ವೇಳಾಪಟ್ಟಿ ಹಾಗೂ ಸಂದರ್ಶನ ಪ್ರಕ್ರಿಯೆಯ ವಿವರಗಳು:

ಕ್ರ.ಸಂ.	ವಿವರಗಳು	ದಿನಾಂಕ
1	ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	18.11.2022
2	ಪ್ರವೇಶ ಪರೀಕ್ಷೆಗಳ ವೇಳಾಪಟ್ಟಿ: (ವಿಭಾಗವಾರು ಪ್ರವೇಶ ಪರೀಕ್ಷೆಗಳ ವೇಳಾಪಟ್ಟಿಯನ್ನು ಪ್ರತ್ಯೇಕವಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ (www.davangereuniversity.ac.in) ನಲ್ಲಿ ಅಪ್‌ಲೋಡ್ ಮಾಡಲಾಗುವುದು)	21, 22 ಹಾಗೂ 23ನೇ ನವೆಂಬರ್, 2022
3	ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಪ್ರಕಟಣೆ	28.11.2022
	ಕೇಂದ್ರೀಕೃತ ಸಂದರ್ಶನ, ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಮತ್ತು ತರಗತಿಗಳ ಪ್ರಾರಂಭ:	
4	ಮೆರಿಟ್ ಮತ್ತು ಸ್ಪೆಷಲ್ ಕ್ಯಾಟಗರಿ	30.11.2022
5	ಓಪನ್ ಮೆರಿಟ್ ಕ್ಯಾಟಗರಿ	01.12.2022
6	ತರಗತಿಗಳ ಪ್ರಾರಂಭ	05.12.2022

1. ಅಭ್ಯರ್ಥಿಗಳು ಅರ್ಜಿಗಳೊಂದಿಗೆ ಅಧಿಕೃತ ದಾಖಲೆಗಳ ಪ್ರತಿಗಳನ್ನು ಒದಗಿಸದಿದ್ದಲ್ಲಿ, ನಿಗದಿತ ಶುಲ್ಕವನ್ನು ಸೂಕ್ತ ಸಮಯದಲ್ಲಿ ಪಾವತಿ ಮಾಡದಿದ್ದಲ್ಲಿ, ಅಥವಾ ಪ್ರವೇಶಾತಿ ಪ್ರಕ್ರಿಯೆಗಳಿಂದ ವಿದ್ಯಾರ್ಥಿಗಳು ನಿಗದಿತ ದಿನಾಂಕ ಮತ್ತು ಸಮಯದೊಳಗೆ ಸಂಬಂಧಪಟ್ಟ ವಿಭಾಗದಲ್ಲಿ ಹಾಜರಾಗದಿದ್ದಲ್ಲಿ, ವಿದ್ಯಾರ್ಥಿಗಳ ಪ್ರವೇಶಾತಿಯು ಸ್ವಯಂ ಚಾಲಿತವಾಗಿ ರದ್ದಾಗುತ್ತದೆ. 2. ಪ್ರವೇಶಾತಿ ಸಂದರ್ಭದಲ್ಲಿ ಅಭ್ಯರ್ಥಿಗಳು ಸಲ್ಲಿಸುವ ಅಧಿಕೃತ ಮೂಲ ದಾಖಲಾತಿಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ನಕಲಿ/ಕೊಟ್ಟಿ ಅಥವಾ ಅನಧಿಕೃತ ದಾಖಲಾತಿಗಳೆಂದು ಕಂಡುಬಂದಲ್ಲಿ ಯಾವುದೇ ಸಮಯದಲ್ಲಿ ಪ್ರವೇಶಾತಿಗಳನ್ನು ರದ್ದುಪಡಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಗಳ ವಿರುದ್ಧ ಕಾನೂನು ರಿತ್ಯಾ ಕ್ರಮಕೈಗೊಳ್ಳಲಾಗುವುದು. 3. ವಿಶ್ವವಿದ್ಯಾನಿಲಯವು ಪ್ರವೇಶಾತಿ ಪಡೆದಿರುವ ಅಭ್ಯರ್ಥಿಗಳನ್ನು ಮುಖ್ಯಕೇಂದ್ರದಿಂದ (ಶಿವಗಂಗೋತ್ರಿ)–ಸ್ನಾತಕೋತ್ತರ ಕೇಂದ್ರ ಅಥವಾ ಸ್ವಾಯತ್ತ ಕಾಲೇಜು ಅಥವಾ ಸಂಲಗ್ನಗೊಂಡ ಕಾಲೇಜುಗಳಿಗೆ ವರ್ಗಾಯಿಸುವ ಅಧಿಕಾರವನ್ನು ಹೊಂದಿರುತ್ತದೆ. ಅಲ್ಲದೆ, ಯಾವುದೇ ಕೇಂದ್ರದಲ್ಲಿ ಯಾವುದೇ ವಿಷಯದಲ್ಲಿ ಪ್ರವೇಶಾತಿ ಪ್ರಮಾಣ ಕನಿಷ್ಠ 15 ಕ್ಕಿಂತ ಕಡಿಮೆ ಇದ್ದಲ್ಲಿ, ಕನಿಷ್ಠ ಪ್ರವೇಶಾತಿಯನ್ನು ಸರಿದೂಗಿಸುವ ಸಲುವಾಗಿ ವರ್ಗಾವಣೆ ಮಾಡಲಾಗುವುದು. 4. ಪ್ರವೇಶಾತಿ ಪ್ರಕ್ರಿಯೆ ಮುಗಿದ ನಂತರ ವಿದ್ಯಾರ್ಥಿಗಳಿಂದ ಭರಿಸಲಾದ ಯಾವುದೇ (ಅರ್ಜಿ ಶುಲ್ಕ, ಪ್ರವೇಶ ಪರೀಕ್ಷಾ ಶುಲ್ಕ, ನೋಂದಣಿ ಶುಲ್ಕ ಅಥವಾ ಇನ್ನಾವುದೇ ಶುಲ್ಕ) ಶುಲ್ಕಗಳನ್ನು ಮರಿಭರಿಕೆ ಮಾಡಲಾಗುವುದಿಲ್ಲ. 5. ಪ್ರವೇಶಾತಿ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ತರಗತಿಗಳು ಪ್ರಾರಂಭವಾಗಲಿವೆ. 6. ಪ್ರವೇಶಾತಿ ಬಯಸುವ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಸಂಬಂಧಪಟ್ಟ ವಿಭಾಗಗಳ ಕಛೇರಿಗೆ ಸಲ್ಲಿಸಿದ ಕೂಡಲೇ ಪ್ರವೇಶ ಪತ್ರವನ್ನು ತಪ್ಪದೇ ಪಡೆದುಕೊಳ್ಳತಕ್ಕದ್ದು.

ಸಹಿ/– ಕುಲಸಚಿವರು,
ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.

ವಾಸಾಇ/ದಾವಣಗೆರೆ/572/ಎಂಸಿಎ/2022–23

ಕೊಬ್ಬರಿ ಧಾರಣೆ

ತಿಪಟೂರು	₹13000-13700
ತುರುವೇಕೆರೆ	₹13700-13700

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹51,820
ಆಭರಣ ಚಿನ್ನ 1ಗ್ರಾಂಗೆ	₹4,768
ಬೆಳ್ಳಿ ಕೆ.ಜಿಗೆ	₹58,700

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹512

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1610)
ಸೋಯಾ (ರಿಫೈನ್ಡ್)	₹1330 (1340)
ಸೂರ್ಯಕಾಂತಿ (ರಿಫೈನ್ಡ್)	₹1560 (1580)
ಪಾಮೋಲಿನ್	₹980 (985)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್ಎಸ್ಎಸ್-4	₹146.50
ಆರ್ಎಸ್ಎಸ್-5	₹139
ಗುಡ್ ಲಾಟ್	₹133

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹400-650
ದ್ವಿತಳಿ (ಬಿ.ವಿ)	₹400-812

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹16000-20000
2ನೇ ದರ್ಜೆ	₹12000-14000

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1600-1800
ಮಧ್ಯಮ	₹1000-1500
ಸಣ್ಣ	₹200-800

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ



ಡಾ. ಎನ್. ಕೋದಂಡರಾಮಯ್ಯ

ಇವರು ಶನಿವಾರ, ಅಕ್ಟೋಬರ್ 29, 2022 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ದುಃಖತಪ್ತ ಕುಟುಂಬ ಮತ್ತು ಬಂಧು ಬಳಗ

ಎನ್‌ಟಿಪಿಸಿ ಲಾಭ ಶೇ 7ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮದ (ಎನ್‌ಟಿಪಿಸಿ) ನಿವ್ವಳ ಲಾಭವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 7ರಷ್ಟು ಇಳಿಕೆ ಕಂಡು ₹3,417 ಕೋಟಿಗೆ ತಲುಪಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ನಿವ್ವಳ ಲಾಭವು ₹3,690 ಕೋಟಿ ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ವೆಚ್ಚ ಹೆಚ್ಚಾಗಿರುವುದೇ ಲಾಭ ಇಳಿಕೆ ಆಗಲು ಕಾರಣ ಎಂದು ಕಂಪನಿ ತಿಳಿಸಿದೆ. ತ್ರೈಮಾಸಿಕದಲ್ಲಿ ಕಂಪನಿಯ ವೆಚ್ಚವು ₹ 33,095 ಕೋಟಿಯಿಂದ ₹44,681 ಕೋಟಿಗೆ ಏರಿಕೆ ಆಗಿದೆ. ತ್ರೈಮಾಸಿಕದಲ್ಲಿ ವರಮಾನವು ₹33,095 ಕೋಟಿಯಿಂದ ₹40 ಸಾವಿರ ಕೋಟಿಗೆ ಏರಿಕೆ ಆಗಿದೆ ಎಂದು ಹೇಳಿದೆ.

ಐಒಸಿ ನಷ್ಟ ₹272 ಕೋಟಿ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹272 ಕೋಟಿ ನಷ್ಟ ಅನುಭವಿಸಿದೆ.

ಉತ್ಪಾದನಾ ವೆಚ್ಚಕ್ಕಿಂತಲೂ ಕಡಿಮೆಗೆ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲ ಸಿಲಿಂಡರ್ ಮಾರಾಟ ಮಾಡಿದ್ದರಿಂದ ಈ ನಷ್ಟ ಉಂಟಾಗಿದೆ ಎಂದು ಕಂಪನಿಯು ತಿಳಿಸಿದೆ.

2021ರ ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ₹6,360 ಕೋಟಿ ಲಾಭ ಗಳಿಸಿತ್ತು ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಐಒಸಿ ₹1,992 ಕೋಟಿ ನಷ್ಟ ಅನುಭವಿಸಿದೆ. ಕಾರ್ಯಾಚರಣಾ ವರಮಾನವು ₹1.69 ಲಕ್ಷ ಕೋಟಿಯಿಂದ ₹2.28 ಲಕ್ಷ ಕೋಟಿಗೆ ಭಾರಿ ಏರಿಕೆ ಆಗಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದಲ್ಲಿ ಕಂಪನಿಯು ₹2,265 ಕೋಟಿ ನಷ್ಟ ಕಂಡಿದೆ. ಹಿಂದಿನ ಹಣಕಾಸು ವರ್ಷದ ಮೊದಲಾರ್ಧದಲ್ಲಿ ₹12,301 ಕೋಟಿ ಲಾಭ ಗಳಿಸಿತ್ತು.

ಗೃಹ ಬಳಕೆಯ ಎಲ್‌ಪಿಜಿಯನ್ನು ಮಾರುಕಟ್ಟೆ ದರಕ್ಕಿಂತ ಕಡಿಮೆಗೆ ಮಾರಾಟ ಮಾಡಿದ್ದರಿಂದ ಆಗಿರುವ ನಷ್ಟ ಭರ್ತಿಗೆ ಕೇಂದ್ರ ಸರ್ಕಾರದಿಂದ ಐಒಸಿಗೆ ₹10,801 ಕೋಟಿ ಸಬ್ಸಿಡಿ ದೊರೆತಿದೆ.

ಕಚ್ಚಾ ತೈಲ ದರ ಏರಿಕೆಗೆ ಅನುಗುಣವಾಗಿ ದೇಶದಲ್ಲಿ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲ ಸಿಲಿಂಡರ್ ದರ ಹೆಚ್ಚಿಸದ ಕಾರಣಕ್ಕೆ ಐಒಸಿ, ಭಾರತ್ ಪೆಟ್ರೋಲಿಯಂ ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ ಕಂಪನಿಗಳಿಗೆ ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಒಟ್ಟು ₹18,480 ಕೋಟಿ ನಷ್ಟವಾಗಿದೆ.

2023ರ ಅಕ್ಟೋಬರ್ 31ರವರೆಗೆ ಜಾರಿ: ಡಿಜಿಎಫ್‌ಟಿ ಅಧಿಸೂಚನೆ

ಸಕ್ಕರೆ ರಫ್ತು ನಿರ್ಬಂಧ ವಿಸ್ತರಣೆ

ನವದೆಹಲಿ (ಪಿಟಿಐ): ಸಕ್ಕರೆ ರಫ್ತು ಮೇಲೆ ವಿಧಿಸಿರುವ ನಿರ್ಬಂಧವನ್ನು ಕೇಂದ್ರ ಸರ್ಕಾರ ಮುಂದಿನ ವರ್ಷದ ಅಕ್ಟೋಬರ್ 31ರವರೆಗೆ ವಿಸ್ತರಿಸಿದೆ.

ದೇಶಿಯವಾಗಿ ಅಗತ್ಯ ಪ್ರಮಾಣದ ಸಕ್ಕರೆ ಲಭ್ಯತೆ ಇರುವಂತೆ ನೋಡಿಕೊಳ್ಳುವುದು, ಬೆಲೆ ಏರಿಕೆಗೆ ಕಡಿವಾಣ ಹಾಕುವುದು ಇದರ ಉದ್ದೇಶವಾಗಿದೆ. ಈ ಹಿಂದೆ ವಿಧಿಸಿದ್ದ ನಿರ್ಬಂಧವು ಇದೇ 31ಕ್ಕೆ ಅಂತ್ಯವಾಗಲಿರುವುದರಿಂದ ಮತ್ತೆ ನಿರ್ಬಂಧವನ್ನು ವಿಸ್ತರಣೆ ಮಾಡಲಾಗಿದೆ.

‘ಸಕ್ಕರೆ ರಫ್ತು ನಿಷೇಧವು 2022ರ ಅಕ್ಟೋಬರ್ 31 ರಿಂದ 2023ರ ಅಕ್ಟೋಬರ್ 31ರವರೆಗೆ ಅಥವಾ ಮುಂದಿನ ಆದೇಶದವರೆಗೆ ಜಾರಿಯಲ್ಲಿ ಇರಲಿದೆ’ ಎಂದು ವಿದೇಶ ವ್ಯಾಪಾರ ಮಹಾ ನಿರ್ದೇಶನಾಲಯ (ಡಿಜಿಎಫ್‌ಟಿ) ಹೊರಡಿಸಿರುವ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಆದರೆ ಸಿಎಕ್ಸ್‌ಎಲ್ ಮತ್ತು ಟಿಆರ್‌ಕ್ಯೂ ಕೋಟಾದಡಿ ಅಮೆರಿಕ ಮತ್ತು ಯೂರೋಪ್ ಒಕ್ಕೂಟದ ದೇಶಗಳಿಗೆ ಮಾಡುವ ಸಕ್ಕರೆ ರಫ್ತಿಗೆ ಈ ನಿರ್ಬಂಧ ಅನ್ವಯ ಆಗುವುದಿಲ್ಲ ಎಂದು ಡಿಜಿಎಫ್‌ಟಿ ಸ್ಪಷ್ಟಪಡಿಸಿದೆ.

ಸಕ್ಕರೆ ಉತ್ಪಾದನೆ, ದೇಶಿ ಬಳಕೆ, ರಫ್ತು ಹಾಗೂ ಸಗಟು ಮತ್ತು ಚಿಲ್ಲರೆ ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆಯ ಕುರಿತು ಸರ್ಕಾರವು ನಿರಂತರವಾಗಿ ಮೇಲ್ವಿಚಾರಣೆ ನಡೆಸುತ್ತಿದೆ.

ಪ್ರಸಕ್ತ ವರ್ಷದಲ್ಲಿ ಭಾರತವು ಅತಿ ಹೆಚ್ಚಿನ ಪ್ರಮಾಣದಲ್ಲಿ ಸಕ್ಕರೆ ಉತ್ಪಾದನೆ ಮಾಡಿದ್ದು, ರಫ್ತಿನಲ್ಲಿ ಎರಡನೇ ಸ್ಥಾನದಲ್ಲಿದೆ. ಸಕ್ಕರೆ ಉತ್ಪಾದನೆಯು 2022–23ನೇ ಮಾರುಕಟ್ಟೆ ವರ್ಷದಲ್ಲಿ 3.65 ಕೋಟಿ ಟನ್‌ಗೆ ತಲುಪುವ ಅಂದಾಜು ಮಾಡಲಾಗಿದೆ. ಹಿಂದಿನ ಮಾರುಕಟ್ಟೆ ವರ್ಷಕ್ಕೆ ಹೋಲಿಸಿದರೆ ಶೇ 2ರಷ್ಟು ಹೆಚ್ಚಾಗುವ ನಿರೀಕ್ಷೆ ಇದೆ. 2021–22ನೇ ಮಾರುಕಟ್ಟೆ ವರ್ಷದಲ್ಲಿ 3.58 ಕೋಟಿ ಟನ್ ಸಕ್ಕರೆ ಉತ್ಪಾದನೆ ಆಗಿದೆ.

ದೇಶಿ ಸಕ್ಕರೆ ಮಾರುಕಟ್ಟೆ

90 ಲಕ್ಷ ಟನ್
ಪ್ರಸಕ್ತ ಅವಧಿಯಲ್ಲಿ ಸಕ್ಕರೆ ರಫ್ತು ನಿರೀಕ್ಷೆ

2.75 ಕೋಟಿ ಟನ್
ದೇಶದಲ್ಲಿ ಸಕ್ಕರೆ ಬಳಕೆ ಪ್ರಮಾಣ

3.65 ಕೋಟಿ ಟನ್
2022–23ರಲ್ಲಿ ಸಕ್ಕರೆ ಉತ್ಪಾದನೆ ಅಂದಾಜು

ಪರಾಗ್‌ಗೆ ₹472 ಕೋಟಿ ಪರಿಹಾರ ಸಾಧ್ಯತೆ

ಸ್ಯಾನ್ ಫ್ರಾನ್ಸಿಸ್ಕೊ (ರಾಯಿಟರ್ಸ್/ಪಿಟಿಐ/ಎಎಫ್‌ಪಿ): ಟ್ವಿಟರ್ ಕಂಪನಿಯನ್ನು ಖರೀದಿಸಿದ ಬಳಿಕ ಇಲಾನ್ ಮಸ್ಕ್ ಅವರು ವಜಾ ಮಾಡಿರುವ ಮೂವರು ಉನ್ನತ ಅಧಿಕಾರಿಗಳು ಒಟ್ಟು ₹1002 ಕೋಟಿ ಮೊತ್ತದ ಪರಿಹಾರ ಪಡೆಯುವ ನಿರೀಕ್ಷೆ ಇದೆ ಎಂದು ಸಂಶೋಧನಾ ಸಂಸ್ಥೆ ‘ಈಕ್ವಿಲರ್’ ಹೇಳಿದೆ.

ಟ್ವಿಟರ್‌ನ ಸಿಇಒ ಪರಾಗ್ ಅಗ್ರವಾಲ, ಸಿಎಫ್‌ಒ ನೆಡ್ ಸೆಗಲ್ ಹಾಗೂ ಕಾನೂನು ವ್ಯವಹಾರ ಮತ್ತು ನೀತಿ ವಿಭಾಗದ ಮುಖ್ಯಸ್ಥೆ ವಿಜಯಾ ಗದ್ದೆ ಅವರು ವಜಾ ಆಗಿರುವ ಪ್ರಮುಖರಾಗಿದ್ದಾರೆ.

ಈಕ್ವಿಲರ್ ಸಂಸ್ಥೆಯ ಪ್ರಕಾರ, ಪರಾಗ್ ಅವರಿಗೆ ಪರಿಹಾರ ರೂಪದಲ್ಲಿ ₹472 ಕೋಟಿ ಸಿಗಲಿದೆ. ಸೆಗಲ್ ₹366 ಕೋಟಿ ಹಾಗೂ ವಿಜಯಾ ಅವರು ₹164 ಕೋಟಿ ಪರಿಹಾರ ಮೊತ್ತ ಪಡೆಯಲಿದ್ದಾರೆ.

ಇಷ್ಟೇ ಅಲ್ಲದೆ, ಈ ಮೂವರು ಕಂಪನಿಯಲ್ಲಿ ಹೊಂದಿರುವ ಷೇರುಪಾಲಿಗೆ ಬದಲಾಗಿ ಇಲಾನ್ ಮಸ್ಕ್ ಅವರಿಂದ ಒಟ್ಟಾರೆ ₹535 ಕೋಟಿ ಮೊತ್ತವನ್ನೂ ಪಡೆಯಲಿದ್ದಾರೆ.

ಆದರೆ, ಈ ಕುರಿತು ಟ್ವಿಟರ್ ಪ್ರತಿನಿಧಿಗಳು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ವಿಜಯಾ ಅವರು ಕಂಪನಿಯಲ್ಲಿ ಹೊಂದಿರುವ ಷೇರುಗಳ ಮೌಲ್ಯವು ₹286 ಕೋಟಿ ಇದೆ. ಸೆಗಲ್ ಅವರು ₹181 ಕೋಟಿ ಹಾಗೂ ಪರಾಗ್ ಅವರು ₹69 ಕೋಟಿ ಮೌಲ್ಯದ ಷೇರುಗಳನ್ನು ಹೊಂದಿದ್ದಾರೆ.

ಪರಾಗ್ ಅಗ್ರವಾಲ್

ಟ್ವಿಟರ್ ಕಂಪನಿಯು ಷೇರುಪೇಟೆಗೆ ನೀಡಿರುವ ಮಾಹಿತಿಯ ಪ್ರಕಾರ, ಪರಾಗ್ ಅವರಿಗೆ 2021ರಲ್ಲಿ ₹250 ಕೋಟಿಯನ್ನು ಕಂಪನಿ ಪಾವತಿಸಿದೆ.

‘ಪರಿಶೀಲನಾ ಸಮಿತಿ’: ಟ್ವಿಟರ್ ಕಂಪನಿಯು ವಿಷಯ ಪರಿಶೀಲನಾ ಸಮಿತಿ ರಚನೆ ಮಾಡಲಿದೆ ಎಂದು ಇಲಾನ್ ಮಸ್ಕ್ ತಿಳಿಸಿದ್ದಾರೆ.

ಟ್ವಿಟರ್‌ನಲ್ಲಿ ಪ್ರಕಟವಾಗುವ ಯಾವುದೇ ಪ್ರಮುಖ ವಿಷಯ ಅಥವಾ ಖಾತೆಯನ್ನು ಮರುಸ್ಥಾಪಿಸುವ ನಿರ್ಧಾರವು ಸಮಿತಿ ಸಭೆಯ ಬಳಿಕವೇ ಆಗಲಿದೆ ಎಂದು ಅವರು ಹೇಳಿದ್ದಾರೆ. ಆದರೆ, ಸಮಿತಿಯು ಹೇಗೆ ಕೆಲಸ ಮಾಡಲಿದೆ ಎನ್ನುವ ಕುರಿತು ಹೆಚ್ಚಿನ ಮಾಹಿತಿಯನ್ನು ಅವರು ನೀಡಿಲ್ಲ.

ಟ್ವಿಟರ್‌ನ ವಿಷಯ ಪರಿಶೀಲನಾ ನೀತಿಗಳಲ್ಲಿ ಸದ್ಯ ಯಾವುದೇ ರೀತಿಯ ಬದಲಾವಣೆಯನ್ನು ಮಾಡಲಾಗಿಲ್ಲ ಎಂದು ಸ್ಪಷ್ಟಪಡಿಸುತ್ತೇನೆ ಎಂದು ಮಸ್ಕ್ ತಿಳಿಸಿದ್ದಾರೆ.

ಟ್ವಿಟರ್‌ನಲ್ಲಿ ಪೇಯ್ಡ್ ಜಾಹೀರಾತು ನೀಡುವುದನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಅಮೆರಿಕದ ಜನರಲ್ ಮೋಟರ್ಸ್ (ಜಿಎಂ) ಹೇಳಿದೆ.

ಸಂಕ್ಷಿಪ್ತ ಸುದ್ದಿ

‘ಇಡೀ ಬ್ರಿಟನ್ ಜನಾಂಗೀಯವಾದಿ’ ಎಂದಿಲ್ಲ: ಟ್ರೆವರ್

ಲಂಡನ್ (ಪಿಟಿಐ): ಬ್ರಿಟನ್ ನೂತನ ಪ್ರಧಾನಿ ನೇಮಕ ಕುರಿತ ಹೇಳಿಕೆಗಳನ್ನು ಸಮರ್ಥಿಸಿಕೊಂಡಿರುವ ಹಾಸ್ಯನಟ ಮತ್ತು ದೂರದರ್ಶನ ನಿರೂಪಕ ಟ್ರೆವರ್ ನೋವಾ, ‘ಇಡೀ ಬ್ರಿಟನ್ ಜನಾಂಗೀಯವಾದಿ’ ಎಂದು ಎಂದಿಗೂ ಹೇಳಿಲ್ಲ. ರಿಷಿ ಸುನಕ್ ಪ್ರಧಾನಿ ಆಗಿರುವುದನ್ನು ಬಯಸದವರಿಗೆ ಮಾತ್ರ ಪ್ರತಿಕ್ರಿಯಿಸಿದ್ದೇನೆ ಎಂದು ಹೇಳಿದ್ದಾರೆ.

ಈ ವಾರದ ಆರಂಭದಲ್ಲಿ ಸುದ್ದಿ ಕಾರ್ಯಕ್ರಮ ದಿ ಡೈಲಿ ಶೋನಲ್ಲಿ, ನೋವಾ ಅವರು ಸುನಕ್ ಆಯ್ಕೆಯಾದ ಬಳಿಕ ವಿರೋಧ ವ್ಯಕ್ತವಾಗಲಿದೆ ಎಂದು ಹೇಳಿದ್ದರು.

ಅವರ ಹೇಳಿಕೆಗೆ ಬ್ರಿಟನ್‌ನಲ್ಲಿ ವ್ಯಾಪಕ ಟೀಕೆ ವ್ಯಕ್ತವಾಯಿತು.

ಆದರೆ, ನೋವಾ ಅವರು, ತಮ್ಮ ಹೇಳಿಕೆ ಸಮರ್ಥಿಸಿಕೊಂಡು, ತಾವು ಜನಾಂಗೀಯವಾದಿಗಳಿಗೆ ಪ್ರತಿಕ್ರಿಯೆ ನೀಡಿದ್ದಾಗಿ ಹೇಳಿದ್ದಾರೆ ಎಂದು ಬಿಬಿಸಿ ವರದಿ ಮಾಡಿದೆ.

ಪೆಲೋಸಿ ಮೇಲೆ ಹಲ್ಲೆ: ಕೊಲೆಯತ್ನ ಪ್ರಕರಣ ದಾಖಲು

ಸ್ಯಾನ್ ಫ್ರಾನ್ಸಿಸ್ಕೊ (ರಾಯಿಟರ್ಸ್): ಅಮೆರಿಕ ಸಂಸತ್ತಿನ ಕೆಳಮನೆ ಸ್ಪೀಕರ್ ನ್ಯಾನ್ಸಿ ಪೆಲೋಸಿ ಅವರ ಪತಿ ಪೌಲ್ ಪೆಲೋಸಿ ಅವರ ತಲೆಗೆ ಸುತ್ತಿಗೆಯಿಂದ ಹಲ್ಲೆ ಮಾಡಿದ್ದ ವ್ಯಕ್ತಿ ವಿರುದ್ಧ ಕೊಲೆಯತ್ನದ ಆರೋಪದಲ್ಲಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಪೌಲ್ ಪೆಲೋಸಿ ಅವರ ತಲೆಬುರುಡೆಗೆ ಪೆಟ್ಟಾಗಿದ್ದು, ಅವರ ಬಲತೋಳು ಮತ್ತು ಕೈಗಳಿಗೂ ಗಾಯಗಳಾಗಿವೆ. ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ಪೌಲ್ ಈಗ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೊಮಾಲಿಯಾ: ಬಾಂಬ್ ಸ್ಫೋಟ, ಹಲವರು ಮೃತ

ಮೊಗದಿಶು (ಎಪಿ): ಸೊಮಾಲಿಯಾ ರಾಜಧಾನಿ ಮೊಗದಿಶುವಿನಲ್ಲಿ ಎರಡು ಪ್ರತ್ಯೇಕ ಜನನಿಬಿಡ ಪ್ರದೇಶದಲ್ಲಿ ಬಾಂಬ್ ಸ್ಫೋಟ ಸಂಭವಿಸಿದೆ. ಪ್ರಮುಖ ಸರ್ಕಾರಿ ಕಚೇರಿಗಳಿದ್ದ ಸ್ಥಳದ ಹತ್ತಿರವೇ ಸ್ಫೋಟಗಳು ಸಂಭವಿಸಿದ್ದು, ಹಲವಾರು ನಾಗರಿಕರು ಮೃತಪಟ್ಟಿದ್ದಾರೆ ಎಂದು ಅಲ್ಲಿಯ ಪೊಲೀಸರು ತಿಳಿಸಿದ್ದಾರೆ.

ಎರಡು ಕಾರ್ ಬಾಂಬ್‌ಗಳನ್ನು ಸ್ಫೋಟಿಸಲಾಗಿದೆ ಎಂದು ಪೊಲೀಸ್ ವಕ್ತಾರರೊಬ್ಬರ ಹೇಳಿಕೆಯನ್ನು ಉಲ್ಲೇಖಿಸಿ ಸೊಮಾಲಿಯಾದ ರಾಷ್ಟ್ರೀಯ ಸುದ್ದಿ ಸಂಸ್ಥೆಯೊಂದು ವರದಿ ಮಾಡಿದೆ. ಮೊದಲ ಸ್ಫೋಟದಲ್ಲಿ ಸಾರ್ವಜನಿಕ ಸಾರಿಗೆಯಲ್ಲಿ ಸಂಚರಿಸುತ್ತಿದ್ದ ಹಲವರು ಮೃತಪಟ್ಟಿರುವುದು ಕಂಡುಬಂದಿದೆ.

ಎರಡನೇ ಸ್ಫೋಟವು ಪ್ರಸಿದ್ಧ ಹೋಟೆಲ್ ಒಂದರ ಎದುರು ಸಂಭವಿಸಿದೆ. ಯಾವುದೇ ಸಂಘಟನೆಯು ದಾಳಿಯ ಹೊಣೆ ಹೊತ್ತುಕೊಂಡಿಲ್ಲ.

ಫಿಲಿಪ್ಪೀನ್ಸ್: ಸಾವಿನ ಸಂಖ್ಯೆ 50ಕ್ಕೆ ಏರಿಕೆ

ಮನಿಲಾ (ಎಪಿ): ಫಿಲಿಪ್ಪೀನ್ಸ್‌ನಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ಸಂಭವಿಸುತ್ತಿರುವ ಪ್ರವಾಹ ಹಾಗೂ ಭೂಕುಸಿತದಿಂದಾಗಿ ಕನಿಷ್ಠ 50 ಮಂದಿ ಮೃತಪಟ್ಟಿದ್ದಾರೆ. ದಕ್ಷಿಣ ಫಿಲಿಪ್ಪೀನ್ ಪ್ರಾಂತ್ಯದಲ್ಲಿ 60ಕ್ಕೂ ಹೆಚ್ಚು ಗ್ರಾಮಸ್ಥರು ಕಾಣೆಯಾಗಿದ್ದಾರೆ. ಇವರೆಲ್ಲರೂ ಭೂಕುಸಿತದಲ್ಲಿ ಹೂತು ಹೋಗಿರಬಹುದು ಎಂದು ಅಧಿಕಾರಿಗಳು ಶನಿವಾರ ತಿಳಿಸಿದರು.

ಮುಂಬೈ ಧಾರಣೆ

ಶೇಂಗಾ

29–10-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	10250-10350
ದಪ್ಪ ಗುಜರಾತ್(ಹೊಸ)	10750-10850

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1620)
ಒಂದು ವಾರದ ಡೆಲಿವರಿ	1605 (1615)
ಸೋಯಾ ಕಚ್ಚಾ	1260 (1280)
ಪಾಮ್ ವಾರದ ಡೆಲಿವರಿ	978 (983)
ಸೂರ್ಯಕಾಂತಿ ಎಣ್ಣೆ ಕಚ್ಚಾ	1480 (1500)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,175 (50,350)
ಬೆಳ್ಳಿ ಕೆ.ಜಿ 57,200 (57,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490

ಅಡಿಕೆ
ಬಂಟ್ವಾಳ

ಕೋಕ	12500-25000
ಹೊಸತು	27500-38000
ಹಳತು	48000-56000

ಚಿತ್ರದುರ್ಗ

ಆಪಿ	47600-48000
ಬೆಟ್ಟೆ	37400-37800
ಕೆಂಪುಗೋಟು	29500-29900
ರಾಶಿ	47100-47500

ಪುತ್ತೂರು

ಹೊಸತು	32000-38000

ಶಿರಸಿ

ಬೆಟ್ಟೆ	38299-44218
ಬಿಳಿಗೋಟು	17319-36001
ಚಾಲಿ	37399-42439
ರಾಶಿ	46829-48999

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14500	14500	14200	178.85 ಸೆಂಟ್ಸ್
ಎಸಿ	7280	8000	7300	
ಆರ್‌ಪಿ	8500	9000	8800	ಲಂಡನ್
ಆರ್‌ಸಿ	4600	4050	4300	1908 ಡಾಲರ್ಸ್

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.

ಸಂ:ಪಿಬಿ/ಟೆಂಡರ್ ಪ್ರಕಟಣೆ/2022–23/1277 ದಿ:–21/10/2022

ಅಲ್ಪಾವಧಿ ಇ–ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಗೆ ಇ–ಪ್ರಾಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಗಿನ ಕಾಮಗಾರಿಗಳ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರಾಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮುಖಾಂತರ ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ಗಾಗಿ ಭಾಗವಹಿಸಬಹುದು, ಹೆಚ್ಚಿನ ವಿವರಗಳಿಗೆ ಸದರಿ ಕಚೇರಿಯಿಂದ ಹಾಗೂ ಸಹಾಯಕ ದೂರವಾಣಿ ಸಂ:08394–200231 ರಿಂದ ಮಾಹಿತಿ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯ ಇ–ಮೇಲ್ eepwdhosapete@gmail.com ಮೂಲಕ ಅಥವಾ ಖುದ್ದಾಗಿ ಕಚೇರಿಯಲ್ಲಿ ತಾಂತ್ರಿಕ ಸಹಾಯಕರು ಹಾಗೂ ಲೆಕ್ಕ ಅಧೀಕ್ಷಕರು ಇವರನ್ನು ಸಂಪರ್ಕಿಸಿ ಮಾಹತಿ ಪಡೆಯಬಹುದು.

ಕ್ರ.ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಕ್ರ.ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
THIS WORKS IS RESERVE FOR SC CATOGERY					
1	KPWD/2021-22/RD/WORK_INDENT145689	27.00	3	KPWD/2022-23/RD/WORK_INDENT156971	31.58
2	KPWD/2022-23/BD/WORK_INDENT157355	10.00	4	KPWD/2022-23/RD/WORK_INDENT156983	19.58
THIS WORKS IS RESERVE FOR ST CATOGERY					
1	KPWD/2021-22/RD/WORK_INDENT145690	10.00			
GENERAL WORKS					
1	KPWD/2022-23/RD/WORK_INDENT155793	190.01	18	KPWD/2022-23/RD/WORK_INDENT158700	60.10
2	KPWD/2022-23/RD/WORK_INDENT155649	199.00	19	KPWD/2022-23/RD/WORK_INDENT158706	37.80
3	KPWD/2022-23/BD/WORK_INDENT154947	270.55	20	KPWD/2022-23/RD/WORK_INDENT156540	99.68
4	KPWD/2022-23/BD/WORK_INDENT154946	369.55	21	KPWD/2022-23/RD/WORK_INDENT157101	110.00
5	KPWD/2022-23/EL/WORK_INDENT159298	900.00	22	KPWD/2022-23/RD/WORK_INDENT157103	190.00
6	KPWD/2022-23/RD/WORK_INDENT152354	100.00	23	KPWD/2022-23/RD/WORK_INDENT156586	70.00
7	KPWD/2022-23/RD/WORK_INDENT152353	30.00	24	KPWD/2022-23/RD/WORK_INDENT156578	80.00
8	KPWD/2022-23/BD/WORK_INDENT157282	9.53	25	KPWD/2022-23/RD/WORK_INDENT152220	890.00
9	KPWD/2021-22/RD/WORK_INDENT150768	25.00	26	KPWD/2022-23/RD/WORK_INDENT152221	850.00
10	KPWD/2021-22/RD/WORK_INDENT145692	150.00	27	KPWD/2022-23/RD/WORK_INDENT159518	25.00
11	KPWD/2021-22/BD/WORK_INDENT151206	100.00	28	KPWD/2022-23/BD/WORK_INDENT159382	100.00
12	KPWD/2022-23/RD/WORK_INDENT156904	225.29	29	KPWD/2022-23/BD/WORK_INDENT159378	40.00
13	KPWD/2022-23/RD/WORK_INDENT156935	71.55	30	KPWD/2022-23/BD/WORK_INDENT159381	39.18
14	KPWD/2022-23/RD/WORK_INDENT157286	21.41	31	KPWD/2022-23/BD/WORK_INDENT159380	54.00
15	KPWD/2022-23/RD/WORK_INDENT157289	11.40	32	KPWD/2022-23/BD/WORK_INDENT159377	100.00
16	KPWD/2022-23/RD/WORK_INDENT157288	106.53	33	KPWD/2022-23/BD/WORK_INDENT152665	103.28
17	KPWD/2022-23/RD/WORK_INDENT157285	56.20	34	KPWD/2022-23/BD/WORK_INDENT159440	100.00

ಅ) ಗುತ್ತಿಗೆದಾರರ ಕ್ವಾರೀಸ್ ದಿನಾಂಕ: **E-procurement Portal** ನಲ್ಲಿ ಇರುವಂತೆ. ಆ) ಟೆಂಡರ್‌ಗೆ ಅರ್ಜಿ ಮತ್ತು ಟೆಂಡರ್ ಸಲ್ಲಿಸುವ ದಿನಾಂಕ: **10.11.2022 (16.00 ಗಂಟೆಗೆ)**. ಇ) ಇ–ಪ್ರಾಕ್ಯೂರ್‌ಮೆಂಟ್ ಮುಖಾಂತರ ಬಿಡ್‌ಗಳನ್ನು ತೆರೆಯುವ ದಿನಾಂಕ : **14.11.2022 (11.00 ಗಂಟೆಗೆ)**. ಈ) ಆರ್ಥಿಕ ಬಿಡ್ ತೆರೆಯುವ ದಿನಾಂಕ: **E-procurement Portal** ನಲ್ಲಿ ಇರುವಂತೆ

NOTE: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು E-procurement Portal ನಲ್ಲಿ ನೋಡಿಕೊಳ್ಳಬಹುದು

ಸಹಿ/–ಕಾರ್ಯನಿರ್ವಾಹಕ ಅಭಿಯಂತರು,
ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.

ಡಿಐಪಿಆರ್/ವಿಜಯನಗರ/208/ಎಂಸಿಎ/2022–23

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Accounts & Finance

WANTED ACCOUNTANTS with experience in Accounts GST and income tax. Please send your CV's to jobcabrsco@gmail.com or whatsapp to 7259105338.

Engg/ Production Technical

POG RECRUITING Engineers BE / Diploma EEE 2020 , 2021 & 2022 batch. Testing and Commissioning of power system equipment. Accommodation & Training Provided. Starting Salary 20k. Ph : 9900072784 , Email : cv@pog.co.in Web : www.pog.co.in

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ +ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

LOOKING FOR yellow board drivers with experience. Salary 18-20k and other benefits. Police verification must. Call AMS 9148221276

General

ಉತ್ತಮ ಅನುಭವವುಳ್ಳ ಇಸ್ತ್ರಿ ಮಾಡುವ ಕೆಲಸಗಾರರು ಬೇಕಾಗಿದ್ದಾರೆ ಸಂಬಳ ದಿನಕ್ಕೆ 800/-ಹಾಗೂ ಆಫೀಸ್ ಹೆಲ್ಪರ್ಸ್ ಬೇಕಾಗಿದ್ದಾರೆ. ಕೆಲಸ ಬೆಳಿಗ್ಗೆ 9.30 ರಿಂದ ರಾತ್ರಿ 9.00. 18 ವರ್ಷದಿಂದ 40 ವರ್ಷದೊಳಗಿರಬೇಕು. ಜಯನಗರ, ಜೆ.ಪಿ.ನಗರ ಸುತ್ತಮುತ್ತಲಿನವರಿಗೆ ಆದ್ಯತೆ. (ಬೆಂಗಳೂರಿನವರಿಗೆ ಮಾತ್ರ ಕೆಲಸ) ಮೊಬೈಲ್: 9880266007, 9663668007

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

Multiple Vacancy

WANTED MANUAL Screen Printers For Printing Unit In Rajajinagar Bangalore Very Good Salary Call 9845032393

Wanted

WANTED
M/s. SAMKRG PISTONS AND RINGS LTD - HYDERABAD
Manufacturing automobile Pistons and Piston Rings for more than 36 years.
REQUIRES
AREA SALES OFFICER
Based at Bangalore to cover surrounding areas.
Qualification : 10+2, Fresher or 1-2 years experience in Automobile Spare Parts preferred.
Kannada language is must.
Age: 22 to 28 years.
Interested candidates may send their resume to:
e-mail:mktg@samkrg.com
Contact No. 9440067320, 040 - 23735578 / 87
Visit Our Website: www.samkrgpistonsandrings.com

ಬೇಕಾಗಿದ್ದಾರೆ: ವೃದ್ಧರನ್ನು, ರೋಗಿಗಳನ್ನು ಮತ್ತು ಮಗುವನ್ನು ನೋಡಿಕೊಳ್ಳಲು ಬೇಕಾಗಿದ್ದಾರೆ. ಉಚಿತ ಊಟ, ವಸತಿ ಮತ್ತು ತರಬೇತಿ ನೀಡಲಾಗುವುದು. ಸಂಬಳ: 15,000/- ರಿಂದ 20,000/-. ಆಸಕ್ತರು ಸಂಪರ್ಕಿಸಿ: 9620985000, 9620557000, 080-41115200. ಮೆರಿಟ್ವಾ ಕೇರ್, ದೊಡ್ಡ ಬಾಣಸವಾಡಿ, ಬೆಂಗಳೂರು-43.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Agricultural Land

Nelamangala

AGRICULTURE LAND: 1Acre 27Guntas for Sale @ Thyamagondlu. 18kms from Nelamangala, 8ksm from Dabaspete. Contact-9886994437

Sites

Rajarajeshwari Nagar

RAJARAJESHWARINAGAR , IDEAL homes township , 40'x60' west facing site for Sale .Contact: 9448810828

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಮತ್ತು ರೆಡಿಮೇಡ್ ಪ್ರಿಕ್ಯಾಸ್ಟಿಂಗ್ ಕಾಂಪೌಂಡ್‌ಗೋಡೆ ಕೆಲಸಕ್ಕಾಗಿ ಸಂಪರ್ಕಿಸಿ: 9880916988

ಸಾರ್ವಜನಿಕ ಪ್ರಕಟಣೆ

ಹೊಳೆನರಸೀಪುರದ, ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯದಲ್ಲಿ ರೆವ್ಯೂ ಪಿಟಿಷನ್ ನಂ. 1/2019
ಅರ್ಜಿದಾರರು: ಮಹದೇವಯ್ಯ ಎನ್.
ವಿರುದ್ಧ
ರೆಸ್ಪಾಂಡೆಂಟರು: ಹೆಚ್.ಎಂ.ಲೋಕ್ಷಾಮೃತ ಮತ್ತು ಇನ್ನೊಬ್ಬರು
2ನೇ ರೆಸ್ಪಾಂಡೆಂಟರು: ಪಲ್ಲವಿ ಬಿನ್ ಮಹದೇವಯ್ಯ ಎನ್. ಸುಮಾರು: 35 ವರ್ಷ, ವಾಸ: ಮನೆ ನಂ. 2183, 4ನೇ ಮುಖ್ಯ ರಸ್ತೆ, ವಿಜಯನಗರ 2ನೇ ಹಂತ (ಹಂಪಿ ನಗರ), ಬೆಂಗಳೂರು–560 040.
ಕೋರ್ಟ್ ನೋಟೀಸು
ಮೇಲ್ಕಂಡ ಅರ್ಜಿದಾರರು, ಕ್ರಮ ಮೇಲ್ಕನವಿ ಸಂಖ್ಯೆ 43/2016ರಲ್ಲಿ ದಿ: 28.02.2019ರ ತೀರ್ಪನ್ನು ಮರುಪರಿಶೀಲಿಸುವಂತೆ ಕೋರಿ ಮೇಲ್ಕಂಡ ರೆವ್ಯೂ ಪಿಟಿಷನ್ ಅನ್ನು ಸಲ್ಲಿಸಿದ್ದು, ಈ ಮೇರೆಗೆ ಸದರಿ ಪ್ರಕರಣದಲ್ಲಿ ಮೇಲ್ಕಂಡ ನಿಮಗೆ ನ್ಯಾಯಾಲಯದಿಂದ ಅನೇಕ ಬಾರಿ ನೋಟೀಸನ್ನು ಕಳುಹಿಸಿದ್ದರೂ ಸಹ ಜಾರಿಯಾಗದ ಕಾರಣ ನೋಂದಾಯಿತ ಅಂಚೆದ್ವಾರದ ಮೂಲಕ ನೋಟೀಸನ್ನು ಕಳುಹಿಸಿದ್ದು ಸದರಿ ನೋಟೀಸು ಸಹ ಜಾರಿಯಾಗದೆ ವಾಪಸ್ಸು ಬಂದಿರುವ ಕಾರಣ ನಿಮಗೆ ನೋಟೀಸನ್ನು ದಿನ ಪತ್ರಿಕೆಯಲ್ಲಿ ಪ್ರಕಟಿಸುವುದರ ಮೂಲಕ ಜಾರಿ ಮಾಡಲು ಪ್ರಕಟಿಸಿರುತ್ತೆ, ಸದರಿ ಮೇಲ್ಕಂಡ ಕೇಸು ದಿನಾಂಕ: 30/11/2022ರಂದು ಇರುತ್ತದೆ. ಆದ ಕಾರಣ ಈ ಮೂಲಕ ಮೇಲ್ಕಂಡ ನಿಮಗೆ ತಿಳಿಯಪಡಿಸುವುದು ಏನೆಂದರೆ ಮೇಲ್ಕಂಡ ನೀವು ನಿಮ್ಮ ತಕರಾರು ಏನಾದರು ಇದ್ದಲ್ಲಿ ಮೇಲ್ಕಂಡ ದಿನಾಂಕದಂದು ಪೂರ್ವಾಹ್ನ 11 ಗಂಟೆಗೆ ಸರಿಯಾಗಿ ನೀವಾಗಲಿ ಅಥವಾ ನಿಮ್ಮ ಪರ ವಕೀಲರಾಗಲೀ ಕೋರ್ಟಿಗೆ ಹಾಜರಾಗಿ ನಿಮ್ಮ ತಕರಾರು ಸಲ್ಲಿಸುವುದು, ತಪ್ಪಿದಲ್ಲಿ ನಿಮ್ಮ ತಕರಾರು ಇಲ್ಲವೆಂದು ಪರಿಗಣಿಸಿ ಮುಂದಿನ ನಡವಳಿಕೆಗಳನ್ನು ನಡೆಸಲಾಗುವುದೆಂದು ತಿಳಿಯುವುದು.
ಷೆಡ್ಯೂಲ್: ಅಪೀಲು ಸಂಖ್ಯೆ 43 / 2016ರಲ್ಲಿ ದಿ: 28.02.2019ರಂದು ಆಗಿರುವ ತೀರ್ಪನ್ನು ಮರುಪರಿಶೀಲಿಸುವ ಸಲುವಾಗಿ ಮೇಲ್ಕಂಡ ರೆವ್ಯೂ ಪಿಟಿಷನ್ ಸಲ್ಲಿಸಿರುತ್ತದೆ.
ನ್ಯಾಯಾಲಯದ ಮೊಹರಿನೊಂದಿಗೆ ಮತ್ತು ನನ್ನ ದಸ್ಕತ್ತಿನೊಂದಿಗೆ 21.10.2022 ತಾರೀಖಿನಂದು ನೀಡಲಾಗಿದೆ.
ನ್ಯಾಯಾಲಯದ ಆದೇಶದ ಮೇರೆ ಶಿರಸ್ತೇದಾರ್, ಸೀನಿಯರ್, ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹೊಳೆನರಸೀಪುರ.
ವಕೀಲರು, ಅರ್ಜಿದಾರರ ಪರ, ಹೊಳೆನರಸೀಪುರ.
ದಿ: 19/10/2022

ಇತರೆ

Books & Periodicals

ಉಚಿತವಾಗಿ ಬೈಬಲ್ ನೀಡಲಾಗುತ್ತದೆ ನಿಮ್ಮ ಮನೆಯ ವಿಳಾಸಕ್ಕೆ ಸಂಪರ್ಕಿಸಿ: 8892501007/ 9606701007

For Sale

ಮಾರಾಟಕ್ಕಿದೆ ನಮ್ಮಲ್ಲಿ ಬೇವಿನ ಹಿಂಡಿ ಹೊಟ್ಟು ಮತ್ತು ಉಳಿಕೆ ದೊರೆಯುತ್ತದೆ. ಕೊಳ್ಳಲು ಇಚ್ಛೆಯುಳ್ಳವರು ತಮ್ಮ ನಿಗದಿಯಾದ ಬೆಲೆಯನ್ನು ಈ ಕೆಳಗಿನ ವಿಳಾಸಕ್ಕೆ 7 ದಿನಗಳ ಒಳಗೆ ಬರೆಯಿರಿ Box JA341 C/O Prajavani, Banglore-1

ವ್ಯಾಪಾರ

Business Offers

Finance

ತುಮಕೂರಿನಲ್ಲಿರುವ ಸ್ಥಿರಾಸ್ತಿಯ ಮೇಲೆ ಮೂರು ಕೋಟಿ ರೂಪಾಯಿ ಸಾಲ ಬೇಕಾಗಿದೆ. ಕನ್ನಡದಲ್ಲಿ (ವ್ಯಕ್ತಿ - ಸಂಸ್ಥೆ) ವ್ಯವಹರಿಸಲಾಗುವುದು. ಕಡಿಮೆ ಬಡ್ಡಿ- ನಿಬಂಧನೆಗಳಿಗೆ ಆದ್ಯತೆ. ಯಾವುದೇ ಶುಲ್ಕವನ್ನು ಮುಂಗಡವಾಗಿ ನೀಡುವುದಿಲ್ಲ. ನಗದು ರೂಪದಲ್ಲಿ ವ್ಯವಹರಿಸಬಹುದು. ಕರೆಮಾಡಿ: 98445 44500.

EDUCATION CORNER
ಸ್ಪರ್ಧಾಮಿತ್ರ ACADEMY B'lore
IAS / KAS
Prelims and Mains
PSI / PDO / PC
RRB / SSC / Bank- Exams
Monday & Tuesday
FREE DEMO CLASSES
SC / ST ಹಾಗೂ ಉತ್ತರ ಕರ್ನಾಟಕದ ಬಡ ಅಭ್ಯರ್ಥಿಗಳಿಗೆ ಶುಲ್ಕ ರಿಯಾಯಿತಿ
Near Attiguppe Metro Station, opp. Maruti Medicals (338 Pillar) Vijayanagar, Bengaluru - 40.
9535111188 / 9535111199

ಭವಿಷ್ಯ

Astrology

“ಕೆಲಸವಾದ ನಂತರ ಕಾಣಿಕೆ” ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಹ್ಮತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ,ಗುಟ್ಟಹಳ್ಳಿ. ಬೆಂ.9620201188

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ಸ್ತ್ರೀ ಪುರುಷ, ಶತ್ರುಕಾಟ, ಗಂಡಹೆಂಡತಿ ದೂರವಾಗಿದ್ದರೆ, ನಿಮ್ಮಂತೆ ಆಗಲು. 2 ದಿನದಲ್ಲಿ ಪರಿಹಾರ 9611968471

ಪ್ರವಾಸ

Travel

ಹೆಸರಾಂತ ಪ್ರವಾಸಿ ಸಂಸ್ಥೆಯಾದ ಏಷ್ಯನ್ ಟ್ರಾವಲ್ ಏಜೆನ್ಸಿ ವತಿಯಿಂದ ಸಮಸ್ತ ನಾಡಿನ ಜನತೆಗೆ ದೀಪಾವಳಿ ಹಬ್ಬದ ಶುಭಾಶಯಗಳೊಂದಿಗೆ ವಿಮಾನ/ A/C ಬಸ್ಸಿನಲ್ಲಿ 11.11.2022 ಸೋಮನಾಥ ಕಚ್-ಬುಜ್ ಓಂಕಾರೇಶ್ವರ್ ಮಂಹಾಕಾಳೇಶ್ವರ್ 11.11.2022 ಪಂಚರಾಮ ಸಮೇತ ಪ್ರವಾಸ 14.11.2022, 6 ದಿನಗಳ ಕಾಶಿ,ಅಲಹಾಬಾದ್‌ಅಯೋಧ್ಯ 18.11.2022 ಮುಕ್ತಿನಾಥ, ನೇಪಾಳ,ಪೋಕ್ರಾ 24.12.2022, 6 ದಿನಗಳ ಶಿರಡಿ ಮತ್ತು 9 ದಿನಗಳ ದಕ್ಷಿಣ ಭಾರತ ಪ್ರವಾಸ. ಸಂಪರ್ಕಿಸಿ. 26574131 26573421 8317446683

20.11.2022 5ದಿನಗಳು ರಾಮೇಶ್ವರಂ,ಕನ್ಯಾಕುಮಾರಿ ಪ್ರವಾಸ.,16.12.2022 17ದಿನಗಳು ಗುಜರಾತ್ ಭಾವನಗರ,ಅಷ್ಟಜ್ಯೋತಿರ್ಲಿಂಗ., 24.12.2022 10ದಿನಗಳು ಉಜ್ಜೈನಿ,ಓಂಕಾರೇಶ್ವರ ಮಹಾರಾಷ್ಟ್ರಪ್ರವಾಸ. ಆರ್.ಗಾಂಧಿ ಟೂರ್ಸ್(ರಿ) 9945445809, 9902433500, 6363416487

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 30.11.2022 18.01.2023 ರಿಂದ 8/11 ದಿನಗಳ ಗುಜರಾತ್,ರಾಜಸ್ಥಾನ್. 24.12.2022 ರಿಂದ 8 ದಿನಗಳ ಶಿಮ್ಲಾ,ಮನಾಲಿ. 24.12.2022 05.01.2023 ರಿಂದ 5 ದಿನಗಳ ದಕ್ಷಿಣ ಭಾರತ 08.01.2023 22.01.2023 ರಿಂದ 14 ದಿನಗಳ ಅಷ್ಟ ಜ್ಯೋತಿರ್ಲಿಂಗ 19.01.2023 06.02.2023 ರಿಂದ 8 ದಿನಗಳ ನೈಮಿಶಾರಣ್ಯ ಕಾಶಿ,ಗಯಾ ಪ್ರವಾಸಗಳು. 08.01.2023 22.01.2023 ರಿಂದ 5 ದಿನಗಳ ದುಬೈ,ಅಬುಧಾಬಿ. 18.01.2023 22.02.2023 ರಿಂದ 11 ದಿನಗಳ ಸಿಂಗಾಪುರ್,ಮಲೇಶಿಯಾ 16.01.2023 01.02.2023 ರಿಂದ 8 ದಿನಗಳ ವಿಯಟ್ನಂ ಕಾಂಬೋಡಿಯಾ ಪ್ರವಾಸಗಳಿಗೆ ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು23. 8088887677 080-23385837

15.11.2022ರಿಂದ 11ದಿನಗಳ ಗುಜರಾತ್ ಪ್ರವಾಸ. ಜನವರಿ, ಫೆಬ್ರವರಿ ದುಬೈ, ಹಾಗೂ ಸಿಂಗಪೂರ್ ಪ್ರವಾಸ 10.2.2023 ಕಾಶಿ,ಆಗ್ರಾ, ಮಥುರಾ ಪ್ರವಾಸ 12ದಿನಗಳು. ನಂದಿನಿ ಟೂರಿಸ್ಟ್ 9916574089.

05.11.2022, 2 ದಿನಗಳು ಕೆಮ್ಮಣ್ಣುಗುಂಡಿ, ಮುಳ್ಳಯ್ಯನಗಿರಿ, ಹೆಬ್ಬೆಫಾಲ್ಸ್, ಬಾಬಾಬುಡನಗಿರಿ, ಮಾಣಿಕ್ಯದರಫಾಲ್ಸ್, ಕಲ್ಹತ್ತಿಗಿರಿಫಾಲ್ಸ್, ಕೋದಂಡರಾಮಸ್ವಾಮಿ ಇತ್ಯಾದಿ. ಓಂ ಸಾಯಿರಾಮ್ ಟೂರ್ಸ್. 9481433157

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್14/11/22 ಗುಜರಾತ್, ದ್ವಾರಕಾ, ಬೆಟ್‌ದ್ವಾರಕ, ನಾಗನಾಥ, ಸೋಮನಾಥ, Statue of Unity, ಮಾತೃಗಯಾ, ರಾನಿಕಿವಾವ್. 9591017782,9964527782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಹೆಸರು ಬದಲಾವಣೆಗಾಗಿ
BOOK YOUR NAME CHANGE AD IN PRAJAVANI ALL KARNATAKA ALL DAYS
CHANGE OF NAME @ 50/-* Per Word
*conditions apply
For More Details Contact:
9731810277 | 9901641752
9845114560 | 9886213331
080- 45557160 | 163 | 164

ದಕ್ಷಿಣ ಆಫ್ರಿಕಾ ಎದುರಿನ ಪಂದ್ಯ ಇಂದು; ಸೂರ್ಯಕುಮಾರ್ ಯಾದವ್ ಮೇಲೆ ನಿರೀಕ್ಷೆ

‘ಹ್ಯಾಟ್ರಿಕ್’ ಜಯದತ್ತ ಭಾರತ ಚಿತ್ತ

• ಆರ್. ಕೌಶಿಕ್

ಭಾರತ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಜೊತೆಗೆ ನಾಯಕ ರೋಹಿತ್ ಶರ್ಮಾ ಸಮಾಲೋಚನೆ –ಎಎಫ್‌ಪಿ ಚಿತ್ರ

ಪರ್ತ್: ಭಾರತ ತಂಡವು ಆಸ್ಟ್ರೇಲಿಯಾದಲ್ಲಿ ಒಂದೇ ತರಹದ ಹವಾಮಾನದ ಜೊತೆಗೂಡಿ ಪ್ರಯಾಣಿಸುತ್ತಿರುವಂತಿದೆ. ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತವು ಮೊದಲೆರಡು ಪಂದ್ಯಗಳನ್ನು ಆಡಿದ ಮೆಲ್ಬರ್ನ್ ಹಾಗೂ ಸಿಡ್ನಿಯಲ್ಲಿ ಮಸುಕಾದ ಆಗಸ, ಚಳಿಗಾಳಿ ಮತ್ತು ತುಂತುರು ಮಳೆ ಇತ್ತು.

ಪರ್ತ್‌ನಲ್ಲಿ ಕೂಡ ಶನಿವಾರ ಇಂತಹದೇ ವಾತಾವರಣವಿದೆ. ಪೂರ್ವ ಆಸ್ಟ್ರೇಲಿಯಾದ ರಾಜಧಾನಿಯಲ್ಲಿ ಬೆಳಿಗ್ಗೆ ತುಂತುರು ಮಳೆ ಇದ್ದ ಕಾರಣ ಆಪ್ಟಸ್ ಕ್ರೀಡಾಂಗಣದ ಪಿಚ್ ಸೇರಿದಂತೆ ಬಹುತೇಕ ಭಾಗಕ್ಕೆ ಕ್ರೀಡಾಂಗಣದ ಸಿಬ್ಬಂದಿಯು ಟಾರ್ಪಾಲಿನ್ ಹೊದಿಸಿತ್ತು. ದಿನದಲ್ಲಿ ಒಂದು ಬಾರಿ ಸೂರ್ಯನ ಕಿರಣಗಳ ಬೆಳಕು ಚೆಲ್ಲಿದಾಗ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಹಾಗೂ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಪಿಚ್ ಬಳಿ ಸಾಗಿದರು. ಹಸಿರು ಹೊದ್ದ ಅಂಕಣವನ್ನು ನೋಡಿದರು.

ಭಾನುವಾರ ಇದೇ ಅಂಕಣದಲ್ಲಿ ಭಾರತ ತಂಡವು ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ. ಸೂಪರ್ 12ರ ಎಡನೇ ಗುಂಪಿನಲ್ಲಿ ರೋಹಿತ್ ಬಳಗಕ್ಕೆ ಪಾಕಿಸ್ತಾನ ಹಾಗೂ ದಕ್ಷಿಣ ಆಫ್ರಿಕಾ ಕಠಿಣ ಪೈಪೋಟಿಯೊಡ್ಡುವ ಸಾಮರ್ಥ್ಯವಿರುವ ತಂಡಗಳು. ಆದರೆ ಮೊದಲ ಪಂದ್ಯದಲ್ಲಿಯೇ ಪಾಕಿಸ್ತಾನವನ್ನು ಸೋಲಿಸಿರುವ ಭಾರತ ತಂಡ ತೆಂಬಾ ಬವುಮಾ ಬಳಗವನ್ನೂ ಮಣಿಸುವ ತಂತ್ರಗಾರಿಕೆ ಹೆಣೆಯುತ್ತಿದೆ.

ಉಭಯ ತಂಡಗಳು ಪರಸ್ಪರರ ಸಾಮರ್ಥ್ಯಗಳ ಕುರಿತು ಚೆನ್ನಾಗಿ ತಿಳಿದುಕೊಂಡಿವೆ. ಏಕೆಂದರೆ, ಈ ವರ್ಷ ಎರಡೂ ತಂಡಗಳೂ ಒಂದು ಟೆಸ್ಟ್, ಆರು ಏಕದಿನ ಹಾಗೂ ಏಳು ಟಿ20 ಪಂದ್ಯಗಳಲ್ಲಿ ಮುಖಾಮುಖಿಯಾಗಿವೆ. ಈ ಪೈಕಿ ಟಿ20 ಕ್ರಿಕೆಟ್‌ನಲ್ಲಿ 4–3ರ (ಎರಡು ಪ್ರತ್ಯೇಕ ಸರಣಿ ಸೇರಿ) ಮುನ್ನಡೆಯಲಿದೆ. ಆದರೆ ಇಲ್ಲಿಯ ಪರಿಸ್ಥಿತಿಯೇ ವಿಭಿನ್ನವಾಗಿದೆ. ಉಭಯ ತಂಡಗಳಿಗೆ ವಿಭಿನ್ನ ಸವಾಲು ಎದುರಾಗುವ ನಿರೀಕ್ಷೆಯಿದೆ. ಪಾಯಿಂಟ್ ಪಟ್ಟಿಯಲ್ಲಿ ಭಾರತ ನಾಲ್ಕು ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ದಕ್ಷಿಣ ಆಫ್ರಿಕಾ ಮೂರು ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. ಜಿಂಬಾಬ್ವೆ ಎದುರಿನ ಪಂದ್ಯ ಮಳೆಗಾಹುತಿಯಾಗಿತ್ತು. ಬಾಂಗ್ಲಾ ವಿರುದ್ಧ ತೆಂಬಾ ಬಳಗ ಜಯಿಸಿತ್ತು.

ಒಟ್ಟಿನಲ್ಲಿ ಈ ಎರಡೂ ತಂಡಗಳು ಟೂರ್ನಿಯಲ್ಲಿ ಇದುವರೆಗೆ ಸೋಲಿನ ಮುಖ ನೋಡಿಲ್ಲ. ಈ ಪಂದ್ಯದ ಫಲಿತಾಂಶವು ಪಾಕಿಸ್ತಾನ ತಂಡದ ಸೆಮಿಫೈನಲ್ ಅವಕಾಶದ ಮೇಲೆ ಪರಿಣಾಮ ಬೀರಲಿದೆ. ಆಡಿರುವ ಎರಡೂ ಪಂದ್ಯಗಳಲ್ಲಿ ಬಾಬರ್ ಆಜಂ ಬಳಗ ಸೋತಿದೆ. ಒಂದೊಮ್ಮೆ ದಕ್ಷಿಣ ಆಫ್ರಿಕಾವು ಭಾರತ ವಿರುದ್ಧ ಸೋತರೆ, ಪಾಕ್ ತಂಡಕ್ಕೆ ಅವಕಾಶ ಜೀವಂತವಾಗುಳಿಯಲಿದೆ.

ಆದರೆ, ಸಮತೋಲನವಾಗಿರುವ ತಂಡವನ್ನು ಸೋಲಿಸುವುದು ಭಾರತಕ್ಕೆ ಸುಲಭವಾಗಿಲ್ಲ. ಅನುಭವಿ ವೇಗಿ ಕಗಿಸೊ ರಬಾಡ, ಎನ್ರಿಚ್ ನಾಕಿಯಾ ಹಾಗೂ ವೇಯ್ನ್ ಪಾರ್ನೆಲ್ ಅವರ ಬೌಲಿಂಗ್ ಎದುರು ಭಾರತದ ಬ್ಯಾಟಿಂಗ್ ಪಡೆ ದಿಟ್ಟತನದಿಂದ ಆಡಬೇಕು. ಆರಂಭಿಕ ಬ್ಯಾಟರ್ ಕೆ.ಎಲ್. ರಾಹುಲ್ ಅವರನ್ನು ಬಿಟ್ಟರೆ ಉಳಿದ ಬ್ಯಾಟರ್‌ಗಳು ಅಮೋಘ ಲಯದಲ್ಲಿದ್ದಾರೆ. ರಾಹುಲ್ ತಮ್ಮ ಮೇಲೆ ಅವರಿಸಿರುವ ವೈಫಲ್ಯದ ಕಾರ್ಮೋಡವನ್ನು ಚದುರಿಸುವಂತಹ ಆಟವಾಡಲು ಕಾದಿದ್ದಾರೆ. ವಿರಾಟ್, ಸೂರ್ಯಕುಮಾರ್ ಹಾಗೂ ರೋಹಿತ್ ಉತ್ತಮ ಫಾರ್ಮ್‌ನಲ್ಲಿದ್ದಾರೆ.

ದಕ್ಷಿಣ ಆಫ್ರಿಕಾ ನಾಯಕ ತೆಂಬಾ ಬವುಮಾ ಕೂಡ ಉತ್ತಮ ಲಯದಲ್ಲಿಲ್ಲ. ಬಾಂಗ್ಲಾ ಎದುರಿನ ಪಂದ್ಯದಲ್ಲಿ ಶತಕ ಗಳಿಸಿದ್ದ ರಿಲೀ ರೊಸೊ ಮಧ್ಯಮಕ್ರಮಾಂಕದ ಶಕ್ತಿಯಾಗಿದ್ದಾರೆ. ಡೇವಿಡ್ ಮಿಲ್ಲರ್, ಮರ್ಕರಂ ಹಾಗೂ ಕ್ವಿಂಟನ್ ಡಿಕಾಕ್ ಸ್ಫೋಟಕ ಬ್ಯಾಟಿಂಗ್ ಮಾಡುವ ಸಮರ್ಥರು.

ಪಂದ್ಯ ಆರಂಭ: ಸಂಜೆ 4.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಫಲಿತಾಂಶವಿಲ್ಲ	ಪಾಯಿಂಟ್	ರನ್ ರೇಟ್
ಗುಂಪು 1						
ನ್ಯೂಜಿಲೆಂಡ್	3	2	0	1	5	3.850
ಇಂಗ್ಲೆಂಡ್	3	1	1	1	3	0.239
ಐರ್ಲೆಂಡ್	3	1	1	1	3	-1.169
ಆಸ್ಟ್ರೇಲಿಯಾ	3	1	1	1	3	-1.155
ಶ್ರೀಲಂಕಾ	3	1	2	0	2	-0.890
ಅಫ್ಗಾನಿಸ್ತಾನ	3	0	1	2	2	-0.620
ಗುಂಪು 2						
ಭಾರತ	2	2	0	0	4	1.425
ದಕ್ಷಿಣ ಆಫ್ರಿಕಾ	2	1	0	1	3	5.200
ಜಿಂಬಾಬ್ವೆ	2	1	0	1	3	0.050
ಬಾಂಗ್ಲಾದೇಶ	2	1	1	0	2	-2.375
ಪಾಕಿಸ್ತಾನ	2	0	2	0	0	-0.050
ನೆದರ್ಲೆಂಡ್	2	0	2	0	0	-1.625

ಫಿಲಿಪ್ಸ್ ಶತಕ, ಬೌಲ್ಟ್ ಬಿರುಗಾಳಿ

ಶ್ರೀಲಂಕಾ ವಿರುದ್ಧ ನ್ಯೂಜಿಲೆಂಡ್‌ಗೆ 65 ರನ್ ಗೆಲುವು

ಸಿಡ್ನಿ (ಪಿಟಿಐ): ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ಶನಿವಾರ ನ್ಯೂಜಿಲೆಂಡ್‌ನ ಬ್ಯಾಟರ್ ಗ್ಲೆನ್ ಫಿಲಿಪ್ಸ್ 104 ರನ್ ಗಳಿಸಿದರು. ಶ್ರೀಲಂಕಾ ತಂಡದ ಎಲ್ಲ ಆಟಗಾರರು ಸೇರಿ ಕಲೆಹಾಕಿದ್ದು 102 ರನ್ ಮಾತ್ರ!

ಮಧ್ಯಮ ಕ್ರಮಾಂಕದಲ್ಲಿ ಅಮೋಘ ಆಟವಾಡಿದ ಫಿಲಿಪ್ಸ್ ಗಳಿಸಿದ ಶತಕ ಮತ್ತು ಟ್ರೆಂಟ್ ಬೌಲ್ಟ್ (13ಕ್ಕೆ 4) ಅವರ ಮಾರಕ ಬೌಲಿಂಗ್ ನೆರವಿನಿಂದ ನ್ಯೂಜಿಲೆಂಡ್ ತಂಡದವರು ಟಿ20 ವಿಶ್ವಕಪ್ ಟೂರ್ನಿಯಲ್ಲಿ ಶ್ರೀಲಂಕಾ ತಂಡವನ್ನು 65 ರನ್‌ಗಳಿಂದ ಮಣಿಸಿದರು. ಮೊದಲು ಬ್ಯಾಟ್ ಮಾಡಿದ ನ್ಯೂಜಿಲೆಂಡ್ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 167 ರನ್ ಗಳಿಸಿದರೆ, ದಸುನ್ ಶನಕ ಬಳಗ 19.2 ಓವರ್‌ಗಳಲ್ಲಿ 102 ರನ್‌ಗಳಿಗೆ ಆಲೌಟಾಯಿತು.

ಫಿಲಿಪ್ಸ್ ಶತಕ: ಟಾಸ್ ಗೆದ್ದು ಬ್ಯಾಟ್ ಮಾಡಲು ನಿರ್ಧರಿಸಿದ ನ್ಯೂಜಿಲೆಂಡ್‌ನ ಆರಂಭ ಆಘಾತಕಾರಿಯಾಗಿತ್ತು. ತಂಡದ ಮೊತ್ತ 15 ಆಗುವಷ್ಟರಲ್ಲಿ ಮೂರು ವಿಕೆಟ್ ಉರುಳಿದ್ದವು. ಫಿಲಿಪ್ಸ್ ಮತ್ತು ಡೆರಿಲ್ ಮಿಚೆಲ್ (22 ರನ್, 24 ಎ.) ನಾಲ್ಕನೇ ವಿಕೆಟ್‌ಗೆ 84 ರನ್ ಸೇರಿಸಿ ತಂಡವನ್ನು ಆಪಾಯದಿಂದ ಪಾರು ಮಾಡಿದರು. ಫಿಲಿಪ್ಸ್ ಟಿ20 ಮಾದರಿಯಲ್ಲಿ ತಮ್ಮ ಎರಡನೇ ಶತಕ ಗಳಿಸಿದರು. 64 ಎಸೆತಗಳನ್ನು ಎದುರಿಸಿದ ಅವರು 10 ಬೌಂಡರಿ ಮತ್ತು 4 ಸಿಕ್ಸರ್‌ಗಳನ್ನು ಹೊಡೆದರು.

ಶತಕ ಗಳಿಸಿದ ಗ್ಲೆನ್ ಫಿಲಿಪ್ಸ್ ಸಂಭ್ರಮ –ಎಎಫ್‌ಪಿ ಚಿತ್ರ

ಬೌಲ್ಟ್ ಮಿಂಚು: ಸವಾಲಿನ ಗುರಿ ಬೆನ್ನಟ್ಟಿದ ಲಂಕಾ ತಂಡಕ್ಕೆ ವೇಗಿ ಟ್ರೆಂಟ್ ಬೌಲ್ಟ್ ಆರಂಭದಲ್ಲೇ ಆಘಾತ ನೀಡಿದರು. 24 ರನ್ ಆಗುವಷ್ಟರಲ್ಲಿ ಐದು ವಿಕೆಟ್‌ಗಳನ್ನು ಕಳೆದುಕೊಂಡ ತಂಡಕ್ಕೆ ಆ ಬಳಿಕ ಚೇತರಿಸಿಕೊಳ್ಳಲು ಆಗಲಿಲ್ಲ. ಬೌಲ್ಟ್ ತಮ್ಮ ಮೊದಲ ಸ್ಪೆಲ್‌ನಲ್ಲಿ ಕುಸಲ್ ಮೆಂಡಿಸ್ (4), ಧನಂಜಯ ಡಿಸಿಲ್ವ (0) ಮತ್ತು ಚರಿತ್ ಅಸಲಂಕ (4) ಅವರನ್ನು ಔಟ್ ಮಾಡಿದರು. ಭಾನುಕ ರಾಜಪಕ್ಷ (34 ರನ್, 22 ಎ.) ಹಾಗೂ ದಸುನ್ ಶನಕ (35 ರನ್, 32 ಎ.) ಮಾತ್ರ ಎರಡಂಕಿಯ ಮೊತ್ತ ತಲುಪಿದರು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 167 (ಗ್ಲೆನ್ ಫಿಲಿಪ್ಸ್ 104, ಡೆರಿಲ್ ಮಿಚೆಲ್ 22, ಮಿಚೆಲ್ ಸ್ಯಾಂಟ್ನರ್ ಔಟಾಗದೆ 11, ಕಸುನ್ ರಜಿತಾ 23ಕ್ಕೆ 2, ಮಹೀಶ್ ತೀಕ್ಷಣ 35ಕ್ಕೆ 1, ಧನಂಜಯ ಡಿಸಿಲ್ವ 14ಕ್ಕೆ 1, ವಣಿಂದು ಹಸರಂಗ 22ಕ್ಕೆ 1). ಶ್ರೀಲಂಕಾ 19.2 ಓವರ್‌ಗಳಲ್ಲಿ 102 (ಭಾನುಕ ರಾಜಪಕ್ಷ 34, ದಸುನ್ ಶನಕ 35, ಟ್ರೆಂಟ್ ಬೌಲ್ಟ್ 13ಕ್ಕೆ 4, ಮಿಚೆಲ್ ಸ್ಯಾಂಟ್ನರ್ 21ಕ್ಕೆ 2, ಈಶ್ ಸೋಧಿ 21ಕ್ಕೆ 2).

ಬಿಲಿಯರ್ಡ್ಸ್: ವರ್ಷಾಗೆ ಅಗ್ರಸ್ಥಾನ

ಬೆಂಗಳೂರು: ವರ್ಷಾ ಸಂಜೀವ್ ರಾಜ್ಯ ಬಿಲಿಯರ್ಡ್ಸ್ ಹಾಗೂ ಸ್ನೂಕರ್ ಟೂರ್ನಿಯ ಲೇಡಿಸ್ ಬಿಲಿಯರ್ಡ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

ಶನಿವಾರ ನಡೆದ ಮೊದಲ ಪಂದ್ಯ ದಲ್ಲಿ ವರ್ಷಾ 2–0ಯಿಂದ ಪಿ. ಕೀರ್ತನಾ ವಿರುದ್ಧ ಜಯಿಸಿದರು. ಇನ್ನೊಂದು ಪಂದ್ಯದಲ್ಲಿ ಉಮಾದೇವಿ ವಿರುದ್ಧ ಸೋತರು. ಅಂತಿಮ ಸುತ್ತಿನಲ್ಲಿ ವರ್ಷಾ 2–0ಯಿಂದ ರೂಪಾ ಎದುರು ಪಾರಮ್ಯ ಮೆರೆದರು. ಅಗ್ರಸ್ಥಾನ ಗಳಿಸಿದರು. ಬಿಲಿಯರ್ಡ್ಸ್ ಪುರುಷರ ವಿಭಾಗದಲ್ಲಿ ಸತೀಶ್ ಚಾಬ್ರಾ 3–0ಯಿಂದ ಉದಯ್ ವಿರುದ್ಧ ಗೆದ್ದರು.

ವರ್ಷಾ ಸಂಜೀವ್

ಪಾಕಿಸ್ತಾನಕ್ಕೆ ಜಯ ಅನಿವಾರ್ಯ

ಪರ್ತ್ (ಎಎಫ್‌ಪಿ): ಹಿಂದಿನ ಪಂದ್ಯದಲ್ಲಿ ಜಿಂಬಾಬ್ವೆ ಎದುರು ಅನಿರೀಕ್ಷಿತ ಆಘಾತ ಅನುಭವಿಸಿದ್ದ ಪಾಕಿಸ್ತಾನ ತಂಡ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾನುವಾರ ನೆದರ್ಲೆಂಡ್ಸ್ ತಂಡದ ಸವಾಲು ಎದುರಿಸಲಿದೆ.

ಆಡಿದ ಎರಡೂ ಪಂದ್ಯಗಳಲ್ಲಿ ಸೋತಿರುವ ಬಾಬರ್ ಅಜಂ ಬಳಗ, ಸೆಮಿಫೈನಲ್ ಪ್ರವೇಶವನ್ನು ಜೀವಂತವಾಗಿರಿಸಿಕೊಳ್ಳಬೇಕಾದರೆ ಭಾನುವಾರ ಭಾರಿ ಅಂತರದಿಂದ ಗೆಲುವು ಪಡೆಯುವುದು ಅನಿವಾರ್ಯ.

ಪಾಕಿಸ್ತಾನ- ನೆದರ್ಲೆಂಡ್ಸ್
ಪಂದ್ಯ ಆರಂಭ: ಮಧ್ಯಾಹ್ನ 12.30
ಬಾಂಗ್ಲಾದೇಶ- ಜಿಂಬಾಬ್ವೆ
ಪಂದ್ಯ ಆರಂಭ: ಬೆಳಿಗ್ಗೆ 8.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್ ಆ್ಯಪ್

ಪ್ರೊ ಕಬಡ್ಡಿ ಲೀಗ್: ಭರತ್ ಆಟಕ್ಕೆ ದಬಾಂಗ್ ತಬ್ಬಿಬ್ಬು

ಅಗ್ರಸ್ಥಾನಕ್ಕೇರಿದ ಬೆಂಗಳೂರು

ಪುಣೆ: ಭರತ್ ಅವರ ಚಾಣಾಕ್ಷ ರೇಡಿಂಗ್‌ನ ನೆರವಿನಿಂದ ಬೆಂಗಳೂರು ಬುಲ್ಸ್ ತಂಡದವರು ಪ್ರೊ ಕಬಡ್ಡಿ ಲೀಗ್‌ನಲ್ಲಿ ಗೆಲುವು ಸಾಧಿಸಿದರು.

ಶನಿವಾರ ಇಲ್ಲಿ ನಡೆದ ಪಂದ್ಯದಲ್ಲಿ ಬುಲ್ಸ್ 47-43 ಪಾಯಿಂಟ್ಸ್‌ಗಳಿಂದ ದಬಾಂಗ್ ಡೆಲ್ಲಿ ತಂಡವನ್ನು ಮಣಿಸಿತು. ಎಂಟು ಪಂದ್ಯಗಳಲ್ಲಿ ಐದನೇ ಗೆಲುವು ಪಡೆದ ಬುಲ್ಸ್, ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಪ್ರಥಮಾರ್ಧದಲ್ಲಿ 27–18 ರಿಂದ ಮುನ್ನಡೆ ಸಾಧಿಸಿದ್ದ ಬೆಂಗಳೂರಿನ ತಂಡಕ್ಕೆ ಭರತ್, 20 ಪಾಯಿಂಟ್ಸ್ ತಂದಿತ್ತರು. ಪ್ರತಿ ರೇಡಿಂಗ್‌ನಲ್ಲೂ ಮಿಂಚಿನ ಪ್ರದರ್ಶನ ನೀಡಿದ ಅವರು ಎದುರಾಳಿ ತಂಡವನ್ನು ಕಾಡಿದರು.

ಬುಲ್ಸ್ ತಂಡದ ಸೌರಭ್ ನಂದಾಲ್ 6, ನೀರಜ್ ನರ್ವಾಲ್ 5 ಮತ್ತು ವಿಕಾಸ್ ಖಂಡೋಲ 4 ಪಾಯಿಂಟ್ಸ್ ಗಳಿಸಿದರು.

ನವೀನ್ ಕುಮಾರ್ (16 ಪಾಯಿಂಟ್ಸ್) ಮತ್ತು ಆಶು ಮಲಿಕ್ (15) ಅವರ ಚುರುಕಿನ ಆಟದ ಬಲದಿಂದ ದಬಾಂಗ್ ತಂಡ ಎರಡನೇ ಅವಧಿಯಲ್ಲಿ ಮರುಹೋರಾಟ ನಡೆಸಿದರೂ, ಕೊನೆಯವರೆಗೂ ಮುನ್ನಡೆ ಉಳಿಸಿಕೊಂಡ ಬುಲ್ಸ್ ಗೆಲುವಿನ ನಗು ಬೀರಿತು.

ದಿನದ ಎರಡನೇ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ 30–19 ರಲ್ಲಿ ತೆಲುಗು ಟೈಟನ್ಸ್ ತಂಡವನ್ನು ಪರಾಭವಗೊಳಿಸಿತು. ತಲಾ ಆರು ಪಾಯಿಂಟ್ಸ್ ಗಳಿಸಿದ ರಾಕೇಶ್ ಮತ್ತು ಸೌರವ್ ಗುಲಿಯಾ ಅವರು ಜೈಂಟ್ಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಇನ್ನೊಂದು ಪಂದ್ಯದಲ್ಲಿ ಯು ಮುಂಬಾ ತಂಡವು 36–25ರಿಂದ ಬೆಂಗಾಲ್ ವಾರಿಯರ್ಸ್ ತಂಡವನ್ನು ಪರಾಭವಗೊಳಿಸಿತು.

ಇಂದಿನ ಪಂದ್ಯಗಳು
ಬೆಂಗಳೂರು ಬುಲ್ಸ್- ಜೈಪುರ ಪಿಂಕ್ ಪ್ಯಾಂಥರ್ಸ್
ತಮಿಳ್ ತಲೈವಾಸ್- ದಬಾಂಗ್ ಡೆಲ್ಲಿ

ಬೆಂಗಳೂರು ಬುಲ್ಸ್ ಮತ್ತು ಡೆಲ್ಲಿ ಆಟಗಾರರ ಪೈಪೋಟಿ

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಬೆಂಗಳೂರು	8	5	2	1	29
ಡೆಲ್ಲಿ	8	5	3	0	28
ಪುಣೇರಿ	8	4	2	2	27
ಜೈಪುರ	8	5	3	0	26
ಮುಂಬಾ	8	5	3	0	26
ಗುಜರಾತ್	8	4	3	1	24

ಐಎಸ್‌ಎಲ್: ಎಟಿಕೆಎಂಬಿಗೆ ಜಯ

ಕೋಲ್ಕತ್ತ: ಎಟಿಕೆ ಮೋಹನ್ ಬಾಗನ್ ತಂಡದವರು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ 2-0 ಗೋಲುಗಳಿಂದ ಈಸ್ಟ್ ಬೆಂಗಾಲ್ ಎಫ್‌ಸಿ ತಂಡವನ್ನು ಮಣಿಸಿದರು.

ಸಾಲ್ಟ್‌ಲೇಕ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ 'ಕೋಲ್ಕತ್ತ ಡರ್ಬಿ'ಯಲ್ಲಿ ಬೊಮೌಸ್ (56ನೇ ನಿ.) ಮತ್ತು ಮನ್‌ವೀರ್ (66ನೇ ನಿ.) ಅವರು ಮೋಹನ್ ಬಾಗನ್ ಪರ ಗೋಲು ಗಳಿಸಿದರು.

ಹೈದರಾಬಾದ್‌ಗೆ ಜಯ: ಹೈದರಾಬಾದ್‌ನಲ್ಲಿ ನಡೆದ ದಿನದ ಮೊದಲ ಪಂದ್ಯದಲ್ಲಿ ಹೈದರಾಬಾದ್ ಎಫ್‌ಸಿ 1-0 ಗೋಲಿನಿಂದ ಎಫ್‌ಸಿ ಗೋವಾ ತಂಡವನ್ನು ಪರಾಭವಗೊಳಿಸಿತು.

ಜಿಎಂಸಿ ಬಾಲಯೋಗಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ 10ನೇ ನಿಮಿಷದಲ್ಲಿ ಜೇವಿಯರ್ ಸಿವೆರಿಯೊ ಅವರು ಆತಿಥೇಯ ತಂಡದ ಗೆಲುವಿನ ಗೋಲು ತಂದಿತ್ತರು.

ಎಫ್‌ಸಿ ಗೋವಾ ತಂಡಕ್ಕೆ 83ನೇ ನಿಮಿಷದಲ್ಲಿ ಸಮಬಲದ ಗೋಲು ಗಳಿಸುವ ಅತ್ಯುತ್ತಮ ಅವಕಾಶ ಲಭಿಸಿತ್ತು. ಆದರೆ ಪೆನಾಲ್ಟಿ ಅವಕಾಶದಲ್ಲಿ ಅಲ್ವಾರೊ ವಜ್‌ಕ್ವೆಜ್ ಒದ್ದ ಚೆಂಡು ಗೋಲುಪೆಟ್ಟಿಗೆಯಿಂದ ಹೊರಕ್ಕೆ ಹೋಯಿತು.

ಈ ಗೆಲುವಿನ ಮೂಲಕ ಹೈದರಾಬಾದ್ ಎಫ್‌ಸಿ ತಂಡವು ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಅಹಿದಾ, ಶ್ರೇಯಾಂತ್‌ಗೆ ಪ್ರಶಸ್ತಿ

ಬೆಂಗಳೂರು: ಉತ್ತಮ ಆಟವಾಡಿದ ಅಹಿದಾ ಸಿಂಗ್ ಹಾಗೂ ಶ್ರೇಯಾಂತ್ ಎಂ. ಅವರು ಎಐಟಿಎ ಸಿಎಸ್7 14 ವರ್ಷದೊಳಗಿನವರ ಟೆನಿಸ್ ಟೂರ್ನಿಯ ಸಿಂಗಲ್ಸ್ ಹಾಗೂ ಡಬಲ್ಸ್ ವಿಭಾಗಗಳಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಕೆಎಸ್‌ಎಲ್‌ಟಿಎ ಅಂಗಣದಲ್ಲಿ ಶನಿವಾರ ನಡೆದ ಬಾಲಕಿಯರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಬೆಂಗಳೂರಿನ ಅಹಿದಾ 6-1, 7-6 (5) ರಿಂದ ತಮಿಳುನಾಡಿನ ಮಧುಮಿತಾ ರಮೇಶ್ ಅವರ ಸವಾಲು ಮೀರಿದರು. ಕ್ಲಾರೆನ್ಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿಯಾಗಿರುವ 12 ವರ್ಷದ ಅಹಿದಾಗೆ ಇದು ಸತತ ನಾಲ್ಕನೇ ಸಿಎಸ್7 14 ವರ್ಷದೊಳಗಿನವರ ವಿಭಾಗದ ಪ್ರಶಸ್ತಿಯಾಗಿದೆ.

ಬಾಲಕಿಯರ ಡಬಲ್ಸ್‌ನಲ್ಲಿ ಅಹಿದಾ ಮತ್ತು ಆದ್ಯಾ ರಿತೇಶ್‌ಕುಮಾರ್ 6-3, 6-4ರಿಂದ ರಿಯಾ ಗಂಗಮ್ಮ ಮತ್ತು ನಭಾ ನಿಶಾನ್ ಅವರನ್ನು ಮಣಿಸಿದರು.

ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ ಶ್ರೇಯಾಂತ್ 6-3, 6-4ರಿಂದ ನಿಹಾರ್ ಸುರೇಶ್ ಕುಮಾರ್ ಅವರನ್ನು ಸೋಲಿಸಿದರು. ಡಬಲ್ಸ್‌ನಲ್ಲಿ ತರುಣ್ ಎಚ್. ಜೊತೆಗೂಡಿದ ಶ್ರೇಯಾಂತ್ 6-2, 3-6, 10-5ರಿಂದ ಮೋಹಿತ್ ರೆಡ್ಡಿ-ಅಯಾನ್ ತಾರೀನ್ ಅವರಿಗೆ ಸೋಲುಣಿಸಿದರು.

ಎಐಟಿಎ 18 ವರ್ಷದೊಳಗಿನವರ ಬಾಲಕರ ವಿಭಾಗ ಸಿಂಗಲ್ಸ್‌ನಲ್ಲಿ ಕೆವಿನ್ ಟೈಟಸ್ 6-0, 6-2ರಿಂದ ತಮಿಳುನಾಡಿದ ಆಕಾಶ್ ಎದುರು ಗೆದ್ದು ಪ್ರಶಸ್ತಿ ತಮ್ಮದಾಗಿಸಿಕೊಂಡರು. ಈ ವಿಭಾಗದ ಬಾಲಕಿಯರ ಫೈನಲ್ ಪಂದ್ಯದಲ್ಲಿ ರಾಜ್ಯದ ಸಿರಿ ಪಾಟೀಲ 6-0, 6-3ರಿಂದ ಕರ್ನಾಟಕದವರೇ ಆದ ಗಗನಾ ಮೋಹನ್ ಕುಮಾರ್ ಎದುರು ಗೆದ್ದರು.

ಪ್ರಶಸ್ತಿಗಳೊಂದಿಗೆ ಶ್ರೇಯಾಂತ್ ಎಂ. ಮತ್ತು ಅಹಿದಾ ಸಿಂಗ್

ಕಾರ್ಮಿಕರ ಸ್ಥಳಾಂತರ

ದೋಹಾ (ರಾಯಿಟರ್ಸ್): ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಗೆ ಆತಿಥ್ಯ ವಹಿಸಲಿರುವ ದೋಹಾದ ಕೆಲವು ವಸತಿ ಸಮುಚ್ಚಯಗಳನ್ನು ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಖಾಲಿ ಮಾಡಿಸಿದ್ದಾರೆ.

ಏಷ್ಯಾ ಮತ್ತು ಆಫ್ರಿಕಾದ ಕಾರ್ಮಿಕರು ತಂಗಿದ್ದ ವಸತಿಗಳನ್ನು ಖಾಲಿ ಮಾಡಿಸಿದ್ದರಿಂದ ಸಾವಿರಾರು ಮಂದಿ ಬೀದಿಗೆ ಬಿದ್ದಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ವಿಶ್ವಕಪ್ ಆರಂಭಕ್ಕೆ ಕೇವಲ ನಾಲ್ಕು ವಾರಗಳು ಇರುವಾಗ ಈ ಬೆಳವಣಿಗೆ ನಡೆದಿದೆ.

‘ವಿಶ್ವಕಪ್ ಪಂದ್ಯ ವೀಕ್ಷಿಸಲು ಬರುವವರಿಗೆ ವಸತಿ ಕಲ್ಪಿಸಲು ಅಧಿಕಾರಿಗಳು ಈ ಕ್ರಮಗೊಂಡಿದ್ದಾರೆ’ ಎಂದು ಕಾರ್ಮಿಕರು ಆರೋಪಿಸಿದ್ದಾರೆ.

ಆದರೆ ಇದನ್ನು ಅಲ್ಲಗಳೆದಿರುವ ಅಧಿಕಾರಿಗಳು, ‘ಈ ಕಾರ್ಯಾಚರಣೆಗೂ ವಿಶ್ವಕಪ್ ಟೂರ್ನಿಗೂ ಯಾವುದೇ ಸಂಬಂಧವಿಲ್ಲ. ವಸತಿ ಖಾಲಿ ಮಾಡಿಸುವುದಕ್ಕೂ ಮುನ್ನ ಎಲ್ಲರಿಗೂ ನೋಟಿಸ್ ನೀಡಲಾಗಿತ್ತು. ಅವರಿಗೆ ಪರ್ಯಾಯ ವಸತಿ ಕಲ್ಪಿಸಲಾಗಿದೆ’ ಎಂದು ಸ್ಪಷ್ಟನೆ ನೀಡಿದ್ದಾರೆ.

ಭಾರತ್ ತಂಡದ ಉಜ್ವಲ್ (ಎಡ) ಮತ್ತು ದೇವಾಂಗ ತಂಡದ ಶ್ರೀರಾಮ್ ಅವರ ಪೈಪೋಟಿ –ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್

ಬ್ಯಾಸ್ಕೆಟ್‌ಬಾಲ್: ಭಾರತ್, ದುರ್ಗನ್ಸ್ ಶುಭಾರಂಭ

ಬೆಂಗಳೂರು: ಭಾರತ್ ಎಸ್‌ಯು ಮತ್ತು ದುರ್ಗನ್ಸ್ ತಂಡಗಳು ಶನಿವಾರ ಆರಂಭವಾದ ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಆಶ್ರಯದ ರಾಜ್ಯ ಅಸೋಸಿಯೇಷನ್ ಕಪ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿದವು.

ಕಂಠೀರವ ಕ್ರೀಡಾಂಗಣದ ಕೋರ್ಟ್‌ನಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಭಾರತ್ ತಂಡ 103–85 ರಲ್ಲಿ ದೇವಾಂಗ ಯೂನಿಯನ್ ತಂಡವನ್ನು ಮಣಿಸಿತು. ಪಾಯಿಂಟ್ಸ್ ಗಳಿಕೆಯಲ್ಲಿ ಅರ್ಧಶತಕ (51) ಗಳಿಸಿದ ಅಕ್ಷಯ್, ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ದುರ್ಗನ್ಸ್ ತಂಡ 66–61 ರಲ್ಲಿ ಚಿಕ್ಕಮಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್ ವಿರುದ್ಧ ರೋಚಕ ಜಯ ಸಾಧಿಸಿತು. ಶಿವರಾಜ್ (23) ಮತ್ತು ಪೂರ್ಣ (15) ಅವರು ದುರ್ಗನ್ಸ್ ಪರ ಮಿಂಚಿದರು.

ರಾಜ್‌ಕುಮಾರ್ ತಂಡ 67–42 ರಲ್ಲಿ ಕೆಎಸ್‌ಪಿ ವಿರುದ್ಧ ಗೆದ್ದರೆ, ಡಿಆರ್‌ಡಿಒ 60–30 ರಲ್ಲಿ ಎಸ್‌ಬಿಐ ತಂಡವನ್ನು ಮಣಿಸಿತು. ಇತರ ಪಂದ್ಯಗಳಲ್ಲಿ ಮೈಸೂರಿನ ವಿಜಯನಗರ ಕ್ಲಬ್ 72– 66 ರಲ್ಲಿ ಸಿನ್ಸಿನಾಟಿಕ್ಸ್ ಬಿ.ಸಿ ವಿರುದ್ದ; ಓರಿಯನ್ಸ್ 65–56 ರಲ್ಲಿ ಹೊಸಪೇಟೆಯ ವಿಜಯನಗರ ಕ್ಲಬ್ ವಿರುದ್ದ; ಎಸ್ ಬ್ಲೂಸ್ 92–35 ರಲ್ಲಿ ಬಳ್ಳಾರಿಯ ವೈ.ಸಿ.ಬಿ.ಸಿ ವಿರುದ್ಧ; ಪಟ್ಟಾಭಿರಾಮನ್‌ನಗರ ಕ್ಲಬ್ 41–22 ರಲ್ಲಿ ಎಂಸಿಎಚ್‌ಎಸ್ ಕ್ಲಬ್ ವಿರುದ್ಧ; ಪಿಪಿಸಿ 66– 56 ರಲ್ಲಿ ಗೌರಿಬಿದನೂರಿನ ಪಿನಾಕಿನಿ ವಿರುದ್ಧ ಗೆದ್ದವು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು–2 ರವರ ಕಛೇರಿ, (ಕೆರೆಗಳು) ವಿಭಾಗ, ಬೊಮ್ಮನಹಳ್ಳಿ ವಲಯ, ಕೊಠಡಿ ಸಂಖ್ಯೆ 309, 3ನೇ ಮಹಡಿ, ಆನೆಕ್ಸ್–3 ಕಟ್ಟಡ, ಎನ್. ಆರ್. ಚೌಕ, ಬೆಂಗಳೂರು–560 002.
ಸಂ: ಕಾಪಾಅ–2/ಕೆರೆಗಳು/ಟೆಂಡ್–07/2022–23 ದಿನಾಂಕ: 29.10.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು–2 (ಕೆರೆಗಳು) ವಿಭಾಗ ಬಿಬಿಎಂಪಿ, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	ಪ್ಯಾಕೇಜ್–4: ಗಾರ್ವೆಭಾವಿಪಾಳ್ಯ ಕೆರೆಯಲ್ಲಿ ಅಭಿವೃದ್ಧಿ ಕಾಮಗಾರಿಗಳು.	600.00	9,00,000/-

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು GoK ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ದಿನಾಂಕ: 05.11.2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ ದಿನಾಂಕ : 15.11.2022. 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 23.11.2022ರ ಸಂಜೆ 4.00 ಗಂಟೆಯವರೆಗೆ 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 25.11.2022ರ ಬೆಳಿಗ್ಗೆ 11.00 ಗಂಟೆಗೆ. ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಹಾಗೂ ವೆಬ್‌ಸೈಟ್: https://eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು–2 (ಕೆರೆಗಳು).

ಪಿಲಿಕುಳ PILIKULA ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ
ಆಡಳಿತ ಕಚೇರಿ: ಮೂಡುಶೆಡ್ಡೆ ಅಂಚೆ, ಮಂಗಳೂರು – 575 028, ದೂ : 0824-2263565. ವೆಬ್‌ಸೈಟ್: www.pilikula.com
ಸಂಖ್ಯೆ: ಪಿಡಿಎ.(1)ಸಿಆರ್.65/O & M-BOCs/ 2022-23 ದಿನಾಂಕ: 27.10.2022
ಟೆಂಡರ್ ಪ್ರಕಟಣೆ (Short term through e-proc.only)
ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ buggies ಚಾಲನೆ ಹಾಗೂ ನಿರ್ವಹಣೆ ಕೈಗೊಳ್ಳುವ ಬಗ್ಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರಿಗೆ ಇಟ್ಟ ಮೊತ್ತ- Rs.65,00,000/- 5 years (excluding GST 18%); ಟೆಂಡರ್ ಶುಲ್ಕ -As per e-portal; ಇಎಂಡಿ ಮೊತ್ತ ರೂ. 98,000/- ಅರ್ಹತೆ - Registered Firm/Contractor. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 08.11.2022 ಸಂಜೆ 5.30 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಮೇಲಿನ ದೂರವಾಣಿ ಹಾಗೂ ವೆಬ್‌ಸೈಟ್ ಮೂಲಕ ಪಡೆಯಬಹುದು.
ಸಹಿ/-
ಆಯುಕ್ತರು
DIPR/MNG/774/MPL/22-23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.
ಐ.ಎಫ್.ಟಿ.ಸಂ:ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/3054–ರಾ.ಹೆ& ಜಿ.ಮು.ರ/2022–23/4066 ದಿನಾಂಕ:29.10.2022
ಅಲ್ಪಾವಧಿ ಟೆಂಡರ ಅವಧಿ ವಿಸ್ತರಣೆ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್)
ಉಲ್ಲೇಖ:– ಈ ಕಚೇರಿ ಐ.ಎಫ್.ಟಿ. (ಟೆಂಡರ್) ಸಂ. ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/3054 ರಾ.ಹೆ & ಜಿ.ಮು.ರ/2022–23/3734 ದಿನಾಂಕ–07–10–2022
ಉಲ್ಲೇಖಿತ ಪ್ರಕಟಣೆಯಲ್ಲಿ ಅಹ್ವಾನಿಸಲಾದ ಟೆಂಡರ ಕಾಮಗಾರಿಗಳ ಪೈಕಿ ಉಳಿದ ಕಾಮಗಾರಿಗಳ (ಅ.ನಂ. 1,4,5,13,14 ಮತ್ತು 15) ದಿನಾಂಕಗಳನ್ನು ಕಾರಣಾಂತರಗಳಿಂದ ಮುಂದೂಡಿ, ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.
1. ತುಂಬಿದ ಮೊಹರ ಬಂದ ಟೆಂಡರಗಳನ್ನು ಸ್ವೀಕರಿಸುವ ದಿನಾಂಕ 07–11–2022 ಸಂಜೆ 4:30 ಗಂಟೆಗೆ
2. ಗುತ್ತಿಗೆಗಳನ್ನು ತೆರೆಯುವ ದಿನಾಂಕ (ತಾಂತ್ರಿಕ್ ಬೀಡ್) 09–11–2022 ಮುಂಜಾನೆ 11.00 ಗಂಟೆಗೆ
3. ಗುತ್ತಿಗೆಗಳನ್ನು ತೆರೆಯುವ ದಿನಾಂಕ (ಆರ್ಥಿಕ ಬೀಡ್) 10–11–2022 ಮುಂಜಾನೆ 11.00 ಗಂಟೆಗೆ
ಇನ್ನುಳಿದ ನಿಬಂಧನೆಗಳು / ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವದಿಲ್ಲ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ವಿಜಯಪುರ
ವಾಸಾಸಂಇ/ವಿಜಯಪುರ/495/ಎಂಸಿಎ/2022–23

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.2 ಕಟ್ಟಡಗಳ ವಿಭಾಗ, 1ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. ದೂ.: 080–22122856 ವೆಬ್‌ಸೈಟ್: www.kpwd.gov.in
ಟೆಂಡರ್ ಪ್ರಕಟಣೆ ಸಂಖ್ಯೆ. 25/2022–23 ದಿನಾಂಕ : 28–10–2022
ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಳಸಹಿದಾರರು ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ – 2000 ರನ್ವಯ ಕೆಡಬ್ಲ್ಯು–1 ರ ನಿಯಮಗಳಂತೆ ಈ ಕೆಳಕಂಡ ಕಾಮಗಾರಿಗಳ, ಕನಿಷ್ಠ ರೂ. 837850.11 ಮತ್ತು ಗರಿಷ್ಠ ರೂ. 1785411.46 ಮೊತ್ತದ ವಿವಿಧ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (http://eproc.karnataka.gov.in) ಪಿಡಬ್ಲ್ಯುಡಿಯಲ್ಲಿ ನೋಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಒಂದು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಪ್ರೋಸೆಸಿಂಗ್ ಬೆಲೆ ಮತ್ತು ಇಎಂಡಿ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

ಕ್ರ.ಸಂ	ಕಾಮಗಾರಿಗಳ ವರ್ಕ್ ಇಂಡೆಂಟ್ ಸಂಖ್ಯೆ	ಗುತ್ತಿಗೆದಾರರ ಮೀಸಲಾತಿ ವರ್ಗ
1	KPWD/2021-22/BD/WORK_INDENT 151219, 151221	ಎಸ್‌ಸಿ
2	KPWD/2021-22/BD/WORK_INDENT 151218	ಎಸ್‌ಟಿ
3	KPWD/2021-22/BD/WORK_INDENT 151225, 151220, 151222, 151223, 151224	ಇತರೆ

ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಗೊಳಿಸಿರುವ ಕಾಲಾವಧಿ (ಮಳೆಗಾಲ ಸೇರಿ) : 1 ತಿಂಗಳು.
ಗುತ್ತಿಗೆದಾರರ ದರ್ಜೆ : 4ನೇ ದರ್ಜೆ ಮೇಲ್ಪಟ್ಟು.
(1) ಟೆಂಡರ್ ಡಾಕ್ಯುಮೆಂಟ್‌ನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿರುವ ದಿನಾಂಕ : 29.10.2022 ರಿಂದ 14.11.2022 ಸಂಜೆ 4.00 ಗಂಟೆಯವರೆಗೆ. (2) ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ : 14.11.2022 ಸಂಜೆ 4.30 ಗಂಟೆಯವರೆಗೆ. (3) ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ : 15.11.2022 ರಂದು ಸಂಜೆ 4.30 ಕ್ಕೆ ತೆರೆಯಲಾಗುವುದು. (4) ಸದರಿ ಟೆಂಡರ್ ಪ್ರಕಟಣೆಯಲ್ಲಿ ಯಾವುದಾದರೂ ಮಾರ್ಪಾಡು ಅಥವಾ ಮುಂದೂಡಲ್ಪಟ್ಟ ಮಾಹಿತಿಯನ್ನು ಕೇವಲ (http://eproc.karnataka.gov.in) ನಲ್ಲಿ ಪ್ರಕಟಿಸಲಾಗುವುದು.
ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮೂಲಕ ಪಡೆಯಬಹುದಾಗಿದೆ ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್, ನಂ. 2ನೇ ಕಟ್ಟಡಗಳ ವಿಭಾಗ, ಬೆಂಗಳೂರು
ವಾಸಾಸಂಇ/ವಾ.ಪ್ರ/2827/ಶ್ರೇಷ್ಠ/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಚೇರಿ, ರಸ್ತೆ ಮೂಲಭೂತ ಸೌಕರ್ಯ –ದಕ್ಷಿಣ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು – 560 002.
ಸಂಖ್ಯೆ: ಕಾಪಾಅ/ರಮೂ–ದಕ್ಷಿಣ/ಟೆಂಡರ್/04/2022–23 ದಿನಾಂಕ: 29.10.2022
ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ–ದಕ್ಷಿಣ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಸ್ಟ್ಯಾಂಡರ್ಡ್ ಬಿಡ್ ದಾಖಲೆ – ಕೆಡಬ್ಲ್ಯೂ–4.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ (₹. ಲಕ್ಷಗಳಲ್ಲಿ)
ಪದ್ಮನಾಭನಗರ ವಿಧಾನಸಭೆ ಕ್ಷೇತ್ರದಲ್ಲಿ ಪ್ರಧಾನ ಮತ್ತು ಉಪಪ್ರಧಾನ ಹಾಗೂ ಇತರೆ ಸಂಪರ್ಕಿತ ರಸ್ತೆಗಳಿಗೆ ಸುಧಾರಣೆ ಮತ್ತು ಡಾಂಬರೀಕರಣ ಮಾಡುವುದು. ಸರ್ಕಾರಿ ಆದೇಶ ಕ್ರಮ ಸಂಖ್ಯೆ. 81, 82, 83, 84, 85, 86, 87, 88, 89 & 90 (ಪ್ಯಾಕೇಜ್ ಸಂ.2022–23–ಎಸ್3)	1502.60	15.05 (1.00 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮತ್ತು ಉಳಿಕೆ ಬ್ಯಾಂಕ್ ಖಾತರಿ ಮೂಲಕ)

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ದಿನಾಂಕ: 04.11.2022ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10.11.2022ರ ಸಂಜೆ 5:30 ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 07.11.2022ರ ಮಧ್ಯಾಹ್ನ 3:00 ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ (ರಸ್ತೆ ಮೂಲಭೂತಸೌಕರ್ಯ) ಇಲ್ಲಿ ನಡೆಸಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 14.11.2022ರ ಸಂಜೆ 4:00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಚೇರಿ–ದಕ್ಷಿಣ ವಿಭಾಗ ಇಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತಸೌಕರ್ಯ–ದಕ್ಷಿಣ ವಿಭಾಗ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ರಮೂಸೌ–ಟಿಇಸಿ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು – 560 002.
ಸಂಖ್ಯೆ: ಕಾಪಾಅ/ರಮೂಸೌ/ಟಿಇಸಿ/ಟೆಂಡರ್/08/2022.23 ದಿನಾಂಕ: 29.10.2022
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬೃ.ಬೆಂ.ಮ.ಪಾ) ಪಿಪಿಪಿ ಮಾದರಿಯಡಿಯಲ್ಲಿ ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ಹಸ್ತಾಂತರ [ಡಿಬಿಎಫ್‌ಓಟಿ] ಆಧಾರದಲ್ಲಿ “ಡ್ಯೂರೇಷನ್ ಡೈನಾಮಿಕ್” ಮಾದರಿಯಲ್ಲಿ ವಾಣಿಜ್ಯ ಜಾಹೀರಾತು ಹಕ್ಕುಗಳಡಿ ಕೆ.ಆರ್.ಪುರಂ ಜಂಕ್ಷನ್ ಮತ್ತು ಸಂತೋಷ್ ಚಿತ್ರಮಂದಿರದ ಹತ್ತಿರ ಅವಕಾಶವಿರುವೆಡೆ ಮತ್ತು ಅನುಮೋದಿತ ಪ್ರದೇಶಗಳಲ್ಲಿ ಸ್ಕೈವಾಕ್‌ಗಳನ್ನು ನಿರ್ಮಿಸಲು ಉದ್ದೇಶಿಸಿದೆ. ಸ್ಕೈವಾಕ್‌ಗಳು ಬಿಡ್ ದಸ್ತಾವೇಜಿನಲ್ಲಿ ತಿಳಿಸಿರುವಂತೆ ಲಿಫ್ಟ್ಸ್/ಎಸ್ಕಲೇಟರ್ಸ್ ಅಗತ್ಯವಿರುವೆಡೆಯಲ್ಲಿ ಮೆಟ್ಟಿಲುಗಳೊಂದಿಗೆ ಸುಸಜ್ಜಿತವಾಗಿರುತ್ತವೆ.
ಕಾರ್ಯಪಾಲಕ ಅಭಿಯಂತರರು, ರಮೂಸೌ–ಟಿಇಸಿ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಹೆಸರಾಂತ ಸಂಸ್ಥೆ/ಏಜೆನ್ಸಿಗಳಿಂದ ಈ ಕೆಳಕಂಡ ಪ್ರದೇಶಗಳಲ್ಲಿ ಸ್ಕೈವಾಕ್‌ಗಳನ್ನು ನಿರ್ಮಾಣ ಮಾಡಲು ಸ್ಪರ್ಧಾತ್ಮಕ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ಹೆಸರು	ಸ್ಕೈವಾಕ್‌ಗಳ ಸಂಖ್ಯೆ	ಇಎಂಡಿ (₹.ಲಕ್ಷಗಳಲ್ಲಿ)	ವರ್ಗೀಕರಣ
1	ಕೆ.ಆರ್.ಪುರಂ ಜಂಕ್ಷನ್‌ನಲ್ಲಿ ಅನುಕೂಲಕರ ಮತ್ತು ಅನುಮೋದಿತ ಪ್ರದೇಶಗಳಲ್ಲಿ ವಾಣಿಜ್ಯ ಜಾಹೀರಾತು ಹಕ್ಕುಗಳಡಿಯಲ್ಲಿ "ಡ್ಯೂರೇಷನ್ ಡೈನಾಮಿಕ್" ಆಧಾರದಲ್ಲಿ ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಹಾಗೂ ಹಸ್ತಾಂತರದ [ಡಿಬಿಎಫ್‌ಓಟಿ] ಮೇಲೆ ಪಿಪಿಪಿ ಮಾದರಿಯಲ್ಲಿ ಸ್ಕೈವಾಕ್ ನಿರ್ಮಾಣ ಮಾಡುವುದು. [2ನೇ ಕರೆ]	1	2.50	ಪರಿಶಿಷ್ಟ ಜಾತಿಗೆ ಮೀಸಲಿರಿಸಿದೆ.
		1	2.50	ಪರಿಶಿಷ್ಟ ವರ್ಗಕ್ಕೆ ಮೀಸಲಿರಿಸಿದೆ.
2	ಮೆಜೆಸ್ಟಿಕ್, ಕೆಂಪೇಗೌಡ ರಸ್ತೆಯ ಸಂತೋಷ್ ಚಿತ್ರಮಂದಿರದ ಮುಂಭಾಗದಲ್ಲಿ ವಾಣಿಜ್ಯ ಜಾಹೀರಾತು ಹಕ್ಕುಗಳಡಿಯಲ್ಲಿ "ಡ್ಯೂರೇಷನ್ ಡೈನಾಮಿಕ್" ಆಧಾರದಲ್ಲಿ ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಹಾಗೂ ಹಸ್ತಾಂತರದ [ಡಿಬಿಎಫ್‌ಓಟಿ] ಮೇಲೆ ಪಿಪಿಪಿ ಮಾದರಿಯಲ್ಲಿ ಸ್ಕೈವಾಕ್ ನಿರ್ಮಾಣ ಮಾಡುವುದು. [2ನೇ ಕರೆ]	1	10.00	ಸಾಮಾನ್ಯರಿಗೆ

ಟೆಂಡರ್ ವೇಳಾಪಟ್ಟಿ: (1) ಆರ್‌ಎಫ್‌ಪಿ ದಾಖಲೆಗಳನ್ನು ದಿನಾಂಕ 31.10.2022ರ ಸಂಜೆ 4:00 ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: 03.11.2022ರ ಸಂಜೆ 4:30 ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, (ರಮೂಸೌ) ನಂ.405, ಅನೆಕ್ಸ್ ಕಟ್ಟಡ–3 ಬೃಬೆಂಮಪಾ, ಪ್ರಧಾನ ಕಚೇರಿ ನರಸಿಂಹರಾಜ ಚೌಕ, ಬೆಂಗಳೂರು – 560 002. ಇಲ್ಲಿ ನಡೆಸಲಾಗುವುದು. (3) ಬಿಡ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ 09.11.2022ರ ಸಂಜೆ 4:00 ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 10.11.2022ರ ಸಂಜೆ 4:00 ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್‌ಗಳನ್ನು ಸಮರ್ಥ ಪ್ರಾಧಿಕಾರದಿಂದ ತಾಂತ್ರಿಕ ಬಿಡ್‌ಗಳಿಗೆ ಅನುಮೋದನೆ ದೊರೆತ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್: https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ರ.ಮೂ.ಸೌ–ಟಿ.ಇ.ಸಿ ವಿಭಾಗ

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 30 ಅಕ್ಟೋಬರ್ 2022

ಅರೆ ಬರೆ ಗೆರೆಗಳಲ್ಲಿ ಕನ್ನಡದ ಕಣ್ಮಣಿಗಳು 11

ದಲಿತ, ಆದಿವಾಸಿ ಕಾವ್ಯ ಕಲಾಮೇಳ 13

ಕನ್ನಡದ ನಾಳೆಗಳು...

ಕೆ.ವಿ. ನಾರಾಯಣ

ಕನ್ನಡ ನುಡಿಯ ಇಂದು ನಾಳೆಗಳನ್ನು ವಿವರಿಸಲು ಮುಂದಾಗುವವರಲ್ಲಿ ಕಳೆದ ಮೂರು ದಶಕಗಳಿಂದ ಆತಂಕಗಳು ಮನೆಮಾಡಿವೆ. ಈ ಅವಧಿಯಲ್ಲಿ ಆತಂಕದ ಪ್ರಮಾಣ ಮತ್ತು ಆತಂಕದ ಕಾರಣಗಳು ಮಾತ್ರ ಬದಲಾಗುತ್ತಾ ಬಂದಿವೆ. ಕರ್ನಾಟಕ ಎಂಬ ಆಡಳಿತಾತ್ಮಕ ನೆಲೆಗೆ ಇರುವ ಹಲವು ಗುರುತುಗಳಲ್ಲಿ ಕನ್ನಡ ನುಡಿಯೂ ಒಂದು. ಈ ಗುರುತನ್ನೇ ಮುಂದು ಮಾಡಿಕೊಂಡು ಈ ರಾಜ್ಯ ರಚನೆಯಾದದ್ದು. ಕಳೆದ ಆರೂವರೆ ದಶಕಗಳಲ್ಲಿ ಕನ್ನಡವೆಂಬ ಗುರುತನ್ನು ಮುಂದಿರಿಸಿಕೊಂಡು ಕನ್ನಡ ನುಡಿಯನ್ನಾಡುವವರ ಏಳಿಗೆಯನ್ನು ಕಟ್ಟಲೆಂದು ರೂಪಿಸಿದ ಯೋಜನೆಗಳು ತಲುಪಬೇಕಾದ ಗುರಿಯನ್ನು ತಲುಪಲು ಆಗಿಲ್ಲ. ಮತ್ತೆ ಮತ್ತೆ ಹಿಂಜರಿತವನ್ನೇ ಕಾಣುತ್ತಾ ಬಂದಿವೆ. ಇದಕ್ಕೆ ಇಂಡಿಯಾದ ಮತ್ತು ಲೋಕದ ರಾಜಕಾರಣ, ಸಾಮಾಜಿಕ ಬದಲಾವಣೆಗಳು, ನ್ಯಾಯವಿತರಣೆಯ ಪದ್ಧತಿ, ಆಡಳಿತದ ನೆಲೆ, ಆರ್ಥಿಕ ನೆಲೆಗಳಲ್ಲಿ ಆಗಿರುವ ಪಲ್ಲಟಗಳು- ಇವೆಲ್ಲವೂ ಒಂದಿಲ್ಲ ಒಂದು ಬಗೆಯಲ್ಲಿ ಕಾರಣವಾಗಿವೆ. ಈ ಎಲ್ಲ ಸಂಗತಿಗಳನ್ನು ಸದ್ಯ ಬದಿಗಿರಿಸಿ ಕನ್ನಡದ ಈಗಿನ ಆತಂಕದ ನೆಲೆಗಳನ್ನು ತಿಳಿಯುವ ಅಗತ್ಯವಿದೆ.

ಈ ಆತಂಕಗಳು ಯಾವುವು ಎಂಬುದನ್ನು ಕಂಡುಕೊಂಡು ವಿವರಿಸುವವರು ಒಂದು ಕಡೆ ಇದ್ದರೆ, ಈ ಆತಂಕಗಳ ಪರಿಣಾಮಗಳನ್ನು ಎದುರಿಸುವವರು ಇನ್ನೊಂದು ಕಡೆ ಇದ್ದಾರೆ. ಮತ್ತೊಂದು ಕಡೆ ಈ ಎರಡೂ ವಲಯಗಳನ್ನು ತಮ್ಮ ನಿರ್ಧಾರಗಳು ಮತ್ತು ವರ್ತನೆಗಳ ಮೂಲಕ ಪ್ರಭಾವಿಸುವ ಅಧಿಕಾರ ಕೇಂದ್ರಗಳಿವೆ; ಸಮೂಹ ಮಾಧ್ಯಮಗಳಿವೆ. ಹೀಗಾಗಿ ಕನ್ನಡದ ಇಂದಿನ ಆತಂಕಗಳನ್ನು ವಿವರಿಸುವಾಗ ಯಾರ ದೃಷ್ಟಿಕೋನದಿಂದ ವಿವರಿಸುತ್ತಿದ್ದೇವೆ ಎಂಬುದನ್ನು ಮರೆತು ಮಾತನಾಡುವುದು ಸರಿಯಾಗಲಾರದು.

ಮೊದಲ ಗುಂಪಿನಲ್ಲಿ ಹಲವು ಬಗೆಯವರು ಇದ್ದಾರೆ. ನುಡಿಗಳು ಎದುರಿಸುವ ಆತಂಕಗಳನ್ನು ವಿವರಿಸಲು ಇರುವ ಮಾನದಂಡಗಳನ್ನು ಅರಿತವರು ಇದ್ದಾರೆ. ರಾಜಕೀಯ ಮತ್ತು ಸಾಮಾಜಿಕ ಚಲನಶೀಲತೆಯ ನೆಲೆಯಲ್ಲಿ ವಿವರಿಸುವವರೂ ಇದ್ದಾರೆ. 'ಸತ್ತಂತಿಹರನು ಬಡಿದೆಚ್ಚರಿಸುವ' ಇರಾದೆ, ಉಮೇದುಗಳು ಇರುವವರೂ ಸೇರಿದ್ದಾರೆ. ಇವರೆಲ್ಲರೂ ಹೇಳುವ ಮಾತುಗಳಲ್ಲಿ ಕೆಲವು ಸಮಾನ ಅಂಶಗಳಿವೆ. ಅದರಂತೆ ಕನ್ನಡ ನುಡಿ ನಿಧಾನವಾಗಿ ತನ್ನ ಅವಕಾಶಗಳನ್ನು ಕಳೆದುಕೊಳ್ಳುತ್ತಿದೆ. ಸಾರ್ವಜನಿಕ ಬಳಕೆಯ ವಲಯಗಳೆಂದು ಪರಿಗಣಿಸಲಾಗಿರುವ ಆಡಳಿತ, ನ್ಯಾಯಾಂಗ, ಶಿಕ್ಷಣ ವ್ಯವಸ್ಥೆ, ಸಮೂಹ ಮಾಧ್ಯಮ ಮುಂತಾದವುಗಳಲ್ಲಿ ಇದು ಗೋಚರಿಸುತ್ತದೆ ಎಂದು ಗುರುತಿಸುತ್ತಾರೆ. ಈ ವಲಯಗಳಲ್ಲಿ ಕನ್ನಡ ತನಗಿರುವ ಅವಕಾಶಗಳನ್ನು ಕಳೆದುಕೊಳ್ಳುತ್ತಿದೆ, ಇಲ್ಲವೇ ಇನ್ನೊಂದು ನುಡಿಯ ಜೊತೆಗೆ ಪೈಪೋಟಿ ಮಾಡಬೇಕಾದ ಸ್ಥಿತಿಯಲ್ಲಿದೆ. ಈ ವಿವರಣೆಯನ್ನು ಒಪ್ಪದೇ ಇರುವವರು ಬೇರೊಂದು ಬಗೆಯ ವಾದವನ್ನು ಮಂಡಿಸುತ್ತಾರೆ. ಕನ್ನಡಕ್ಕೆ ಮೊದಲ ಮಣೆಯನ್ನು ಹಾಕಬೇಕೆಂಬ ಸರ್ಕಾರದ ನಿರ್ಧಾರಗಳ ಸರಣಿಯನ್ನು ಎದುರಿಗೆ ಇರಿಸುತ್ತಾರೆ. ಸರಿಯೇ ಸರಿ. ಆದರೆ ನೀತಿನಿರೂಪಣೆಯ ನೆಲೆ ಮತ್ತು ಅವುಗಳನ್ನು ಜಾರಿಗೊಳಿಸುವ ನೆಲೆ ಇವುಗಳಲ್ಲಿ ಇರುವ ಕಂದರವನ್ನು ಗಮನಿಸುವುದು ಅಗತ್ಯ.

ಹಾಗೆ ನೋಡಿದರೆ ಸರ್ಕಾರದ ನಡಾವಳಿಗಳೇ ಕಾರಣವಾಗಿ ಕನ್ನಡದ ಬಳಕೆ ಎಂದಿಗಿಂತ ಹೆಚ್ಚು ಪ್ರಮಾಣದಲ್ಲಿ ಆಗುತ್ತಿದೆ ಎಂಬುದನ್ನು ಒಪ್ಪೋಣ. ಹೀಗೆ ಕನ್ನಡ ಹೆಚ್ಚು ಬಳಕೆಯಾಗುತ್ತಿರುವುದರಿಂದ ಜನರಿಗೆ ಆಡಳಿತವು ಉತ್ತರದಾಯಿಯಾಗುವ ಪ್ರಮಾಣ ಹೆಚ್ಚಾಗಿದೆಯೇ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕಿದೆ. ಸರ್ಕಾರದ ಉತ್ತರದಾಯಿತ್ವದ ಪ್ರಮಾಣ ಹೆಚ್ಚಾಗುವುದಿರಲಿ ಎಂದಿಗಿಂತಲೂ ಕಡಿಮೆಯೇ ಆಗುತ್ತಿದೆ ಎಂಬುದನ್ನು ಗ್ರಹಿಸಲು ಹೆಚ್ಚಿನ ಪುರಾವೆಗಳು ಬೇಕಿಲ್ಲ. ಆಡಳಿತಗಾರರು (ಸಚಿವರು, ಅಧಿಕಾರಿಗಳು) ತೆಗೆದುಕೊಳ್ಳುವ ನಿರ್ಣಯಗಳು, ಆ ನಿರ್ಣಯಗಳನ್ನು ಜಾರಿಗೊಳಿಸುವ ಬಗೆ ಇವೆಲ್ಲವನ್ನೂ ಗಮನಿಸಿದರೆ ಸಾಕು. ಅಂದರೆ ಕನ್ನಡವು ಆಡಳಿತದಲ್ಲಿ ಬಳಕೆಯಾಗುವುದಕ್ಕೂ ಆಡಳಿತವು ಜನರಿಗೆ ಉತ್ತರದಾಯಿಯಾಗುವುದಕ್ಕೂ ನೇರವಾದ ನಂಟು ಇಲ್ಲವೆಂಬುದು ಗೊತ್ತಾಗುತ್ತದೆ.

ಕಳೆದ ಒಂದೆರಡು ದಶಕಗಳಿಗೆ ಹೋಲಿಸಿದರೆ ಕನ್ನಡ ನುಡಿಯು ಸಾರ್ವಜನಿಕ ವಲಯಗಳಲ್ಲಿ ಹೆಚ್ಚು ಹೆಚ್ಚು ಕಾಣಿಸುತ್ತಿದೆ; ಕೇಳಿಸುತ್ತಿದೆ. ಇದಕ್ಕೆ ಮಾರುಕಟ್ಟೆಯ ರೀತಿನೀತಿಗಳು ಮತ್ತು ತಂತ್ರಜ್ಞಾನದ ಬೆಳವಣಿಗೆಗಳು ಕಾರಣವಾಗಿವೆ. ಮಾರುಕಟ್ಟೆಯು ಯೋಜಿತವಾಗಿ ತನ್ನ ಗ್ರಾಹಕ ವಲಯದ ವಿಸ್ತರಣೆಗಾಗಿ ಕನ್ನಡ ನುಡಿಯನ್ನು ಬಳಸಿಕೊಳ್ಳುತ್ತಿದೆ. ಕನ್ನಡದ ಬಳಕೆಗಾಗಿ ಒತ್ತಡ ಹೇರುವ ಗುಂಪುಗಳು ತಮ್ಮ ಒತ್ತಾಯದಿಂದ ಮಾರುಕಟ್ಟೆಯ ವರ್ತನೆಯಲ್ಲಿ ಬದಲಾವಣೆ ಆಗಿದೆ ಎಂದು ವಾದಿಸುತ್ತವೆ. ಈ ಒತ್ತಾಯಗಳ ಜೊತೆಗೆ ಗ್ರಾಹಕರ ವಲಯಗಳಲ್ಲಿ ಕನ್ನಡದ ಜೊತೆಗೆ ಇನ್ನೊಂದು ನುಡಿಯನ್ನು ಬಲ್ಲವರ ಸಂಖ್ಯೆ ಮೊದಲಿಗಿಂತ ಕಡಿಮೆಯಾಗಿ ಕನ್ನಡವನ್ನಷ್ಟೇ ಬಲ್ಲವರು ಹೆಚ್ಚಾಗುತ್ತಿರುವುದರಿಂದ, ಅವರನ್ನು ತಮ್ಮ ವ್ಯಾಪ್ತಿಗೆ ತೆಗೆದುಕೊಳ್ಳಲು ಕನ್ನಡವನ್ನು ಹೆಚ್ಚು ಬಳಸುವುದು ಮಾರುಕಟ್ಟೆಗೆ ಅಗತ್ಯವಾಗಿದೆ. ಇದನ್ನು ಜಾರಿಗೆ ಕೊಡುವಾಗ ಇಂಗ್ಲಿಷನ್ನು ಬಿಟ್ಟುಕೊಡದೆ ಅದರ ಜೊತೆಗೆ ಕನ್ನಡವನ್ನು ಬಳಸುವ ತಂತ್ರವನ್ನು ಬಳಸಲಾಗುತ್ತಿದೆ. ಇದರ ಪರಿಣಾಮದಿಂದ ಕನ್ನಡಕ್ಕೆ ಜಾಗ ಸಿಕ್ಕಿದಂತಾಯಿತೇ ಹೊರತು, ಕನ್ನಡವು ಏನನ್ನಾದರೂ ನಿರ್ದೇಶಿಸುವ ಬಲವನ್ನು ಪಡೆದುಕೊಂಡಿದೆಯೇ ಎಂಬುದನ್ನು ಮತ್ತಷ್ಟು ವಿವರವಾಗಿ ಅಧ್ಯಯನ ಮಾಡಬೇಕಾಗಿದೆ. ಗ್ರಾಹಕ ಸೇವೆಗಾಗಿ ಮೀಸಲಾದ ಫೋನ್ ವ್ಯವಸ್ಥೆಯಲ್ಲಿ ಇಂಗ್ಲಿಶ್ ಜೊತೆಗೆ ಕನ್ನಡವನ್ನು ಹೇಗೆ ಬಳಸಲಾಗುತ್ತಿದೆ ಎಂಬುದನ್ನು ನೋಡಿದರೆ ಇದು ಗೊತ್ತಾಗುತ್ತದೆ. ಕನ್ನಡಕ್ಕೆ ಜಾಗ ಇದೆ. ಇದು ಪರಿಹಾರವನ್ನು ಪಡೆದುಕೊಳ್ಳಲು ನೆರವನ್ನು ನೀಡುತ್ತದೆ. ಆದರೆ ಮಾರುಕಟ್ಟೆಯ ಮೇಲೆ ಕನ್ನಡ ನುಡಿಯೇ ನೇರವಾಗಿ ಯಾವ ಪ್ರಭಾವವನ್ನೂ ಬೀರಲಾರದು.

ಇನ್ನು ತಂತ್ರಜ್ಞಾನವು ಯೋಜಿತವಲ್ಲದ ಬಗೆಯಲ್ಲಿ ಕನ್ನಡ ಕಾಣುವ ಮತ್ತು ಕೇಳುವ ಪ್ರಮಾಣ ಹೆಚ್ಚಾಗಲು ಕಾರಣವಾಗಿದೆ. ಕಂಪ್ಯೂಟರ್‌ಗಳು, ಸ್ಮಾರ್ಟ್‌ಫೋನ್‌ಗಳು ಈಗ ಕನ್ನಡ ಬಳಕೆಗೆ ಮೊದಲಿಗಿಂತ ಹೆಚ್ಚಾಗಿ ಅನುವನ್ನು ಮಾಡಿಕೊಟ್ಟಿವೆ. ಯೂನಿಕೋಡ್ ಅಳವಡಿಕೆಯಿಂದಾಗಿ ಯಾವುದೇ ಕಂಪ್ಯೂಟರ್ ಇಲ್ಲವೇ ಸ್ಮಾರ್ಟ್ ಫೋನ್‌ನಲ್ಲಿ ಕೂಡಾ ಸಲೀಸಾಗಿ ಯಾವುದೇ ಅಡೆತಡೆಗಳಿಲ್ಲದೆ (ಸೀಮ್‌ಲೆಸ್) ಕನ್ನಡದ ಹರಿವು ಸಾಧ್ಯವಾಗಿದೆ. ಫೇಸ್‌ಬುಕ್, ಟ್ವಿಟರ್, ಇನ್‌ಸ್ಟಾಗ್ರಾಮ್ ಮುಂತಾದ ವೇದಿಕೆಗಳಲ್ಲೂ ಕನ್ನಡವನ್ನು ಕಾಣುವುದು ಸುಲಭವಾಗಿದೆ. ಇಲ್ಲೆಲ್ಲಾ ಕನ್ನಡವನ್ನು ತುಂಬುತ್ತಿರುವವರ ಪ್ರಮಾಣವೂ ಕಳೆದ ಕೆಲವು ವರ್ಷಗಳಿಂದ ಹೆಚ್ಚಾಗುತ್ತಲೇ ಹೋಗುತ್ತಿದೆ. ಇವೆಲ್ಲವೂ ಒಂದು ಯೋಜನೆಗೆ ಅನುಗುಣವಾಗಿ ನಡೆಯುತ್ತಿರುವ ಚಟುವಟಿಕೆಗಳಲ್ಲ. ತಂತ್ರಜ್ಞಾನ ಹುಟ್ಟುಹಾಕಿದ ತೆರಪನ್ನು ತುಂಬಲು ತಂತಾನೇ ನಡೆಯುತ್ತಿರುವ ಚಟುವಟಿಕೆಗಳು.

ಇದಲ್ಲದೆ ಕೇಳುವ ಕನ್ನಡದ ಪ್ರಮಾಣ ಕೂಡಾ ಹೆಚ್ಚಾಗುತ್ತಿದೆ. ಯೂಟ್ಯೂಬ್ ಮೊದಲಾಗಿ ಹಲವು ವೇದಿಕೆಗಳಲ್ಲಿ ಬಗೆಬಗೆಯಲ್ಲಿ ಕನ್ನಡ ಕೇಳಲು ಸಿಗುತ್ತಿದೆ. ಮಾಹಿತಿ, ಮನರಂಜನೆ, ತಿಳಿವಳಿಕೆ, ವಾಗ್ವಾದಗಳು ಇವೇ ಮುಂತಾದ ವಲಯಗಳಲ್ಲಿ ಗಂಟೆಗಟ್ಟಲೆ ಕನ್ನಡ ಸೇರ್ಪಡೆಯಾಗುತ್ತಲೇ ಇದೆ. ಇದಲ್ಲದೆ ಒಂದೆರಡು ವರ್ಷಗಳಿಂದ ಬೇರೆ ನುಡಿಯ ಸಿನಿಮಾಗಳನ್ನು ಕನ್ನಡಕ್ಕೆ ಡಬ್ ಮಾಡಲು ಅನುವು ದೊರೆತ ಮೇಲಂತೂ ನೆರೆಯ ನಾಡುಗಳ ನುಡಿಯ ಸಿನಿಮಾಗಳು, ಕೆಲವು ಅನ್ಯ ನುಡಿಯ ದೃಶ್ಯ ಸರಣಿಗಳು ಕನ್ನಡ ದನಿಯಲ್ಲಿ ಕೇಳಲು ಒದಗುತ್ತಿವೆ. ಮೊದಲೂ ಇಂತಹ ಪ್ರಯತ್ನಗಳು ನಡೆಯುತ್ತಿದ್ದವು. ಆದರೂ ಈಗಣ ಪ್ರಯತ್ನಗಳು ಹೆಚ್ಚು ತರಬೇತಿ ಪಡೆದವರ ಮೂಲಕ ನಡೆಯುತ್ತಿದೆ. ಗೂಗಲ್ ಟ್ರಾನ್ಸ್‌ಲೇಟ್ ಒದಗಿಸಿರುವ ಸೌಲಭ್ಯದಿಂದ ಇದೆಲ್ಲವೂ ಹೆಚ್ಚು ವೇಗವಾಗಿ ನಡೆಯುವುದು ಸಾಧ್ಯವಾಗುತ್ತಿದೆ. ಗೂಗಲ್ ಟ್ರಾನ್ಸ್‌ಲೇಟ್ ಅನ್ನು ಎಷ್ಟೇ ಗೇಲಿ ಮಾಡಿದರೂ ಅದಕ್ಕಾಗಿ ಸಿದ್ಧಪಡಿಸಿರುವ ಚೌಕಟ್ಟು ದಿನೇದಿನೇ ಪರಿಷ್ಕಾರಗೊಳ್ಳುತ್ತಲೇ ಇದೆ. ಈ ನೆಲೆಯ ಪ್ರಯತ್ನಗಳೆಲ್ಲ ಯೋಜಿತ ಮತ್ತು ನಿಯಂತ್ರಿತ ಎಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಗೂಗಲ್ ಮೊದಲಾದ ಸರ್ಚ್ ಎಂಜಿನ್‌ಗಳು ಕನ್ನಡದ ಮೂಲಕ ಹುಡುಕಲು ಅವಕಾಶ ನೀಡುತ್ತವೆ. ಯೂಟ್ಯೂಬ್ ಕೂಡಾ ಈ ಅವಕಾಶವನ್ನು ಒದಗಿಸಿದೆ. ಆದರೆ ಅದರ ಮೂಲಕ ನಮಗೆ ದೊರಕುವ ಮಾಹಿತಿ ಮಾತ್ರ ನಮ್ಮ ನಿಯಂತ್ರಣದಿಂದ ಹೊರಗಿರುವ ಅಲ್ಗಾರಿದಂನಿಂದ ನಿರ್ದೇಶಿತವಾಗುತ್ತದೆ.

ಗೂಗಲ್ ಟ್ರಾನ್ಸ್‌ಲೇಟ್‌ಗೆ ಬೇಕಾಗಿರುವ ಪದನೆರಿಕೆಯನ್ನು (ಕಾರ್ಪಸ್) ಬೆಳೆಸಲು ಚಾಲನೆಗೆ ಕೊಟ್ಟಿರುವ ವ್ಯವಸ್ಥೆಯು, ಕನ್ನಡದ ಎಲ್ಲ ಒಳನುಡಿಗಳಿಗೂ ತೆರೆದುಕೊಂಡಿರುವ ಸಾಧ್ಯತೆಗಳು ಕಡಿಮೆ ಎಂದು ತೋರುತ್ತದೆ. ಬಳಕೆಯ ಕನ್ನಡದ ಎಲ್ಲ ಮಾದರಿಗಳಿಂದ ಪದಗಳು, ಪದ ಸಂಯೋಜನೆಗಳು, ಪದಸಂಸರ್ಗಗಳು ಅದಕ್ಕೆ ಸೇರ್ಪಡೆಯಾಗುತ್ತಿಲ್ಲ. ಒಂದು ಗೊತ್ತಾದ ಮಾದರಿಯ (ಹಲವರು ಶುದ್ಧ ಮತ್ತು ಶಿಷ್ಟ ಎಂದು ಪ್ರತಿಪಾದಿಸುವ) ಕನ್ನಡಕ್ಕೆ ಮಾತ್ರ ಅದು ತೆರೆದುಕೊಂಡಂತೆ ತೋರುತ್ತದೆ. ಸಿನಿಮಾಗಳನ್ನು ಡಬ್ ಮಾಡುವಾಗ ಮೂಲದ ಮಾತುಗಳನ್ನು ಕನ್ನಡಕ್ಕೆ ಅನುವಾದಿಸುವವರು ಮತ್ತು ಅದನ್ನು ನುಡಿಯುವವರು ಕನ್ನಡದ ಸಾಧ್ಯತೆಗಳೆಲ್ಲಕ್ಕೂ ಇನ್ನೂ ತೆರೆದುಕೊಂಡಿಲ್ಲ. ಒಂದೋ ಇದು ಅನುವಾದಕರ ಮಿತಿ ಇಲ್ಲವೇ ಮಾತುಗಳನ್ನು ನುಡಿಯುವವರ ಮಿತಿ ಎಂಬಂತಿದೆ. ಇದು ಹೆಚ್ಚು ಪರಿಷ್ಕಾರಗೊಳ್ಳಲು ಅವಕಾಶಗಳಿವೆ.

ಕಾಣುವ ಕನ್ನಡ ಮತ್ತು ಕೇಳುವ ಕನ್ನಡ ಹೀಗೆ ವಿಸ್ತಾರವನ್ನು ಪಡೆದುಕೊಳ್ಳುತ್ತಿರುವಾಗಲೇ ಗಮನಿಸಬೇಕಾದ ಸಂಗತಿ ಒಂದಿದೆ. ಅದೆಂದರೆ ಈ ಕನ್ನಡಗಳಿಗೆ ಜೀವಾವಧಿ ಅಷ್ಟೇ ತೀವ್ರವಾಗಿ ಕಡಿಮೆಯಾಗುತ್ತಿದೆ. ಮಿಂಚಿ ಮರೆಯಾಗುವಂತೆ ಈ ಕನ್ನಡಗಳು ಆಯಾ ಹೊತ್ತಿನ ಆಚೆಗೆ ಉಳಿದುಕೊಳ್ಳುವ, ದೊರಕುವ ಅವಕಾಶಗಳು ಕಡಿಮೆಯಾಗುತ್ತಿವೆ. ಈ ಕನ್ನಡವನ್ನು ಕಾಣುತ್ತಿರುವವರು ಮತ್ತು ಕೇಳುತ್ತಿರುವವರರು ಯಾರೂ ಈ 'ನಶ್ವರತೆ'ಗೆ ತಲೆಕಡೆಸಿಕೊಳ್ಳುತ್ತಿಲ್ಲ. ಈ ಪ್ರಮಾಣದ ಕನ್ನಡವನ್ನು ಸೃಷ್ಟಿಸುತ್ತಿರುವವರಿಗೆ ತಮ್ಮ ಸೃಷ್ಟಿಯ ಮೇಲಿನ ಹಕ್ಕುಗಳನ್ನು ಸಾಧಿಸುವ ಇರಾದೆಯಾಗಲೀ ಅವಕಾಶವಾಗಲೀ ಇಲ್ಲವಾಗಿದೆ.

ಈ ಪರಿಸ್ಥಿತಿಯಲ್ಲಿ ಹೀಗೆ ಕನ್ನಡದ ಬಳಕೆಯ ಹೆಚ್ಚಳವಾಗುತ್ತಿರುವುದು ಕನ್ನಡವನ್ನು ಬಲಗೊಳಿಸುತ್ತಿದೆಯೇ? ಕನ್ನಡ ನುಡಿಯನ್ನು ಆಡುವವರಿಗೆ ವಿಶೇಷ ಕಸುವನ್ನು ತುಂಬುತ್ತಿದೆಯೇ? ಕನ್ನಡ ನುಡಿಯನ್ನು ಆಡುವವರು ಇದರಿಂದ ನಿರಾಳತೆಯನ್ನು ಅನುಭವಿಸುವಂತೆ ತೋರುತ್ತಿಲ್ಲ. ಹಾಗಿದ್ದಲ್ಲಿ ಆತಂಕಕ್ಕೆ ಬೇರೆ ನೆಲೆಗಳು ಇವೆಯೆಂದು ತೋರುತ್ತದೆ. ಈಗ ಮೊದಲಿಗಿಂತಲೂ ಹೆಚ್ಚಾಗಿ ಚರ್ಚೆಗೆ ಬರುತ್ತಿರುವ ವಿಷಯಗಳು ಎರಡು 1. ಕನ್ನಡಕ್ಕೆ ಇತರ ನುಡಿಗಳಿಂದ ಇರುವ ಅಪಾಯಗಳು 2. ಕನ್ನಡಿಗರಿಗೆ ದುಡಿಯುವ ಅವಕಾಶಗಳು ಕುಗ್ಗುತ್ತಿರುವುದು. ಇವೆರಡೂ ಮೇಲುನೋಟಕ್ಕೆ ಬೇರೆ ಬೇರೆ ಸಂಗತಿಗಳೆಂದು ತೋರಿದರೂ ಒಳಪದರದಲ್ಲಿ ಇವುಗಳ ನಡುವೆ ನಂಟು ಇದೆ. ಕೆಲವು ದಶಕಗಳವರೆಗೆ ಕನ್ನಡ ನುಡಿಯು ಸಂಸ್ಕೃತ ಮತ್ತು ಇಂಗ್ಲಿಷ್ ನುಡಿಗಳೊಡನೆ ಪೈಪೋಟಿ ನಡೆಸಬೇಕಿದೆ ಎಂಬ ನಿಲುವುಗಳು ಪ್ರಬಲವಾಗಿದ್ದವು. ಸಂಸ್ಕೃತವು ಕನ್ನಡಿಗರ ದುಡಿಯುವ ಅವಕಾಶಗಳನ್ನು ಕುಗ್ಗಿಸುವ ನುಡಿಯಲ್ಲ. ಆದರೆ ಇಂಗ್ಲಿಷ್ ಕನ್ನಡಿಗರಿಗೆ ದುಡಿಯುವ ಅವಕಾಶಗಳನ್ನು ಹೆಚ್ಚಿಸುವ ನುಡಿ ಎಂಬ ನಂಬಿಕೆ ಬಹಳ ಗಾಢವಾಗಿ ಜನರಲ್ಲಿ ಬೇರೂರಿದೆ. ಮತ್ತು ಅದನ್ನು ದೃಢಪಡಿಸುವ ನಡೆಗಳು ಹಲವು ವಲಯಗಳಲ್ಲಿ ಕಂಡುಬಂದಿವೆ.

11ನೇ ಪುಟಕ್ಕೆ...

ಕನ್ನಡ ಚಿತ್ರರಂಗ: ನಷ್ಟದ ತೇರು

ಹೌದು, ನಮ್ಮ ಚಲನಚಿತ್ರಗಳಿಗೇಕೆ ಒಟಿಟಿ ಅವಕಾಶಗಳು ಸಿಗುತ್ತಿಲ್ಲ?

ಎನ್‌.ಎಸ್‌. ಶಂಕರ್

ಒಂದು ಕಾಲವಿತ್ತು. ಆಗ ಚಿತ್ರವಿತರಣಾ ಕಚೇರಿಯಲ್ಲಿ ಒಂದು ಸೂಪರ್‌ಹಿಟ್ ಚಿತ್ರವಿದ್ದರೆ, ಇನ್ನು ಹಲವಾರು ಸುಮಾರಾದ ಚಿತ್ರಗಳಿರುತ್ತಿದ್ದವು. ಸಹಜವಾಗಿಯೇ ಸೂಪರ್‌ಹಿಟ್ ಚಿತ್ರಗಳಿಗೆ 'ಡಿಮಾಂಡಪ್ಪೋ ಡಿಮಾಂಡು'! ಆಗ ವಿತರಕರು ಸೂಪರ್‌ಹಿಟ್ ಚಿತ್ರದ ಜೊತೆ ಇತರೆ ಚಿತ್ರಗಳನ್ನೂ ಜೋಡಿಸಿ ಕಡ್ಡಾಯ ಮಾಡಿ ಚಿತ್ರಮಂದಿರಗಳಿಗೆ ಹಂಚುತ್ತಿದ್ದರು. ಮತ್ತು ಆಗೆಲ್ಲ ಪರ್ಸೆಂಟೇಜ್ ಪದ್ಧತಿ. ಹೆಚ್ಚೋ ಕಮ್ಮಿಯೋ, ಅಂತೂ ಗಲ್ಲಾಪೆಟ್ಟಿಗೆಯಲ್ಲಿ ಎಷ್ಟೇ ಸಂಗ್ರಹವಾದರೂ, ನಿರ್ಮಾಪಕನಿಗಿಷ್ಟು, ಚಿತ್ರಮಂದಿರಕ್ಕಿಷ್ಟು ಎಂದು ಹಂಚಿಕೆಯಾಗುತ್ತಿತ್ತು. ಹಾಗಾಗಿ ಎಂಥ ಫ್ಲಾಪ್ ಸಿನಿಮಾ ಆದರೂ ನಾಲ್ಕು ಕಾಸು ಆದಾಯ ನೋಡದೆ ಇರುತ್ತಿರಲಿಲ್ಲ. ಹೂಡಿಕೆದಾರ ಬರಬಾದ್ ಆಗುತ್ತಿರಲಿಲ್ಲ. ಯಾವಾಗ ಪರ್ಸೆಂಟೇಜ್ ಪದ್ಧತಿ ಹೋಗಿ ಚಿತ್ರಮಂದಿರ ಬಾಡಿಗೆ ವ್ಯವಸ್ಥೆ ಬಂತೋ, ಆಗ ನಿರ್ಮಾಪಕ ನಿಜಕ್ಕೂ ಅನಾಥನಾದ. ನಷ್ಟದ ಸಂಪೂರ್ಣ ಹೊರೆ ಈಗ ಅವನೊಬ್ಬನ ತಲೆಯ ಮೇಲೇ ಬಿತ್ತು.

ಹಾಗಾಗಿ ಕನ್ನಡ ಚಿತ್ರರಂಗ ನಿಜ ಅರ್ಥದಲ್ಲಿ ಎಂದೂ ಉದ್ದಿಮೆಯಾಗಲೇ ಇಲ್ಲ. ಯಾಕೆಂದರೆ ಚಿತ್ರೋದ್ಯಮವೇ ಒಟ್ಟಾರೆಯಾಗಿ ನಷ್ಟದ ಕಾರುಬಾರು (ಜಗತ್ತಿನಾದ್ಯಂತ ಇದೇ ನಿಜ.) ಯಶಸ್ಸು ಕಾಣುವುದು ಸರಾಸರಿ ಶೇಕಡಾ ಹತ್ತು ಸಿನಿಮಾಗಳಾದರೆ, ಇನ್ನು ಶೇಕಡಾ ಹತ್ತು ಅಲ್ಲಿಗಲ್ಲಿಗೆ. ಉಳಿದಂತೆ ನೂರಕ್ಕೆ ಎಂಬತ್ತು ಭಾಗ ಭಸ್ಮವಾಗುತ್ತವೆ. ಆ ಎಂಬತ್ತು ಚಿತ್ರಗಳ ನಿರ್ಮಾಪಕರು ಶಾಶ್ವತವಾಗಿ ನಾಪತ್ತೆಯಾಗುತ್ತಾರೆ. ಮತ್ತೆ ಹೊಸಬರು ಬರುತ್ತಾರೆ. ನಷ್ಟದ ತೇರು ಮುನ್ನಡೆಸುತ್ತಾರೆ. ಬಂದವರು ಕೆಲವು ಕಾಲ ಸಕ್ರಿಯವಾಗಿದ್ದು, ನಂತರ ಮುಂದೊಮ್ಮೆ ಚಿತ್ರರಂಗಕ್ಕೆ ರಕ್ತದಾನ ಮಾಡಿ ಮರೆಯಾಗುತ್ತಾರೆ.

ಯಶಸ್ವಿ ಚಿತ್ರಗಳಿಗಾದರೆ ಸಮಸ್ಯೆಯೇ ಇಲ್ಲ. ಎಲ್ಲ ಕಾಲದಲ್ಲೂ ಎಲ್ಲರೂ ಗೆದ್ದ ಎತ್ತಿನ ಬಾಲವನ್ನೇ ತಾನೇ ಹಿಡಿಯುವುದು? ಆದರೆ, ಒಟ್ಟಾರೆ ಚಿತ್ರೋದ್ಯಮದ ಯಶಸ್ಸನ್ನು ಅಳೆಯುವಾಗ ಕೇವಲ ಗೆದ್ದ ಚಿತ್ರಗಳ ಲೆಕ್ಕ ಹಿಡಿದರೆ ಪ್ರಯೋಜನವಿಲ್ಲ. ಸೋತ ನತದೃಷ್ಟರು ಎಷ್ಟು ಸುರಕ್ಷಿತ ಎಂಬುದೇ ನಿಜ ಮಾನದಂಡವಾಗಬೇಕು. ಅದಕ್ಕಾಗಿಯೇ 60ರ ದಶಕದ ವಿತರಣಾ ವ್ಯವಸ್ಥೆ ಮತ್ತು ಪರ್ಸೆಂಟೇಜ್ ಹಂಚಿಕೆಯ ಪ್ರಸ್ತಾಪ ಮಾಡಿದ್ದು. ಆಗ ಗೆದ್ದವರೂ ಸಂತುಷ್ಟರು; ಸೋತವರೂ ತೀರಾ ಬೀದಿಗೆ ಬೀಳದ ಹಾಗೆ ಉದ್ದಿಮೆಯೇ ಆತುಕೊಳ್ಳುತ್ತಿತ್ತು.



ಈಗ ಸಿನಿಮಾ ಅರ್ಥವ್ಯವಸ್ಥೆ ನಖಶಿಖಾಂತ ಬದಲಾಗಿಹೋಗಿದೆ.

ಈಗೇನೋ ಮಲ್ಟಿಪ್ಲೆಕ್ಸ್‌ಗಳು ಬಂದ ಮೇಲೆ ಚಿತ್ರಮಂದಿರದ ಜೊತೆ ಗಳಿಕೆ ಹಂಚಿಕೊಳ್ಳುವ ಪರ್ಸೆಂಟೇಜ್ ಪದ್ಧತಿಯೇನೋ ಮತ್ತೆ ಬಂದಿದೆ. ಆದರೆ ಈಗ ನಿರ್ಮಾಪಕನ ಸ್ವಾತಂತ್ರ್ಯವೇ ಮೊಟಕಾಗಿದೆ. ಅಂದರೆ ಮಲ್ಟಿಪ್ಲೆಕ್ಸ್‌ನಲ್ಲಿ ತನ್ನ ಚಿತ್ರವನ್ನು ಯಾವ ಪರದೆಯಲ್ಲಿ ಹಾಕಬೇಕು, ದಿನಕ್ಕೆ ಎಷ್ಟು ಪ್ರದರ್ಶನ ಕೊಡಬೇಕು, ಚಿತ್ರಮಂದಿರದಿಂದ ಯಾವಾಗ ತೆಗೆಯಬೇಕು- ಈ ಯಾವ ವಿಷಯದಲ್ಲೂ ನಿರ್ಮಾಪಕನಿಗೆ ಹತೋಟಿಯಿಲ್ಲ. ಅದರಲ್ಲೂ ಕನ್ನಡ ಚಿತ್ರ ನಿರ್ಮಾಪಕನಂತೂ ತನ್ನ ನೆಲದಲ್ಲೇ ಎರಡನೇ ದರ್ಜೆಯ ಪ್ರಜೆ! ಮತ್ತು ಈ ಸಮಸ್ಯೆ ಈವತ್ತಿಗೂ ಬಗೆಹರಿದಿಲ್ಲ.

ಸಿನಿಮಾ ಅರ್ಥವ್ಯವಸ್ಥೆ ಬದಲಾದಾಗಲೆಲ್ಲ ಒಟ್ಟಾರೆ ಸಿನಿಮಾ ಕೂಡ ಬದಲಾಗಿದೆ. ಸಿನಿಮಾದ ತಿರುಳು ಬದಲಾಗಿದೆ. ಸಿನಿಮಾದ ರುಚಿ ಬದಲಾಗಿದೆ. ಹಿಂದಿ ಚಿತ್ರರಂಗ ಮಲ್ಟಿಪ್ಲೆಕ್ಸ್ ಸಂಸ್ಕೃತಿ ಬಂದ ಕೂಡಲೇ ಹೊಸ ಹುರುಪಿನಿಂದ ಮೇಲೆದ್ದಿದ್ದನ್ನು ಕಂಡಿದ್ದೇವೆ. ಅದುವರೆಗೆ ಒಂದು ಚಿತ್ರ ಯಶಸ್ವಿ ಅನಿಸಿಕೊಳ್ಳಬೇಕಾದರೆ ಶತದಿನ, ಬೆಳ್ಳಿಹಬ್ಬಗಳನ್ನು ಆಚರಿಸಿಕೊಳ್ಳಬೇಕಿತ್ತು. ಈಗ ಹಾಗಲ್ಲ. ಈಗ ಮಲ್ಟಿಪ್ಲೆಕ್ಸ್‌ಗಳ 'ಗೋಲ್ಡ್ ಕ್ಲಾಸ್' ಅರ್ಥವ್ಯವಸ್ಥೆಯೇ ಚಿತ್ರರಂಗವನ್ನು ಪೊರೆಯತೊಡಗಿದೆ.

ನಮ್ಮದೇ 'ಉಲ್ಟಾ ಪಲ್ಟಾ' ಬಿಡುಗಡೆಯಾದಾಗ ಕಪಾಲಿ ಚಿತ್ರಮಂದಿರದಲ್ಲಿ ಬಾಲ್ಕನಿ 20 ರೂಪಾಯಿ, ಗಾಂಧಿ ಕ್ಲಾಸ್ 10 ರೂಪಾಯಿ. ಮೊನ್ನೆ ನನ್ನ ಮಗ ಒರಾಯನ್ ಮಾಲ್‌ನಲ್ಲಿ 280 ರೂಪಾಯಿ ಕೊಟ್ಟು ಕಾಂತಾರ ನೋಡಿ ಬಂದ! ಇದರಿಂದಾದ ಪರಿಣಾಮವೆಂದರೆ, ಮಲ್ಟಿಪ್ಲೆಕ್ಸ್ ಸಂಪೂರ್ಣ ಹೊಸ ಮಾರುಕಟ್ಟೆಯನ್ನೇ ಸೃಷ್ಟಿಸಿತು. ಹೊಸ ಬಗೆಯ ಸಣ್ಣ ಚಿತ್ರಗಳು ಧೈರ್ಯವಾಗಿ ಮಾರುಕಟ್ಟೆಗೆ ಇಳಿದವು, ಗೆದ್ದೂ ಗೆದ್ದವು. ಆಗಲೇ ಹೇಳಿದ ಹಾಗೆ, ಹೊಸ ಸಿನಿಮಾ ಅರ್ಥವ್ಯವಸ್ಥೆ, ಹೊಸ ಸಿನಿಮಾಗೆ ದಾರಿ ಮಾಡಿಕೊಟ್ಟಿತು. ಹೊಸ ಆಲೋಚನೆಗಳು ಬಂದವು. ಅನುರಾಗ್ ಕಶ್ಯಪ್‌ನಂಥ ಹೊಸ ರಕ್ತ ಹರಿಯತೊಡಗಿತು. ಸೋಲು-ಗೆಲುವಿನ ವ್ಯಾಖ್ಯಾನವೇ ಬದಲಾಗತೊಡಗಿತು. ಈ ಸನ್ನಿವೇಶದಲ್ಲಿ ಕಣ್ಣೆದುರು ಹೀನಾಯವಾಗಿ ಸೋತ ಚಿತ್ರ ಕೂಡ 100 ಕೋಟಿ ಕ್ಲಬ್ ಸೇರಿಕೊಂಡ ಪವಾಡ ಸಂಭವಿಸತೊಡಗಿತು! ಮೊನ್ನೆ ಸೂಪರ್ ಡೂಪರ್ ಫ್ಲಾಪ್ ಅನಿಸಿದ ಅಮೀರ್ ಖಾನನ 'ಲಾಲ್ ಸಿಂಗ್ ಚಡ್ಡಾ' ('ಫಾರೆಸ್ಟ್ ಗಂಪ್' ಚಿತ್ರದ ಅಧಿಕೃತ ರೀಮೇಕ್) ಬಿಡುಗಡೆಗೆ ಮುಂಚೆಯೇ ₹ 300- 400 ಕೋಟಿ ಲಾಭದಲ್ಲಿತ್ತು!

ಒಟ್ಟು ಸಿನಿಮಾ ಸಂಸಾರ ಹೀಗೆ ಸುಖವಾಗಿ ಸಾಗುತ್ತ, ಸಣ್ಣ ಪುಟ್ಟ ಗೊಣಗಾಟಗಳಲ್ಲೇ ಎಲ್ಲ ನೆಮ್ಮದಿಯಾಗಿದ್ದಾಗ ಇದ್ದಕ್ಕಿದ್ದಂತೆ ಕೋವಿಡ್ ಅಪ್ಪಳಿಸಿತು. ಕನ್ನಡವೇನು, ಭಾರತವೇನು, ಜಾಗತಿಕ ಜನಜೀವನವೇ ಅಲ್ಲೋಲಕಲ್ಲೋಲವಾಯಿತು.

11ನೇ ಪುಟಕ್ಕೆ...

ಇದು ನೋಡುವ ಸಮಯ

ಪುಟ 13









ಅರೆ ಬರೆ ಗೆರೆಗಳಲ್ಲಿ ಕನ್ನಡದ ಕಣ್ಮಣಿಗಳು

ಪ್ರಕಾಶ್ ಶೆಟ್ಟಿ

ವ್ಯಂಗ್ಯಚಿತ್ರ ಲೋಕ ಅಂದರೆ ನಿಜಕ್ಕೂ ಅದೊಂದು ವೈವಿಧ್ಯಮಯ ಕಲಾ ಪ್ರಕಾರಗಳ ಲೋಕ. ವ್ಯಂಗ್ಯಭಾವಚಿತ್ರ ರಚನೆ ಅದರ ಒಂದು ಭಾಗವಷ್ಟೆ. ಕ್ಯಾರಿಕೇಚರ್ ಎಂದೇ ಪ್ರಸಿದ್ಧವಾಗಿರುವ ಈ ಅದ್ಭುತ ಕಲೆಯ ವಿಶೇಷವೇನೆಂದರೆ ಅದಕ್ಕೆ ಯಾರನ್ನು ಬೇಕಾದರೂ ಎಳೆದುಕೊಳ್ಳುವ ಸೆಳೆತವಿದೆ. ಒಬ್ಬ ವ್ಯಕ್ತಿ ವ್ಯಂಗ್ಯಭಾವಚಿತ್ರಕಾರನ ಕೈಗೆ ಸಿಕ್ಕಿಬಿಟ್ಟರೆ ಸಾಕು, ಅವರು ಮಹಾನುಭಾವರೇ ಆಗಿರಲಿ, ಅವರು ಅಂಕುಡೊಂಕಾಗಿ ಉತ್ಪ್ರೇಕ್ಷಿತ ರೂಪದಲ್ಲಿ ಮೂಡಿಬರುತ್ತಾರೆ. ಅಲ್ಲಿ ಹಾಸ್ಯ ಇರುತ್ತದೆ. ಅಪಹಾಸ್ಯ ಇರುವುದಿಲ್ಲ. ಭಾವಚಿತ್ರದಲ್ಲಿ (ಪೋರ್ಟ್ರೈಟ್) ಮೂಡಿಸಲಾಗದಂತಹ ವ್ಯಕ್ತಿಯ ಇಡೀ ವ್ಯಕ್ತಿತ್ವವನ್ನು ವ್ಯಂಗ್ಯವಾಗಿ ಬಿಂಬಿಸಲ್ಪಡುವ ಸಾಮರ್ಥ್ಯ ಕ್ಯಾರಿಕೇಚರ್‌ಗಿದೆ.

ಪ್ರಸಿದ್ಧ ವ್ಯಕ್ತಿಗಳ ವ್ಯಂಗ್ಯ ಭಾವಚಿತ್ರಗಳನ್ನು ಪೂರ್ಣಗೊಳಿಸುವ ಮೊದಲೇ ಗುರುತು ಹಿಡಿಯಬಹುದೆಂದು ನನಗೂ ಗೊತ್ತಿರಲಿಲ್ಲ. ಅಂತಹ ಪ್ರಯೋಗ ಮಾಡಲು ಹೊರಟಾಗ ಅದು ಸಾಧ್ಯವೆಂದು ತಿಳಿಯಿತು. ಈ ಹೊತ್ತಿನಲ್ಲಿ ನಾನು ಕಂಡುಕೊಂಡ ಸತ್ಯವೇನೆಂದರೆ, ಮುಖವನ್ನು ಅಪೂರ್ಣಗೊಳಿಸಿದರೂ ತಕ್ಷಣ ಗುರುತು ಹಿಡಿಯುವಂತಹ ವ್ಯಕ್ತಿತ್ವ ಇರುವುದು ಇಬ್ಬರಿಗೆ ಮಾತ್ರ! ಅದು ಗಾಂಧೀಜಿ ಮತ್ತು ಚಾಪ್ಲಿನ್. ಆ ಕಾರಣಕ್ಕಾಗಿ ನಾನು ರಚಿಸಲು ಹೊರಟ ಕನ್ನಡದ ಕಣ್ಮಣಿಗಳ ಅಪೂರ್ಣ ಮುಖದೊಂದಿಗೆ ಅವರಿಗೆ ಸಂಬಂಧಿತ ವಿಷಯವನ್ನು ರೂಪಕದಂತೆ ಬೆರೆಸಬೇಕಾಯಿತು. ಇಲ್ಲಿ ಕಾಣುವ ಅರ್ಧಂಬರ್ಧ ವ್ಯಂಗ್ಯಭಾವಚಿತ್ರಗಳಿಗೆ ಜೀವ ಬಂದದ್ದೇ ಹಾಗೆ! ಪತ್ತೆ ಹಚ್ಚುವ ಕೆಲಸ ನೋಡುಗರಿಗೆ ಬಿಡೋಣ, ಅಲ್ಲವೇ?







ಯಾರ್ಯಾರು ಈ ಕಣ್ಮಣಿಗಳು? ಉತ್ತರ ಮುಂದಿನ ಸಂಚಿಕೆಯಲ್ಲಿ...







ಮುನ್ನೋಟ 30-10-2022 ರಿಂದ 05-11-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**

ನಿಂತುಹೋಗಿದ್ದ ಕೆಲವು ಅಭಿವೃದ್ಧಿಯ ಕೆಲಸದ ಕಡೆ ಗಮನಹರಿಸುವಿರಿ. ವ್ಯಾಪಾರ ವ್ಯವಹಾರಗಳಲ್ಲಿ ತಿಕ್ಕಾಟ ಬಂದರೂ ಮಾತಿನಲ್ಲೇ ಬಗೆಹರಿಸಿಕೊಳ್ಳುವುದು ಬಹಳ ಉತ್ತಮ. ಪ್ರವಾಸೋದ್ಯಮ ಸಂಸ್ಥೆಯನ್ನು ನಡೆಸುವವರಿಗೆ ಉತ್ತಮವಾದ ವ್ಯವಹಾರವಿರುತ್ತದೆ. ತಾಂತ್ರಿಕ ತಜ್ಞರಿಗೆ ಉತ್ತಮ ಕೆಲಸ ಸಿಗುವ ಯೋಗವಿದೆ. ನಿಮ್ಮ ಸಂಗಾತಿಗೆ ಹೊಸ ಉದ್ಯೋಗ ದೊರೆಯುವ ಸಾಧ್ಯತೆಗಳಿವೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**

ಮನೆಯ ಆಗುಹೋಗುಗಳ ಬಗ್ಗೆ ಹಿರಿಯರೊಡನೆ ಚರ್ಚೆ ಮಾಡುವಿರಿ. ಅಭಿಪ್ರಾಯಗಳ ವಿನಿಮಯದಿಂದ ವಿಷಯಗಳಿಗೆ ಸಂಬಂಧಿಸಿದಂತೆ ಸೂಕ್ತ ತೀರ್ಮಾನ ತೆಗೆದುಕೊಳ್ಳಬಹುದು. ಹಣದ ಹರಿವು ಸಾಕಷ್ಟಿರುತ್ತದೆ. ವಿದೇಶಿ ವಸ್ತುಗಳ ವ್ಯವಹಾರ ಮಾಡುವವರು ಸ್ವಲ್ಪ ಹಿನ್ನಡೆ ಅನುಭವಿಸಬಹುದು. ಒಡಹುಟ್ಟಿದವರ ಆರೋಗ್ಯದಲ್ಲಿ ವ್ಯತ್ಯಾಸ ಕಾಣಬಹುದು. ಕೃಷಿಯಿಂದ ಆದಾಯ ಹೆಚ್ಚುತ್ತದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**

ನಿರೀಕ್ಷಿಸಿದ ಕಾರ್ಯಗಳು ನಿಧಾನವಾಗಿಯಾದರೂ ಆಗಿ ಮನಸ್ಸಿಗೆ ಹಗುರವೆನಿಸುವುದು. ಯಂತ್ರೋಪಕರಣಗಳನ್ನು ಮಾರಾಟ ಮಾಡುವವರಿಗೆ ಲಾಭ ಹೆಚ್ಚುತ್ತದೆ. ಇದುವರೆಗೆ ನಡೆಸುತ್ತಿದ್ದ ಐಶಾರಾಮಿ ಜೀವನದ ಬಗ್ಗೆ ಜಿಗುಪ್ಸೆ ಹುಟ್ಟಬಹುದು. ಹೋಟೆಲ್ ಉದ್ಯಮದವರಿಗೆ ಸ್ವಲ್ಪಮಟ್ಟಿಗೆ ಲಾಭ ಹೆಚ್ಚಾಗುವುದು. ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವವರು ಹೆಚ್ಚು ಶ್ರಮವಹಿಸಬೇಕು.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**

ಕೆಲವೊಮ್ಮೆ ಕೆಲವು ವಿಷಯಗಳಲ್ಲಿ ಕಠಿಣ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗಬಹುದು, ಆಗ ಹಿಂಜರಿಕೆ ಬೇಡ. ನೀವು ಅಪೇಕ್ಷಿಸಿದ್ದ ಯಾತ್ರೆಗೆ ಸಿದ್ಧತೆ ಮಾಡಿಕೊಳ್ಳುವಿರಿ. ವೃತ್ತಿರಂಗದಲ್ಲಿ ನಿಮ್ಮ ಸ್ಥಾನವು ಹೆಚ್ಚಾಗುವುದಿಲ್ಲ. ಯಾವುದೇ ಕೆಲಸಕ್ಕೂ ಇನ್ನೊಬ್ಬರ ಮೇಲೆ ಅವಲಂಬಿಸಬೇಡಿ. ರಾಜಕೀಯದಲ್ಲಿ ಆಸಕ್ತಿ ಇರುವವರು ಹೆಚ್ಚು ಚುರುಕಾಗಿ ಜನಗಳ ಮಧ್ಯೆ ಓಡಾಡುವುದು ಅತಿ ಅಗತ್ಯ.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**

ಅತಿಯಾದ ಆತ್ಮಾಭಿಮಾನ ನಿಮ್ಮನ್ನು ಆವರಿಸಿಕೊಳ್ಳುತ್ತದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯಂತೆ ಇರುವುದಿಲ್ಲ. ವಿದೇಶದಲ್ಲಿರುವ ಮಕ್ಕಳಿಂದ ಅಚ್ಚರಿಯ ಸುದ್ದಿಯೊಂದನ್ನು ಕೇಳುವಿರಿ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಹಿನ್ನಡೆ ಇರಲಿದೆ. ಕೈಕಾಲು ಸೆಳೆತ ಇರುವವರು ಸ್ವಲ್ಪ ಎಚ್ಚರವಹಿಸಿರಿ. ಸಂಗಾತಿಯ ಆದಾಯದಲ್ಲಿ ಸಾಕಷ್ಟು ಹೆಚ್ಚಳವನ್ನು ಕಾಣಬಹುದು. ವೃತ್ತಿಯಲ್ಲಿ ಇದ್ದ ಗೋಜಲುಗಳು ಕಡಿಮೆಯಾಗುತ್ತವೆ.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**

ತಿಳಿವಳಿಕೆ ಹೊಂದಿದ ನೀವು, ಯಾರದೋ ವಶೀಲಿಗೆ ಮಣಿದು ಹಣಕ್ಕಾಗಿ ಅಪರಾಧ ಕೆಲಸವನ್ನು ಮಾಡಲು ಮುಂದಾಗುವಿರಿ. ಧನ ಸಂಪಾದನೆಗಾಗಿ ಬದಲಿ ಮಾರ್ಗಗಳನ್ನು ಹುಡುಕುವಿರಿ. ದೇಹಾರೋಗ್ಯವನ್ನು ಸರಿಯಾಗಿ ನೋಡಿಕೊಳ್ಳಬೇಕಾದ ಅಗತ್ಯವಿದೆ. ಕೃಷಿಕರಿಗೆ ಬೇಕಾದ ಕೃಷಿ ಸಲಕರಣೆಗಳು ಸಕಾಲಕ್ಕೆ ದೊರೆಯುತ್ತದೆ. ಮಕ್ಕಳ ಸುಖಕ್ಕಾಗಿ ಅತಿಯಾಗಿ ಖರ್ಚು ಮಾಡುವುದು ಬೇಡ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**

ನಿಮ್ಮ ನಡವಳಿಕೆಯಲ್ಲಿ ಅತಿಯಾದ ಆತ್ಮಾಭಿಮಾನ ಇರುತ್ತದೆ. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿ ಇರುತ್ತದೆ. ರಾಜಕೀಯ ಸೇರುವ ಆಲೋಚನೆ ಬರುತ್ತದೆ. ಆದರೆ ರಾಜಕೀಯ ನಾಯಕರುಗಳು ಅದಕ್ಕೆ ಸ್ಪಂದಿಸುವುದಿಲ್ಲ. ಕೃಷಿಕರಿಗೆ ಹೆಚ್ಚು ಆದಾಯ ಬರುವ ಸಾಧ್ಯತೆ ಇದೆ. ಮಕ್ಕಳು ನಿಮ್ಮ ಮಾತನ್ನು ಕೇಳುವ ಸಂದರ್ಭ ಕಡಿಮೆ. ನೀರಿಗೆ ಸಂಬಂಧಪಟ್ಟ ಕಾಯಿಲೆಗಳು ನಿಮ್ಮನ್ನು ಕಾಡಬಹುದು.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**

ಪ್ಲಾಸ್ಟಿಕ್ ಮತ್ತು ರಬ್ಬರ್ ವ್ಯಾಪಾರ ಮಾಡುವವರಿಗೆ ಲಾಭವಿದೆ. ಉದ್ಯಮಿಗಳಿಗೆ ನುರಿತ ಕಾರ್ಮಿಕರ ಕೊರತೆ ಎದುರಾಗಬಹುದು. ನಿಮ್ಮ ಕಾರ್ಯಸಾಧನೆಗಾಗಿ ತಿರುಗಾಟ ಮತ್ತು ಗಣ್ಯರ ಭೇಟಿಯನ್ನು ಮಾಡುವಿರಿ. ನಿರುದ್ಯೋಗಿಗಳಿಗೆ ಉದ್ಯೋಗದ ಬೆಳಕು ಕಾಣುತ್ತದೆ. ವಿದ್ಯಾರ್ಥಿಗಳಿಗೆ ಬಹಳ ಉತ್ತಮ ಫಲಿತಾಂಶವನ್ನು ಪಡೆಯುವ ಯೋಗವಿದೆ. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇದ್ದೇ ಇರುತ್ತದೆ.

ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**

ಈ ಹಿಂದೆ ಕೈಗೊಂಡ ನಿರ್ಧಾರಗಳಲ್ಲಿ ಕೆಲವೊಂದು ಮಾರ್ಪಾಟುಗಳನ್ನು ಮಾಡಿಕೊಂಡಲ್ಲಿ ವ್ಯವಹಾರವು ಸುಗಮವಾಗಿ ನಡೆಯುವುದು. ಆಕಸ್ಮಿಕವಾಗಿ ಪರಿಚಯವಾದ ಹೊಸ ವ್ಯಕ್ತಿಯಿಂದ ನಿಮಗೆ ಸಹಾಯ ದೊರೆಯುತ್ತದೆ. ಹಿರಿಯರು ಬದಲಾದ ಸನ್ನಿವೇಶಗಳಿಗೆ ಸ್ವಲ್ಪಮಟ್ಟಿಗೆ ಹೊಂದಿಕೆ ಮಾಡಿಕೊಳ್ಳುವುದು ಅನುಕೂಲ. ಯಾರಿಗೆ ಆದರೂ ಮಾತು ಕೊಡುವ ಮುನ್ನ ಎಚ್ಚರವಾಗಿರಿ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**

ಹಿರಿಯರ ಅಭಿಪ್ರಾಯದಂತೆ ಮನೆಯ ನವೀಕರಣವನ್ನು ಆರಂಭಿಸುವಿರಿ. ನೀರಾವರಿ ಕೃಷಿ ಜಮೀನನ್ನು ಖರೀದಿಸಲು ಉತ್ಸುಕತೆ ತೋರುವಿರಿ. ದಿನಸಿ ಸಗಟು ವ್ಯಾಪಾರವನ್ನು ಮಾಡಲು ಉತ್ಸಾಹ ತೋರುವಿರಿ. ನಿಮ್ಮ ವೃತ್ತಿ ಕೌಶಲವನ್ನು ತಿಳಿಯಲು ನಿಮ್ಮ ಸಹೋದ್ಯೋಗಿಯೊಬ್ಬರು ಯತ್ನ ಪಡುವರು. ನೀವು ಆ ಗೋಪ್ಯವನ್ನು ಬಿಟ್ಟುಕೊಡುವುದು ನಿಮಗೆ ತೊಂದರೆಯಾಗಬಹುದು.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**

ಸರ್ಕಾರಿ ಕಚೇರಿಯ ಕೆಲಸ ಕಾರ್ಯಗಳು ಯಾವುದೇ ತೊಂದರೆ ಇಲ್ಲದೆ ನಡೆಯುತ್ತವೆ. ಅಧ್ಯಾಪಕ ವೃತ್ತಿಯಲ್ಲಿರುವವರಿಗೆ ವಿದ್ಯಾರ್ಥಿಗಳಿಂದ ಹೆಚ್ಚಿನ ಗೌರವ ದೊರೆಯುತ್ತದೆ. ಜಮೀನಿನ ಗುತ್ತಿಗೆ ವ್ಯವಹಾರಗಳಲ್ಲಿ ಹೆಚ್ಚಿನ ಲಾಭ ಪಡೆಯುವಿರಿ. ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕಾಗಿ ಸಿಗುವ ಸೌಲಭ್ಯಗಳಲ್ಲಿ ಸ್ವಲ್ಪ ಕೊರತೆ ಇರುತ್ತದೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**

ಪಾಲುದಾರಿಕೆ ವ್ಯವಹಾರಗಳಲ್ಲಿ ನಿಮಗೆ ಲಾಭವಿರುತ್ತದೆ. ಕೆಲವು ಮಹಿಳೆಯರಿಗೆ ಒಡವೆಗಳನ್ನು ಕೊಳ್ಳುವ ಯೋಗವಿದೆ. ಆಕಸ್ಮಿಕ ಪ್ರಯಾಣದಲ್ಲಿ ಆರೋಗ್ಯ ಕೆಡಬಹುದು. ಜನರಲ್ಲಿ ಮಾತನಾಡುವಾಗ ಮಾತು ಅತಿರೇಕಕ್ಕೆ ಹೋಗದಂತೆ ಎಚ್ಚರವಹಿಸಿರಿ. ಪರೀಕ್ಷಾರ್ಥಿಗಳು ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುವುದು ಉತ್ತಮ. ತಂತ್ರಜ್ಞರು ಹಾಗೂ ಕುಶಲಕರ್ಮಿಗಳಿಗೆ ಬೇಡಿಕೆ ಹೆಚ್ಚಾಗುತ್ತದೆ.

ಪದಬಂಧ 2762



ಮೇಲಿನಿಂದ ಕೆಳಕ್ಕೆ

1. ನೀರು ತುಂಬಿದ ಮನೆಯಲ್ಲಿ ಬದುಕು 4
2. ಸದಾ ಎದುರು ನೋಡುವ ಪೊಲೀಸ್ ಅಧಿಕಾರಿ 4
3. ಗಜ ಗಾತ್ರವಿಲ್ಲದಿದ್ದರು ಬತ್ತಿಗೆ ಬೆಂಕಿ ಮುಟ್ಟಿಸಿದರೆ ಢಂ ಢಮಾರ್ 5
4. ವಿನಾಯಕ ಚೌತಿಗೆ ಮಧುರವಾದ ಸೀಭಕ್ಷ 5
7. ಗೆಡ್ಡೆಯ ಜೊತೆಗಿನ ಕಂದಮೂಲ 3
9. ಇದು ಅರಣ್ಯ ಗಾರ್ದಭ 4
11. ಮನೋಕಲ್ಪಿತ ಪದ್ಯ ಪ್ರಕಾರದ ಸಾಹಿತ್ಯಾಮೃತ 4
12. ಚೆನ್ನವೀರ ಸಂಯೋಗವಾದ ಕಣಿವೆಯಲ್ಲಿ ಕಂಡ ಕವಿ 3
13. ಸಂಕ್ರಾಂತಿ ಸಂಭ್ರಮದಲ್ಲಿ ಹಸುಗಳನ್ನು ಬೆಂಕಿ ದಾಟಿಸುವ ಪದ್ಧತಿ 5
14. ಕೊಡುಗೈ ಅರಸ ತಿಂಗಳ ಮೊದಲ ದಿನ ಕಾಣಿಸಿಕೊಳ್ಳುತ್ತಾನೆ 5
15. ಕಾಯಿಲೆ ಗುಣವಾಗಲು ತೆಗೆದುಕೊಳ್ಳುವ ಗುಳಿಗೆ ಔಷಧಿ 4
16. ಅಭಿನಯದಲ್ಲಿ ಒಂಭತ್ತು ಭಾವಗಳ ಮಿಶ್ರಣ 4

ಎಡದಿಂದ ಬಲಕ್ಕೆ

1. ಮಂದಿಯ ಒಳಗಿನ ಮಾತು ಇಂಗಿತ 4
3. ಮಹಾಸೋಮಾರಿ ಹೀಗೆ ಕಾಣುತ್ತಾನೆ 3
5. ಒಂದೇ ಘಳಿಗೆಗೆ ಬರುವ ಸಿಟ್ಟು 4
6. ಕೋಪ ಬಂದಾಗ ಮುಖ ಈ ಬಿಂದಿಗೆ ಗಾತ್ರದಲ್ಲಿ ಊದಿಕೊಳ್ಳುತ್ತದೆ 3
8. ಕಾಲಕ್ಕೆ ಸರಿಯಾಗಿ ಕೂಡಿ ಬಂದದ್ದು 4
10. ಚಲಾವಣೆ ಕಳೆದುಕೊಂಡಿರುವ ತುಕ್ಕು ಹಿಡಿದ ನಾಣ್ಯ 5
12. ತೋಳದ ಜಾತಿಗೆ ಸೇರಿದ ಕಿರಾತಕ ಗಾರ್ದಭ 5
15. ಮರ್ಯಾದೆಯೇ ಸಂಪತ್ತಾಗಿರುವ 4
17. ಅಗಲಿಕೆಯ ನೋವು ಹಾಡಗಿ ಹೀಗೆ 3
18. ರಾಜಕಾರಣಿಗಳ ಕಾರ್ಯಕ್ರಮವಾಗಿರುವ ಕಾಲ್ನಡಿಗೆಯ ಪ್ರಯಾಣ 4
19. ಸಮುದ್ರದಲ್ಲಿ ಎದ್ದ ಬಹು ದೊಡ್ಡ ಅಲೆ ಒಳ್ಳೆಯ ಹೆಸರುಪಡೆದಿದೆ 3
20. ಹದ್ದಿನ ಕಣ್ಣಿಗೆ ಕಾಣಿಸಬಹುದಾದ ಎಲ್ಲೆ ಹಿಂದುಮುಂದಾಗಿದೆ 4

ಪದಬಂಧ ಉತ್ತರ -2761

ಮೇಲಿಂದ ಕೆಳಕ್ಕೆ

1.ಕನ್ನಡಕ 2.ರಾಜಭವನ 3.ವ್ಯಾಸಂಗಪರ 4.ಯಕ್ಷಕಿನ್ನರ 7.ಮಾಯಾವಿಹಾರಿ 9.ರಣಪಂಡಿತ 11. ದಾಸಾನುದಾಸ 13.ಜಕಾತಿಕಟ್ಟೆ 14.ಕುಮಾರರಾಮ 17.ತಲೆದಂಡ

ಎಡದಿಂದ ಬಲಕ್ಕೆ

1.ಕನಕಧಾರಾ 3.ವ್ಯಾಸರಾಯ 5.ಭವರೋಗ 6.ಕಲಿಮಾನವ 8.ಪರಮಾನ್ನ 10.ನವಾವರಣ 12. ಹಾಜರಿಹಾಕು 15.ಸಾಗರಿಕಾ 16. ಮಾರುತಸುತ 18.ತಿರಸ್ಕಾರ 19.ಸಭಾಕಟ್ಟೆ 20.ಮಗಳಗಂಡ

ನಷ್ಟದ ತೇರು

10ನೇ ಪುಟದಿಂದ...

ಚಿತ್ರರಂಗದ ವಿಷಯಕ್ಕೆ ಬಂದರೆ ಕೊರೊನಾದ ಎರಡು ವರ್ಷಗಳಲ್ಲಿ ಎಷ್ಟು ಕುಟುಂಬಗಳು ನಿರ್ನಾಮವಾದವೋ, ಎಷ್ಟು ಕೋಟಿಗಳು ಮುಳುಗಿಹೋದವೋ, ಯಾರೂ ಲೆಕ್ಕ ಹಾಕಿಲ್ಲ. ಆಗ ದಿಕ್ಕೆಟ್ಟು ದಿಕ್ಕಾಪಾಲಾಗಿಹೋದ ಚಿತ್ರೋದ್ಯಮ ಇಂದಿಗೂ ಪರಿಪೂರ್ಣವಾಗಿ ಚೇತರಿಸಿಕೊಂಡಿಲ್ಲ. ಕೋವಿಡ್ ಮುಗಿದ ಮೇಲೂ ಚಿತ್ರರಂಗದ ಆತ್ಮವಿಶ್ವಾಸ ಕುದುರಿಲ್ಲ. ವಿಶೇಷವಾಗಿ ಕನ್ನಡ ಚಿತ್ರರಂಗ. ಈಗ ಸಿನಿಮಾ ಅರ್ಥವ್ಯವಸ್ಥೆಯೇ ಸಾದ್ಯಂತ ತಲೆಕೆಳಗಾಗಿದೆ. ಎಲ್ಲೆಡೆ ವಿರಾಟ್ ಗೊಂದಲ ಆವರಿಸಿಕೊಂಡಿದೆ.

ಇಂಥ ಸಮಯದಲ್ಲಿ ಒಟಿಟಿಗಳು ಸಿನಿಮಾ ದಿಗಂತದಲ್ಲಿ ಹೊಸ ಸಂಜೀವಿನಿಯಾಗಿ ಅವತರಿಸಿದವು. ಹಿಂದಿಯಿರಲಿ, ದಕ್ಷಿಣದ ಇತರೆ ಭಾಷೆಗಳಾದ ಮಲಯಾಳಂ, ತಮಿಳು, ತೆಲುಗು ಚಿತ್ರಗಳಿಗೂ ಕೂಡ ಈಗ ಒಟಿಟಿಗಳು ಜೀವಸೆಲೆಗಳಾಗಿವೆ. ನೆಟ್‌ಫ್ಲಿಕ್ಸ್, ಅಮೆಜಾನ್‌ನಂಥ ದೈತ್ಯ ಕಂಪನಿಗಳು ಇಂದು ಭಾರತೀಯ ಚಿತ್ರಗಳಿಗಾಗಿಯೇ ಸಾವಿರಾರು ಕೋಟಿ ಹೂಡುತ್ತಿವೆ ಎಂಬುದು ನಿಜ. ಆದರೆ ನಮ್ಮ ದುರದೃಷ್ಟ, ಕನ್ನಡವನ್ನು ಇಲ್ಲಿಯೂ ಕೇಳುವವರು ದಿಕ್ಕಿಲ್ಲ. ಅತಿ ದೊಡ್ಡ ಯಶಸ್ಸು ಕಂಡ ಕೆಲವೇ ನಿರ್ಮಾಣ ಸಂಸ್ಥೆಗಳ ಹೊರತಾಗಿ ಸಣ್ಣ ಚಿತ್ರಗಳನ್ನು ಮೂಸಿ ನೋಡುವವರಿಲ್ಲ. ಒಟಿಟಿ ಎಂಬುದು ಬೃಹತ್ತಾದ ಹೊಸ ಮಾರುಕಟ್ಟೆ ಎಂದು ಎಲ್ಲ ಮಾತಾಡುವುದಂತೂ ಹೌದು. ಆದರೆ ಆ ಸುಖಪುರುಷರ ಪ್ರಪಂಚದಲ್ಲಿ ಕನ್ನಡಕ್ಕಿನ್ನೂ ಪ್ರವೇಶವಿಲ್ಲ! ಅಂತೂ ಕನ್ನಡಕ್ಕಿನ್ನೂ ಶಾಪವಿಮೋಚನೆಯಿಲ್ಲ!

ಆಗಲೇ ಹೇಳಿದಂತೆ ಉದ್ದಿಮೆಯ ಆರೋಗ್ಯ ನಿಂತಿರುವುದು ಗೆದ್ದ ಚಿತ್ರಗಳ ಹಮ್ಮಿನಲ್ಲಲ್ಲ, ಸೋತವರಿಗೆಂಥ ಭದ್ರತೆ ಸಿಕ್ಕಿದೆ ಎಂಬುದರಲ್ಲಿ. ಸಣ್ಣ ನಿರ್ಮಾಪಕರು, ಸಣ್ಣ ಚಿತ್ರಗಳಿಗೆ ಕನಿಷ್ಠ ಮಟ್ಟದ ರಕ್ಷಣೆಯೂ ಇಲ್ಲವಾದರೆ ಚಿತ್ರೋದ್ಯಮವೇ ನಷ್ಟದ ತೇರಿನ ಯಾತ್ರೆಯಾಗುತ್ತದೆ. ಆ ತೇರಿನ ಗಾಲಿಗೆ ಸಿಕ್ಕು ನಾಮಾವಶೇಷವಾಗುವ ನಿರ್ಮಾಪಕರು ದುರಂತದ ಚರಿತ್ರೆಯನ್ನೇ ಬರೆಯುತ್ತಾ ಮರೆಯಾಗುತ್ತಾರೆ. ❖

ಪ್ರಜಾವಾಣಿ ದೀಪಾವಳಿ ವಿಶೇಷಾಂಕ 2022

ಕಥೆ–ಕವನ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ

ಪ್ರಜಾವಾಣಿ ದೀಪಾವಳಿ ಕಥೆ–ಕವನ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ ಸಮಾರಂಭ ನ.5ರಂದು ಸಂಜೆ 4ಕ್ಕೆ ಬೆಂಗಳೂರು ಬಸವನಗುಡಿಯ ನ್ಯಾಷನಲ್ ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ.

ಹಿರಿಯ ಸಾಹಿತಿ ರಹಮತ್ ತರೀಕೆರೆ ಅವರು ಕನ್ನಡದ ಸೃಜನಶೀಲತೆಯ ಸ್ವರೂಪ ವಿಶೇಷ ಉಪನ್ಯಾಸ ನೀಡಲಿದ್ದು ಕಥೆ–ಕವನ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಿದ್ದಾರೆ.

ಕನ್ನಡದ ನಾಳೆಗಳು...

10ನೇ ಪುಟದಿಂದ...

ಈಚಿನ ದಿವಸಗಳಲ್ಲಿ ಹಿಂದಿಯು ಕನ್ನಡಿಗರ ದುಡಿಯುವ ಅವಕಾಶಗಳನ್ನು ಹೆಚ್ಚಿಸುವುದಕ್ಕಿಂತ ಕಸಿದುಕೊಳ್ಳುವ ನೆಲೆಯನ್ನು ಹುಟ್ಟುಹಾಕಿದೆ ಎಂಬ ನಿಲುವುಗಳು ಮಂಡಿತವಾಗುತ್ತಿವೆ. ಯಾವುದೇ ನುಡಿಗೆ ಅವಕಾಶಗಳನ್ನು ಸೃಷ್ಟಿಸುವ ಇಲ್ಲವೇ ಕಸಿದುಕೊಳ್ಳುವ ಕಸುವು ತನ್ನಿಂದ ತಾನೇ ಇರುವುದಿಲ್ಲ. ಸಂಸ್ಕೃತ ಮತ್ತು ಇಂಗ್ಲಿಷ್ ನುಡಿಗಳನ್ನು ಮೊದಲ ನುಡಿಗಳನ್ನಾಗಿ ಆಡುವವರು ಕನ್ನಡಕ್ಕೆ ಎಂದೂ ಸವಾಲಾಗಿ ಇರಲಿಲ್ಲ. ಆದರೆ, ಈಗ ಹಿಂದಿ ನುಡಿಯನ್ನು ಆಡುವವರ ಪರವಾಗಿ ರಾಜಕೀಯ ಒತ್ತಾಸೆಗಳು ಬಲವಾಗುತ್ತಿರುವುದರಿಂದ ಒಂದೋ ಕನ್ನಡಿಗರು ಹಿಂದಿಯ ಮೂಲಕ ದುಡಿಯುವ ಅವಕಾಶಗಳನ್ನು ಪಡೆದುಕೊಳ್ಳಬೇಕು ಇಲ್ಲವೇ ಹಿಂದಿ ಮಾತನಾಡುವವರಿಗೆ ತಮ್ಮ ಅವಕಾಶಗಳನ್ನು ಬಿಟ್ಟುಕೊಡಬೇಕು ಎಂಬ ನೆಲೆಗೆ ದಾಟುತ್ತಿದ್ದೇವೆ. ಅಥವಾ ಹಾಗಾಗುತ್ತದೆಂದು ಕನ್ನಡಿಗರು ಒಪ್ಪುವಂತೆ ಮಾಡಲಾಗುತ್ತಿದೆ.

ಕೊಂಚ ಈ ಪರಿಸ್ಥಿತಿಯನ್ನು ಬೇರೆಬೇರೆ ನೆಲೆಗಳಲ್ಲಿ ನೋಡೋಣ. ಕಳೆದ ಒಂದೆರಡು ದಶಕಗಳಲ್ಲಿ ಕನ್ನಡ ನುಡಿಯನ್ನು ಆಡುವವರಿಗೆ ದುಡಿಯುವ ಅವಕಾಶಗಳು ದೊರಕುತ್ತಿರುವ ಬಗೆಯಲ್ಲಿ ಬದಲಾವಣೆಗಳಾಗಿವೆ. ಕಲಿತು ಉದ್ಯೋಗಗಳನ್ನು ಹಿಡಿದು ನಿಯತವಾಗಿ ದುಡಿಯುತ್ತಿರುವವರು ಒಂದು ಕಡೆ. ಕಲಿತರೂ ನಿಯತವಾದ ಆದಾಯವಿಲ್ಲದೆ ದುಡಿಯುತ್ತಿರುವವರು ಇನ್ನೊಂದು ಕಡೆ. ಕಲಿಕೆಯಿಂದ ವಂಚಿತರಾಗಿದ್ದರೂ ಬದುಕಿನ ನಿರ್ವಹಣೆಗಾಗಿ ದೈಹಿಕ ಶ್ರಮದ ದುಡಿಮೆಯಲ್ಲಿ ತೊಡಗಿರುವವರು ಮತ್ತೊಂದು ಕಡೆ. ಈ ಮೂರೂ ಗುಂಪುಗಳವರು ಬೇರೊಂದು ನುಡಿಯನ್ನು ಆಡುವವರೊಡನೆ ಪೈಪೋಟಿಯನ್ನು ಎದುರಿಸುತ್ತಲೇ ಇದ್ದಾರೆ. ಖಾಸಗೀ ವಲಯದಲ್ಲಿ ಈ ಪೈಪೋಟಿ ಹೆಚ್ಚು; ಸರ್ಕಾರಿ ವಲಯದಲ್ಲಿ ಕಡಿಮೆ. ಏನೇ ಇರಲಿ ಆಯಾ ದುಡಿಯುವ ವಲಯದಲ್ಲಿ ಕನ್ನಡ ನುಡಿಯ ಬಳಕೆ ಎಂಬುದು ಕನಿಷ್ಠ ಪ್ರಮಾಣದಲ್ಲಿರುತ್ತದೆ; ಕೆಲವೊಮ್ಮೆ ಇರುವುದೇ ಇಲ್ಲ. ಅದರಲ್ಲೂ ಅನಿಯತ ಆದಾಯದ ವಲಯದಲ್ಲಿ, ವಲಸೆ ಬಂದ ಅನ್ಯ ನುಡಿಯನ್ನು ಆಡುವವರು ಬಗೆಬಗೆಯ ಸವಾಲುಗಳನ್ನು ಒಡ್ಡುತ್ತಿದ್ದಾರೆ. ದುಡಿಮೆಯ ಮಾರುಕಟ್ಟೆಯ ನಿಯಮಗಳು ಕೆಲವೊಮ್ಮೆ ಕನ್ನಡ ನುಡಿಯನ್ನು ಆಡುವವರಿಗೆ ಪೂರಕವಾಗಿ ನಿಲ್ಲುವುದಿಲ್ಲ. ವಲಸೆಗಾರರು ಈಗ ಬೆಂಗಳೂರಿನಂತಹ ಮಹಾನಗರಕ್ಕೆ ಮಾತ್ರ ಸೀಮಿತವಾಗಿಲ್ಲ. ನಾಡಿನ ಹಲವು ಕಡೆಗಳಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ ಹರಡಿಕೊಂಡಿದ್ದಾರೆ. ಸರ್ಕಾರವು ಕೈಗೊಳ್ಳುವ ಯಾವುದೇ ನಿರ್ಧಾರವವೂ ಕನ್ನಡಿಗರಿಗೆ ಅವಕಾಶವನ್ನು ಹೆಚ್ಚಿಸಲು ಸಮರ್ಥವಾಗುವುದಿಲ್ಲ. ಮಾರುಕಟ್ಟೆಯ ಪ್ರವೃತ್ತಿಗಳು ಆ ನಿರ್ಧಾರಗಳು ಜಾರಿಯಾಗದಂತೆ ಅಡ್ಡಿಗಳನ್ನು ಒಡ್ಡುತ್ತಲೇ ಇರುತ್ತವೆ. ಹಾಗಾಗಿ ಕನ್ನಡವು ಅನ್ನದ (ರೊಟ್ಟಿಯ ಇಲ್ಲವೇ ಅಂಬಲಿಯ) ನುಡಿಯಾಗಬೇಕು ಎನ್ನುವುದು ಒಂದು ಹೇಳಿಕೆಯಾಗಿ ನಿಲ್ಲುವುದೇ ಹೊರತು ಸದ್ಯದ ಚಿತ್ರವನ್ನು ತಿದ್ದಲಾರದು.

ಇದು ಹತಾಶೆಯ ಮಾತಲ್ಲ. ಇದಕ್ಕೆ ಮಾರುಕಟ್ಟೆಯ ಶಕ್ತಿಗಳು ಮಾತ್ರ ಕಾರಣವಲ್ಲ. ನಾವು ಒಪ್ಪಿಕೊಂಡ ಆಡಳಿತ ಕ್ರಮದಲ್ಲೇ ನೆಲೆಗೊಂಡಿರುವ ಅಖಿಲ ಭಾರತ ಸೇವೆಗಳ ವ್ಯವಸ್ಥೆ ಇದೆ. ಇದರ ಜೊತೆಗೆ ನ್ಯಾಯಾಂಗ ವ್ಯವಸ್ಥೆಯಲ್ಲಿ ಹೈಕೋರ್ಟ್‌ಗಳಿಗೆ ದೇಶದ ಯಾವ ಮೂಲೆಯಿಂದಲಾದರೂ ನ್ಯಾಯಮೂರ್ತಿಗಳು ನೇಮಕಗೊಳ್ಳಲು ಇರುವ ಸಾಧ್ಯತೆ ಇದೆ. ಇವೆಲ್ಲವೂ ಕನ್ನಡ ನುಡಿಯನ್ನು ಆಡುವವರ ಬದುಕನ್ನು ನಿಯಂತ್ರಿಸುವ ನೆಲೆಯಲ್ಲಿವೆ. ಇದೆಲ್ಲದರ ಜೊತೆಗೆ ಈಗ ರಾಷ್ಟ್ರವ್ಯಾಪಿಯಾಗಿ ಒಂದೇ ಚೌಕಟ್ಟಿನಲ್ಲಿ ಪರೀಕ್ಷೆಗಳನ್ನು ನಡೆಸಿ ಆಯ್ಕೆಗಳನ್ನು ಮಾಡುವ ಹಲವು ಪದ್ಧತಿಗಳು ಜಾರಿಗೆ ಬಂದಿರುವುದರಿಂದ ಈ ಪರಿಸ್ಥಿತಿ ಇನ್ನೂ ಬಿಗಡಾಯಿಸಲಿದೆ. ಇದು ಕನ್ನಡ ನುಡಿಯ ಆತಂಕವಲ್ಲ; ಕನ್ನಡ ನುಡಿಯನ್ನು ಆಡುವವರು, ಅದರಲ್ಲೂ ಬದುಕುವ ದಾರಿಗಾಗಿ ತಮ್ಮ ನಾಡಿನ ಗಡಿಗಳನ್ನು ದಾಟಲಾಗದವರು ಎದುರಿಸುತ್ತಿರುವ ಬಿಕ್ಕಟ್ಟು.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ಕೊಡಲು ಉತ್ಸುಕರಾಗಿರುವವರು ಕನ್ನಡ ನುಡಿಯು ಹಿಂದೆಂದೂ ಇಲ್ಲದಷ್ಟು ಅವಕಾಶಗಳನ್ನು ಪಡೆದುಕೊಳ್ಳಲಿದೆ ಎಂದು ಹೇಳುತ್ತಿದ್ದಾರೆ. ಕಲಿಕೆಯ ಮೊದಲ ಹಂತದಿಂದ ಹಿಡಿದು ಅತ್ಯುನ್ನತ ಹಂತದವರೆಗೂ ಕನ್ನಡದ ಮೂಲಕ ಕಲಿಯುವ ಅವಕಾಶ ದೊರೆಯಲಿದೆ ಎನ್ನಲಾಗಿದೆ. ಇದು ನಿಜವಾದರೆ ಮುಂದಿನ ಎರಡು ದಶಕಗಳಲ್ಲಿ ಚಿತ್ರವೇ ಬದಲಾಗಬೇಕು. ಆದರೆ ವಾಸ್ತವವು ಬೇರೆಯೇ ಆಗಲಿದೆ. ಕನ್ನಡವನ್ನು ಕಲಿಯುವುದು ಮತ್ತು ಕನ್ನಡದ ಮೂಲಕ ಕಲಿಯುವುದು ಇವೆರಡೂ ಬೇರೆ ಬೇರೆ ಬಗೆಯಲ್ಲಿ ಪರೀಕ್ಷೆಗೆ ಒಳಗಾಗಲಿವೆ. ಹಿಂದೆ ಹೇಳಿದಂತೆ ಕಲಿಯುವವರು, ಅದರಲ್ಲೂ ಉನ್ನತ ಹಂತದ ಕಲಿಕೆಗೆ ಬರುವವರು, ಕನ್ನಡ ನುಡಿಯನ್ನು ಆಡುವವರು ಮಾತ್ರವೇ ಆಗಿರುವುದಿಲ್ಲ. ಬೇರೆ ಬೇರೆ ನುಡಿಗಳನ್ನಾಡುವವರೂ ಇರುತ್ತಾರೆ. ಅವರು ಕರ್ನಾಟಕದಲ್ಲಿ ಇರುವವರಾಗಿರಬಹುದು ಇಲ್ಲವೇ ಕಲಿಕೆಗಾಗಿಯೇ ಹೊರ ನಾಡುಗಳಿಂದ ಬಂದವರಾಗಿರಬಹುದು. ಅವರಿಗೆ ಕನ್ನಡವನ್ನು ಕಲಿಸುವ ನಡೆಯು ನ್ಯಾಯಾಂಗದ ಸಮ್ಮತಿಯನ್ನು ಪಡೆಯಲು ಆಗಿಲ್ಲ. ಪದವಿ ತರಗತಿಗಳಲ್ಲಿ ಹೀಗೆ ಕನ್ನಡವನ್ನು ಕಲಿಸಲು ಹೊರಟದ್ದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದವರು ಕನ್ನಡ ನುಡಿಯನ್ನು ಆಡುವವರೇ ಆಗಿದ್ದಾರೆ. ತಮ್ಮ ದುಡಿಯುವ ಅವಕಾಶಗಳಿಗೆ ಕನ್ನಡವು ಕುತ್ತು ತರಲಿದೆ ಎನ್ನುವುದು ಅವರ ತಕರಾರು. ನ್ಯಾಯಾಂಗವು ಸಂವಿಧಾನದಲ್ಲಿ ಅಡಕವಾಗಿರುವ ಅವಕಾಶವನ್ನು ಬಳಸಿ ಕನ್ನಡವನ್ನು ನುಡಿಯನ್ನಾಗಿ ಕಲಿಸುವ ನಡೆಗೆ ತಡೆಯನ್ನು ನೀಡಿತು. ಇನ್ನು ಕನ್ನಡದ ಮೂಲಕ ಕಲಿಯುವ ಅವಕಾಶಗಳಿಗೆ ಬೇರೆ ಬಗೆಯಲ್ಲೂ ಅಡ್ಡಿಗಳು ಬರಲಿವೆ. ಕನ್ನಡದ ಮೂಲಕ ಕಲಿಯುವುದು ಒಂದು ಆಯ್ಕೆ ಮಾತ್ರ ಆಗಿರುವುದೆಂದು ಈಚೆಗೆ ವಿವರಣೆಯನ್ನು ನೀಡಲಾಗುತ್ತಿದೆ. ಕಳೆದ ಕೆಲವು ದಶಕಗಳಲ್ಲಿ ಇಂಗ್ಲಿಷ್ ನುಡಿಯ ಕಾರಣವಾಗಿ ಕನ್ನಡಿಗರಿಗೆ ಎದುರಾಗಿದ್ದ ಸವಾಲು ಈಗ ಹಿಂದಿಯ ಮೂಲಕ ತಲೆ ಎತ್ತಲಿದೆ. ಇಂಗ್ಲಿಷ್ ನುಡಿಯು ಕನ್ನಡ ನುಡಿಯನ್ನು ಆಡುತ್ತಿದ್ದ ವಿದ್ಯಾರ್ಥಿಗಳಲ್ಲೇ ತಾರತಮ್ಯವನ್ನು ಹುಟ್ಟುಹಾಕುತ್ತಿತ್ತು. ಈಗ ಕನ್ನಡ ಮತ್ತು ಹಿಂದಿ ಮಾತನಾಡುವ ವಿದ್ಯಾರ್ಥಿಗಳ ನಡುವೆ ತಾರತಮ್ಯ ತಲೆ ಎತ್ತುವ ಸಾಧ್ಯತೆಗಳು ಹೆಚ್ಚಾಗಲಿವೆ. ಇದು ಹೇಗಾಗುತ್ತದೆ ಎಂದು ಕಣಿ ಹೇಳುವುದು ಈಗ ಸಾಧ್ಯವಿಲ್ಲ. ಆದರೂ ಸದ್ಯದ ರಾಜಕೀಯ ಪರಿಸ್ಥಿತಿ ಮತ್ತು ನೀತಿಗಳು ಇಂತಹದೊಂದು ಪರಿಸ್ಥಿತಿಗೆ ಕಾರಣವಾದರೆ ಅಚ್ಚರಿ ಪಡಬೇಕಾಗಿಲ್ಲ.

ಒಟ್ಟಾರೆ ಇಂದಿನ ಆತಂಕಗಳು ಕನ್ನಡ ನುಡಿಯ ಅಳಿವು ಉಳಿವುಗಳಿಗೆ ಸಂಬಂಧಪಡುವುದಕ್ಕಿಂತ ಹೆಚ್ಚಾಗಿ, ಕನ್ನಡಿಗರ ದುಡಿಯುವ ಅವಕಾಶಗಳು ಸಂಕುಚಿತಗೊಳ್ಳುತ್ತಿರುವುದಕ್ಕೆ ಸಂಬಂಧಿಸಿವೆ. ಅದರಲ್ಲೂ ದೈಹಿಕ ಶ್ರಮದ ದುಡಿಮೆಗಿಂತ ತಜ್ಞತೆಯ ನೆಲೆಯ ದುಡಿಮೆಗಳಿಗೆ ಇದು ಹೆಚ್ಚು ಅನ್ವಯವಾಗಲಿದೆ. ಬರಲಿರುವ ದಿನಗಳು ಈ ಸಂಗತಿಯನ್ನು ದಿಟಗೊಳಿಸಲಿವೆ ಎಂದು ತೋರುತ್ತದೆ. ಇದನ್ನು ಕನ್ನಡಿಗರು ಹೇಗೆ ನಿಭಾಯಿಸಬೇಕಿದೆ ಎಂಬುದು ಬರಲಿರುವ ದಿನಗಳಲ್ಲಿ ಮುಖ್ಯ ಸವಾಲಾಗಲಿದೆ.

(ಲೇಖಕ: ಕನ್ನಡದ ಹಿರಿಯ ವಿದ್ವಾಂಸರು) ❖

ಸಮಾಜವನ್ನೇ ಧೇನಿಸಿದ ಶಕಪುರುಷ

ಡಾ. ಜಿ.ಎಂ. ಹೆಗಡೆ

ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿದ ಸಮಾಜ ವಿಜ್ಞಾನಿಯಾಗಿದ್ದ ಹಿರೇಮಲ್ಲೂರ ಈಶ್ವರನ್ ಅದ್ಭುತ ಕ್ರಿಯಾಶಕ್ತಿಯ ಮಹಾಚೇತನವಾಗಿದ್ದರು. ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ ಹಿರೇಮಲ್ಲೂರಿನ ಬಡ ಕುಟುಂಬದಲ್ಲಿ 1922ರ ನವೆಂಬರ್ 1ರಂದು ಚನ್ನಪ್ಪ ಮಾಸ್ತರ ಮತ್ತು ಬಸಮ್ಮ ದಂಪತಿ ಮಗನಾಗಿ ಜನಿಸಿದ ಈಶ್ವರನ್, ವಿದ್ಯಾರ್ಥಿ ಜೀವನದಿಂದಲೂ ಪ್ರತಿಭಾವಂತರು. ಬಡತನದಲ್ಲಿ ಕಷ್ಟಪಟ್ಟು ಓದಿ ಮುಂದೆ ಬಂದವರು.

> ಹಾವೇರಿ ಜಿಲ್ಲೆಯ ಪುಟ್ಟ ಗ್ರಾಮದಲ್ಲಿ ಜನಿಸಿ, ಬಡತನದ ಕುಲುಮೆಯಲ್ಲಿ ಬೆಂದು ಕೊನೆಗೆ ಜಗದಗಲ ಬೆಳೆದ ಅಪ್ಪಟ ಚಿನ್ನ ಈ ಅಸಾಮಾನ್ಯ ಸಮಾಜವಿಜ್ಞಾನಿ. ತಮ್ಮ ದಿವ್ಯ ಪ್ರತಿಭೆಯಿಂದ ಬೆಳಗಿದ ಹಿರೇಮಲ್ಲೂರ ಈಶ್ವರನ್ ಇಂದು ನಮ್ಮ ನಡುವೆ ಇದ್ದಿದ್ದರೆ ಅವರಿಗೆ ಭರ್ತಿ ನೂರು ವರ್ಷ ತುಂಬುತ್ತಿತ್ತು. ಆ ನೆಪದಲ್ಲಿ ಈಶ್ವರನ್ ಅವರ ಬದುಕಿನ ಮೇಲೆ ಒಂದು ಹಿನ್ನೋಟ

ಹಿರೇಮಲ್ಲೂರಿನಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ಧಾರವಾಡಕ್ಕೆ ಬಂದು ಮುರುಘಾಮಠದ ಪ್ರಸಾದ ನಿಲಯದಲ್ಲಿದ್ದುಕೊಂಡು ಮಾಧ್ಯಮಿಕ ಶಿಕ್ಷಣ ಮುಗಿಸಿ, ಬೆಳಗಾವಿಯಲ್ಲಿ ಪದವಿ ಶಿಕ್ಷಣ ಪೂರೈಸಿ, ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಹುಬ್ಬಳ್ಳಿಯ ಜೆ.ಜಿ. ಕಾಮರ್ಸ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದರು. ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಈಶ್ವರನ್, ತಮ್ಮದೇ ಆದ 'ಕಲ್ಪನಾ' ಗ್ರಂಥಮಾಲೆ ಆರಂಭಿಸಿ 'ಹಾಲಾಹಲ', 'ವಿಷ ನಿಮಿಷಗಳು', 'ರಾಜ ರಾಣಿ ದೇಖೋ', 'ಶಿವನ ಬುಟ್ಟಿ', 'ಕನ್ನಡ ತಾಯ ನೋಟ' ಕೃತಿಗಳನ್ನು ಪ್ರಕಟಿಸಿದರು. ಖ್ಯಾತ ಕಾದಂಬರಿಕಾರ ಮಿರ್ಜಿ ಅಣ್ಣಾರಾಯರ 'ರಾಮಣ್ಣ ಮಾಸ್ತರ', ಚೆನ್ನವೀರ ಕಣವಿ ಅವರ 'ಕಾವ್ಯಾಕ್ಷಿ' ಅಲ್ಲದೆ, ಸಿಂಪಿ ಲಿಂಗಣ್ಣ, ವರದರಾಜ ಹುಯಿಲಗೋಳ ಅವರ ಕೃತಿಗಳನ್ನು 'ಕಲ್ಪನಾ' ಗ್ರಂಥಮಾಲೆಯ ಮೂಲಕ ಪ್ರಕಟಿಸಿದರು.

ಈಶ್ವರನ್ ಮಹತ್ವಾಕಾಂಕ್ಷೆಯ ಅಪ್ರತಿಮ ವ್ಯಕ್ತಿ. ಅವರು ಸ.ಸ. ಮಾಳವಾಡರ ಮಾರ್ಗದರ್ಶನದಲ್ಲಿ 'ಹರಿಹರನ ಕೃತಿಗಳ ಸಂಖ್ಯಾ ನಿರ್ಣಯ' ಮಹಾಪ್ರಬಂಧ ರಚಿಸಿ ಪಿಎಚ್.ಡಿ ಪದವಿ ಪಡೆದರು. ಅವರ ಜ್ಞಾನದಾಹ ಅಪರಿಮಿತವಾದದ್ದು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ ಮುಂದುವರಿಸಿ 'ಮನುಧರ್ಮಶಾಸ್ತ್ರದಲ್ಲಿ ಅಪರಾಧ ಮತ್ತು ಶಿಕ್ಷೆ'ಯ ಕುರಿತು ಸಂಶೋಧನೆ ನಡೆಸಿ ಮಾನವ ಶಾಸ್ತ್ರದಲ್ಲಿ ಬಿ.ಲಿಟ್ ಪದವಿ ಪಡೆದರು. ಹಾಲೆಂಡ್ ದೇಶದ ದಿ ಹೇಗ್ ನಗರದ ಅಂತರರಾಷ್ಟ್ರೀಯ ಸಮಾಜ ವಿಜ್ಞಾನ ಸಂಸ್ಥೆಯ ಆಶ್ರಯದಲ್ಲಿ ಶಿಷ್ಯವೇತನ ಪಡೆದು ಸಮಾಜಶಾಸ್ತ್ರದಲ್ಲಿ ಎಂ.ಎಸ್.ಎಸ್. ಪದವಿ ಪಡೆದರು. ಅದೇ ದೇಶದ ಪ್ರಾಚೀನ ಮತ್ತು ಪ್ರತಿಷ್ಠಿತ ಲೈಡನ್ ವಿಶ್ವವಿದ್ಯಾಲಯದಲ್ಲಿ ಹಾಲೆಂಡ್‌ನ ಕುಟುಂಬ ಜೀವನದ ಬಗ್ಗೆ ಸಂಶೋಧನೆ ನಡೆಸಿ ಡಿ.ಲಿಟ್ ಪದವಿ ಪಡೆದರು.

ಈಶ್ವರನ್ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಆಗಿನ ಕುಲಪತಿ ಡಿ.ಸಿ. ಪಾವಟೆ ತಮ್ಮ ವಿಶ್ವವಿದ್ಯಾಲಯಕ್ಕೆ ಆಮಂತ್ರಿಸಿದರು. 1959ರಲ್ಲಿ ಕ.ವಿ.ವಿ. ಮಾನವಶಾಸ್ತ್ರದ ವಿಭಾಗದ ಮುಖ್ಯಸ್ಥರಾಗಿ ಈಶ್ವರನ್ ಅಧಿಕಾರ ವಹಿಸಿಕೊಂಡರು. 'ಇಂಟರ್ ನ್ಯಾಶನಲ್ ಜರ್ನಲ್ ಆಫ್ ಕಂಪಾರಿಟಿವ್ ಸೊಸಿಯಾಲಜಿ' ಅಂತರರಾಷ್ಟ್ರೀಯ ನಿಯತಕಾಲಿಕ ಆರಂಭಿಸಿ ಮಾನವಶಾಸ್ತ್ರ ವಿಭಾಗವನ್ನು ಬೆಳೆಸಿದರು. ಹಟವಾದಿ, ಸ್ವಾಭಿಮಾನಿ, ಸಂಶೋಧಕರಾದ ಈಶ್ವರನ್ ಮತ್ತು ಕುಲಪತಿ ಪಾವಟೆ ಅವರ ನಡುವೆ ಬಂದ ಭಿನ್ನಾಭಿಪ್ರಾಯಗಳಿಂದ ಈಶ್ವರನ್ ಕ.ವಿ.ವಿ ತೊರೆದು ಮತ್ತೆ ಕೆನಡಾ ದೇಶಕ್ಕೆ ಹೊರಟರು.

ಈಶ್ವರನ್ ಹಾಲೆಂಡ್‌ನಲ್ಲಿರುವಾಗ ಓಬೆನ್ ಅವರನ್ನು ಪ್ರೀತಿಸಿದರು. ಆದರೆ, ಅವರ ಮದುವೆ ಆದದ್ದು ಸಿರಿಗೆರೆ ಸ್ವಾಮೀಜಿಯವರ ಸನ್ನಿಧಿಯಲ್ಲಿ. ಹಿಂದೂ ವಿವಾಹ ಪದ್ಧತಿಯಲ್ಲಿ. ಪಾಟೀಲ ಪುಟ್ಟಪ್ಪ ದಂಪತಿ ವಧುವಿನ ಪರವಾಗಿ ನಿಂತು ವಿವಾಹ ಮಾಡಿದ್ದನ್ನು ಈಶ್ವರನ್ ತಮ್ಮ ಆತ್ಮಕಥೆಯಲ್ಲಿ ಬರೆದಿದ್ದಾರೆ. ಈಶ್ವರನ್ ಪತ್ನಿ ಓಬೆನ್, ಶೈಲಜಾ ಆಗಿ ಅವರ ಮನೆ ಮನವನ್ನು ಬೆಳಗಿದರು. ಅವರಿಗೆ ಮೂರು ಜನ ಮಕ್ಕಳು. ಹಿರಿಯರು ಅರುಂಧತಿ, ಅವಳ ಜೀವನದ ಕರುಣ ಕಥೆಯನ್ನು 'ನನ್ನ ಮಗಳು ಅರುಂಧತಿ' ಪುಸ್ತಕದಲ್ಲಿ ಈಶ್ವರನ್ ಬರೆದಿದ್ದಾರೆ. ಎರಡನೆಯವರು ಹೇಮಂತ್ ಸಂಖ್ಯಾಶಾಸ್ತ್ರ ಪ್ರಾಧ್ಯಾಪಕರಾಗಿ ವಿದೇಶದಲ್ಲಿ ಖ್ಯಾತಿ ಗಳಿಸಿದ್ದಾರೆ. ಮೂರನೆಯವರು ಶಿವಕುಮಾರ್, ಈಶ್ವರನ್ ನಡೆಸುತ್ತಲಿದ್ದ ಅಂತರರಾಷ್ಟ್ರೀಯ ಜರ್ನಲ್‌ಗಳನ್ನು ಮುಂದುವರಿಸುತ್ತಿದ್ದಾರೆ. ಅವರು ಕೆನಡಾ ದೇಶದ ಪ್ರಜೆಯಾದರೂ ಭಾರತದ ಬಗೆಗೆ ಅಪಾರ ಪ್ರೀತಿ, ಗೌರವ ಹೊಂದಿದವರು.

ಟೊರೆಂಟೊ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದ ಈಶ್ವರನ್ ಅಂತರರಾಷ್ಟ್ರೀಯ ಮಟ್ಟದ ಸಂಶೋಧನೆಯಿಂದ ಖ್ಯಾತಿ ಗಳಿಸಿದ್ದಾರೆ. ವೈಯಕ್ತಿಕ ಜೀವನದಲ್ಲಿ ನಿರಂತರ ಹೋರಾಟ, ನೋವು, ಕೌಟುಂಬಿಕ ಜೀವನದಲ್ಲಿ ಆದ ಆಘಾತಗಳು ಅವರನ್ನು ಘಾಸಿಗೊಳಿಸಿದ್ದರೂ ಅವರು ಜ್ಞಾನಪಿಪಾಸು, ದಣಿವರಿಯದ ಸಂಶೋಧಕರಾಗಿದ್ದರು.

ನೆನಪು

ಈಶ್ವರನ್ ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಮೌಲಿಕ ಕೊಡುಗೆ ನೀಡಿದ್ದಾರೆ. ಅವರ ಸಂಶೋಧನಾ ಮಹಾಪ್ರಬಂಧ 'ಹರಿಹರನ ಕೃತಿಗಳ ಸಂಖ್ಯಾ ನಿರ್ಣಯ'ವನ್ನು ಮೈಸೂರು ವಿಶ್ವವಿದ್ಯಾಲಯ ಪ್ರಕಟಿಸಿದೆ. ಹರಿಹರನ ಕೃತಿಗಳ ಬಗ್ಗೆ ಉಪಲಬ್ಧವಿದ್ದ ಎಲ್ಲ ಆಕರ ಸಾಮಗ್ರಿಗಳನ್ನು ದಾಖಲಿಸಿ ಆಂತರಿಕ ಮತ್ತು ಬಾಹ್ಯ ಪ್ರಮಾಣಗಳಿಂದ ಹರಿಹರನ ಒಟ್ಟೂ ಕೃತಿಗಳು 106 ಎಂದು ನಿರ್ಧರಿಸಿದ್ದಾರೆ. ಬೇರೆ ಬೇರೆ ಕಡೆ ಇರುವ ಹರಿಹರನ ಓಲೆಕಟ್ಟುಗಳನ್ನು ಇಟ್ಟುಕೊಂಡು ವಿಪುಲ ಸಾಮಗ್ರಿಯನ್ನು ಸಂಶೋಧನೆಗೆ ಬಳಸಿಕೊಂಡಿದ್ದಾರೆ. ಈಶ್ವರನ್ ಬರೆದ ಆತ್ಮಚರಿತ್ರೆ 'ವಲಸೆ ಹೋದ ಕನ್ನಡಿಗನ ಕಥೆ' ಕನ್ನಡ ಆತ್ಮಚರಿತ್ರೆಗಳ ಸಾಲಿನಲ್ಲಿ ವಿಶಿಷ್ಟವಾದದ್ದು. ಭಾರತದ ಬಗ್ಗೆ ಪ್ರೀತಿ ಅಭಿಮಾನವಿದ್ದರೂ ದೂರದ ಕೆನಡಾ ದೇಶಕ್ಕೆ ವಲಸೆ ಹೋಗಬೇಕಾದ ಅನಿವಾರ್ಯ ಪರಿಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾರೆ. ಕನ್ನಡ ತಾಯ್ ನೋಟುಗಳು ಅವರ ಲಲಿತ ಪ್ರಬಂಧಗಳಾಗಿವೆ. ಕವಿತೆ ಕಥೆಗಳನ್ನು ಅವರು ಬರೆದಿದ್ದಾರೆ.

ಉತ್ತರ ಕರ್ನಾಟಕದ ಶಿವಪುರ ಹಳ್ಳಿಯನ್ನು ಕುರಿತು ಹದಿನೈದು ವರ್ಷ ಅಧ್ಯಯನ ನಡೆಸಿ 'ಭಾರತದ ಹಳ್ಳಿಗಳು' ಗ್ರಂಥ ರಚಿಸಿದ್ದು, ಅದನ್ನು ಮೈಸೂರು ವಿಶ್ವವಿದ್ಯಾಲಯ ಪ್ರಕಟಿಸಿದೆ. ಭಾರತೀಯ ಹಳ್ಳಿಗಳು ಪ್ರಾಚೀನ ಸಂಸ್ಕೃತಿಯ ಅವಶೇಷವಾಗಿವೆ. ಪಾಶ್ಚಾತ್ಯ ಹಳ್ಳಿಗಳು ಔದ್ಯೋಗೀಕರಣದಿಂದ ಭೌತಿಕ ಸಂಪತ್ತಿನತ್ತ ಸಾಗಿದರೆ ಭಾರತದ ಹಳ್ಳಿಗಳಲ್ಲಿರುವ ಸಾಂಸ್ಕೃತಿಕ ಸಂಪತ್ತು ವಿಸ್ಮಯ ಉಂಟು ಮಾಡುತ್ತದೆ. ಭಾರತದ ಹಳ್ಳಿಗಳ ಸಾಮಾಜಿಕ ಮತ್ತು ಆರ್ಥಿಕ ಜೀವನದ ಅಧ್ಯಯನ ಈಶ್ವರನ್ ಪುಸ್ತಕದಲ್ಲಿದೆ.

ಈಶ್ವರನ್ ಅವರು ಧರ್ಮ ಹಾಗೂ ಸಮಾಜಶಾಸ್ತ್ರದ ಅಧ್ಯಯನದ ಬೃಹತ್ ಗ್ರಂಥಗಳನ್ನು ರಚಿಸಿದ್ದಾರೆ. ಅವರ 'ಲಿಂಗಾಯತ ಧರ್ಮ - ಒಂದು ಅಧ್ಯಯನ' ಲಿಂಗಾಯತ ಧರ್ಮದ ಆಳ-ಅಗಲ ತೆರೆದಿಡುವ ಅಧಿಕೃತ ಗ್ರಂಥ. ಶರಣರ ಕಾಯಕ ಸಿದ್ಧಾಂತದ ವಿನೂತನ ಸಮಾಜಶಾಸ್ತ್ರೀಯ ವ್ಯಾಖ್ಯಾನವನ್ನು ಅವರು ಮಾಡಿದ್ದಾರೆ. ಭಾರತದಲ್ಲಿ ಕಾಣುವ ಸಮಾಜನೀತಿ, ಸಹಕಾರ, ಪ್ರಜಾಪ್ರಭುತ್ವ ಮೌಲ್ಯಗಳು ಲಿಂಗಾಯತ ಪರಂಪರೆಯಲ್ಲಿವೆ. ವೈದಿಕ ಭಕ್ತಿ ಪರಂಪರೆಗಿಂತ ಲಿಂಗಾಯತ ಭಕ್ತಿ ಪರಂಪರೆ ಭಿನ್ನವಾಗಿದೆ ಎಂಬುದನ್ನು ಅವರು ತೋರಿಸಿ ಕೊಟ್ಟಿದ್ದಾರೆ. ಲಿಂಗಾಯತ ಧರ್ಮದ ಉಗಮ, ಸ್ಥಾಪನೆ, ತತ್ವಜ್ಞಾನ, ಸಾಹಿತ್ಯ, ಸಂಸ್ಕೃತಿ, ಸಮಾಜ ರಚನೆ, ಆಚಾರ ವಿಚಾರಗಳ ಕುರಿತು ವಸ್ತುನಿಷ್ಠವಾದ ಅಧ್ಯಯನ ಈ ಗ್ರಂಥದಲ್ಲಿದೆ. ಲಿಂಗಾಯತ ಧರ್ಮ ಒಂದು ಸ್ವತಂತ್ರ ಧರ್ಮವಾಗುವ ಎಲ್ಲ ಲಕ್ಷಣಗಳನ್ನು ಹೊಂದಿದೆ ಎಂದು ಈಶ್ವರನ್ ಅಭಿಪ್ರಾಯಪಟ್ಟಿದ್ದಾರೆ.

ಈಶ್ವರನ್ ಅವರ 'ಲಿಂಗಾಯತ, ಜೈನ ಮತ್ತು ಬ್ರಾಹ್ಮಣ ಮಠಗಳು: ಒಂದು ತೌಲನಿಕ ಅಧ್ಯಯನ' (1998) ಮಹತ್ವದ ಕೃತಿಯಾಗಿದೆ. ಅದರಲ್ಲಿ ಹೀಗೆ ಹೇಳಿದ್ದಾರೆ: 'ಶಿವಪುರದ ಲಿಂಗಾಯತರು ಅಕ್ಷರ ಸಂಸ್ಕೃತಿಗೆ ಸೇರಿದವರಲ್ಲ. ಅವರ ಧಾರ್ಮಿಕ ಸಾಹಿತ್ಯಕ್ಕೆ ಎಂಟು ನೂರು ವರ್ಷಗಳ ಇತಿಹಾಸವಿದೆ. ಈ ಜನತೆಯ ಸಮುದಾಯದ ಸಂಪ್ರದಾಯವನ್ನು ದೇಶಿ ಚೌಕಟ್ಟಿನಲ್ಲಿ ಸೇರಿಸಬೇಕೋ ಮಾರ್ಗದ ಚೌಕಟ್ಟಿನಲ್ಲಿ ಸೇರಿಸಬೇಕೋ ಎಂಬ ಪ್ರಶ್ನೆ ನನ್ನ ಮುಂದೆ ನಿಂತಾಗ ಅವೆರಡೂ ಚೌಕಟ್ಟು ಮತ್ತು ಸಂಪ್ರದಾಯಗಳಿಗೆ ಒಳಗಾಗದೆ ಶಿವಪುರದ ಲಿಂಗಾಯಿತರು ಸ್ವತಂತ್ರವಾದ ಸಂಪ್ರದಾಯವನ್ನು ನಿರ್ಮಿಸಿಕೊಂಡರು. ಅವರ ವಿಶಿಷ್ಟ ಸಂಪ್ರದಾಯವನ್ನು 'ಜನಪದ ಸಮಷ್ಟಿ ಸಂಪ್ರದಾಯ' ಎಂದು ಹೆಸರಿಟ್ಟು ಕರೆದೆ'. ಕರ್ನಾಟಕದ ಇತರ ಮಠಗಳಾದ ಜೈನ, ಬ್ರಾಹ್ಮಣ ಮಠಗಳ ಮಠಾಧಿಪತಿಗಳ ಹಿನ್ನೆಲೆಯಲ್ಲಿ ಲಿಂಗಾಯತ ಮಠಗಳ ಪ್ರತ್ಯೇಕತೆಯನ್ನು ಕ್ರಿಯಾಶಕ್ತಿ, ಸೋಲು ಗೆಲುವುಗಳನ್ನು ಅಧ್ಯಯನ ಮಾಡಿದ್ದಾರೆ.

ಲಿಂಗಾಯತ ಮಠಗಳು ಸಮಾಜ ಸೇವೆ ದಾಸೋಹದಲ್ಲಿ ಶಿವನನ್ನು ಕಾಣಬೇಕೆಂದು ಹೇಳುತ್ತವೆ. ಏಕದೇವತಾವಾದವು ಜಂಗಮಸಂಸ್ಕೃತಿಯ ಜೀವಾಳ. ಇಷ್ಟಲಿಂಗ ಅದರ ಸಂಕೇತವಾಗಿದ್ದು ವ್ಯಕ್ತಿ ಸ್ವಾತಂತ್ರ್ಯ, ಧಾರ್ಮಿಕ, ಸಾಮಾಜಿಕ ಸ್ವಾತಂತ್ರ್ಯ, ಸಮತೆಗಳೆಂಬ ವಿಶ್ವತತ್ವಗಳನ್ನು ಅದು ಪ್ರತಿನಿಧಿಸುತ್ತದೆ. ಲೌಕಿಕ ಮೌಲ್ಯಗಳನ್ನು ಪಾರಮಾರ್ಥಿಕ ಮಟ್ಟಕ್ಕೇರಿಸಿದ ಲಿಂಗಾಯತರ ಧರ್ಮವನ್ನು ಪ್ರಜಾಧರ್ಮವೆಂದು ಹೇಳಬಹುದು ಎಂದು ಈಶ್ವರನ್ ಪ್ರತಿಪಾದಿಸಿದ್ದಾರೆ. ಜೈನ ಮತ್ತು ಬ್ರಾಹ್ಮಣ ಮಠಗಳಲ್ಲಿ ವಿಗ್ರಹ ಪೂಜೆ, ಧಾರ್ಮಿಕ ಆಚರಣೆಗಳಿಗೆ ವಿಶೇಷ ಮಹತ್ವ. ಅದಕ್ಕಾಗಿ ಅಪಾರ ಹಣ ವ್ಯಯವಾಗುತ್ತದೆ. ಆದರೆ ಲಿಂಗಾಯತ ಮಠಗಳು ನಿತ್ಯ ದಾಸೋಹ, ಧರ್ಮ ಪ್ರಸಾರ, ಪ್ರಸಾದ ನಿಲಯ, ಶಿಕ್ಷಣ ಸಂಸ್ಥೆಗಳಿಗೆ ಧನ ವಿನಿಯೋಗ ಮಾಡುತ್ತಿವೆ. ಜೈನ, ಬ್ರಾಹ್ಮಣ ಸಂಸ್ಕೃತಿಗಳು ಸ್ಥಾವರ ಪರವಾದರೆ ಲಿಂಗಾಯತ ಸಂಸ್ಕೃತಿ ಜಂಗಮ ಪರವಾಗಿದೆ ಎಂದು ಈಶ್ವರನ್ ವಿಶ್ಲೇಷಿಸಿದ್ದಾರೆ. ಜಂಗಮ ಸಂಸ್ಕೃತಿಯಲ್ಲಿ ಸ್ತ್ರೀ ಪುರುಷರಿಬ್ಬರ ದೇಹಗಳು ಪವಿತ್ರವಾದವು. ಇಲ್ಲಿ ದೇಹವೇ ದೇವಾಲಯ. ಆದ್ದರಿಂದಲೇ ಲಿಂಗಾಯತ ಧರ್ಮ ಲಿಂಗಾಧಾರಿತ ಅಸಮಾನತೆಯನ್ನು ಹೋಗಲಾಡಿಸಿ ಸಮಾನತೆಯ ಸಮಾಜವನ್ನು ಕಟ್ಟಲು ಹೊರಟಿದೆ ಎಂದು ಪ್ರತಿಪಾದಿಸಿದ್ದಾರೆ.

ತರಳುಬಾಳು ಮಠದ ಬಗೆಗೆ ಅಪಾರ ಭಕ್ತಿ, ಶ್ರದ್ಧೆ ಇಟ್ಟುಕೊಂಡ ಈಶ್ವರನ್ ತಮ್ಮ ಬಾಳ ಕೊನೆಯವರೆಗೂ ಲಿಂಗಾಯತ ಧರ್ಮ ಸಾಹಿತ್ಯ ಸಂಸ್ಕೃತಿಯ ಅಧ್ಯಯನದಲ್ಲಿ ತೊಡಗಿದವರು. ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರು 1998 ಜೂನ್ 23ರಂದು ಧಾರವಾಡದಲ್ಲಿ ನಿಧನಹೊಂದಿದರು. ಅವರ ಮನೆ ಕಲ್ಪನಾವನ್ನು ಗದುಗಿನ ತೋಂಟದಾರ್ಯ ಮಠಕ್ಕೆ ದಾನವಾಗಿ ಕೊಟ್ಟಿದ್ದಾರೆ. ಈಗ ಅಲ್ಲಿ ಹಿರೇಮಲ್ಲೂರ್ ಈಶ್ವರನ್ ಪದವಿಪೂರ್ವ ವಿಜ್ಞಾನ ಮಹಾವಿದ್ಯಾಲಯದ ಮೂಲಕ ಸಾವಿರಾರು ವಿದ್ಯಾರ್ಥಿಗಳ ವಿದ್ಯಾ ಕೇಂದ್ರವಾಗಿದೆ. ಈಶ್ವರನ್ ನಮ್ಮ ನಡುವೆ ಈಗ ಇಲ್ಲ. ಆದರೆ, ತಮ್ಮ ಗ್ರಂಥ ಲೇಖನಗಳಿಂದ ನಮ್ಮ ನಡುವೆ ನಡೆದಾಡುತ್ತಿದ್ದಾರೆ.

ಮೀಸಲಾತಿಯ ಮಹತ್ವದ ಒಳದನಿ

ಶರತ್ ಹೆಗ್ಡೆ

'ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳಿಗೆ ಶಾಸನ ಸಭೆಗಳಲ್ಲಿ ಪ್ರಾತಿನಿಧ್ಯ ಸಿಗಬೇಕಾದರೆ ಮೀಸಲಾತಿ ನೀಡುವುದೊಂದೇ ಪರಿಹಾರ. ಅದಕ್ಕಾಗಿ ರಾಷ್ಟ್ರ ಮಟ್ಟದ ಆಂದೋಲನವಾಗಬೇಕು. ಅದಕ್ಕಾಗಿ ಪ್ರತ್ಯೇಕ, ಪ್ರಬಲ ಸಂಘಟನೆಯ ಅಸ್ತಿತ್ವ ಅನಿವಾರ್ಯ' ಎನ್ನುವ ಸಾಲುಗಳಷ್ಟೇ ಸಾಕು, ಮೀಸಲಾತಿಯ ಒಳನೋಟ ಕೃತಿಯ ತಿರುಳು ಏನೆಂಬುದನ್ನು ಹೇಳಲು. 'ಅಹಿಂದ' ಅಸ್ತಿತ್ವಕ್ಕೆ ಬಂದ ಉದ್ದೇಶವನ್ನು ಪ್ರಬಲವಾಗಿ ಸ್ಪಷ್ಟೀಕರಿಸುತ್ತಲೇ ಹಿಂದುಳಿದ ವರ್ಗಗಳ ರಾಜಕೀಯ ಅಸ್ಮಿತೆಯನ್ನು ಎತ್ತಿ ಹಿಡಿಯುವ ಬಗೆಯನ್ನು ಲೇಖಕ ಕೆ.ಎನ್.ಲಿಂಗಪ್ಪ ಅವರು ಈ ಕೃತಿಯಲ್ಲಿ ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ.



ಮೀಸಲಾತಿಯ ಒಳನೋಟ

ಲೇ: ಕೆ.ಎನ್.ಲಿಂಗಪ್ಪ

ಪ್ರ: ಅಭಿರುಚಿ ಪ್ರಕಾಶನ

ಸಂ: 9945499588

ಪು: 176 ₹200

ಒಳನೋಟ

ಕೃತಿಯ ಮೊದಲ ಅಧ್ಯಾಯ 'ರಾಜಕೀಯ ಚದುರಂಗದಾಟದಲ್ಲಿ ಕಳೆದುಹೋದ ಹಿಂದುಳಿದ ವರ್ಗಗಳು' ಲೇಖನದಲ್ಲಿ 1951–52ರಿಂದ 2019ರವರೆಗೆ ಸಂಸತ್‌ಗೆ ನಡೆದ ಒಟ್ಟು 17 ಚುನಾವಣೆಗಳಲ್ಲಿ ಹಿಂದುಳಿದ ವರ್ಗಗಳ ಪ್ರಾತಿನಿಧ್ಯ ಗಣನೀಯವಾಗಿ ಹಿನ್ನಡೆ ಕಂಡಿರುವುದನ್ನು ಆಯಾ ಕಾಲಘಟ್ಟದ ಸನ್ನಿವೇಶಗಳ ಸಹಿತ ಉಲ್ಲೇಖಿಸಿದ್ದಾರೆ. ಈ ಹಿನ್ನಡೆ ಮತ್ತು ಪ್ರಾತಿನಿಧ್ಯದ ಪ್ರಮಾಣ ಸಮತೋಲನಗೊಳ್ಳಬೇಕಾದರೆ 'ಅಹಿಂದ ಮರುಹುಟ್ಟು ಅಗತ್ಯ ಏಕೆ? ಮತ್ತು ಹೇಗೆ?' ಎಂಬ ಅಧ್ಯಾಯದಲ್ಲಿ ಲೇಖಕರು ವಿಸ್ತಾರವಾಗಿ ಚರ್ಚಿಸಿದ್ದಾರೆ.

ಕರ್ನಾಟಕದ ಏಕೀಕರಣದ ಬಳಿಕ 2018ರವರೆಗೆ ರಾಜ್ಯ ವಿಧಾನಸಭೆಗೆ ನಡೆದ ಒಟ್ಟು 15 ಚುನಾವಣೆಗಳಲ್ಲಿ ಆಯ್ಕೆಯಾದ ಹಿಂದುಳಿದ ವರ್ಗಗಳ ಜನಪ್ರತಿನಿಧಿಗಳ ಪ್ರಮಾಣ ನಿರಾಶಾದಾಯಕ ಎಂಬುದನ್ನು ಜಾತಿವಾರು ಪ್ರಾತಿನಿಧ್ಯದ ದಾಖಲೆ ಸಹಿತ ಕೊಟ್ಟಿದ್ದಾರೆ.

'ರಾಜಕೀಯ ಸುಳಿಯಲ್ಲಿ ಸಿಲುಕಿದ ಜನಗಣತಿ' ಲೇಖನದಲ್ಲಂತೂ ಒಂದು ವ್ಯವಸ್ಥಿತ ಸಮೀಕ್ಷೆಯು ಹೊರಬರದಂತೆ ಹಿತಾಸಕ್ತಿಗಳು ನಡೆದುಕೊಂಡ ಬಗೆಯನ್ನು ವಿಷಾದದಿಂದಲೇ ವಿವರಿಸಿದ್ದಾರೆ. ವರದಿ ಸೋರಿಕೆ ಆಯಿತು ಎಂಬ ಗುಲ್ಲೆದ್ದದ್ದು, ಅದನ್ನೊಂದು ವಿವಾದವನ್ನಾಗಿಸಿದ್ದನ್ನು ವಿವರವಾಗಿ ಚರ್ಚಿಸಿದ್ದಾರೆ. ಈ ಸಮೀಕ್ಷೆಗಾಗಿ ಜನಸಾಮಾನ್ಯರ ತೆರಿಗೆ ಹಣ ₹ 250 ಕೋಟಿ ವ್ಯಯವಾಗಿದ್ದು ಕೊನೆಗೂ ವರದಿ ಬೆಳಕಿಗೆ ಬಾರದೇ ಹೋಯಿತು ಎಂದು ವಿಷಾದಿಸಿದ್ದಾರೆ. 'ಹಿಂದುಳಿದವರನ್ನು ರಕ್ಷಿಸಬೇಕಾದ ದೇವರೂ ಅವರ ಪಾಲಿಗೆ ಇಲ್ಲವಾಗಿದ್ದಾನೆ' ಎಂದು ಬೇಸರವನ್ನು ಹೊರಹಾಕಿದ್ದಾರೆ.

ಆರ್ಥಿಕವಾಗಿ ಹಿಂದುಳಿದ ಎಲ್ಲ ಜಾತಿಗಳಿಗೂ ಮೀಸಲಾತಿ ಸಿಗಬೇಕು ಎಂಬ ನಿರ್ಧಾರದ ಹಿನ್ನೆಲೆಯಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರಲಾಯಿತು. ಈಗ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಗೆ ಅರ್ಹತೆ ಇರುವ ಅತಿ ಹಿಂದುಳಿದ ಜಾತಿಗಳು ಮತ್ತು ಈಗಾಗಲೇ ಸೇರಿರುವ ಮುಖ್ಯ ಜಾತಿಗಳಿಗೆ ಅವುಗಳ ಉಪಜಾತಿಗಳನ್ನು ಸೇರಿಸಲು ಕ್ರಮ ಕೈಗೊಳ್ಳಬೇಕಿದೆ ಎಂದು ಸಲಹೆ ಮಾಡಿದ್ದಾರೆ. ತೃತೀಯ ಲಿಂಗಿಗಳಿಗೂ ಮೀಸಲಾತಿ ನೀಡಬೇಕು ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ಡಾ.ಸಿ.ಎಸ್. ದ್ವಾರಕಾನಾಥ್ ಅಧ್ಯಕ್ಷರಾಗಿದ್ದ ಅವಧಿಯಲ್ಲಿ) ಮಾಡಿದ ಶಿಫಾರಸನ್ನು ಜಾರಿಗೊಳಿಸಬೇಕು. ಕೇಂದ್ರ ಸರ್ಕಾರವೂ ಇವರನ್ನು ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರು ಎಂದು ಪರಿಗಣಿಸಿ ಕೇಂದ್ರದ ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯಲ್ಲಿ ಸೇರಿಸಬೇಕು ಎಂದು ಒತ್ತಾಯಿಸಿದ್ದಾರೆ.

ಒಳಮೀಸಲಾತಿಯ ಒಳಸುಳಿಗಳು, ಆಯೋಗಗಳ ಸಲಹೆಗಳಿಗೆ ಸರ್ಕಾರಗಳ ದಿವ್ಯ ನಿರ್ಲಕ್ಷ್ಯ, ಹತ್ತು ವರ್ಷಗಳಿಗೊಮ್ಮೆ ನಡೆಯಬೇಕಾದ ಜಾತಿ ಜನಗಣತಿ, ಸಂವಿಧಾನ ತಿದ್ದುಪಡಿ: ಜಾತಿಗಳ ಹೊಸ ಸೇರ್ಪಡೆ ಕಗ್ಗಂಟು, ಮೀಸಲಾತಿಯ ಕೋಟಾ: ಶೇ 50ರ ಮಿತಿಯ ಕಗ್ಗಂಟು, ಮಡಿವಾಳರ ಕನಸು ನನಸಾದೀತೇ?, ದಡ ತಲುಪದ ಉಪ್ಪಾರರ ಭಗೀರಥ ಹೋರಾಟ ಮೊದಲಾದ ಲೇಖನಗಳ ತಲೆಬರಹಗಳೇ ಕೃತಿಯ ಚರ್ಚೆಯ ಆಳವನ್ನೂ ಹೇಳುತ್ತವೆ. ಇಲ್ಲಿನ ಲೇಖನಗಳಲ್ಲಿ ರಾಜಕೀಯದ ಒಳನೋಟಗಳಿವೆ. ಪಕ್ಷಗಳ ಸೈದ್ಧಾಂತಿಕ ಸಂಘರ್ಷಗಳು, ತೆರೆಮರೆಯ ಉದ್ದೇಶಗಳು ಹಿಂದುಳಿದ ಜಾತಿಗಳ ಏಳಿಗೆಗೆ, ಹಿತಾಸಕ್ತಿಗೆ ಅಡ್ಡಿಯಾಗಿ ಪರಿಣಮಿಸಿರುವ ಬಗ್ಗೆ ಚರ್ಚೆಗಳಿವೆ.

ಕೆಎಎಸ್ ಅಧಿಕಾರಿಯಾಗಿ, ಹಿಂದುಳಿದ ವರ್ಗಗಳ ಆಯೋಗದ ಸದಸ್ಯರಾಗಿ ಆಡಳಿತದಲ್ಲಿ ವ್ಯಾಪಕವಾದ ಅನುಭವ ಹೊಂದಿರುವ ಲಿಂಗಪ್ಪನವರು, ಆಳವಾದ ಅಧ್ಯಯನ ಆಧಾರದ ಮೇಲೆ ಕೃತಿ ರಚಿಸಿದ್ದಾರೆ. ಸರ್ಕಾರಿ ಆದೇಶಗಳು, ಸುತ್ತೋಲೆಗಳು, ದಾಖಲೆಗಳು, ಕೋರ್ಟ್ ತೀರ್ಪುಗಳು, ಅಂಕಿ-ಅಂಶಗಳನ್ನು ಹೇರಳವಾಗಿ ಕಲೆಹಾಕಿ ಕೊಡುವ ಮೂಲಕ ಚರ್ಚೆಯ ವಸ್ತುನಿಷ್ಠತೆಯನ್ನು ಹೆಚ್ಚಿಸಿದ್ದಾರೆ.

'ನನಗೆ ತಿಳಿದಂತೆ ಕನ್ನಡದಲ್ಲಿ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ಇಷ್ಟೊಂದು ವಿವರಗಳಿರುವ ಪುಸ್ತಕ ಇದೊಂದೇ ಅನಿಸುತ್ತದೆ' ಎಂದು ಮುನ್ನುಡಿಯಲ್ಲಿ ಡಾ. ದ್ವಾರಕಾನಾಥ್ ಅವರು ಅಭಿಪ್ರಾಯಪಟ್ಟಿರುವುದು ಕೃತಿಯ ಮಹತ್ವವನ್ನು ಸಾರುತ್ತದೆ. ಜಾತಿ ರಾಜಕಾರಣದ ಒಳನೋಟ, ಕಾನೂನು ವಿಶ್ಲೇಷಣೆಯ ಹಲವಾರು ದೃಷ್ಟಾಂತಗಳಿರುವ ಈ ಕೃತಿ ಮೀಸಲಾತಿಗೆ ಸಂಬಂಧಿಸಿ ಅಧ್ಯಯನಾಸಕ್ತರಿಗೆ, ಕಾನೂನು ವಿದ್ಯಾರ್ಥಿಗಳಿಗೆ, ಜನಪ್ರತಿನಿಧಿಗಳಿಗೆ ಉಪಯುಕ್ತ ಕೃತಿ.

ಮೊದಲ ಓದು

ಇದು ಹೆಣ ಹೊತ್ತವನ ಆತ್ಮವೃತ್ತಾಂತ

ನಾಟಕ, ಪತ್ರಿಕೋದ್ಯಮ ಕ್ಷೇತ್ರದ ನಂಟಿನ ಜೊತೆಗೆ ಸಣ್ಣ ಕತೆಗಾರನಾಗಿ ವ್ಯಾಪಕ ಸಾಹಿತ್ಯ ಕೃಷಿ ಮಾಡಿರುವ ಸೈರಸ್ ಮಿಸ್ತ್ರಿ ಅವರ 'ಕ್ರಾನಿಕಲ್ ಆಫ್ ಎ ಕಾರ್ಪ್ಸ್ ಬೇರರ್' ಇಂಗ್ಲಿಷ್ ಕಾದಂಬರಿಯ ಅನುವಾದ ಈ ಹೊತ್ತಿಗೆ.

2013ನೇ ಸಾಲಿನಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಈ ಕೃತಿಯನ್ನು ಬಿ.ಆರ್.ಜಯರಾಮರಾಜೇ ಅರಸ್ ಅನುವಾದಿಸಿದ್ದಾರೆ. ಭಾರತೀಯ ಆಡಳಿತ ಸೇವೆಯಲ್ಲಿದ್ದರೂ, ಸಾಹಿತ್ಯ ಹಾಗೂ ಅನುವಾದ ಇವರನ್ನು ಸೆಳೆದ ಪ್ರವೃತ್ತಿ. ಈ ಹಿಂದೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದ ಅರುಣ್ ಜೋಶಿ ಅವರ 'ದಿ ಲಾಸ್ಟ್ ಲ್ಯಾಬಿರಿಂಥ್' ಕೃತಿಯನ್ನೂ ಇವರು 'ಪ್ರಪಾತ' ಎಂಬ ಶೀರ್ಷಿಕೆಯಲ್ಲಿ ಅನುವಾದಿಸಿದ್ದರು. ಹೊಸ ಅನುವಾದ ಕೃತಿಗೂ ಈ ರೀತಿಯಾಗಿಯೇ ವಿಭಿನ್ನ ಶೀರ್ಷಿಕೆಯನ್ನು ಅರಸ್ ಅವರು ನೀಡಿದ್ದಾರೆ. ಇದೊಂದು ಹೆಣ ಹೊರುವವನ ವೃತ್ತಾಂತ.



ಹೆಣ ಹೊರುವವನ ವೃತ್ತಾಂತ

ಲೇ: ಸೈರಸ್ ಮಿಸ್ತ್ರಿ

ಅನುವಾದ: ಬಿ.ಆರ್.ಜಯರಾಮರಾಜೇ ಅರಸ್

ಪ್ರ: ಸಾಹಿತ್ಯ ಅಕಾದೆಮಿ

ಸಂ: 080–22245152

ಪು: 244 ₹240

ಕಾದಂಬರಿಯ ಪುಟ ತಿರುವಿದಂತೆ ಕಥೆಯು ಬಾಂಬೆಯಲ್ಲಿ 1942ನೇ ಇಸವಿಯ ವರ್ತಮಾನ ಕಾಲದಿಂದ ಆರಂಭವಾಗಿ ಭೂತಕಾಲದಲ್ಲಿ ಸಾಗುತ್ತಾ ಅಪೂರ್ಣ ಭವಿಷ್ಯ ಬಿಚ್ಚಿಕೊಳ್ಳುತ್ತಾ ಮುನ್ನಡೆದಿದೆ. ಇಲ್ಲಿ 'ಎಲ್ಚಿ' (ಫಿರೋಜ್ ಎಲ್ಚಿದಾನ) ಕಥಾನಾಯಕ. ಪಾರ್ಸಿ ಉಪಜಾತಿಗೆ ಸೇರಿದ ಅಸ್ಪೃಶ್ಯರಾದ ಹೆಣಹೊರುವವರ ಬದುಕಿನ ವೃತ್ತಾಂತ ಇಲ್ಲಿದೆ. ಫಿರೋಜ್ ಸಮಾಜದ ಪ್ರಬಲ ವರ್ಗಕ್ಕೆ ಸೇರಿದ ಪುರೋಹಿತರೊಬ್ಬನ ಮಗ. 'ಖಾಂಧಿಯಾ' (ಹೆಣ ಹೊರುವವರು) ಜಾತಿಗೆ ಸೇರಿದ ಸೆಪಿಡೆಹ್ (ಸೆಪ್ಪಿ) ಎಂಬುವವಳನ್ನು ಪ್ರೀತಿಸುತ್ತಾನೆ.

ಮಗಳನ್ನು ಮದುವೆಯಾಗಬೇಕಾದರೆ ಹೆಣ ಹೊರುವ ವೃತ್ತಿ ಸ್ವೀಕರಿಸಿ, ತಮ್ಮ ಜೊತೆಯೇ ಬದುಕಬೇಕು ಎನ್ನುವ ಸೆಪ್ಪಿ ತಂದೆಯ ಷರತ್ತಿಗೆ ಒಪ್ಪಿ ಆಕೆಯನ್ನು ಮದುವೆಯಾಗುತ್ತಾನೆ. ಇದಕ್ಕಾಗಿ ತಂದೆ, ತಾಯಿ, ಸಮುದಾಯವನ್ನೂ ತೊರೆದು ಬರುತ್ತಾನೆ. ಮಗಳ ಜನನದ ಸಂದರ್ಭದಲ್ಲಿ ಸೆಪ್ಪಿ ನಿಧನ, ಎಲ್ಚಿ ಬದುಕಿಗೆ ತಿರುವಾಗುತ್ತದೆ. ಆತ, ಈ ನೋವಿನಲ್ಲೂ, ತುಳಿತಕ್ಕೊಳಗಾಗುತ್ತಿರುವ ಖಾಂಧಿಯಾ ಜನರ ಬದುಕಿನಲ್ಲಿ ಬದಲಾವಣೆ ತರುವತ್ತ ಪಾರ್ಸಿ ಪಂಚಾಯತ್ ವಿರುದ್ಧ ದಂಗೆಯನ್ನೂ ಆರಂಭಿಸುತ್ತಾನೆ. ದ್ವಿತೀಯಾರ್ಧದಲ್ಲಿ ಕಥೆಯ ಈ ನಿರೂಪಣೆ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಘಟನೆಗಳಿಗೆ ಸಮಾನಾಂತರವಾಗಿ ಸಾಗುತ್ತದೆ. ಉಸಿರು ಬಿಗಿಹಿಡಿದು ಕಥೆಯನ್ನು ಓದುವಂತೆ ಪ್ರೇರೇಪಿಸುತ್ತದೆ. ಪಾರ್ಸಿ ಸಂಸ್ಕೃತಿಯು ಕೃತಿಯುದ್ದಕ್ಕೂ ಉಸಿರಾಡಿದೆ. ಕನ್ನಡ ಸಾಹಿತ್ಯಕ್ಕೆ ಹೊಸತನ್ನು ಸೇರಿಸುವಲ್ಲಿ ಈ ಕೃತಿ ಯಶಸ್ವಿಯಾಗಿದೆ.

ಕೃತಿಯ ಆರಂಭ ನಿಧಾನವಾಗಿದ್ದರೂ, ಭೂತಕಾಲಕ್ಕೆ ಹೆಜ್ಜೆ ಇಡುತ್ತಿದ್ದಂತೇ ಕಥೆ ವೇಗ ಪಡೆಯುತ್ತದೆ. ಬಳಸಿದ ಭಾಷೆ ತುಂಬಾ ಸರಳವಾಗಿದೆ.

ಹೊಸಗನ್ನಡದ ದೀಪಸ್ತಂಭಗಳು

ಕನ್ನಡದ ಹಿರಿಯ ಸಂಶೋಧಕರಲ್ಲಿ ಒಬ್ಬರಾಗಿರುವ ಡಾ.ಬಿ.ವ್ಹಿ. ಶಿರೂರ ಅವರ 'ಚಿರಸ್ಮರಣೀಯರು' ಕೃತಿ ಕನ್ನಡ ಸಾಹಿತ್ಯಕ್ಕೊಂದು ಅನನ್ಯ ಕೊಡುಗೆ. ಎಂದಿಗೂ ಮರೆಯಬಾರದ ಪ್ರಾತಃಸ್ಮರಣೀಯ ಕನ್ನಡ ಸಾಧಕರ ಜೀವನಗಾಥೆಗಳನ್ನು ಹೂಮಾಲೆಯಂತೆ ಪೋಣಿಸಿ ಕೊಟ್ಟಿದ್ದಾರೆ ಅವರು. ಮಾಲೆಯಲ್ಲಿ ಪೋಣಿಸಲಾದ 'ಹೂವು'ಗಳು ತಮ್ಮ ಘಮವನ್ನು ಬೀರುತ್ತಲೇ ಇವೆ.

'ಚಿರಸ್ಮರಣೀಯರು' ಕೃತಿಯನ್ನು ರಚಿಸಲು ಏನು ಕಾರಣ ಎಂಬುದನ್ನು ಲೇಖಕರು ಆರಂಭದಲ್ಲೇ ಸ್ಪಷ್ಟಪಡಿಸಿದ್ದಾರೆ. ಶಿರೂರರು ಒಮ್ಮೆ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಮುಂದೆ ನಿಂತು ಅಲ್ಲಿಯ ಒಬ್ಬ ವಿದ್ಯಾರ್ಥಿಯನ್ನು ಈ ವಿಭಾಗಕ್ಕೆ 'ಡಾ.ಆರ್.ಸಿ. ಹಿರೇಮಠ ಅಧ್ಯಯನ ಪೀಠ' ಎಂದು ಏಕೆ ಹೆಸರಿಟ್ಟಿದ್ದಾರೆ ಎಂದು ಕೇಳಿದರಂತೆ. ಆ ವಿದ್ಯಾರ್ಥಿಯಿಂದ ಗೊತ್ತಿಲ್ಲ ಎಂಬ ಉತ್ತರ ಬಂದಿದಂತೆ. ಕೊನೇಪಕ್ಷ ಹಿರೇಮಠ ಅವರು ಯಾರು ಎಂಬುದೂ ಆ ವಿದ್ಯಾರ್ಥಿಗೆ ಗೊತ್ತಿರಲಿಲ್ಲವಂತೆ. ನಮ್ಮ ಸಮಾಜದ ಜ್ಞಾಪಕಶಕ್ತಿ ಎಷ್ಟೊಂದು ಕ್ಷಣಿಕ ಎಂಬುದನ್ನು ಖುದ್ದು ಅನುಭವಿಸಿದ ಲೇಖಕರು ಇಂತಹ ಕೃತಿ ರಚನೆಯ ಸಾಹಸಕ್ಕೆ ಕೈಹಾಕಿದ್ದಾರೆ.



ಚಿರಸ್ಮರಣೀಯರು

ಲೇ: ಡಾ. ಬಿ.ವ್ಹಿ. ಶಿರೂರ

ಪ್ರ: ಎಸ್.ಎಲ್.ಎನ್. ಪಬ್ಲಿಕೇಷನ್

ಸಂ: 9972129376

ಪು: 620 ₹600

ಕನ್ನಡಕ್ಕೆ ಮಹತ್ತರವಾದ ಕೊಡುಗೆಯನ್ನು ಕೊಟ್ಟ ಸಾಧಕರನ್ನೇ ಶಿರೂರರು ಆಯ್ಕೆ ಮಾಡಿಕೊಂಡಿದ್ದಾರೆ. ವಚನ ಪಿತಾಮಹರು, ಸಂಶೋಧಕರು, ವಿದ್ವಾಂಸರು, ಕವಿಗಳು, ಕನ್ನಡದ ಛಂದೋವಿಕಾಸವನ್ನು ಬೆಳಗಿದವರು, ಕನ್ನಡ ಕಟ್ಟಿದವರು ಒಂದು ಮಾಲೆಯಾಗಿ ಇಲ್ಲಿ ಓದುಗರಿಗೆ ದಕ್ಕಿದ್ದಾರೆ. ಆರ್. ನರಸಿಂಹಾಚಾರ್, ರಾ.ಹ. ದೇಶಪಾಂಡೆ, ಫ.ಗು. ಹಳಕಟ್ಟಿ, ದ್ಯಾಂಪುರ ಚೆನ್ನಕವಿ, ಶಿ.ಶಿ. ಬಸವನಾಳ, ಆ.ನೇ. ಉಪಾಧ್ಯೆ, ಎಸ್.ಸಿ. ನಂದಿಮಠ, ಮೇವುಂಡಿ ಮಲ್ಲಾರಿ, ಬಿ.ಕೆ. ಖಡಬಡಿ ಅವರಂತಹ ಅಪರೂಪದ ಸಾಧಕರು ಇಲ್ಲಿ ನೆರೆದಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಯನ್ನು ಪರಿಚಯಿಸುವಾಗ ಅವರ ಬದುಕು, ಬರಹ, ಕನ್ನಡಕ್ಕೆ ಅವರು ಕೊಟ್ಟ ಕಾಣಿಕೆಯ ಕುರಿತು ದೀರ್ಘ ಮಾಹಿತಿ ನೀಡಿದ್ದಾರೆ. ಈ ಮಾಹಿತಿಯ ಮೇಲೆ ಕಣ್ಣುಹಾಯಿಸುತ್ತಾ ಹೋದಂತೆ ಕನ್ನಡ ಚರಿತ್ರೆಯ ಮಗ್ಗಲೊಂದು ಅನಾವರಣಗೊಳ್ಳುತ್ತಾ ಹೋಗುತ್ತದೆ. 'ಒಟ್ಟಂದದಲ್ಲಿ ಹೊಸಗನ್ನಡದ ವಿವಿಧ ದೀಪಸ್ತಂಭಗಳು ಇಲ್ಲಿವೆ' ಎಂದು ಮುನ್ನುಡಿಯಲ್ಲಿ ಡಾ. ಗುರುಲಿಂಗ ಕಾಪಸೆ ಅವರು ಅಭಿಪ್ರಾಯಪಟ್ಟಿರುವುದು ಸರಿಯಾಗಿಯೇ ಇದೆ.

ಕನ್ನಡದ ನವೋದಯದ ದಿಗ್ಗಜರೆಲ್ಲ ನಮಗೆ ಇಲ್ಲಿ ಕಾಣಸಿಗುತ್ತಾರೆ. ಆರಂಭದಲ್ಲೇ ನರಸಿಂಹಾಚಾರ್ಯರ ಪರಿಚಯವಿದೆ. ಕನ್ನಡ, ತಮಿಳು ಮತ್ತು ಸಂಸ್ಕೃತದಲ್ಲಿ ಅಗಾಧ ಪಾಂಡಿತ್ಯ ಹೊಂದಿದ್ದ ಆಚಾರ್ಯರು ಕನ್ನಡವನ್ನು ಹೇಗೆ ಶ್ರೀಮಂತಗೊಳಿಸಿದರು ಎಂಬ ವಿವರಗಳು ಲೇಖನದಲ್ಲಿ ಹರಳುಗಟ್ಟಿವೆ. ಶಿಕ್ಷಣ ಕ್ಷೇತ್ರದಲ್ಲಿ ಕನ್ನಡದ ಹಿರಿಮೆ ಹೆಚ್ಚಿಸಿದ ದೇಶಪಾಂಡೆ ಅವರ ವೃತ್ತಾಂತವಂತೂ ಅವರ ಕುರಿತು ಹೆಮ್ಮೆಪಡುವಂತೆ ಮಾಡುತ್ತದೆ. ಸಿದ್ಧಯ್ಯ ಪುರಾಣಿಕರ ಚಿಕ್ಕಪ್ಪನಾದ ದ್ಯಾಂಪುರ ಚೆನ್ನಕವಿಗಳ ಪರಿಚಯ, ಸಾಮಾನ್ಯರಿಗೆ ಗೊತ್ತಿರದ ಹಲವು ಸಂಗತಿಗಳ ಮೇಲೆ ಬೆಳಕು ಚೆಲ್ಲುತ್ತದೆ. ಇಲ್ಲಿರುವ ವ್ಯಕ್ತಿತ್ವಗಳ ಕುರಿತ ಬರಹಗಳೆಲ್ಲ ಕನ್ನಡದ ಪರಂಪರೆಯನ್ನು ತಿಳಿಯಬಯಸಿದವರು ಓದಲೇಬೇಕಾದವು.

ಚಿರಸ್ಮರಣೀಯರು ಕೃತಿಯಲ್ಲಿ ಪರಿಚಯ ಮಾಡಲಾದ ಹಲವು ಸಾಧಕರ ಕುರಿತು ಬೇರೆ ಗ್ರಂಥಗಳಲ್ಲಿಯೂ ಮಾಹಿತಿ ಸಿಗಬಹುದಾದರೂ ಅವರ ಕುರಿತು ಈ ಕೃತಿಯಲ್ಲಿ ಅನನ್ಯವಾದ ವಿವರಗಳಿವೆ. ಅದರಲ್ಲಿ ಹಲವರ ಜತೆ ಲೇಖಕರು ನೇರವಾಗಿ ಒಡನಾಟ ಇಟ್ಟುಕೊಂಡಿದ್ದರಿಂದ ಅನುಭವದ ರಸಪಾಕವೂ ಕೃತಿಯ ಸ್ವಾದವನ್ನು ಹೆಚ್ಚಿಸಿದೆ. ಶಿರೂರರ 'ಶ್ರವಣಬೆಳ್ಗೊಳ ರಾಜಕೀಯ, ಸಾಹಿತ್ಯಿಕ, ಸಾಂಸ್ಕೃತಿಕ ಮಹತ್ವ', 'ಸಂಶೋಧನಾ ವ್ಯಾಸಂಗ', 'ರತ್ನಕರಂಡಕದ ಕಥೆಗಳು', 'ಭಕ್ತಿರಸಸೋನೆ'ಯಂತಹ ಅಪರೂಪದ ಕೃತಿಗಳ ಸಾಲಿಗೆ ಈ ಕೃತಿಯೂ ಸೇರ್ಪಡೆಯಾಗಿದೆ. ಕನ್ನಡದ ವಿದ್ಯಾರ್ಥಿಗಳು, ಕನ್ನಡದ ವಿಭಾಗಗಳು ತಮ್ಮ ಸಂಗ್ರಹದಲ್ಲಿ ಹೊಂದಿರಲೇಬೇಕಾದ ಕೃತಿ ಇದಾಗಿದೆ.

ಅನುಭಾವದ ತರಂಗ ಹೊತ್ತ ಕೃತಿ

ಅನುಭಾವ ತರಂಗ

ಲೇ: ಸಚ್ಚಿದಾನಂದ ಪ್ರಭು ಚಟ್ನಳ್ಳಿ

ಪ್ರ: ಲಿಂಗದೇವ ಸುಗ್ರಂಥ ಮಾಲೆ, ಬೆಂಗಳೂರು

ಸಂ: 9886694454

ಪು: 126 ₹80

ವೃತ್ತಿಯಲ್ಲಿ ನೈಋತ್ಯ ರೈಲ್ವೆ ಹಿರಿಯ ಎಂಜಿನಿಯರ್ ಆಗಿರುವ ಸಚ್ಚಿದಾನಂದ ಚಟ್ನಳ್ಳಿ ಅವರ ಹನ್ನೆರಡನೇ ಕೃತಿ 'ಅನುಭಾವ ತರಂಗ'. ವೃತ್ತಿ ಜೀವನದ ಜೊತೆಗೆ ಪ್ರವೃತ್ತಿಯಾಗಿ ಶರಣ ಸಾಹಿತ್ಯ ಲೋಕದಲ್ಲೂ ಈಜುತ್ತಾ ಬರೆದ ಸಂಶೋಧನಾತ್ಮಕ ಲೇಖನಗಳು ಇಲ್ಲಿವೆ.

ಬಸವಣ್ಣನವರ ಸಮಗ್ರ ಕ್ರಾಂತಿಯನ್ನು ಚಿತ್ರೀಕರಿಸುತ್ತಾ ಆರಂಭವಾಗುವ ಕೃತಿ, ಲಿಂಗಾಯತ ಧರ್ಮ ಸಂವಿಧಾನ ಮತ್ತು ಭಾರತ ದೇಶದ ಸಂವಿಧಾನದ ತುಲನಾತ್ಮಕ ಅಧ್ಯಯನವನ್ನೂ ನಡೆಸಿದೆ. ಲಿಂಗಾಯತ ಧರ್ಮದ ಸಂಸ್ಕೃತಿಯಲ್ಲಾಗುತ್ತಿರುವ ಬದಲಾವಣೆಗಳನ್ನೂ ಅವರು ಸೂಕ್ಷ್ಮವಾಗಿ ಪ್ರಸ್ತಾಪಿಸಿದ್ದಾರೆ. 'ವಚನಗಳು ನಮ್ಮ ವರ್ತನೋಪದೇಶವಾಗಲಿ' ಎನ್ನುವ ಅಧ್ಯಾಯದಲ್ಲಿ ವಚನಗಳು ಕೇವಲ ಬೇರೆಯವರಿಗೆ ಹೇಳುವ ಉಪದೇಶವಾಗದಿರಲಿ ಎನ್ನುವುದನ್ನು ಅವರು ವಿವರಿಸಿದ್ದಾರೆ. ಪ್ರತಿ ಅಧ್ಯಾಯದಲ್ಲೂ ಸಂದರ್ಭೋಚಿತವಾಗಿ ವಚನಗಳನ್ನು ಉಲ್ಲೇಖಿಸುತ್ತಾ, ವಿಷಯದ ವಿವರಣೆ ಇರುವುದು ವಿಶೇಷ.

'ಅನೇಕ ಶರಣ ಜನರ ಜ್ಞಾನದ ಕೊಡವನ್ನು ಹೆಚ್ಚಿನ ವೈವಿಧ್ಯತೆಯಿಂದ ತುಂಬಿಸುವ ಪ್ರಯತ್ನ ಚಟ್ನಳ್ಳಿ ಅವರದು. ಅವರು ಆರಿಸಿಕೊಂಡಿರುವ ವಿವಿಧ ವಿಚಾರಗಳ ಕುರಿತ ಅವರ ತೀಕ್ಷ್ಣ ಅನುಭಾವ ಹರಿತವಾದದ್ದು. ಅಷ್ಟೇ ಅಲ್ಲ, ಸಾಹಿತ್ಯ ತತ್ವಜ್ಞಾನ ಮತ್ತು ಅನುಭಾವ ಸೌಂದರ್ಯ ಸಹಿತವಾದುದೂ ಹೌದು' ಎಂದು ಮುನ್ನುಡಿಯಲ್ಲಿ ಕೆ.ಬಸವರಾಜ ಅವರು ಉಲ್ಲೇಖಿಸುತ್ತಾರೆ.

ಪ್ರಜಾವಾಣಿ
ದೀಪಾವಳಿ ವಿಶೇಷಾಂಕ 2022
ತೀರ್ಪುಗಾರರ ಮೆಚ್ಚುಗೆ ಪಡೆದ ಕಥೆ, ಕವನ
ಕಥೆ
ಜಯರಾಮಾಚಾರಿ ಅವರ ಭವದ ಕೇಡು
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story
ಕವನ
ಚೀಮನಹಳ್ಳಿ ರಮೇಶ ಬಾಬು ಅವರ ಬೆತ್ತ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಇದು ನೋಡುವ ಸಮಯ!

ಬೆಂಗಳೂರಿನ ರಂಗಶಂಕರದಲ್ಲಿ ಜಸ್ಟ್ ಥಿಯೇಟರ್ ನಾಟಕೋತ್ಸವ. ಕೋಲಾರದ ಆದಿಮದಲ್ಲಿ ದಲಿತ, ಆದಿವಾಸಿ ಮೇಳ. ರಾಜ್ಯೋತ್ಸವದ ವೇಳೆ ಎಲ್ಲೆಡೆ ಹಬ್ಬ

ಎಸ್. ಸುರೇಂದ್ರನಾಥ್

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ರಂಗಕಲೆಯ ಕೀರ್ತಿಪತಾಕೆಯನ್ನು ಎತ್ತಿ ಹಿಡಿದ ರಂಗಶಂಕರ ಪ್ರಾರಂಭವಾಗಿ ಹದಿನೆಂಟು ವರ್ಷಗಳಾದವು. ಇದೇ ನವೆಂಬರ್ 1 ರಿಂದ ತೊಡಗಿ ಆರು ದಿನಗಳ ಕಾಲ ರಂಗಶಂಕರದ 19ನೇ ನಾಟಕೋತ್ಸವ ನಡೆಯಲಿದೆ. ಈ ಬಾರಿಯ ಪರಿಕಲ್ಪನೆ 'ಜಸ್ಟ್ ಥಿಯೇಟರ್' ಅಂದರೆ ನ್ಯಾಯ, ಸತ್ಯ, ಔಚಿತ್ಯಪೂರ್ಣ ರಂಗಕಲೆ.

ರಂಗಶಂಕರದ ರೂವಾರಿ, ಅಭಿನೇತ್ರಿ ಅರುಂಧತಿ ನಾಗ್ ಅವರು ಹೇಳುವಂತೆ 'ಜಸ್ಟ್ ಥಿಯೇಟರ್ ಪ್ರೇಕ್ಷಕವರ್ಗವನ್ನು ಆಲೋಚಿಸಲು ಪ್ರಚೋದಿಸುತ್ತದೆ. ಈ ನಾಟಕೋತ್ಸವ ಕೇವಲ ನೋಡುಗರಾಗಿ ನಿಮ್ಮತ್ತ ಒಗೆದದ್ದನ್ನು ಸುಮ್ಮನೇ ಸ್ವೀಕರಿಸುವ ತಟಸ್ಥ ಪ್ರೇಕ್ಷಕರಾಗಿ ಮಾತ್ರವಲ್ಲ, ಬದಲಿಗೆ ನಮ್ಮ ಪ್ರೇಕ್ಷಕರು, ಸಮಾಜ ಹಾಗೂ ವ್ಯಕ್ತಿಗಳ ನೆಲೆಯಲ್ಲೂ ನಮ್ಮ ಆಯ್ಕೆ ನ್ಯಾಯವಾಗಿರಬೇಕು ಎನ್ನುವುದನ್ನು ಮನಗಂಡು ಸಕ್ರಿಯವಾಗಿ ಭಾಗಿಗಳಾಗಬೇಕು ಎನ್ನುವುದು ಇದರ ಆಶಯ'.

ಕಲೆ ಸದಾ ಬದುಕನ್ನೇ ಪ್ರತಿಬಿಂಬಿಸುತ್ತದೆ. ಇಂದಿನ ತೀವ್ರ ಗೊಂದಲದ ಕಾಲದಲ್ಲಿ ಸುತ್ತಮುತ್ತಲ ಸಂಭವಗಳು ಜನರನ್ನು ಕಂಗೆಡಿಸಿರುವುದು ನಿಜ. ಇತರ ಎಲ್ಲಾ ಕಲೆಗಳಿಗಿಂತ ನಾಟಕ ತನ್ನ ತಕ್ಷಣದ ಪರಿಣಾಮದಿಂದಾಗಿ ಜೊತೆಗೆ ನಂಬಿಸುವ ಸಾಮರ್ಥ್ಯದಿಂದಾಗಿ ಹೆಚ್ಚು ಖಡಕ್ಕಾಗಿ ಮಾನದಂಡಕ್ಕೊಳಪಡುತ್ತದೆ. ಹಾಗಾಗಿ ಈ ಬಾರಿಯ ನಾಟಕೋತ್ಸವ 'ಜಸ್ಟ್' 'ನ್ಯಾಯ' ಎನ್ನುವ ಪರಿಕಲ್ಪನೆಯ ಹಲವು ಮಜಲುಗಳನ್ನು ಮತ್ತು ಅವುಗಳ ಮರುವ್ಯಾಖ್ಯಾನಗಳನ್ನು ಕುರಿತು ಪರಿಶೋಧಿಸುತ್ತದೆ.

ರೇವತಿ ಲಾಲ್ ಅವರು ಬರೆದ ಈ ನಾಟಕೋತ್ಸವ ಕುರಿತ ಟಿಪ್ಪಣಿಯಲ್ಲಿ 'ಈ ದುರಿತ ಕಾಲದಲ್ಲಿ ಬದುಕಲು ನಾವು ಬಾಗುವುದಿಲ್ಲ ಎಂದು ದೃಢವಾಗಿ ನಿಲ್ಲುವ ಧೈರ್ಯ ಬೇಕು. ನಮಗೆ ಈಗ ಬೇಕಾದುದು, ಸಾಧ್ಯತೆಗಳ ಮತ್ತು ತನ್ನಂಬಿಕೆಯ ಪ್ರದರ್ಶನ. ಭಯ ಮತ್ತು ಪಕ್ಷಪಾತದಿಂದಲ್ಲದೇ, ಸಕಾರಣದ ಸ್ಪಷ್ಟ ಸತ್ಯ ದನಿಯಲ್ಲಿ ನ್ಯಾಯ ಪ್ರತಿಪಾದನೆ. ಅನ್ಯಾಯವನ್ನು ಕಂಡಲ್ಲೆಲ್ಲಾ ನಾವು ಅದನ್ನು ಗುರುತಿಸಿ ಖಂಡಿಸೋಣ. ಪ್ರತಿಯೊಂದು ಮಗುವಿಗೂ ನ್ಯಾಯ ಮತ್ತು ಅನ್ಯಾಯದ ಕುರಿತು ಪಾಠ ಕಲಿಸೋಣಾ. ಸರ್ವರಿಗೂ ನ್ಯಾಯದ ಜಗತ್ತನ್ನು ಅರಸೋಣ' ಎಂದು ಕರೆ ಕೊಟ್ಟಿದ್ದಾರೆ.

ಕರ್ನಾಟಕ ರಾಜ್ಯೋತ್ಸವದ ದಿನದಂದು ಪ್ರಾರಂಭವಾಗಿ 'ಇದು ಕೇಳುವ ಸಮಯ' ಎನ್ನುವ ಅನ್ವರ್ಥ ಶೀರ್ಷಿಕೆಯಡಿಯಲ್ಲಿ ಕಾವ್ಯ ಗೋಷ್ಠಿಯಿಂದ ಉತ್ಸವ ತೊಡಗುತ್ತದೆ. ಕವಿಗಳಾದ ಪ್ರತಿಭಾ ನಂದಕುಮಾರ್ ಮತ್ತು ಮಮತಾ ಸಾಗರ್ ಎರಡು ಗೋಷ್ಠಿಗಳನ್ನು ಆಯೋಜಿಸಿದ್ದಾರೆ. ರಾಜೇಂದ್ರ ಪ್ರಸಾದ್, ಸದಾಶಿವ ಸೊರಟೂರ್, ಫಾತಿಮಾ ರಲಿಯಾ, ಶಿಲೋಕ್ ಮುಕ್ಕಾಟಿ, ಹಾಜೀರ, ಚಾಂದ್ ಪಾಷಾ, ದಾದಾಪೀರ್ ಜೈಮನ್ ಅವರು ತಮ್ಮ ಕವನಗಳನ್ನು ಪ್ರಸ್ತುತಪಡಿಸುತ್ತಾರೆ.

ಆರು ದಿನಗಳ ಉತ್ಸವದಲ್ಲಿ ಆರು ಪ್ರಧಾನ ನಾಟಕಗಳ ಪ್ರದರ್ಶನವಿದೆ. ರಂಗಶಂಕರ ನಾಟಕ ಕಮ್ಮಟದಲ್ಲಿ ಸಿದ್ಧಗೊಂಡ ಕನ್ನಡ ನಾಟಕ ಜಂಗಮ ಕಲೆಕ್ಟಿವ್ ತಂಡದ 'ದಕ್ಲ ಕಥಾದೇವಿ ಕಾವ್ಯ' ಮೊದಲ ನಾಟಕ. ಮೂಲಪಠ್ಯ ಕನ್ನಡದ ಜನಪ್ರಿಯ ಕವಿ ಕೆ.ಬಿ. ಸಿದ್ದಯ್ಯ ಅವರದು. ರಚನೆ ಮತ್ತು ನಿರ್ದೇಶನ ಲಕ್ಷ್ಮಣ್.

ಆರೂ ನಾಟಕಗಳು ವಸ್ತು ವೈವಿಧ್ಯದಿಂದ ಕೂಡಿದ ಉತ್ತಮ ಆಯ್ಕೆಯಾಗಿವೆ. ಮುಂಬೈನ ಆಕ್ವೇರಿಯಸ್ ತಂಡದವರು ಹೆನ್ರಿ ಇಬ್ಸನ್‌ನ ಎನ್ ಎನಿಮಿ ಆಫ್ ದ ಪೀಪಲ್ ನಾಟಕ ಆಧಾರಿತ 'ದೇರ್ ಈಸ್ ಸಮ್‌ಥಿಂಗ್ ಇನ್ ದ ವಾಟರ್' ಇಂಗ್ಲಿಷ್ ನಾಟಕವನ್ನು ಆಕರ್ಷ್ ಖುರಾನಾ ಅವರು ನಿರ್ದೇಶಿಸಿದ್ದಾರೆ. ಮುಂಬೈನ ಮತ್ತೊಂದು ಜನಪ್ರಿಯ ತಂಡ ದ ಕಂಪನಿ ಥಿಯೇಟರ್ ರೊನಾಲ್ಡ್ ಹಾರ್‌ವುಡ್ ರಚಿಸಿದ 'ಟೇಕಿಂಗ್ ಸೈಡ್ಸ್' ಪ್ರದರ್ಶಿಸುತ್ತಿದೆ. ನಿರ್ದೇಶನ ಅತುಲ್ ಕುಮಾರ್ ಅವರದು.

ತಮಿಳುನಾಡಿನ ಕೋವಿಲ್ ಪಟ್ಟಿಯ ಮಣಲ್ ಮಗುಡಿ ಥಿಯೇಟರ್ ಲ್ಯಾನ್ಡ್ ತಂಡ ದೇಹ ಮತ್ತು ನೆಲದ ಸಂಬಂಧ ಕುರಿತ ಸುಪ್ರಸಿದ್ಧ ತಮಿಳು ನಾಟಕ 'ಇಡಕಿನಿ ಕಥೈರಥಮ್' ಪ್ರಸ್ತುತಪಡಿಸುತ್ತಿದೆ. ನಿರ್ದೇಶನ ಎಸ್ ಮುರುಗಬಹುಪತಿ ಅವರದು. ದೆಹಲಿಯ ಯುನಿಕಾರ್ನ್ ಆ್ಯಕ್ಟರ್ಸ್ ಸ್ಟುಡಿಯೊ ಜಾರ್ಜ್ ಆರ್ವೆಲ್‌ನ ಸುಪ್ರಸಿದ್ಧ ಕಾದಂಬರಿ '1984' ಆಧಾರಿತ ಹಿಂದಿ ನಾಟಕ ಪ್ರಸ್ತುತಪಡಿಸುತ್ತಿದೆ.

ರಂಗಶಂಕರದ ಸ್ವಂತ ನಿರ್ಮಿತಿ 'ಅಪ್ನಾ ಘರ್ ಜೈಸಾ' ಅನ್ಮೋಲ್ ವೆಲಾನಿ ಅವರು ರಚಿಸಿ ನಿರ್ದೇಶಿಸಿದ ನಾಟಕ. ವಿಭಿನ್ನ ಧ್ವನಿಯ ಪ್ರಸ್ತುತಿಯ 'ಅದರ್ ವಾಯ್ಸಸ್' ಎನ್ನುವ ವಿಭಾಗದಲ್ಲಿ ಮುಂಬೈನ ಖ್ಯಾತ ಅಭಿನೇತ್ರಿ ರತ್ನ ಪಾಠಕ್ ಷಾ ಅವರು ಪ್ರಸ್ತುತ ಕಾಲಕ್ಕೆ ಸ್ಪಂದಿಸುವ 'ಪ್ಯಾರಾಬಲ್ಸ್ ಫಾರ್ ದ ಪ್ರೆಸೆಂಟ್' ಕಥೆಗಳನ್ನು ವಾಚಿಸುತ್ತಾರೆ.

ಯುವ ಜನತೆಗಾಗಿ 'ವಾಯ್ಸಸ್ ಆಫ್ ಯೂತ್' ವಿಭಾಗದಲ್ಲಿ ಪ್ರತಿದಿನ ಸಂಜೆ ಯುವಜನತೆ ನ್ಯಾಯ, ಸಮಾನತೆ ಇತ್ಯಾದಿ ಪರಿಕಲ್ಪನೆಗಳನ್ನು ಹೇಗೆ ಅರ್ಥೈಸಿಕೊಳ್ಳುತ್ತಾರೆ ಎನ್ನುವುದರ ಕುರಿತ 20 ನಿಮಿಷಗಳ ಕಿರುನಾಟಕಗಳನ್ನು ಪ್ರಸ್ತುತಪಡಿಸುತ್ತಾರೆ. ಇದರಲ್ಲಿ ಸುರಾನಾ ಕಾಲೇಜ್, ಕ್ರೈಸ್ಟ್ ಯುನಿವರ್ಸಿಟಿ, ಸೃಷ್ಟಿ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಅಂಡ್ ಟೆಕ್ನಾಲಜಿ, ದ ವ್ಯಾಲಿ ಸ್ಕೂಲ್ ಮತ್ತು ಜ್ಯೋತಿ ನಿವಾಸ ಕಾಲೇಜ್ ವಿದ್ಯಾರ್ಥಿಗಳು ಭಾಗವಹಿಸುತ್ತಾರೆ.

ಕೆಲವು ಪ್ರದರ್ಶನಗಳು ಟಿಕೀಟ್ ಸಹಿತ (ರಂಗ ಶಂಕರ ಮತ್ತು ಬುಕ್ ಮೈ ಶೋನಲ್ಲಿ ಪಡೆಯಬಹುದು) ಕೆಲವು ಉಚಿತ.

ದಲಿತ, ಆದಿವಾಸಿ ಕಾವ್ಯ ಕಲಾಮೇಳ

ಡಾ. ಮೂಡ್ನಾಕೂಡು ಚಿನ್ನಸ್ವಾಮಿ

ಕೋಲಾರದ ತೇರಹಳ್ಳಿ ಬೆಟ್ಟದ ಶಿವಗಂಗೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆದಿಮ ಸಾಂಸ್ಕೃತಿಕ ಕೇಂದ್ರವು ಕಳೆದ ಹದಿನಾರು ವರ್ಷಗಳಿಂದ ತಳ ಸಮುದಾಯಗಳ ಕಲೆ ಮತ್ತು ಸಾಹಿತ್ಯವನ್ನು ಪೋಷಿಸುತ್ತಾ, ಬೆಳೆಸುತ್ತಾ ನೆಲಮೂಲ ಸಂಸ್ಕೃತಿಯ ಕಡೆಗಣಿಸಲ್ಪಟ್ಟವರ ಸಂಕಥನವನ್ನು ಅನಾವರಣಗೊಳಿಸುತ್ತಾ ಬಂದಿದೆ. ಅದರ ಹುಟ್ಟೇ ಒಂದು ರೋಚಕ ಕಥೆಯನ್ನು ಹೇಳುತ್ತದೆ. ದಲಿತ ಚಳವಳಿಯ ತವರು ಎನಿಸಿಕೊಂಡಿರುವ ಕೋಲಾರದ ಸುಮಾರು ಮೂವತ್ತು ಗೆಳೆಯರು ದಿನವೂ ಒಂದು ರೂಪಾಯಿ ಉಳಿತಾಯ ಮಾಡುವುದರೊಂದಿಗೆ ಈ ಸಂಸ್ಥೆಯ ಕನಸನ್ನು ಕಟ್ಟಿದ್ದಾರೆ ಮತ್ತು ಅನೇಕ ಅಡಚಣೆಗಳ ನಡುವೆಯೂ ಆಗುಮಾಡಿದ್ದಾರೆ.

ಅಲ್ಲಿ ನಡೆಯುವ ತಿಂಗಳ 'ಹುಣ್ಣಿಮೆಯ ಹಾಡು' ಕಾರ್ಯಕ್ರಮ ರಾಜ್ಯದಾದ್ಯಂತ ಪ್ರಸಿದ್ಧಿಯನ್ನು ಪಡೆದಿದೆ. ನೆಲಮೂಲ ಸಂಸ್ಕೃತಿಯನ್ನು ಬಿಂಬಿಸುವ ನಾಟಕ, ಜಾನಪದ ಕಲೆ, ಹಾಡುಗಾರಿಕೆ ತತ್ವಪದ ಗಾಯನ, ದೇಸೀ ಕಲೆಗಳು ಮೊದಲಾದ ಕಾರ್ಯಕ್ರಮಗಳನ್ನು ನಡೆಸುವುದರೊಂದಿಗೆ ಸಾಧಕರಿಗೆ 'ಗದ್ದುಗೆ ಗೌರವ' ನೀಡಿ ಗೌರವಿಸುತ್ತಾ ಬಂದಿದೆ. 'ಚುಕ್ಕಿಮೇಳ' ಎಂಬ ಹೆಸರಿನಲ್ಲಿ ನಡೆಸಿಕೊಂಡು ಬಂದ ಮಕ್ಕಳ ಶಿಬಿರಗಳು ಹೆಚ್ಚು ಜನಪ್ರಿಯವಾಗಿವೆ ಮತ್ತು ಮಕ್ಕಳಲ್ಲಿ ವೈಚಾರಿಕತೆಯನ್ನು ಬೆಳೆಸಿವೆ.

ಸ್ತ್ರೀ ಸಬಲೀಕರಣ ಮತ್ತು ಸ್ವಾತಂತ್ರ್ಯ ಕುರಿತಾದ ವಿಚಾರಸಂಕಿರಣ, ಸಂವಾದ, ತಳವರ್ಗದ ಮಹಿಳೆಯರಲ್ಲಿ ಜಾಗೃತಿಯನ್ನು ಮೂಡಿಸಿವೆ. ಜೊತೆಗೆ ರಂಗ ತರಬೇತಿ ಶಿಬಿರಗಳು, ಸಾಹಿತ್ಯ ಕಮ್ಮಟಗಳು ಯುವ ಸಮೂಹವನ್ನು ಆಧುನಿಕ ಭಾರತದ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ತಯಾರು ಮಾಡಿವೆ. ಪ್ರಾರಂಭದಿಂದಲೂ ರಂಗ ನಿರ್ದೇಶಕ ಕೋಟಿಗಾನಹಳ್ಳಿ ರಾಮಯ್ಯನವರ ಕೊಡುಗೆಯನ್ನು ಮರೆಯುವಹಾಗಿಲ್ಲ. ಅವರು ರಚಿಸಿ ನಿರ್ದೇಶಿಸಿದ ಹಲವು ನಾಟಕಗಳು ಮಕ್ಕಳ ಮನಸ್ಸನ್ನು ಹುರಿಗೊಳಿಸಿವೆ. ಈ ದೃಷ್ಟಿಯಲ್ಲಿ ಆದಿಮ ಸಾಂಸ್ಕøತಿಕ ಕೇಂದ್ರದ ಸಾಧನೆ ಅನನ್ಯ ಮತ್ತು ಅಭಿನಂದನಾರ್ಹ.

ಆದಿಮ ಸಾಂಸ್ಕೃತಿಕ ಕೇಂದ್ರಕ್ಕೆ ವಿದೇಶಿ ನಂಟು ಹೊಸದೇನಲ್ಲ. ಆದಿಮದ 'ಮತ್ತೆ ಏಕಲವ್ಯ' ನಾಟಕ ತಂಡ ದಕ್ಷಿಣ ಅಮೆರಿಕದ ಕೊಲಂಬಿಯಾದಲ್ಲಿ ಒಂದು ತಿಂಗಳ ಕಾಲ ಪ್ರದರ್ಶನ ನೀಡಿದೆ. ಜಪಾನಿನ ಡೊಳ್ಳು ತಂಡದವರು ಮತ್ತು ಸ್ವಿಟ್ಜರ್ಲೆಂಡ್‌ನ ಮರಗಾಲಿನ ಕಲಾವಿದರು ಆದಿಮಕ್ಕೆ ಬಂದು ಪ್ರದರ್ಶನ ನೀಡಿದ್ದಾರೆ. ಫಿನ್ಲೆಂಡ್‌ನ ಡೈನಾ ಕುಕ್ಕ ಹಾರ್ವಿಲಾಹ್ತಿ ಸುಮಾರು ಆರು ತಿಂಗಳುಗಳ ಕಾಲ ಆದಿಮದಲ್ಲಿ ವಾಸ್ತವ್ಯ ಹೂಡಿ ತಾವು ಡೊಳ್ಳು ಕುಣಿತವನ್ನು ಕಲಿತು ತಮ್ಮ ದೇಶದ 'ಪಾಯ್ಸ್' ಎಂಬ ಸಮರ ಕಲೆಯನ್ನು ಮಕ್ಕಳಿಗೆ ಕಲಿಸಿ ಹೋಗಿದ್ದಾರೆ. ಜರ್ಮನಿಯ ಡಯಾನಾ ಎಂಬ ಹೆಣ್ಣುಮಗಳು ಒಂದು ತಿಂಗಳು ಆದಿಮದಲ್ಲಿ ತಂಗಿದ್ದು ರದ್ದಿ ಪದಾರ್ಥಗಳಲ್ಲಿ ಕಲಾಕೃತಿಗಳನ್ನು ರಚಿಸುವುದನ್ನು ಮಕ್ಕಳಿಗೆ ಕಲಿಸಿದ್ದಾಳೆ. ಇಂತಹ ಕೊಡುಕೊಳ್ಳುವಿಕೆ ನಿರಂತರವಾಗಿ ನಡೆಯುತ್ತಾ ಬಂದಿದೆ.

ಈಗ ಮತ್ತೊಂದು ಅವಕಾಶ ಆದಿಮ ಕೇಂದ್ರಕ್ಕೆ ಒದಗಿ ಬಂದಿದೆ. ಬ್ರಿಟನ್ನಿನ ಆರ್ಟ್ಸ್ ಅಂಡ್ ಹ್ಯುಮ್ಯಾನಿಟೀಸ್ ಸೆಂಟರ್ ನೆಟ್ವರ್ಕ್ ಭಾರತದ ದಲಿತ ಮತ್ತು ಆದಿವಾಸಿ ಸಾಹಿತ್ಯ ಮತ್ತು ಪ್ರದರ್ಶನ ಕಲೆಗಳನ್ನು ಜಾಗತಿಕ ಮಟ್ಟದಲ್ಲಿ ಪರಿಚಯಿಸಲು 2015 ರಿಂದ ಕಾರ್ಯನಿರತವಾಗಿದೆ. ನಾಟಿಂಗ್‌ಹ್ಯಾಮ್ ಟ್ರೆಂಟ್ ವಿಶ್ವವಿದ್ಯಾಲಯದ ಡಾ. ನಿಕೋಲ್ ಥಿಯಾರಾ ಮತ್ತು ಫ್ರಾನ್ಸಿನ ಮಾಂಪೆಲಿಯರ್ ವಿಶ್ವವಿದ್ಯಾಲಯದ ಡಾ. ಜುಡಿತ್ ಮಿಸ್ರಾಹಿ-ಬರಾಕ್ ಇದರ ರೂವಾರಿಗಳು. ಇದುವರೆಗೆ ದಲಿತ ಆದಿವಾಸಿ ಸಂಸ್ಕೃತಿಗೆ ಸಂಬಂಧಪಟ್ಟಂತೆ ಭಾರತ, ಬ್ರಿಟನ್, ಫ್ರಾನ್ಸ್ ಮೂರೂ ದೇಶಗಳಲ್ಲಿಯೂ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಅನೇಕ ಹೊಸ ಪ್ರತಿಭೆಗಳನ್ನು ಜಗತ್ತಿಗೆ ಪರಿಚಯಿಸಿಕೊಟ್ಟಿದ್ದಾರೆ.

2022-23ರಲ್ಲಿ CADALFEST - Celebrating Dalit and Adivasi Literatures and Performing Arts ಎಂಬ ಹೆಸರಿನಲ್ಲಿ ಆರು ಕಾರ್ಯಕ್ರಮಗಳು ನಿಗದಿತವಾಗಿವೆ. ಈಗಾಗಲೇ ನಾಟಿಂಗ್‌ಹ್ಯಾಮ್ ನಗರದಲ್ಲಿ ಅಕ್ಟೋಬರ್ 14-15 ರಂದು ಒಂದು ಸಮ್ಮೇಳನವು ಯಶಸ್ವಿಯಾಗಿ ಜರುಗಿದೆ. ನವೆಂಬರ್ ಮತ್ತು ಡಿಸೆಂಬರ್ ತಿಂಗಳಿನಲ್ಲಿ ಭಾರತದ ನಾಲ್ಕು ರಾಜ್ಯಗಳಲ್ಲಿ ಕಾರ್ಯಕ್ರಮಗಳು ನಡೆಯಲಿವೆ. ಕರ್ನಾಟಕದಲ್ಲಿ ದಲಿತ ಮತ್ತು ಆದಿವಾಸಿ ನೆಲೆಯಲ್ಲಿ ಸಂಸ್ಕೃತಿ ಮತ್ತು ಸಾಹಿತ್ಯವನ್ನು ಪಸರಿಸುತ್ತಿರುವ ಆದಿಮ ಸಾಂಸ್ಕೃತಿಕ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ದಲಿತ ಆದಿವಾಸಿ ಸಮುದಾಯದ ಐವರು ಯುವ ಕವಿಗಳು ಮತ್ತು ಐವರು ರಂಗ ಕಲಾವಿದರು ಪಾಲ್ಗೊಳ್ಳಲಿದ್ದಾರೆ. ನವೆಂಬರ್ 1ರಂದು ಕಾರ್ಯಕ್ರಮ ಜರುಗಲಿದೆ. ಉಳಿದಂತೆ ಹೈದರಾಬಾದ್, ಚೆನ್ನೈ ಮತ್ತು ರಾಂಚಿ ನಗರಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.



ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಅತಿ ಆಸೆ ಗತಿ ಕೇಡು

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಒಮ್ಮೆ ಕಾಡಿನಲ್ಲಿದ್ದ ತುಂಟ ಕೋತಿಗೆ ಪೇಟೆ ಬೇಕರಿಯ ಕೇಕ್ ತಿನ್ನುವ ಆಸೆಯಾಯಿತು. ಹಿರಿಯ ಕೋತಿಗಳು ಬೇಡವೆಂದರೂ ಕೇಳಲಿಲ್ಲ. ಅಲ್ಲಿ ಗಮನ ಸೆಳೆಯಲು ಬಾಲಕ್ಕೆ ಮುಳ್ಳು ಚುಚ್ಚಿಕೊಂಡು ಹೋಯಿತು

ಪಟ್ಟಣಕ್ಕೆ ಬಂದ ಕೋತಿ, ಅಲ್ಲಿ ಸಿಕ್ಕ ವ್ಯಾಪಾರಿಯೊಬ್ಬನ ಬಳಿ ತನ್ನ ಬಾಲದ ಮುಳ್ಳು ತೆಗೆದುಕೊಡುವಂತೆ ಕೋರಿತು. ಆತ ಮುಳ್ಳು ತೆಗೆಯುವ ನೆಪದಲ್ಲಿ ಬಾಲವನ್ನೇ ಕತ್ತರಿಸಿದ. ವ್ಯಾಪಾರಿಯನ್ನು ಹೆದರಿಸಿದ ಕೋತಿ ಅವನಿಂದ ಚಾಕು ಪಡೆದು ಹೊರಟಿತು



ಚಾಕು ಹಿಡಿದು ಕಟ್ಟಿಗೆ ವ್ಯಾಪಾರಿಯನ್ನು ಹೆದರಿಸಿತು. ವ್ಯಾಪಾರಿಯಿಂದ ಕಟ್ಟಿಗೆ ಪಡೆದು ಅದನ್ನು ಬೇಕರಿಯವರಿಗೆ ಕೊಟ್ಟು ಕೇಕ್ ಪಡೆದು ಹೊರಟಿತು. ಬಾಲ ಹೋಯಿತು ಕೇಕ್ ಬಂತು ಎಂದು ಖುಷಿಯಿಂದ ಹೊರಟಿತು

ಆದರೆ, ದಾರಿ ಮಧ್ಯೆ ಸಿಕ್ಕ ಕಾಡುನಾಯಿಗಳು ಕೋತಿಯನ್ನು ಹೆದರಿಸಿದವು. ಭಯಗೊಂಡ ಕೋತಿಯು ಕೇಕನ್ನು ಅಲ್ಲಿಯೇ ಎಸೆದು ಮರ ಹತ್ತಿ ಓಡಿ ಹೋಯಿತು. ಅತ್ತ ಬಾಲವೂ ಉಳಿಯಲಿಲ್ಲ. ಕೇಕೂ ಸಿಗಲಿಲ್ಲ. ಅತಿ ಆಸೆ ಗತಿ ಕೇಡು ಎಂಬ ಗಾದೆ ನೆನಪಾಯಿತು

ಕಾಣದಂತೆ ಮಾಯವಾದವು ನಮ್ಮ ಪದ

ಇಲ್ಲಿ ಕೊಟ್ಟಿರುವ ಅಳತೆಯ ಪದಗಳು ಬಳಕೆ ಇಲ್ಲದ್ದಕ್ಕೆ ಮಾಯವಾಗಿವೆ. ನಮ್ಮ ಮಕ್ಕಳಿಗೆ ಇಂಥ ಪದಗಳು ಇದ್ದವು ಎಂಬ ಅವರಿಗೆ ಈ ಪದ ಪಟ್ಟಿ ಕೊಡಲಾಗಿದೆ.

ಪೈ	ದುಡ್ಡು	ಆಣೆ	ಪಾವಲಿ	ತೊಲೆ
ಪಾವು	ಸೇರು	ಅಚ್ಚೇರು	ಪಂಚೇರು	ಧಡೆ
ಮಣ	ಖಂಡಿ	ಮೈಲು	ಹರದಾರಿ	ಸೊಲಿಗಿ
ಸಿದ್ದಿ	ಕೊಳಗ	ಖಂಡಗ	ಹೇರು	ಮುಡೆ
ಕುಂಭ	ಮಾಂಸಿ	ಚಟಾಕು	ಗಿರಪಾವು	ಚಿಟ್ಟಿ
ಅಂಡಿಗಿ	ಪಡಿ	ಕೊಳವಿ	ಗಿದ್ನ	ಬಿಲ್ಲಿ

ಹೊಂದಿಸು ಆನಂದಿಸು

ಲೇಖನ ಚಿಹ್ನೆಗಳನ್ನು ಹೊಂದಿಸಿ

1	ಪೂರ್ಣವಿರಾಮ	A	:-
2	ಅಲ್ಪವಿರಾಮ	B	" "
3	ಪ್ರಶ್ನಾರ್ಥಕ	C	( )
4	ಭಾವಸೂಚಕ	D	,
5	ಅರ್ಧವಿರಾಮ	E	=
6	ಉದ್ಧರಣ	F	!
7	ಆವರಣ	G	.
8	ಸಮಾನಾರ್ಥಕ	H	?
9	ವಿವರಣ	I	;

ಸ್ವರಾಕ್ಷರ ಸ್ವಾರಸ್ಯ

ಅಕ್ಷರದ ಆನಂದ ಇಲ್ಲಿ ಈಡೇರಲು ಉನ್ನತವಾಗಿ ಊಹಿಸಲು ಋಷಿಗಳಂತೆ ಎಲ್ಲರೂ ಏಕಾಗ್ರತೆಯಿಂದ ಐಸಿರಿಗಾಗಿ ಒಪ್ಪ ಓರಣದಿಂದ ಔನ್ನತ್ಯಕ್ಕಾಗಿ ಅಂತರ್ಮುಖಿಗಳಾದಾಗ ಅಃ ಎಂಥಾ ಈ ಕನ್ನಡ ಕಲರವ ಕಂಪು

ಗಣಿತದಲ್ಲಿ ಗರ್ದಿಗಮ್ಮತ್ತು

ಎಣಿಕೆ ಹಾಡು

ಒಂದು ಒಂದು ಒಂದು
ಕನ್ನಡಿಗರೆಲ್ಲಾ ಒಂದು
ಜೀರೊ ಒಂದು ಎರಡು
ಕನ್ನಡ ಗಂಧ ಹರಡು
ಒಂದು ಎರಡು ಮೂರು
ಎಳೆಯೊ ಕನ್ನಡ ತೇರು
ಎರಡು ಮೂರು ನಾಲ್ಕು
ಕನ್ನಡ ಕಲಿಯಬೇಕು
ಮೂರು ನಾಲ್ಕು ಐದು
ಕನ್ನಡ ಪುಸ್ತಕ ಓದು
ನಾಲ್ಕು ಐದು ಆರು
ಕನ್ನಡ ಬಳಗ ಸೇರು
ಐದು ಆರು ಏಳು
ಕನ್ನಡ ಪದ್ಯ ಹೇಳು
ಆರು ಏಳು ಎಂಟು
ಕನ್ನಡ ಚಂದ ಉಂಟು
ಏಳು ಎಂಟು ಒಂಭತ್ತು
ಕನ್ನಡ ಭಾಷೆ ಗಮ್ಮತ್ತು
ಎಂಟು ಒಂಭತ್ತು ಹತ್ತು
ಕನ್ನಡ ಮೆಟ್ಟಿಲು ಹತ್ತು

ಥ್ರೀ ಇನ್ ಒನ್ ಪದ ಸಂಕಲನ

ಇಲ್ಲಿ ಕೊಟ್ಟಿರುವ ಮೂರು ಪದಗಳನ್ನು ಕೂಡಿಸಿ ಒಂದೇ ಪದ ಮಾಡಿ

1.ಅಳಿ + ನವ + ಗರ =
2.ಸಳ + ರನ್ನ + ಕಡ =
3.ಶೀಲ + ಮತ + ಸರ =
4.ಚಾವಿ + ಉರ + ತನ್ನ =
5.ಆಣೆ + ಭಾರ + ಮನ್ನ =

ಮಗು-ನಗು

ರಾಜ್ಯೋತ್ಸವದಂದು ಅತಿಥಿಗಳು ಕನ್ನಡದ ಬಗ್ಗೆ ಭಾಷಣ ಮಾಡುತ್ತಿದ್ದರು. ನಾವು ಕನ್ನಡಕ್ಕೆ ಹೆಚ್ಚು ಒತ್ತು ಕೊಡಬೇಕಿದೆ. ನೀವೆಲ್ಲರೂ ಮಕ್ಕಳು ಕನ್ನಡಕ್ಕೆ ಹೆಚ್ಚು ಒತ್ತು ಕೊಡಿರಿ. ಮಕ್ಕಳು ಮರುದಿನ ಶುದ್ಧ ಬರಹ ಬರೆದುಕೊಂಡು ಬಂದಿದ್ದರು. ಆದರೆ, ಅವರು ಎಲ್ಲ ಅಕ್ಷರಗಳಿಗೂ ಒತ್ತು ಕೊಟ್ಟಿದ್ದರು. ಕಾರಣ, ಭಾಷಣ.

ಮಜ ಮಜ ಮಜಕೂರದ ಮೇ 23ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಟ್ವೆಂಟಿ -20 ಮ್ಯಾಚ್: 1- M 2- H 3- J 4- C 5- L 6- N 7- Q 8- P 9- S 10- K 11- R 12- O 13- I 14- T 15- G 16- D 17- F 18- B 19- A 20- E

ಜಾಣಪದ ಆಟ: 1. ಮೋಡ 2. ಮುಡಿ 3. ಮಡಿ 4. ಮಿಡಿ 5. ಮೋಡಿ

ಅದಲು ಬದಲು: 1) ಅಜರಾಮರ 2) ಹಾಡಿಗೆನಗಲಿ 3) ಕಬ್ಬಿನದರ 4) ಕಾಪಾಡಲು

ಪದ ಪರಿಚಯ ಪರೀಕ್ಷೆ ; 1. ಗೋಲಕ 2. ತಿಲಕ 3. ಮಾಲಕ 4. ಮೂಲಕ 5. ಚಿಲಕ 6. ಚಾಲಕ 7. ಫಲಕ 8. ಪಾಲಕ

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು

ಜಿ.ಎಸ್. ನಿವೇದಿತಾ, ಹಗರಿಬೊಮ್ಮನಹಳ್ಳಿ

ನುಡಿ ನಟುವರ, ಧಾರವಾಡ

ಗೋವರ್ಧನ ಕೆ.ಎಂ., ಜಗಳೂರು (ದಾವಣಗೆರೆ)

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಹಾಕಿ: ಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಗೆಲುವು

ಭಾರತಕ್ಕೆ ಜೊಹರ್ ಕಪ್

ಭಾರತದ ಆಟಗಾರರ ಸಂಭ್ರಮ– ಟ್ವಿಟರ್ ಚಿತ್ರ

ಜೊಹರ್ ಬಹ್ರು, ಮಲೇಷ್ಯಾ (ಪಿಟಿಐ): ಸೊಗಸಾದ ಆಟವಾಡಿದ ಭಾರತ ಜೂನಿಯರ್ ಹಾಕಿ ತಂಡದವರು ಸುಲ್ತಾನ್ ಜೊಹರ್ ಕಪ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಶನಿವಾರ ನಡೆದ ಫೈನಲ್‌ನಲ್ಲಿ ಭಾರತ, ಪೆನಾಲ್ಟಿ ಶೂಟೌಟ್‌ನಲ್ಲಿ 5–4 ಗೋಲುಗಳಿಂದ ಆಸ್ಟ್ರೇಲಿಯಾ ತಂಡವನ್ನು ಮಣಿಸಿತು. 2013 ಮತ್ತು 2014 ರಲ್ಲಿ ಚಾಂಪಿಯನ್ ಆಗಿದ್ದ ಭಾರತ, ಮೂರನೇ ಬಾರಿ ಕಿರೀಟ ಮುಡಿಗೇರಿಸಿಕೊಂಡಿತು. ಮಾತ್ರವಲ್ಲ, ಪ್ರಶಸ್ತಿ ಬರವನ್ನು ನೀಗಿಸಿಕೊಂಡಿತು.

ಜಿದ್ದಾಜಿದ್ದಿನ ಹೋರಾಟ ನಡೆದ ಫೈನಲ್ ಪಂದ್ಯದ ನಿಗದಿತ ಅವಧಿಯಲ್ಲಿ ಎರಡೂ ತಂಡಗಳು 1–1 ಗೋಲಿನಿಂದ ಸಮಬಲ ಸಾಧಿಸಿದ್ದವು. ಸುದೀಪ್ ಚಿರ್ಮಾಕೊ 13ನೇ ನಿಮಿಷದಲ್ಲಿ ಭಾರತಕ್ಕೆ ಗೋಲು ತಂದಿತ್ತರೆ, ಆಸ್ಟ್ರೇಲಿಯಾದ ಜಾಕ್ ಹೊಲಾಡ್ 28 ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿ ಸಮಬಲಕ್ಕೆ ಕಾರಣರಾದರು.

ಪೆನಾಲ್ಟಿ ಶೂಟೌಟ್‌ನಲ್ಲಿ 3–3 ರಲ್ಲಿ ಸಮಬಲ ಕಂಡುಬಂದ ಕಾರಣ, ವಿಜೇತರನ್ನು ನಿರ್ಣಯಿಸಲು 'ಸಡನ್ ಡೆತ್'ನ ಮೊರೆಹೋಗಲಾಯಿತು. ಒತ್ತಡವನ್ನು ಮೆಟ್ಟಿನಿಂತ ಭಾರತ ರೋಚಕ ಜಯ ತನ್ನದಾಗಿಸಿಕೊಂಡಿತು.

ಉತ್ತಮ್ ಸಿಂಗ್ ಅವರು ಸಡನ್ ಡೆತ್ ಸೇರಿದಂತೆ ಶೂಟೌಟ್‌ನಲ್ಲಿ ಎರಡು ಬಾರಿ ಗೋಲು ಗಳಿಸಿದರೆ, ಇತರ ಗೋಲುಗಳನ್ನು ವಿಷ್ಣುಕಾಂತ್ ಸಿಂಗ್, ಅಂಕಿತ್ ಪಾಲ್ ಮತ್ತು ಸುದೀಪ್ ತಂದಿತ್ತರು.ಆಸ್ಟ್ರೇಲಿಯಾ ಪರ ಬರ್ನ್ಸ್ ಕೂಪರ್, ಫಾಸ್ಟರ್ ಬ್ರಾಡೀ, ಬ್ರೂಕ್ಸ್ ಜೋಶುವಾ ಮತ್ತು ಹರ್ಟ್ ಲಿಯಾಮ್ ಗೋಲು ಗಳಿಸಿದರು.

ಭಾರತ 2012, 2015, 2018 ಮತ್ತು 2019 ರಲ್ಲಿ 'ರನ್ನರ್ಸ್ ಅಪ್' ಆಗಿತ್ತು. 2020, 2021 ರಲ್ಲಿ ಕೋವಿಡ್ ಕಾರಣ ಟೂರ್ನಿ ನಡೆದಿರಲಿಲ್ಲ.

ನಗದು ಬಹುಮಾನ: ಪ್ರಶಸ್ತಿ ವಿಜೇತ ಭಾರತ ತಂಡದ ಪ್ರತಿ ಆಟಗಾರನಿಗೆ ತಲಾ ₹ 2 ಲಕ್ಷ ಮತ್ತು ನೆರವು ಸಿಬ್ಬಂದಿಗೆ ತಲಾ ₹ 1 ಲಕ್ಷ ಬಹುಮಾನವನ್ನು ಹಾಕಿ ಇಂಡಿಯಾ ಪ್ರಕಟಿಸಿದೆ.

ಭಾರತಕ್ಕೆ ಸ್ಪೇನ್ ಸವಾಲು

ಭುವನೇಶ್ವರ (ಪಿಟಿಐ): ಮೊದಲ ಪಂದ್ಯದಲ್ಲಿ ಗೆದ್ದು ಆತ್ಮವಿಶ್ವಾಸದಲ್ಲಿರುವ ಭಾರತ ತಂಡವು ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯ ಎರಡನೇ ಪಂದ್ಯದಲ್ಲಿ ಭಾನುವಾರ ಸ್ಪೇನ್ ಸವಾಲು ಎದುರಿಸಲಿದೆ. ಭಾರತ ತಂಡದ ಆಟಗಾರರು ಶುಕ್ರವಾರ ಇಲ್ಲಿಯ ಕಳಿಂಗ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 4–3ರಿಂದ ನ್ಯೂಜಿಲೆಂಡ್ ತಂಡಕ್ಕೆ ಸೋಲುಣಿಸಿದ್ದರು.

ಪಂದ್ಯ ಆರಂಭ: ರಾತ್ರಿ 7.10

ವಿಂಡೀಸ್ ಕ್ರಿಕೆಟ್ ತಂಡದಲ್ಲಿ ಚಂದ್ರಪಾಲ್ ಪುತ್ರನಿಗೆ ಸ್ಥಾನ

ಸೇಂಟ್ ಜಾನ್ಸ್ (ರಾಯಿಟರ್ಸ್): ಮಾಜಿ ನಾಯಕ ಶಿವನಾರಾಯಣ್ ಚಂದ್ರಪಾಲ್ ಅವರ ಮಗ, ತೇಜ್‌ನಾರಾಯಣ್ ಚಂದ್ರಪಾಲ್ ಅವರು ವೆಸ್ಟ್ ಇಂಡೀಸ್ ರಾಷ್ಟ್ರೀಯ ಕ್ರಿಕೆಟ್ ತಂಡದಲ್ಲಿ ಇದೇ ಮೊದಲ ಬಾರಿ ಸ್ಥಾನ ಪಡೆದುಕೊಂಡಿದ್ದಾರೆ.

ಆಸ್ಟ್ರೇಲಿಯಾ ವಿರುದ್ಧದ ಎರಡು ಟೆಸ್ಟ್ ಪಂದ್ಯಗಳ ಸರಣಿಗೆ ವಿಂಡೀಸ್ ತಂಡವನ್ನು ಶನಿವಾರ ಪ್ರಕಟಿಸಲಾಗಿದ್ದು, ಆಲ್‌ರೌಂಡರ್ ರೋಸ್ಟನ್ ಚೇಸ್ ಮತ್ತು ಮಧ್ಯಮ ಕ್ರಮಾಂಕದ ಬ್ಯಾಟರ್ ಶಮಾರ್ ಬ್ರೂಕ್ಸ್ ವಾಪಸಾಗಿದ್ದಾರೆ. ಕ್ರೆಗ್ ಬ್ರಾತ್‌ವೇಟ್ ತಂಡವನ್ನು ಮುನ್ನಡೆಸಲಿದ್ದಾರೆ.

ತಮ್ಮ ತಂದೆ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಕಾಲಿರಿಸಿದ 28 ವರ್ಷಗಳ ಬಳಿಕ ಪದಾರ್ಪಣೆ ಮಾಡುವ ಅವಕಾಶ ತೇಜ್‌ನಾರಾಯಣ್‌ಗೆ ಒಲಿದಿದೆ. ಅಗ್ರ ಕ್ರಮಾಂಕದ ಬ್ಯಾಟರ್ ಆಗಿರುವ 26 ವರ್ಷದ ಅವರು ವೆಸ್ಟ್‌ಇಂಡೀಸ್ ದೇಶಿ ಚಾಂಪಿಯನ್‌ಷಿಪ್‌ನ ನಾಲ್ಕು ದಿನಗಳ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿದ್ದರು.

ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ

ಪ್ರಶಸ್ತಿ ಸುತ್ತಿಗೆ ಸಾತ್ವಿಕ್– ಚಿರಾಗ್



ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಎಎಫ್‌ಪಿ ಚಿತ್ರ

ಪ್ಯಾರಿಸ್ (ಪಿಟಿಐ): ಎದುರಾಳಿಗಳನ್ನು ನೇರ ಗೇಮ್‌ಗಳಿಂದ ಮಣಿಸಿದ ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಡಬಲ್ಸ್ ವಿಭಾಗದ ಫೈನಲ್ ತಲುಪಿದ್ದಾರೆ.

ಕಾಮನ್‌ವೆಲ್ತ್ ಚಾಂಪಿಯನ್‌ಗಳಾದ ಸಾತ್ವಿಕ್–ಚಿರಾಗ್ ಜೋಡಿ ಇಲ್ಲಿ ನಡೆಯುತ್ತಿರುವ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಶನಿವಾರ 21-18, 21-14ರಿಂದ ಕೊರಿಯಾದ ಚೊಯಿ ಸೊಲ್ ಗಿವ್- ಕಿಮ್ ವೊನ್ ಹೊ ಅವರನ್ನು ಪರಾಭವಗೊಳಿಸಿದರು.

ಹಣಾಹಣಿಯ ಆರಂಭದಿಂದಲೂ ಉತ್ತಮ ಆಟವಾಡಿದ ಭಾರತದ ಜೋಡಿ 45 ನಿಮಿಷಗಳಲ್ಲಿ ಪಂದ್ಯವನ್ನು ತನ್ನದಾಗಿಸಿಕೊಂಡಿತು. ಚುರುಕಿನ ಸ್ಮ್ಯಾಷ್‌ಗಳ ಮೂಲಕ ಗಮನಸೆಳೆದರು. ಇದರೊಂದಿಗೆ ಚಿರಾಗ್– ಸಾತ್ವಿಕ್ ಈ ವರ್ಷ ಎರಡನೇ ಬಾರಿ ಬಿಡಬ್ಲ್ಯುಎಫ್ ವಿಶ್ವ ಟೂರ್ ಟೂರ್ನಿಯ ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟಿದ್ದಾರೆ. ಜನವರಿಯಲ್ಲಿ ನಡೆದ ಇಂಡಿಯಾ ಓಪನ್ ಟೂರ್ನಿಯಲ್ಲಿ ಈ ಜೋಡಿ ಚಾಂಪಿಯನ್ ಆಗಿ ಹೊರಹೊಮ್ಮಿತ್ತು.

ಆಗಸ್ಟ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಜಯಿಸಿರುವ ಸಾತ್ವಿಕ್–ಚಿರಾಗ್, ಫೈನಲ್‌ನಲ್ಲಿ ಇಂಗ್ಲೆಂಡ್‌ನ ಬೆನ್ ಲೇನ್–ಸೀನ್ ವೆಂಡಿ ಮತ್ತು ಚೀನಾ ತೈಪೆಯ ಲು ಚಿಂಗ್ ಯಾವೊ ಮತ್ತು ಯಾಂಗ್ ಪೊ ಹಾನ್ ನಡುವಣ ನಾಲ್ಕರ ಘಟ್ಟದ ಪಂದ್ಯದ ವಿಜೇತರನ್ನು ಎದುರಿಸುವರು. ಫೈನಲ್ ಭಾನುವಾರ ನಡೆಯಲಿದೆ.

2019ರ ಆವೃತ್ತಿಯಲ್ಲಿ ಭಾರತದ ಜೋಡಿ ಇಲ್ಲಿ ರನ್ನರ್‌ಅಪ್ ಆಗಿತ್ತು.

ಸಂಕ್ಷಿಪ್ತ ಸುದ್ದಿ

ಬ್ಯಾಡ್ಮಿಂಟನ್: ಫೈನಲ್‌ಗೆ ಶಂಕರ್

ಶಂಕರ್

ಸ್ಯಾಂಟಂಡರ್, ಸ್ಪೇನ್ (ಪಿಟಿಐ): ಭಾರತದ ಶಂಕರ್ ಮುತ್ತುಸ್ವಾಮಿ ಅವರು ಇಲ್ಲಿ ನಡೆಯುತ್ತಿರುವ ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಟೂರ್ನಿಯ ಸಿಂಗಲ್ಸ್ ವಿಭಾಗದಲ್ಲಿ ಫೈನಲ್ ತಲುಪಿದ್ದಾರೆ.

ಪುರುಷರ 19 ವರ್ಷದೊಳಗಿನವರ ವಿಭಾಗದ ನಾಲ್ಕರ ಘಟ್ಟದ ಪಂದ್ಯದಲ್ಲಿ 21-13, 21-15ರಿಂದ ಥಾಯ್ಲೆಂಡ್‌ನ ಪನಿಚ್‌ಪೋನ್ ತೀರಾರಸಕುಲ್ ಅವರನ್ನು ಪರಾಭವಗೊಳಿಸಿದರು.

ಐಸಿಎಗೆ ವೆಂಗಸರ್ಕಾರ್ ಶುಭಾಂಗಿ ಆಯ್ಕೆ



ದಿಲೀಪ್ ವೆಂಗಸರ್ಕಾರ್

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ದಿಲೀಪ್ ವೆಂಗಸರ್ಕಾರ್ ಹಾಗೂ ಶುಭಾಂಗಿ ಕುಲಕರ್ಣಿ ಅವರನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಪೆಕ್ಸ್ ಕೌನ್ಸಿಲ್ ಸಮಿತಿಗೆ ಭಾರತ ಕ್ರಿಕೆಟಿಗರ ಸಂಸ್ಥೆಯ ಪ್ರತಿನಿಧಿಗಳನ್ನಾಗಿ ಆಯ್ಕೆ ಮಾಡಲಾಗಿದೆ.

ಶನಿವಾರ ನಡೆದ ಚುನಾವಣೆಯಲ್ಲಿ ದಿಲೀಪ್ ಅವರು ಐಸಿಎ ನಿರ್ಗಮಿತ ಅಧ್ಯಕ್ಷ ಅಶೋಕ್ ಮಲ್ಹೋತ್ರಾ ವಿರುದ್ಧ ಜಯಿಸಿದರು. 3 ದಿನಗಳ ಕಾಲ ನಡೆದ ಇ ವೋಟಿಂಗ್‌ನಲ್ಲಿ ವೆಂಗ ಸರ್ಕಾರ್ 402 ಹಾಗೂ ಮಲ್ಹೋತ್ರಾ 230 ಮತಗಳನ್ನು ಗಳಿಸಿದ್ದಾರೆ. ಶುಭಾಂಗಿ ಕುಲಕರ್ಣಿ ಮಹಿಳಾ ಪ್ರತಿನಿಧಿಯಾಗಿ ಅವಿರೋಧವಾಗಿ ಆಯ್ಕೆಯಾದರು. ಇವರು ಬಿಸಿಸಿಐ ಅಪೆಕ್ಸ್ ಕೌನ್ಸಿಲ್ ಸಭೆಗಳಲ್ಲಿ ಐಸಿಎಯನ್ನು ಪ್ರತಿನಿಧಿಸುವರು.

2019ರಲ್ಲಿ ಆರಂಭವಾದ ಐಸಿಎ ಸಮಿತಿಯಲ್ಲಿದ್ದ ಅನ್ಷುಮನ್ ಗಾಯಕವಾಡ್ ಹಾಗೂ ಕರ್ನಾಟಕದ ಶಾಂತಾ ರಂಗಸ್ವಾಮಿ ಕ್ರಮವಾಗಿ ಅಧ್ಯಕ್ಷ ಹಾಗೂ ನಿರ್ದೇಶಕಿಯಾಗಿ ಆಯ್ಕೆಯಾದರು.

ಪದಾಧಿಕಾರಿಗಳು: ಅನ್ಷುಮನ್ ಗಾಯಕವಾಡ (ಅಧ್ಯಕ್ಷ, ನಿರ್ದೇಶಕ), ಹಿತೇಶ್ ಮಜುಂದಾರ್ (ಕಾರ್ಯದರ್ಶಿ–ನಿರ್ದೇಶಕ), ವಿ. ಕೃಷ್ಣಸ್ವಾಮಿ (ಖಜಾಂಚಿ–ನಿರ್ದೇಶಕ), ಶಾಂತಾ ರಂಗಸ್ವಾಮಿ (ಸದಸ್ಯ ಪ್ರತಿನಿಧಿ–ನಿರ್ದೇಶಕಿ), ಯಜುವೀಂದ್ರ ಸಿಂಗ್ ಬಿಲ್ಕಾ (ಸದಸ್ಯ ಪ್ರತಿನಿಧಿ–ನಿರ್ದೇಶಕರು), ದಿಲೀಪ್ ವೆಂಗಸರ್ಕಾರ (ಬಿಸಿಸಿಯ ಅಪೆಕ್ಸ್ ಕೌನ್ಸಿಲ್‌ಗೆ ಐಸಿಎ ಪ್ರತಿನಿಧಿ), ಶುಭಾಂಗಿ ಡಿ ಕುಲಕರ್ಣಿ (ಅಪೆಕ್ಸ್ ಕೌನ್ಸಿಲ್‌ಗೆ ಐಸಿಎ ಮಹಿಳಾ ಪ್ರತಿನಿಧಿ), ಪ್ರಗ್ಯಾನ್ ಓಜಾ (ಐಪಿಎಲ್ ಆಡಳಿತ ಸಮಿತಿಗೆ ಐಸಿಎ ಪ್ರತಿನಿಧಿ).

ಸುಧಾ, ಮಯೂರ ಓದಿರಿ